# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಆರನೆಯ ಇಯತ್ತೆ



Tele MANAS
National Tele Mental Health Programme
14416

# ಟೆಲಿ ಮಾನಸ ಸಹಾಯವಾಣಿ

**Tele MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24 x 7 ಉಚಿತ, ಏಕಾತ್ಮಿಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

# ಮನೋದರ್ಪಣ

**ಮನೋದರ್ಪಣ (8448440632)** ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸಗಳಲ್ಲಿ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಈ ಪಠ್ಯಪುಸ್ತಕವನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ಪ್ರಶಿಕ್ಷಣ ಪರಿಷದ, ಮಹಾರಾಷ್ಟ್ರ ಪುಣೆ ಇವರು ತಯಾರಿಸಿದ ಅಭ್ಯಾಸಕ್ರಮ ಮತ್ತು ಪಠ್ಯಕ್ರಮಗಳಿಗನುಸಾರ ಸಿದ್ದಪಡಿಸಲಾಗಿದ್ದು ಅವರ ಮೂಲಕ ಈ ಪಠ್ಯಪುಸ್ತಕದ ಪರಿಶೀಲನೆ ಮಾಡಲಾಗಿದೆ. ಸರಕಾರ ನಿರ್ಣಯ ಕ್ರಮಾಂಕ: (ಪ್ರ.ಕ್ರ.43/16) ಎಸ್‌ಡಿ-4 ದಿನಾಂಕ 25.04.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 19.05.2026 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2026-2027 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.



# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಆರನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಠ್ಯಮಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನೆ ಮಂಡಳಿ, ಪುಣೆ - 411004.

ತಮ್ಮ ಸ್ಮಾರ್ಟ್‌ಫೋನದ ಮೇಲೆ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಮೊದಲ ಆವೃತ್ತಿ :
ಜೂನ್ 2026

© ಮಹಾರಾಷ್ಟ್ರ ರಾಜ್ಯ ಪಠ್ಯಮಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನೆ ಮಂಡಳಿ, ಪುಣೆ 411004.
ಮಹಾರಾಷ್ಟ್ರ ರಾಜ್ಯ ಪಠ್ಯಮಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನೆ ಮಂಡಳಿಯ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಮಸ್ತಕದ ಯಾವುದೇ ಭಾಗವನ್ನು ನಿರ್ದೇಶಕರು, ಮಹಾರಾಷ್ಟ್ರ ರಾಜ್ಯ ಪಠ್ಯಮಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನೆ ಮಂಡಳಿ ಇವರ ಲಿಖಿತ ಅನುಮತಿಯಿಲ್ಲದೆ ಬಳಸುವಂತಿಲ್ಲ.


**ಇತಿಹಾಸ ಸಮಿತಿ**

ಡಾ. ಶುಭಂಗನಾ ಅತ್ರೆ, ಅಧ್ಯಕ್ಷರು
ಶ್ರೀ. ಕಿಶೋರ್ ಪಾಟೀಲ, ಸದಸ್ಯರು
ಸೌ. ಮುಗ್ಧಾ ಲೇಲೆ, ಸದಸ್ಯರು
ಡಾ. ಶಿವಾನಿ ಲಿಮಯೆ, ಸದಸ್ಯರು
ಶ್ರೀ. ಪಂಕಜ್ ಶಿಂದೆ, ಸದಸ್ಯರು
ಡಾ. ಅನುಜಾ ಶಿಂದೆ, ಸದಸ್ಯರು
ಶ್ರೀ. ಅರುಣ್ ಇಂಗಳೆ, ಸದಸ್ಯರು
ಶ್ರೀಮತಿ ಸುಮನ್ ಗಾಯಕವಾಡ, ಸದಸ್ಯರು
ಶ್ರೀ. ತಾರಾಚಂದ್ರ ಆವಳೆ, ಸದಸ್ಯರು
ಶ್ರೀ. ಕುಶಲಕುಮಾರ ಸಮರಿತ, ಸದಸ್ಯರು
ಶ್ರೀ. ಪ್ರಶಾಂತ ಶೆವತಕರ, ಸದಸ್ಯರು
ಶ್ರೀ. ಸುಹಾಸ ಧಸ, ಸದಸ್ಯರು
ಶ್ರೀ. ಸಚಿನ ಡೆಂಗಳೆ, ಸದಸ್ಯರು
ಶ್ರೀ. ನಿಲೇಶ ಬನಕರ, ಸದಸ್ಯರು
ಶ್ರೀ. ಶ್ರೀಕಾಂತ ಬಾಪಟ, ಸದಸ್ಯರು
ಶ್ರೀ. ಸೋಮೇಶ ಶರ್ಮಾ, ಸದಸ್ಯರು
ಶ್ರೀ. ನಿನಾದ ತೆಂಡುಲಕರ, ಸದಸ್ಯರು
ಶ್ರೀ. ಸಿದ್ಧಾರ್ಥ ಜಾಧವ, ಸದಸ್ಯರು
ಡಾ. ವಿಜಯ ಮಾನೆ, ಸದಸ್ಯರು
ಶ್ರೀ. ಶಂಕರ ಖರಾತ, ಸದಸ್ಯರು
ಡಾ. ಪ್ರಶಮ ಕೊಲ್ಹೆ, ಸದಸ್ಯರು
ಡಾ. ರಾಜಾನಂದ ಪಟ್ಟೆಬಹಾದ್ದೂರ, ಸದಸ್ಯರು
ಡಾ. ನಲಿನಿ ವಾಘಮಾರೆ, ಸದಸ್ಯರು
ಶ್ರೀ. ರಾಮೇಶ್ವರ ಲೊಟಕೆ (ಅಭ್ಯಾಸಕ್ರಮ ಸಮನ್ವಯಕರು)
ಶ್ರೀ. ಅರುಣ ಜಾಧವ (ಅಭ್ಯಾಸಕ್ರಮ ಸಮನ್ವಯಕರು)
ಶ್ರೀಮತಿ ವರ್ಷಾ ಸರೊದೆ, ಸದಸ್ಯ ಸಚಿವರು

**ನಾಗರಿಕಶಾಸ್ತ್ರ ಸಮಿತಿ**

ಡಾ. ಹರ್ಷದ ಭೋಸಲೆ, ಅಧ್ಯಕ್ಷರು
ಡಾ. ಪ್ರಿಯಾ ಇಂಗ್ರುಳಕರ, ಸದಸ್ಯರು
ಶ್ರೀ. ಅವಿನಾಶ ಬಗಾಡೆ, ಸದಸ್ಯರು
ಶ್ರೀ. ಚಂದ್ರಹಾಸ ಹಿಪ್ಪರಕರ, ಸದಸ್ಯರು
ಶ್ರೀ. ಪ್ರಶಾಂತ ಜೋಶಿ, ಸದಸ್ಯರು
ಪ್ರಾ. ಸುನೀತಾ ದಳವಿ, ಸದಸ್ಯರು
ಶ್ರೀ. ಶ್ಯಾಮ ರಾವುತ, ಸದಸ್ಯರು
ಡಾ. ಶಿವಾಜಿ ರೆಣಾಪುರೆ, ಸದಸ್ಯರು
ಶ್ರೀ. ಕೃಷ್ಣಾ ರೊಕಡೆ, ಸದಸ್ಯರು
ಶ್ರೀಮತಿ ಅಂಜಲಿ ಢಮಾಳ, ಸದಸ್ಯರು
ಶ್ರೀ. ಶಿವಾಜಿ ಕರಾಳೆ, ಸದಸ್ಯರು
ಡಾ. ರಾಜೇಶ ಪಾವಲೆ, ಸದಸ್ಯರು
ಶ್ರೀ. ಬಾಳು ಬೋಸಲೆ, ಸದಸ್ಯರು
ಡಾ. ಸುಚಿತ್ರಾ ಫೊಕರೆ–ಕಾಟಕರ, ಸದಸ್ಯರು
ಡಾ. ವೆಂಕಟೇಶ ಖರಾತ, ಸದಸ್ಯರು
ಡಾ. ಜ್ಯೋತಿ ಬುವಾ, ಸದಸ್ಯರು
ಡಾ. ಪ್ರಭಾವಕ ಲೊಂಡೆ, ಸದಸ್ಯರು
ಡಾ. ನಂದಕಿಶೋರ ಬೊಕಾಡೆ, ಸದಸ್ಯರು
ಶ್ರೀ. ನಾರಾಯಣ ಮುದಲಗವಾಡ, ಸದಸ್ಯರು
ಶ್ರೀ. ದತ್ತಾತ್ರಯ ರಾಠೊಡ, ಸದಸ್ಯರು
ಡಾ. ಬಾಳಾಸಾಹೇಬ ಕಿಲಚೆ, ಸದಸ್ಯರು
ಶ್ರೀ ರವೀಂದ್ರ ಜಿಂದೆ, ಸದಸ್ಯರು
ಡಾ. ಸಂಹಿತಾ ಜೋಶಿ, ಸದಸ್ಯರು
ಡಾ. ನೇಹಾ ಆಗಾಶೆ, ಸದಸ್ಯರು
ಶ್ರೀಮತಿ, ವರ್ಷಾರಾಣಿ ಭೊಪಳೆ (ಅಭ್ಯಾಸಕ್ರಮ ಸಮನ್ವಯಕರು)
ಶ್ರೀಮತಿ ವರ್ಷಾ ಸರೊದೆ, ಸದಸ್ಯ, ಸಚಿವರು

**ಗಾಭಾ ಸಮಿತಿ ಸದಸ್ಯರು**

ಡಾ. ಮಹೇಶ್ವರ್ ಕಳಲಾವೆ
ಶ್ರೀ. ಪ್ರಶಾಂತ್ ದಿವೇಕರ್
ಶ್ರೀ. ಮೋಹನ್ ಶೇಟಿ
ಶ್ರೀಮತಿ ಪ್ರತಿಭಾ ಗುಪ್ತೆ

**ಸಮೀಕ್ಷಕ**

ಡಾ. ಮಂಜಿರಿ ಭಾಲೇರಾವ
ಇತಿಹಾಸ
(ಗುಣಮಟ್ಟ ಪರೀಕ್ಷಕ)
ಡಾ. ಸಂಜ್ಯೋತ ಆಪಟೆ
ನಾಗರಿಕಶಾಸ್ತ್ರ
(ಗುಣಮಟ್ಟ ಪರೀಕ್ಷಕ)
ಅಡ್ವಕೇಟ್ ಜಯಶ್ರೀ ಆವ್ಹಾಡ್
(ವಿಷಯ ತಜ್ಞ)
ಡಾ. ಶರ್ಮಿಷ್ಠಾ ಓಕೆ
(CWSN ತಜ್ಞ)

**ಲೇಖಕರು**

ಶ್ರೀಮತಿ ಇಂದ್ರಾಯಣಿ ಚವ್ಹಾಣ್
ಡಾ. ಗಾಯತ್ರಿ ಲೇಲೆ

**ಸಂಯೋಜಕರು**

ಶ್ರೀಮತಿ ವರ್ಷಾ ಸರೊದೆ
(ಪ್ರಭಾರಿ ವಿಶೇಷಾಧಿಕಾರಿ)
ಇತಿಹಾಸ ಮತ್ತು ನಾಗರಿಶಾಸ್ತ್ರ, ಪಠ್ಯಮಸ್ತಕ ಮಂಡಳಿ, ಪುಣೆ.

**ಕನ್ನಡ ಸಂಯೋಜನೆ**

ಶ್ರೀಮತಿ. ಕೇತಕಿ ಜಾನಿ
ಪ್ರ. ವಿಶೇಷಾಧಿಕಾರಿ ಕನ್ನಡ ಹಾಗೂ ಪ್ರಭಾರಿ ವಿದ್ಯಾಸಚಿವೆ (ಭಾಷೆ)
ಪಠ್ಯಪುಸ್ತಕ ಮಂಡಳಿ, ಪುಣೆ

**ಭಾಷಾಂತರಕಾರ** – ಶ್ರೀ. ಮಹಾಆದೇವ ನೀಲಪ್ಪಾ ಕೋಳಿ
**ಸಮೀಕ್ಷಕರು** – ಶ್ರೀಮತಿ. ಮೀನಾಕ್ಷಿ ಹನಗಂಡಿ
**ಗುಣಮಟ್ಟ ಪರೀಕ್ಷರರು** – ಶ್ರೀ. ಬಸವರಾಜ ಚಡಚಣ

**ಮುಖಮಟ ಮತ್ತು ಸಜಾವಟ:** ಶ್ರೀ. ದೇವದತ್ತ ಬಲಕವಡೆ
**ಅಕ್ಷರಜೋಗಡಣೆ:** ಕ್ವಿಂಟೆಕ್ಸ್, ಫೋರ್ಟ್, ಮುಂಬಯಿ-1
**ಕಾಗದ:** 70 ಜಿ.ಎಸ್.ಎಂ. ಕ್ರಿಮ್‌ವೋವ್
**ಮುದ್ರಣಾದೇಶ:**
**ಮುದ್ರಣ:**

**ನಿರ್ಮಿತಿ**

ಶ್ರೀಮತಿ ಮಿತಾಲಿ ಶಿತಪ್ – ಮುಖ್ಯ ನಿರ್ಮಾಣ ಅಧಿಕಾರಿ
ಶ್ರೀ. ಶಶಾಂಕ್ ಕಣಿಕದಳೆ – ನಿರ್ಮಾಣ ಅಧಿಕಾರಿ

**ಪ್ರಕಾಶಕರು**

ಶ್ರೀ. ಹೇಮಂತ ಬಾಬರ
(ಪ್ರಭಾರಿ ನಿಯಂತ್ರಿಕರು, ಪಠ್ಯಮಸ್ತಕ ನಿರ್ಮಿತಿ ಮಂಡಳಿ, ಪ್ರಭಾದೇವಿ, ಮುಂಬೈ-400025)

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

# ಭಾರತದ ಸಂವಿಧಾನ

## ಭಾಗ 4 ಕ

# ನಾಗರಿಕ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲನಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂಥ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಬೇಕು.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ಕೃಷ್ಟತೆ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳನ್ನು ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದ ತನ್ನ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಕೊಡಬೇಕು.

# ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

# ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# राज्यगीत

जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।

काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।

# ಪ್ರಸ್ತಾವನೆ

ರಾಷ್ಟ್ರೀಯ ಅಭ್ಯಾಸಕ್ರಮ 2020ಕ್ಕೆ ಅನುಗುಣವಾಗಿ ಮಹಾರಾಷ್ಟ್ರ ರಾಜ್ಯ ಶಾಲಾ ಶಿಕ್ಷಣ ಪಠ್ಯಕ್ರಮ 2026ನ್ನು ಸಿದ್ಧಪಡಿಸಲಾಗಿದೆ. ಈ ಶಾಸನಬದ್ಧ ಪಠ್ಯಕ್ರಮವು 2026–27ನೇ ಶೈಕ್ಷಣಿಕ ವರ್ಷದಿಂದ ಹಂತ ಹಂತವಾಗಿ ಜಾರಿಗೆ ಬಂದಿದೆ. ಈ ಪಠ್ಯಕ್ರಮದಲ್ಲಿ ಮೂರನೇ ತರಗತಿಯಿಂದ ಐದನೇ ತರಗತಿಯವರೆಗೆ ಇತಿಹಾಸ ಮತ್ತು ನಾಗರಿಕಶಾಸ್ತ್ರ ವಿಷಯಗಳನ್ನು ನಮ್ಮ ಸುತ್ತಮುತ್ತಲಿನ ಜಗತ್ತು ಭಾಗದಲ್ಲಿ ಸೇರಿಸಲಾಗಿದೆ. ಆರನೇ ತರಗತಿಯಿಂದ ಮುಂದಕ್ಕೆ ಇತಿಹಾಸ ಮತ್ತು ನಾಗರಿಕಶಾಸ್ತ್ರ ವಿಷಯಗಳಿಗೆ ಪ್ರತ್ಯೇಕ ಪಠ್ಯಪುಸ್ತಕಗಳಿರುತ್ತವೆ. ಈ ಪಠ್ಯಪುಸ್ತಕವನ್ನು ನಿಮ್ಮ ಕೈಗೆ ನೀಡುವುದರಲ್ಲಿ ನಮಗೆ ಸಂತೋಷವೆನಿಸುತ್ತದೆ.

ಭಾರತೀಯ ಜ್ಞಾನಪರಂಪರೆ, ಪಂಚಕೋಶ, 21ನೇ ಶತಮಾನದ ಕೌಶಲ್ಯಗಳು, ಬಹುವಿದ್ಯಾಶಾಖೀಯ ದೃಷ್ಟಿಕೋನ ಮತ್ತು ಕೃತಿಯುಕ್ತ ವಿದ್ಯಾರ್ಥಿ ಕೇಂದ್ರಿತ ಕಲಿಕೆಬೋಧನಾ ಪ್ರಕ್ರಿಯೆ ಇತ್ಯಾದಿ ವಿಶಾಲ ದೃಷ್ಟಿಕೋನಗಳನ್ನು ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ಈ ಹಂತದಲ್ಲಿ ವಿದ್ಯಾರ್ಥಿಗಳಲ್ಲಿ ಅಭಿವೃದ್ಧಿಯಾಗಬೇಕಾದ ಕಲಿಕಾ ಫಲಿತಾಂಶಗಳಿಗೆ ಅನುಗುಣವಾಗಿ ಪಾಠಗಳಲ್ಲಿ ವಿವಿಧ ಚಟುವಟಿಕೆಗಳು, ಕಲಿಕೆಯ ಅನುಭವಗಳು ಮತ್ತು ಉಪಕ್ರಮಗಳನ್ನು ಅರ್ಥಪೂರ್ಣವಾಗಿ ವಿನ್ಯಾಸಗೊಳಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ ವಿದ್ಯಾರ್ಥಿಗಳಲ್ಲಿ ಕಲಿಕಾ ಫಲಿತಾಂಶಗಳನ್ನು ರೂಪಿಸುವುದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡಿರುವುದರಿಂದ, ಈ ಪಠ್ಯಪುಸ್ತಕದಲ್ಲಿ ಅದಕ್ಕೆ ವಿಶೇಷ ಒತ್ತು ನೀಡಲಾಗಿದೆ.

ಇತಿಹಾಸ ವಿಭಾಗದಲ್ಲಿ ಪ್ರಾಚೀನ ಭಾರತದ ಇತಿಹಾಸವನ್ನು ಒಳಗೊಂಡಿದೆ. ಇದರ ಮೂಲಕ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳ ಕುರಿತು ಸಮಗ್ರ ಮಾಹಿತಿ ದೊರಕಲಿ ಅಲ್ಲದೆ ಈ ಮೂಲಕ ಸಾಮಾಜಿಕ ಐಕ್ಯತೆಯಸಂಬಂಧದ ಅರಿವನ್ನು ವೃದ್ಧಿಸಿಕೊಳ್ಳಲಿ ಎಂಬುದು ಇದರ ಉದ್ದೇಶವಾಗಿದೆ.

ಪ್ರಾಚೀನ ಭಾರತದ ಇತಿಹಾಸವು ಮಾನವ ವಿಕಾಸ, ಸಂಸ್ಕೃತಿಯ ಬೆಳವಣಿಗೆ ಮತ್ತು ನಮ್ಮ ನಾಗರಿಕತೆಯ ಸಮೃದ್ಧ ಪರಂಪರೆಯ ಸಾಕ್ಷಿಯಾಗಿದೆ. ಈ ಪಠ್ಯಪುಸ್ತಕದಲ್ಲಿ ಇತಿಹಾಸದ ಮೂಲಗಳಾದ ಭೌತಿಕ ಸಾಧನಗಳು, ಶಾಸನಗಳು, ನಾಣ್ಯಗಳು, ಸಾಹಿತ್ಯಿಕ ಗ್ರಂಥಗಳು ಮತ್ತು ವಿದೇಶಿ ಪ್ರವಾಸಿಗರ ಪ್ರವಾಸವರ್ಣನೆ ಇಂತಹ ಐತಿಹಾಸಿಕ ಸಾಧನಗಳ ಆಧಾರದ ಮೇಲೆ ಪ್ರಾಚೀನ ಭಾರತದ ಇತಿಹಾಸದ ಉಳಿವಿಕೆ ಹೇಗಾಯಿತು, ಇವುಗಳ ಸವಿಸ್ತಾರವಾಗಿ ಆಲೋಚನೆ ಮಾಡಲಾಗಿದೆ. ಶಿಲಾಯುಗದಲ್ಲಿಯ ಅಲೆಮಾರಿ ಜೀವನದಿಂದ ಸ್ಥಿರ ಜೀವನ, ಕೃಷಿ, ವಸಾಹತುಗಳ ನಿರ್ಮಾಣದಿಂದ ನಗರ ಸಂಸ್ಕೃತಿವರೆಗೆ ನಡೆದ ಪ್ರಯಾಣವನ್ನು ಇಲ್ಲಿ ಪರಿಚಯಿಸಲಾಗಿದೆ. ಹರಪ್ಪ ನಾಗರಿಕತೆ, ವೈದಿಕ ಕಾಲ, ಮಹಾಜನಪದಗಳ ಉದಯ, ಮೌರ್ಯ, ಶುಂಗ, ಶಾತವಾಹನ, ಗುಪ್ತ ಮುಂತಾದ ರಾಜವಂಶಗಳ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಇತಿಹಾಸ ಸರಳ ಮತ್ತು ಅರ್ಥಪೂರ್ಣ ರೀತಿಯಲ್ಲಿ ವಿವರಿಸಲಾಗಿದೆ. ಈ ಕಾಲಾವಧಿಯಲ್ಲಿಯ ಆಡಳಿತ, ಆರ್ಥಿಕತೆ ಮತ್ತು ಸಮಾಜರಚನೆ ಇವುಗಳ ಪರಸ್ಪರ ಸಂಬಂಧಗಳನ್ನು ಸ್ಪಷ್ಟಪಡಿಸಲಾಗಿದೆ. ಹಾಗೆಯೇ ಕಲೆ, ವಾಸ್ತುಶಿಲ್ಪ, ಸಾಹಿತ್ಯ, ವಿಜ್ಞಾನ, ಗಣಿತ, ಆಯುರ್ವೇದ, ತತ್ವಜ್ಞಾನ ಮತ್ತು ಧರ್ಮ ಮುಂತಾದ ಸಾಂಸ್ಕೃತಿಕ ಅಂಶಗಳ ಮೂಲಕ ಪ್ರಾಚೀನ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ತೆರೆದಿಡಲಾಗಿದೆ. ಪ್ರಾಚೀನ ಭಾರತದ ಪ್ರಭಾವ ಕೇವಲ ಭಾರತೀಯ ಉಪಖಂಡಕ್ಕೆ ಸೀಮಿತವಾಗಿರದೆ, ಏಷ್ಯಾ ಮತ್ತು ಇತರ ಪ್ರಾಚೀನ ಪ್ರಪಂಚಗಳ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದನ್ನೂ ಇಲ್ಲಿ ಚರ್ಚಿಸಲಾಗಿದೆ. ವ್ಯಾಪಾರ, ಧರ್ಮ ಕಲೆ ಇತ್ಯಾದಿ ಮಾಧ್ಯಮಗಳ ಮೂಲಕ ಭಾರತದ ಚೀನಾ, ಆಗ್ನೇಯ ಏಷ್ಯಾ, ಮಧ್ಯ ಏಷ್ಯಾ ಮತ್ತು ಭೂಮಧ್ಯ ಪ್ರದೇಶಗಳೊಂದಿಗೆ ಹೊಂದಿದ್ದ ಸಂಬಂಧಗಳನ್ನು ಸ್ಪಷ್ಟಪಡಿಸಲಾಗಿದೆ. ಪಠ್ಯಪುಸ್ತಕವನ್ನು ಸಂವಾದಾತ್ಮಕವಾಗಿಸಲು ಪ್ರಯತ್ನಿಸುವ ಸಲುವಾಗಿ ಬೇರೆ ಬೇರೆಯಾದ ಚೌಕಟ್ಟುಗಳ ಮಾಧ್ಯಮ ಮೂಲಕ ವಿದ್ಯಾರ್ಥಿಗಳನ್ನು ಹೆಚ್ಚು ಕ್ರಿಯಾಶೀಲರನ್ನಾಗಿರಿಸುವ ಪ್ರಯತ್ನ ಸಹ ಮಾಡಲಾಗಿದೆ. ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಕುತೂಹಲವನ್ನು ಉಂಟುಮಾಡುವುದು, ಭೂತಕಾಲದ ಅರಿವು ಬೆಳೆಸುವುದು ಮತ್ತು ಭಾರತದ ಸಮೃದ್ಧ ಪರಂಪರೆಯ ಬಗ್ಗೆ ತಿಳುವಳಿಕೆ ನೀಡುವುದು ಈ ಪಠ್ಯಪುಸ್ತಕದ ಮುಖ್ಯ ಉದ್ದೇಶವಾಗಿದೆ.

ನಾಗರೀಕಶಾಸ್ತ್ರ ವಿಭಾಗದಲ್ಲಿ ಸ್ಥಾನಿಕ ಸ್ವರಾಜ್ಯಸಂಸ್ಥೆ ಕುರಿತು ಮಾಹಿತಿಯನ್ನು ತೆಗೆದುಕೊಳ್ಳುವಾಗ ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಳೀಯ ಜನರ ಸಹಭಾಗಿತ್ವ, ಮಹಿಳೆಯರ ಭಾಗವಹಿಸುವಿಕೆ ಮತ್ತು ಅವರ ಒಳಗೊಳ್ಳುವಿಕೆಯಿಂದ ಉಂಟಾದ ಬದಲಾವಣೆಗಳನ್ನು ವಿಶೇಷವಾಗಿ ಉಲ್ಲೇಖಿಸಲಾಗಿದೆ. ನಮ್ಮ ದೇಶದ ಆಡಳಿತವು ಸಂವಿಧಾನ, ಕಾನೂನು ಮತ್ತು ನಿಯಮಗಳ ಪ್ರಕಾರ ನಡೆಯುತ್ತದೆ ಎಂಬುದನ್ನು ವಿದ್ಯಾರ್ಥಿಗಳಿಗೆ ಸರಳ ಭಾಷೆಯಲ್ಲಿ ವಿವರಿಸಲಾಗಿದೆ. ಪಾಠಗಳ ಚೌಕಟ್ಟಿನಲ್ಲಿ ನೀಡಲಾದ ಮಾಹಿತಿಯು ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಆಗಬಹುದು. ಶಿಕ್ಷಕರಿಗೆ ಪ್ರತ್ಯೇಕ ಸೂಚನೆಗಳನ್ನು ನೀಡಲಾಗಿದೆ. ಬೋಧನೆ ಗರಿಷ್ಠವಾಗಿ ಕೃತಿಯುಕ್ತವಾಗಿರಲು ವಿವಿಧ ಚಟುವಟಿಕೆಗಳನ್ನು ರೂಪಿಸಲಾಗಿದೆ. ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸುಜ್ಞಾನ ನಾಗರಿಕರಾಗಿ ಬೆಳೆಯಲು ಈ ಪಾಠಗಳಲ್ಲಿಯ ಆಶಯಗಳು ಮಹತ್ವದ ಪಾತ್ರ ವಹಿಸುತ್ತವೆ.

ಪಠ್ಯಪುಸ್ತಕವು ಸಾಧ್ಯವಾದಷ್ಟು ದೋಷರಹಿತ ಮತ್ತು ಗುಣಮಟ್ಟದ್ದು ಆಗಿರಬೇಕು ಎಂಬ ದೃಷ್ಟಿಕೋನದಿಂದ ಮಹಾರಾಷ್ಟ್ರದ ವಿವಿಧ ಭಾಗಗಳಿಂದ ಆಯ್ದ ಶಿಕ್ಷಕರು, ಅಲ್ಲದೆ ಶಿಕ್ಷಣ ತಜ್ಞರು ಮತ್ತು ವಿಷಯತಜ್ಞರಿಂದ ಸಮೀಕ್ಷೆ ನಡೆಸಲಾಗಿದೆ. ಬಂದ ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಪುಸ್ತಕಕ್ಕೆ ಅಂತಿಮ ರೂಪ ನೀಡಲಾಗಿದೆ. ಮಂಡಳಿಯ ಇತಿಹಾಸ ಮತ್ತು ನಾಗರಿಕಶಾಸ್ತ್ರ ವಿಷಯ ಸಮಿತಿಯ ಸದಸ್ಯರು, ಲೇಖಕರು ಮತ್ತು ಚಿತ್ರಕಾರರು ಅಪಾರ ಶ್ರಮವಹಿಸಿ ಈ ಪಠ್ಯಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಮಂಡಳಿಯು ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ.

ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ಈ ಪಠ್ಯಪುಸ್ತಕವನ್ನು ಸ್ವಾಗತಿಸುವರೆಂದು ನಾವು ಭಾವಿಸುತ್ತೇವೆ.

ಇತಿಹಾಸ ಮತ್ತು ನಾಗರಿಕಶಾಸ್ತ್ರ ಆನಂದಕರ ಅಧ್ಯಯನಕ್ಕಾಗಿ ಶುಭಾಶಯಗಳು!

(ಅನುರಾಧಾ ಓಕ್)
**ಸಂಚಾಲಕರು**
ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನೆ ಮಂಡಳಿ, ಪುಣೆ

**ಪುಣೆ**

**ದಿನಾಂಕ:** 01 ಮೇ 2026

**ಭಾರತೀಯ ಸೌರ ದಿನಾಂಕ:** ವೈಶಾಖ 11, ಶಕೆ 1948, ಮಹಾರಾಷ್ಟ್ರ ದಿನ

## ಪಾಠಗಳಅನುಸಾರ ಅಧ್ಯಯನ ನಿಷ್ಪತ್ತಿ

| ಅ ಕ್ರ | ಅಭ್ಯಾಸಕ್ರಮ ಕ್ಷಮತಾ | ಅಧ್ಯಯನ ನಿಷ್ಪತ್ತಿ | ಪುಟ ಕ್ರಮಾಂಕ |
|---|---|---|---|
| ಪಠ್ಯಕ್ರಮದ ಧ್ಯೇಯ CG - 1. ಮಾನವ ಜೀವನದ ವಿವಿಧ ಆಯಾಮಗಳಿಗೆ ಸಂಬಂಧಿಸಿದ ಮೂಲಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಅವುಗಳನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸುವುದು | | | |
| 1 | **ಇತಿಹಾಸದ ಆಧಾರಗಳು (ಸಾಧನಗಳು)**<br>C-1.1 ಮಾನವ ಜೀವನದ ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ ಮತ್ತು ಸಾಮಾಜಿಕ-ರಾಜಕೀಯ ಆಯಾಮಗಳನ್ನು ಅರ್ಥಮಾಡಿಕೊಳ್ಳಲು, ಮಾಹಿತಿಯ ಅನೇಕ ಆಧಾರಗಳನ್ನು (ಪ್ರಾಥಮಿಕ ಮತ್ತು ದ್ವಿತೀಯಕ) ಸಂಗ್ರಹಿಸುತ್ತಾನೆ ಮತ್ತು ಅವುಗಳನ್ನು ಅರ್ಥೈಸುತ್ತಾನೆ. | • ಪ್ರಾಚೀನ ಕಾಲದ ಮಾನವ ಜೀವನದ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಇತಿಹಾಸದ ಆಕರಗಳನ್ನು ವಿವರಿಸಿ, ಅವುಗಳ ಮೂಲಕ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸುತ್ತಾನೆ. | 1,2,3,4,5,6,7 |
| | | ಅ) ಪ್ರಾಚೀನ ಇತಿಹಾಸದ ಪ್ರಾಥಮಿಕ ಮೂಲಗಳನ್ನು ತಿಳಿಸುತ್ತಾನೆ. | 2,3,4,5,6,7 |
| | | ಬ) ಇತಿಹಾಸದ ಮಾಧ್ಯಮಿಕ ಮೂಲಗಳನ್ನು ತಿಳಿಸುತ್ತಾನೆ. | 2,3,4,5,6,7 |
| | | ಕ) ಇತಿಹಾಸದ ಭೌತಿಕ ಆಕರಗಳ ಹೆಸರುಗಳನ್ನು ಹೇಳಿ ಮಾಹಿತಿಯನ್ನು ಅರ್ಥಮಾಡಿಕೊಳ್ಳುತ್ತಾನೆ. | 2,3,4,5,6,7 |
| | | ಡ) ಇತಿಹಾಸದ ಲಿಖಿತ ಆಕರಗಳನ್ನು ಗುರುತಿಸಿ ಮಾನವ ಜೀವನದ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳುತ್ತಾನೆ. | 2,3,4,5,6,7 |
| | | ಇ) ಇತಿಹಾಸದ ಮೌಖಿಕ ಆಕರಗಳನ್ನು ಗುರುತಿಸಿ ಮಾಹಿತಿಯನ್ನು ಅರ್ಥಮಾಡಿಕೊಳ್ಳುತ್ತಾನೆ. | 2,4,5,6,7 |
| | | ಫ) ಇತಿಹಾಸದ ಅಧ್ಯಯನದ ವಿವಿಧ (ಭೌತಿಕ/ಲಿಖಿತ/ಮೌಖಿಕ) ಆಕರಗಳನ್ನು ವರ್ಗೀಕರಿಸುತ್ತಾನೆ. | 2,3,4,5,6,7 |
| | | • ಮಹಾರಾಷ್ಟ್ರದ ವಿವಿಧ ಉತ್ಖನನ ತಾಣಗಳು, ಪರಂಪರೆಯ ತಾಣಗಳು, ವಸ್ತುಸಂಗ್ರಹಾಲಯಗಳ ಹೆಸರುಗಳನ್ನು ತಿಳಿಸಿ, ಅವುಗಳನ್ನು ಮಹಾರಾಷ್ಟ್ರದ ಭೂಪಟದಲ್ಲಿ ತೋರಿಸಿ ಮಾಹಿತಿಯನ್ನು ನೀಡುತ್ತಾನೆ; ಅವುಗಳ ಸಂರಕ್ಷಣೆ ಮತ್ತು ನಿರ್ವಹಣೆಯ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾನೆ ಹಾಗೂ ಮಾನವ ಜೀವನದ ವಿವಿಧ ಆಯಾಮಗಳೊಂದಿಗೆ ಅವುಗಳನ್ನು ಸಂಯೋಜಿಸುತ್ತಾನೆ. | 5,6,7,13,14,15 |
| | C-1.2 ವಿಷಯ, ಕೋಷ್ಟಕಗಳು, ಅಂಕಿಅಂಶಗಳು, ನಕ್ಷೆಗಳು ಇತ್ಯಾದಿಗಳ ರೂಪದಲ್ಲಿ ನೀಡಲಾದ ಮಾನವ ಜೀವನದ ವಿವಿಧ ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಸ್ತುತಪಡಿಸುವದು ಮತ್ತು ವಿಶ್ಲೇಷಿಸುತ್ತಾನೆ/ಳೆ. | ಅ) ಮಹಾರಾಷ್ಟ್ರದ ವಿವಿಧ ಉತ್ಖನನ ತಾಣಗಳು, ಪರಂಪರೆಯ ತಾಣಗಳನ್ನು ತಿಳಿಸಿ ಮಹಾರಾಷ್ಟ್ರದ ಭೂಪಟದಲ್ಲಿ ತೋರಿಸುತ್ತಾನೆ. | 13,14,15<br>13,14 |
| | | ಬ) ಮಹಾರಾಷ್ಟ್ರದ ವಿವಿಧ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಬರೆಯುತ್ತಾನೆ. | 8,9,10,11,12, |
| | | • ಆಶಯ, ಕೋಷ್ಟಕಗಳು, ಆಕೃತಿಗಳ ಮತ್ತು ನಕ್ಷೆಗಳನ್ನು ಗಮನಿಸುವ ಮೂಲಕ ಪ್ರಾಚೀನ ಕಾಲದ ಮಾನವ ಜೀವನದ ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹ ಮಾಡುವದು ಮತ್ತು ವರ್ಗೀಕರಿಸುತ್ತಾರೆ. | 13,14,15<br>8,9,10,12, |
| | | ಅ) ಮಾನವ ಜೀವನದ ಅಂಶಗಳಿಗೆ ಸಂಬಂಧಿಸಿದ ಆಶಯದ ಮಾಹಿತಿಯನ್ನು ಸಂಗ್ರಹಿಸಿ ವರ್ಗೀಕರಣದ ಮೂಲಕ ಅರ್ಥೈಸಿಕೊಳ್ಳುತ್ತಾನೆ. | 13,14,15 |
| | | ಬ) ಮಾನವ ಜೀವನದ ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಆಕೃತಿಗಳ ಸಹಾಯದಿಂದ ಸಂಗ್ರಹಿಸಿ ವರ್ಗೀಕರಣದ ಮೂಲಕ ಅರ್ಥೈಸಿಕೊಳ್ಳುತ್ತಾನೆ. | 8,10,14 |
| | | ಕ) ನೈಸರ್ಗಿಕ ಮತ್ತು ಐತಿಹಾಸಿಕ ನಕ್ಷೆಗಳನ್ನು ಗಮನಿಸಿ ಮಾನವ ಜೀವನಕ್ಕೆ ಸಂಬಂಧಿಸಿದ ಐತಿಹಾಸಿಕವಾಗಿ ಪ್ರಮುಖವಾದ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸುತ್ತಾನೆ ಮತ್ತು ಅದರ ಆಧಾರದ ಮೇಲೆ ಮಾಹಿತಿಯನ್ನು ಸಂಗ್ರಹಿಸಿ ವರ್ಗೀಕರಣದ ಮೂಲಕ ಅರ್ಥೈಸಿಕೊಳ್ಳುತ್ತಾನೆ. | 9,14,15 |
| | | ಡ) ಮಾನವ ಜೀವನದ ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೋಷ್ಟಕಗಳ ಸಹಾಯದಿಂದ ಸಂಗ್ರಹಿಸಿ ವರ್ಗೀಕರಣದ ಮೂಲಕ ಅರ್ಥೈಸಿಕೊಳ್ಳುತ್ತಾನೆ. | 8,10,13,14,15 |
| ಅಭ್ಯಾಸಕ್ರಮದ ಧ್ಯೇಯ- CG-1. ಮಾನವ ಜೀವನದ ವಿವಿಧ ಅಂಶಗಳಿಗೆ ಸಂಬಂಧಿಸಿದ ಮೂಲಗಳನ್ನು ಅರ್ಥಪೂರ್ಣ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು ಮತ್ತು ವ್ಯಾಖ್ಯಾನಿಸುವುದು.<br>CG-2 ಮಾನವಿ ಸಂಸ್ಕೃತಿಯಲ್ಲಿಯ ನಿರಂತರತೆ ಮತ್ತು ಬದಲಾವಣೆ ಈ ಪ್ರಕ್ರಿಯೆಗಳ ಪರಿಶೀಲನೆ ಕೆಲವು ವಿಶಿಷ್ಟ ಉದಾಹರಣೆಗಳು ಮತ್ತು ಅವುಗಳ ಸಂದರ್ಭ ಹಾಗೆ ಕೆಲವು ಐತಿಹಾಸಿಕ ಘಟನೆಗಳ ಆಧಾರದಿಂದ ಶೋಧನೆ ಮಾಡುವುದು, | | | |
| 2 | **ಮಾನವನ ವಿಕಾಸದ ಹಂತಗಳು**<br>C-1.1 ಮಾನವ ಜೀವನದ ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ ಮತ್ತು ಸಾಮಾಜಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ವಿವಿಧ ಮಾಹಿತಿಯ ಮೂಲಗಳನ್ನು (ಪ್ರಾಥಮಿಕ ಮತ್ತು ಮಾಧ್ಯಮಿಕ) ಸಂಗ್ರಹಿಸುತ್ತಾನೆ ಮತ್ತು ವಿಶ್ಲೇಷಿಸುತ್ತಾನೆ.<br>C-2.1 ಭೂತಕಾಲದ ಪ್ರಮುಖ ಬದಲಾವಣೆಗಳನ್ನು ಮತ್ತು ಅವುಗಳಿಂದ ಸಮಾಜದ ಮೇಲಾದ ಸ್ಪಷ್ಟ ಪರಿಣಾಮಗಳನ್ನು ವಿವರಿಸುತ್ತಾನೆ | • ಮಹಾರಾಷ್ಟ್ರದ ವಿವಿಧ ಉತ್ಖನನ ಸ್ಥಳಗಳು ಮತ್ತು ವಸ್ತುಸಂಗ್ರಹಾಲಯಗಳ ಹೆಸರುಗಳನ್ನು ತಿಳಿಸಿ, ಅವುಗಳನ್ನು ಭೂಪಟದಲ್ಲಿ ಗುರುತಿಸುತ್ತಾನೆ. ಅಲ್ಲಿ ದೊರೆತ ಮಾಹಿತಿಯ ಮಹತ್ವವನ್ನು ವಿವರಿಸಿ, ಮಾನವ ಜೀವನದ ವಿವಿಧ ಮಜಲುಗಳೊಂದಿಗೆ ಅವುಗಳನ್ನು ಜೋಡಿಸುತ್ತಾನೆ. | 13,14,15 |
| | | ಕ) ಮಹಾರಾಷ್ಟ್ರದ ವಿವಿಧ ಪರಂಪರೆಯ ತಾಣಗಳನ್ನು ನಕ್ಷೆಯಲ್ಲಿ ತೋರಿಸಿ ಮಾಹಿತಿ ನೀಡುತ್ತಾರೆ ಮತ್ತು ಅವುಗಳ ಸಂರಕ್ಷಣೆ ಹಾಗೂ ಸಂವರ್ಧನೆಯ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ. | 6,15 |
| | | • ಪ್ರಾಚೀನ ಕಾಲದ ಮಾನವ ಸಂಸ್ಕೃತಿಯ ಮಾಹಿತಿಯ ಆಧಾರದ ಮೇಲೆ ವಿವಿಧ ಬದಲಾವಣೆಗಳನ್ನು ಗಮನಿಸಿ, ಪ್ರಾಚೀನ ಭಾರತದ ಸಂಸ್ಕೃತಿಯ ಹಂತಗಳನ್ನು ಅರ್ಥಮಾಡಿಕೊಳ್ಳುತ್ತಾನೆ. | 10,11,12,13,14,15 |
| | | ಅ) ವಿವಿಧ ಭೌಗೋಳಿಕ ವೈಶಿಷ್ಟ್ಯಗಳು ಪ್ರಾಚೀನ ಭಾರತದ ಸಾಂಸ್ಕೃತಿಕ ಹಾದಿಯ ಮೇಲೆ ಬೀರಿದ ಪರಿಣಾಮಗಳನ್ನು ವಿವರಿಸುತ್ತಾರೆ. | 9,10,16,17,18 |
| | | ಬ) ಪ್ರಾಗೈತಿಹಾಸಿಕ ಕಾಲ ಎಂಬ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡು, ಪ್ರಾಗೈತಿಹಾಸಿಕ ಕಾಲ ಮತ್ತು ಐತಿಹಾಸಿಕ ಕಾಲ ಈ ಎರಡೂ ಕಾಲಘಟ್ಟಗಳಲ್ಲಿನ ಮಾನವ ಸಂಸ್ಕೃತಿಯ ಪ್ರಯಾಣ ಮತ್ತು ಸ್ಥಿತ್ಯಂತರಗಳ ಬಗ್ಗೆ ಮಾಹಿತಿ ನೀಡುತ್ತಾರೆ. | 10,11,12,13,14 |
| | | • ಶಿಲಾಯುಗ ಮತ್ತು ತಾಮ್ರಯುಗದ ಅರ್ಥ ಮತ್ತು ಮಾಹಿತಿಯನ್ನು ನೀಡಿ, ಅಂದಿನ ಮಾನವ ಜೀವನದಲ್ಲಾದ ಸಾಮಾಜಿಕ ಬದಲಾವಣೆಗಳನ್ನು ವಿವರಿಸುತ್ತಾನೆ | 10,11,13,14,15 |
| | | ಅ) ಶಿಲಾಯುಗದ ಅರ್ಥ ತಿಳಿಸಿ ಮಹಾರಾಷ್ಟ್ರದ ಶಿಲಾಯುಗದ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸುತ್ತಾರೆ. | 10,11,15 |
| | | ಬ) ಪುರಾತನ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನವ ಶಿಲಾಯುಗದ ಬಗ್ಗೆ ಮಾಹಿತಿ ನೀಡಿ ಹೋಲಿಕೆ ಮಾಡುತ್ತಾರೆ. | 11,12,13,14,15 |
| | | ಕ) ಪುರಾತನ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನವ ಶಿಲಾಯುಗದ ಮಾನವ ಜೀವನದಲ್ಲಾದ ಬದಲಾವಣೆಗಳನ್ನು ತಿಳಿಸುತ್ತಾರೆ. | 11,12,13,14,15 |
| | | ಡ) ತಾಮ್ರಶಿಲಾ ಯುಗದ ಅರ್ಥವನ್ನು ಸ್ಪಷ್ಟಪಡಿಸುತ್ತಾರೆ. | 13,14,15 |
| | | ಇ) ತಾಮ್ರಶಿಲಾಯುಗದ ಮಹಾರಾಷ್ಟ್ರದ ಸಾಕ್ಷಾತ್ಕಾರ, ಜೋರ್ವೆ, ಇನಾಮಗಾಂವ್, ದೈಮಾಬಾದ್ ಮುಂತಾದ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸಿ ಅವುಗಳ ಮಹತ್ವವನ್ನು ತಿಳಿಸುತ್ತಾರೆ. | 13,14,15 |
| | | ಫ) ತಾಮ್ರಶಿಲಾಯುಗದ ವೈಶಿಷ್ಟ್ಯಗಳನ್ನು ತಿಳಿಸುತ್ತಾರೆ. | 13,14,15 |
| | | • ಮಾನವ ಸಮಾಜದ ವಿಕಾಸದ ವಿವಿಧ ಹಂತಗಳನ್ನು ಅರ್ಥಮಾಡಿಕೊಂಡು, ಮಾನವ ವಸತಿ, ಸ್ವತ್ತು, ಸಂಸ್ಕೃತಿ ಇತ್ಯಾದಿಗಳ ಕಾಲಾನುಕ್ರಮದ ವಿವಿಧ ಬದಲಾವಣೆಗಳು ಮಾನವಿ ಸಮಾಜದ ಆದಂತಹ ಪರಿಣಾಮಗಳ ವಿಶ್ಲೇಷಣೆ ಮಾಡುತ್ತಾನೆ. | 8,9,10,11,12,<br>13,14,15 |

| | | | |
|---|---|---|---|
| ಅಭ್ಯಾಸಕ್ರಮದ ಗುರಿ: CG-3 ಮಾನವ ಸಂಸ್ಕೃತಿಯ ನಿರಂತರತೆ ಮತ್ತು ಬದಲಾವಣೆಯ ಪ್ರಕ್ರಿಯೆಗಳನ್ನು ಕೆಲವು ವಿಶಿಷ್ಟ ಉದಾಹರಣೆಗಳು ಮತ್ತು ಐತಿಹಾಸಿಕ ಘಟನೆಗಳ ಮೂಲಕ ಗುರುತಿಸುವುದು. | | | |
| 3 | **ಹರಪ್ಪ ಸಂಸ್ಕೃತಿ**<br>C-3.1 ಭೂತಕಾಲದ ಪ್ರಮುಖ ಬದಲಾವಣೆಗಳು ಮತ್ತು ಸಮಾಜದ ಮೇಲಿನ ಪರಿಣಾಮಗಳನ್ನು ವಿಶ್ಲೇಷಿಸುತ್ತಾನೆ | • ಪ್ರಾಚೀನ ಕಾಲದ ಹರಪ್ಪ ಸಂಸ್ಕೃತಿಯ ಉತ್ಖನನ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿ, ಆ ಸಂಸ್ಕೃತಿಯ ವೈಶಿಷ್ಟ್ಯಗಳು, ಬದಲಾವಣೆಗಳು ಮತ್ತು ವಿನಾಶಕ್ಕೆ ಕಾರಣಗಳನ್ನು ವಿವರಿಸುತ್ತಾನೆ.<br>ಅ) ಹರಪ್ಪ ಸಂಸ್ಕೃತಿಯ ಕಾಲಘಟ್ಟವನ್ನು ತಿಳಿಸುವುದು.<br>ಬ) ಹರಪ್ಪ ಸಂಸ್ಕೃತಿಯ ಸ್ಥಳಗಳು ಮತ್ತು ಸಮಕಾಲೀನ ಜಾಗತಿಕ ಸಂಸ್ಕೃತಿಯ ಸ್ಥಳಗಳನ್ನು ನಕ್ಷೆಯಲ್ಲಿ ತೋರಿಸುವುದು.<br>ಕ) ಹರಪ್ಪ ಸಂಸ್ಕೃತಿಯ ನಗರೀಕರಣದ ವೈಶಿಷ್ಟ್ಯಗಳನ್ನು ತಿಳಿಸಿ ಲೋಕಜೀವನದಲ್ಲಾದ ಬದಲಾವಣೆಯನ್ನು ಸ್ಪಷ್ಟಪಡಿಸುವುದು.<br>ಡ) ಹರಪ್ಪ ಸಂಸ್ಕೃತಿಯ ವಿನಾಶದ ಹಿಂದಿನ ಕಾರಣಗಳನ್ನು ಸ್ಪಷ್ಟಪಡಿಸುವುದು. | 16,17,18,19,20<br>21,22,23,24,25<br>17,24<br>17,18,25<br>18,19,20,21,<br>22,23,24 |
| 4 | **ವೈದಿಕ ಸಂಸ್ಕೃತಿ**<br>C-4.1 ಭೂತಕಾಲದಲ್ಲಿನ ಪ್ರಮುಖ ಬದಲಾವಣೆಗಳು, ಅವುಗಳ ಸಮಾಜದ ಮೇಲಿನ ಸ್ಪಷ್ಟ ಪರಿಣಾಮಗಳನ್ನು ವಿಶ್ಲೇಷಿಸುತ್ತಾರೆ. | • ವೈದಿಕ ಸಂಸ್ಕೃತಿಯಲ್ಲಿನ ವಾಙ್ಮಯ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಆದ ಬದಲಾವಣೆಗಳನ್ನು ಸ್ಪಷ್ಟಪಡಿಸುತ್ತಾರೆ.<br>ಅ) ವೈದಿಕ ವಾಙ್ಮಯದ ಹೆಸರುಗಳನ್ನು ತಿಳಿಸಿ ಭಾರತೀಯ ಸಂಸ್ಕೃತಿಯಲ್ಲಿ ಅವುಗಳ ಮಹತ್ವವನ್ನು ವಿವರಿಸುವುದು.<br>ಬ) ವೈದಿಕ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಜೀವನ ಮತ್ತು ಆಶ್ರಮ ವ್ಯವಸ್ಥೆ ಇವುಗಳ ಬಗ್ಗೆ ಮಾಹಿತಿ ನೀಡುವುದು. | 26,27,28,29<br>30,31,32<br>27,28,29,30,<br>31,32<br>28,29,30,31,32 |
| ಅಭ್ಯಾಸಕ್ರಮ ಧ್ಯೇಯ: CG-7 (ಅ) ಭೂತಕಾಲ ಮತ್ತು ವರ್ತಮಾನ ಕಾಲ ಹಾಗೂ ಅವುಗಳಲ್ಲಿನ ಗೌರವಾನ್ವಿತ ಸಾಂಸ್ಕೃತಿಕ ವಿಭಿನ್ನತೆಯಲ್ಲಿ ಏಕತೆ, ಬಹುತ್ವ, ಪರಂಪರೆ, ಸಾಹಿತ್ಯ, ಕಲೆ, ಪ್ರಮುಖ ತತ್ವಜ್ಞಾನ, ವೈದ್ಯಕೀಯ ಶಾಸ್ತ್ರ, ವಿಜ್ಞಾನ ಮತ್ತು ಮಾನವೀಯತೆಯ ಇತರ ಕೊಡುಗೆಗಳನ್ನು ಅರಿಯುವುದು. ಬ) ಭೌಗೋಳಿಕ ವೈವಿಧ್ಯತೆ ಇದ್ದರೂ ಏಕತೆಗಾಗಿ ಇತರ ಅಗತ್ಯ ಘಟಕಗಳನ್ನು ಬೆಳೆಸುವುದು ಮತ್ತು ಅವುಗಳ ಮಹತ್ವವನ್ನು ಅರಿತುಕೊಳ್ಳುವುದು | | | |
| 5 | **ವಿವಿಧ ಧಾರ್ಮಿಕ ವಿಚಾರಧಾರೆಗಳು**<br>C- 7.3 ಭಾರತೀಯ ಪರಂಪರೆಯ ಸಮುದಾಯಗಳು ಹಾಗೂ ಸಾಮಾಜಿಕ ಗುಂಪುಗಳ ಸಮಾವೇಶ ಮತ್ತು ಅವುಗಳ ಸಾಂಸ್ಕೃತಿಕ ಘಟಕಗಳ ಮೂಲಕ ಜಾಗತಿಕ ಪ್ರಭಾವವನ್ನು ಗುರುತಿಸುವುದು. | • ಪ್ರಾಚೀನ ಕಾಲದ ವಿವಿಧ ಸಮುದಾಯಗಳು, ಅವರ ಉಡುಪು, ಜೀವನಶೈಲಿ, ನಡವಳಿಕೆ, ಸಂಸ್ಕೃತಿ, ಪರಂಪರೆ ಶಿಕ್ಷಣ, ವ್ಯವಸಾಯ ಇವುಗಳ ಪರಿಚಯ ಮಾಡಿಕೊಡುವುದು.<br>ಅ) ಪ್ರಾಚೀನ ಭಾರತೀಯ ಪರಂಪರೆಯ ಜಾಗತಿಕ ವಿವಿಧ ಸಮುದಾಯಗಳ ಮೇಲಿನ ಪ್ರಭಾವವನ್ನು ತಿಳಿಸುವುದು.<br>ಬ) ಪ್ರಾಚೀನ ಭಾರತದ ವಿವಿಧ ಧಾರ್ಮಿಕ ಪ್ರವಾಹಗಳು ಹಾಗೂ ಅವುಗಳ ವಿಚಾರಗಳನ್ನು ಸ್ಪಷ್ಟಪಡಿಸುವುದು. | 33,34,35,36,37<br>38,39,40,41,42<br>33,34,35,36,37<br>38,39,40,41,42<br>33,34,35,36,37<br>38,39,40,41,42 |
| ಪಠ್ಯಕ್ರಮದ ಗುರಿ: CG-4 ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಸ್ಥೆಗಳ ಕಾರ್ಯಗಳು ಸಮಾಜದ ಮೇಲೆ ಬೀರುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ವ್ಯಕ್ತಿ ಮತ್ತು ಸಾಮೂಹಿಕ ಸಂಸ್ಥೆಗಳು ಸಮಾಜಕ್ಕೆ ಹೇಗೆ ರೂಪ ನೀಡುತ್ತವೆ ಎಂಬುದನ್ನು ತಿಳಿಯುವುದು. | | | |
| 6 | **ಜನಪದಗಳು ಮತ್ತು ಮಹಾಜನಪದಗಳು**<br>C-4.1 ವಿದ್ಯಾರ್ಥಿಗಳು ಪರಿಸರದ ಅಥವಾ ಪ್ರದೇಶದ ವಿವಿಧ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳ ಕಾರ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು, ಆ ಮಾಹಿತಿಯ ವ್ಯವಸ್ಥಾಪನೆ ಮಾಡುವುದು ಮತ್ತು ಅದರ ಅರ್ಥವನ್ನು ಗ್ರಹಿಸುವುದು. ಮಾನವ ಸಮಾಜಕ್ಕಾಗಿ ಅದರ ಮಹತ್ವವನ್ನು ಗುರುತಿಸುವುದು. | • ವೈದಿಕೋತ್ತರ ಕಾಲಖಂಡದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳ ಕಾರ್ಯ ಮತ್ತು ಜನಪದಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮಾನವ ಸಮಾಜಕ್ಕಾಗಿ ಅವುಗಳ ಮಹತ್ವವನ್ನು ತಿಳಿಸುವುದು.<br>ಅ) ವೈದಿಕೋತ್ತರ ಕಾಲಖಂಡದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳ ಮಾಹಿತಿಯನ್ನು ಸಂಗ್ರಹಿಸಿ ಸಮಕಾಲೀನ ಮಾನವ ಜೀವನದಲ್ಲಿ ಅವುಗಳ ಮಹತ್ವವನ್ನು ತಿಳಿಸುವುದು.<br>ಬ) ಪ್ರಾಚೀನ ಭಾರತದ ವಿವಿಧ ಜನಪದಗಳನ್ನು ಹೆಸರಿಸಿ ಅವುಗಳ ವೈಶಿಷ್ಟ್ಯಗಳು ಮತ್ತು ಮಹತ್ವವನ್ನು ಉದಾಹರಣೆಗಳೊಂದಿಗೆ ತಿಳಿಸುವುದು.<br>ಕ) ಪ್ರಾಚೀನ ಭಾರತದ ವಿವಿಧ ಮಹಾಜನಪದಗಳ ಕೊಡುಗೆಗಳನ್ನು ತಿಳಿಸಿ ಅವುಗಳ ತುಲನೆ ಮಾಡುವುದು. | 43,44,45,46,47,<br>48<br>43,44,45,46,47,<br>48<br>43,44,45,46,47,<br>48<br>43,44,45,46,47,<br>48<br>45,48 |
| ಪಠ್ಯಕ್ರಮದ ಗುರಿ: CG-4 ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಸ್ಥೆಗಳ ಕಾರ್ಯಗಳು ಸಮಾಜದ ಮೇಲೆ ಬೀರುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ವ್ಯಕ್ತಿ ಮತ್ತು ಸಾಮೂಹಿಕ ಸಂಸ್ಥೆಗಳು ಸಮಾಜಕ್ಕೆ ಹೇಗೆ ರೂಪ ನೀಡುತ್ತವೆ ಎಂಬುದನ್ನು ತಿಳಿಯುವುದು. | | | |
| 7 | **ಮೌರ್ಯಕಾಲೀನ ಭಾರತ**<br>C- 4.1 ಸಾಮಾನ್ಯವಾಗಿ ವ್ಯಕ್ತಿ / ಸಮೂಹ / ಸಮುದಾಯ ಸಮಾಜದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಸ್ಥೆಗಳ ಪ್ರಭಾವದ ಮೌಲ್ಯಮಾಪನ ಮಾಡುವುದು. | 1) ಪ್ರಾಚೀನ ಕಾಲದ ವಿವಿಧ ಸಾಮ್ರಾಜ್ಯಗಳು, ವ್ಯಕ್ತಿಗಳು, ಸಮಾಜ ಇವುಗಳ ಅಂದಿನ ಸಮಾಜದ ಮೇಲಿನ ಪ್ರಭಾವದ ಮೌಲ್ಯಮಾಪನ ಮಾಡುವುದು.<br>ಅ) ಮೌರ್ಯ ಸಾಮ್ರಾಜ್ಯದ ಸ್ಥಾಪನೆ ಮತ್ತು ವಿಸ್ತಾರದಲ್ಲಿ ಚಂದ್ರಗುಪ್ತ ಮೌರ್ಯ ಹಾಗೂ ಸಾಮ್ರಾಟ್ ಬಿಂದೂಸಾರ ಇವರ ಕೊಡುಗೆಗಳನ್ನು ಸ್ಪಷ್ಟಪಡಿಸುವುದು.<br>ಬ) ಸಾಮ್ರಾಟ್ ಅಶೋಕನ ಕಲಿಂಗ ಯುದ್ಧದ ಮಾಹಿತಿ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವುದು.<br>ಕ) ಸಾಮ್ರಾಟ್ ಅಶೋಕನ ಕಲಿಂಗ ಯುದ್ಧ, ಧರ್ಮಪ್ರಸಾರ ಮತ್ತು ಲೋಕಕಲ್ಯಾಣದ ಕಾರ್ಯಗಳ ಬಗ್ಗೆ ಅವರ ಕೊಡುಗೆಯನ್ನು ತಿಳಿಸುವುದು.<br>ಡ) ಸಾಮ್ರಾಟ್ ಅಶೋಕನ ಧರ್ಮಪ್ರಸಾರದ ಕಾರ್ಯಗಳ ವಿಶ್ಲೇಷಣೆ ಮಾಡುವುದು.<br>ಇ) ಸಾಮ್ರಾಟ್ ಅಶೋಕನ ಲೋಕಕಲ್ಯಾಣದ ಕಾರ್ಯಗಳ ಮಹತ್ವವನ್ನು ತಿಳಿಸುವುದು.<br>ಎಫ್) ಮೌರ್ಯಕಾಲೀನ ರಾಜ್ಯವ್ಯವಸ್ಥೆ ಮತ್ತು ಲೋಕಜೀವನದ ಬಗ್ಗೆ ಮಾಹಿತಿ ನೀಡುವುದು.<br>ಜಿ) ಮೌರ್ಯಕಾಲೀನ ಕಲೆ, ಸ್ಥಾಪತ್ಯ ಮತ್ತು ಸಾಹಿತ್ಯದ ಬಗ್ಗೆ ಮಾಹಿತಿ ನೀಡಿ ಭಾರತದ ರಾಷ್ಟ್ರೀಯ ಲಾಂಛನಗಳು ಮತ್ತು ಮೌರ್ಯಕಾಲೀನ ಸ್ಥಾಪತ್ಯ ಕಲೆಯ ನಡುವಿನ ಸಂಬಂಧವನ್ನು ತಿಳಿಸುವುದು. | 49,50,51,52,53<br>54,55,56<br>49,50,51,52,<br>55,56<br>52,53,55,56<br>52,53,55,56<br>52,53,55,56<br>53,55,56<br>53,54,55,56<br>54,55,56 |

<table>
<tr><td colspan="4">ಪಠ್ಯಕ್ರಮದ ಗುರಿ: CG-3 ವಿವಿಧ ಸಾಮಾಜಿಕ ಐತಿಹಾಸಿಕ ಘಟನೆಗಳು ಅಥವಾ ಪ್ರಸಂಗಗಳ ಕಾರಣಗಳು ಮತ್ತು ಪರಿಣಾಮಗಳ ನಡುವಿನ ಸಂಬಂಧವನ್ನು ಕಂಡುಹಿಡಿಯುವುದು ಮತ್ತು ಅವುಗಳನ್ನು ಮಾನವ ಜೀವನದ ಒಟ್ಟಾರೆ ಪರಿಣಾಮಗಳೊಂದಿಗೆ ಜೋಡಿಸುವುದು.<br>CG-7 ಅ) ಭಾರತದ ಶ್ರೀಮಂತ ಭೂತಕಾಲ ಮತ್ತು ವರ್ತಮಾನ ಕಾಲದ ಭವ್ಯ ಸಾಂಸ್ಕೃತಿಕ ವೈವಿಧ್ಯತೆಯಲ್ಲಿನ ಏಕತೆ, ಬಹುತ್ವ, ಪರಂಪರೆ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ತತ್ವಜ್ಞಾನ, ವೈದ್ಯಕೀಯ ವಿಜ್ಞಾನ, ವಿಜ್ಞಾನ ಮತ್ತು ಮಾನವಕುಲಕ್ಕೆ ಇವುಗಳ ಕೊಡುಗೆಯನ್ನು ಅರಿಯುವುದು. ಬ) ಭೌಗೋಳಿಕ ವೈವಿಧ್ಯತೆ ಇದ್ದರೂ ಸಹ ಸಮಗ್ರತೆಗಾಗಿ ಇತರ ಅಗತ್ಯ ಅಂಶಗಳ ಜೊತೆಗೆ 'ಭಾರತೀಯ' ವಾಗಿರುವುದರ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಅರಿಯುವುದು.</td></tr>
<tr><td>8</td><td>ಪ್ರಾಚೀನ ಭಾರತದ ಮತ್ತು ಮಹಾರಾಷ್ಟ್ರದ ಪ್ರಮುಖ ರಾಜ್ಯಗಳು ಮತ್ತು ರಾಜಮನೆತನಗಳು<br>C-7.4 ಪ್ರಾಚೀನ ಭಾರತದ ಮತ್ತು ಮಹಾರಾಷ್ಟ್ರದ ಪ್ರಮುಖ ರಾಜ್ಯಗಳು ಹಾಗೂ ರಾಜಧಾನಿಗಳನ್ನು ಪರಿಚಯಿಸುತ್ತದೆ.<br><br>C-3.2 ಸಾಮಾಜಿಕ ಗುಂಪು ಸಮುದಾಯಗಳಲ್ಲಿ ಅವರ ಪ್ರದೇಶದಲ್ಲಿ ಮತ್ತು ವಿಶ್ವದ ಇತರ ಭಾಗಗಳಲ್ಲಿನ ಸಾಮರಸ್ಯ ಮತ್ತು ಸಂಘರ್ಷದ ಹಿಂದಿನ ಕಾರಣಗಳನ್ನು ಮತ್ತು ಮಾನವ ಸಮಾಜದ ಮೇಲೆ ಅವುಗಳ ಪ್ರಭಾವವನ್ನು ಗುರುತಿಸುವುದು.</td><td>• ಪ್ರಾಚೀನ ಭಾರತದ ಮತ್ತು ಮಹಾರಾಷ್ಟ್ರದ ಪ್ರಮುಖ ರಾಜ್ಯಗಳು ಹಾಗೂ ರಾಜಧಾನಿಗಳ (ಶುಂಗ, ಕಣ್ವ, ಶಾತವಾಹನ, ಶಕ, ಕುಶಾಣ, ಗುಪ್ತ, ವರ್ಧನ ಇತ್ಯಾದಿ) ಕೊಡುಗೆಗಳನ್ನು ವಿವರಿಸುತ್ತದೆ.<br>ಅ) ಶುಂಗ ಸಾಮ್ರಾಜ್ಯದ ವಿಸ್ತರಣೆಯನ್ನು ವಿವರಿಸುತ್ತದೆ ಮತ್ತು ಗ್ರೀಕ್ ರಾಜ್ಯಗಳ ವಿರುದ್ಧದ ಅವರ ನೀತಿಯನ್ನು ವಿಶ್ಲೇಷಿಸುತ್ತದೆ.<br>ಬ) ಕಣ್ವ ಸಾಮ್ರಾಜ್ಯದ ವಿಸ್ತರಣೆಯನ್ನು ವಿವರಿಸುತ್ತದೆ.<br>ಕ) ಪ್ರಾಚೀನ ಮಹಾರಾಷ್ಟ್ರ ಮತ್ತು ಭಾರತದಲ್ಲಿ ಶಾತವಾಹನ ವಂಶದ ಗಮನಾರ್ಹ ಕೊಡುಗೆಯನ್ನು ವಿವರಿಸುತ್ತದೆ.<br>ಡ) ಭಾರತೀಯ ನಾಣ್ಯ ತಯಾರಿಕೆಯಲ್ಲಿ ಇಂಡೋ-ಗ್ರೀಕರ ನವೀನ ಕೊಡುಗೆಯನ್ನು ವಿವರಿಸುತ್ತದೆ.<br>ಇ) ಶಕ ಸಾಮ್ರಾಜ್ಯದ ವಿಸ್ತರಣೆಯನ್ನು ವಿವರಿಸುತ್ತದೆ.<br>ಫ) ಕುಶಾಣರ ಸಾಮ್ರಾಜ್ಯ ವಿಸ್ತರಣೆ, ಆಡಳಿತ ವ್ಯವಸ್ಥೆ ಮತ್ತು ಅವರ ಮೇಲೆ ಭಾರತೀಯ ಸಂಸ್ಕೃತಿಯ ಪ್ರಭಾವವನ್ನು ವಿವರಿಸುತ್ತದೆ.<br>ಗ) ಗುಪ್ತರ ಕಾಲದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ವಿವರಿಸುತ್ತದೆ.<br>ಹ) ಸಾಮ್ರಾಟ ಹರ್ಷವರ್ಧನ ಅವರ ಕೊಡುಗೆಯನ್ನು ವಿವರಿಸುತ್ತದೆ.<br>ಈ) ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕುಶಾಣರ ಕೊಡುಗೆಯನ್ನು ವಿವರಿಸುತ್ತದೆ.<br>ಐ) ವಿದೇಶಿ ಆಕ್ರಮಣಗಳಿಂದಾಗಿ ಭಾರತೀಯರ ಯುದ್ಧತಂತ್ರ, ಆಹಾರ ಪದ್ಧತಿ ಮತ್ತು ಸಂಪ್ರದಾಯಗಳಲ್ಲಿನ ಬದಲಾವಣೆಗಳನ್ನು ವಿವರಿಸುತ್ತದೆ.</td><td>57,58,59,60<br>61,62,63,64<br>57,63,64<br><br>58,63,64<br>59,63,64<br>58,63,64<br>59,63,64<br>60,63,64<br><br>61,63,64<br>62,63,64<br>60,61,64<br>57,58,60</td></tr>
<tr><td colspan="4">ಪಠ್ಯಕ್ರಮದ ಗುರಿ: CG-7 ಅ) ಭಾರತದ ಶ್ರೀಮಂತ ಭೂತಕಾಲ ಮತ್ತು ವರ್ತಮಾನ ಕಾಲದ ಭವ್ಯ ಸಾಂಸ್ಕೃತಿಕ ವೈವಿಧ್ಯತೆಯಲ್ಲಿನ ಏಕತೆ, ಬಹುತ್ವ, ಪರಂಪರೆ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ತತ್ವಜ್ಞಾನ, ವೈದ್ಯಕೀಯ ವಿಜ್ಞಾನ, ವಿಜ್ಞಾನ ಮತ್ತು ಮಾನವಕುಲಕ್ಕೆ ಇವುಗಳ ಕೊಡುಗೆಯನ್ನು ಅರಿಯುವುದು. ಬ) ಭೌಗೋಳಿಕ ವೈವಿಧ್ಯತೆ ಇದ್ದರೂ ಸಹ ಸಮಗ್ರತೆಗಾಗಿ ಇತರ ಅಗತ್ಯ ಅಂಶಗಳ ಜೊತೆಗೆ 'ಭಾರತೀಯ' ವಾಗಿರುವುದರ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಅರಿಯುವುದು.</td></tr>
<tr><td>9</td><td>ಪ್ರಾಚೀನ ಭಾರತದ ಸಾಂಸ್ಕೃತಿಕ ಪರಂಪರೆ<br>C-7.1 ಭಾರತದ ಶ್ರೀಮಂತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಘಟಕಗಳು, ಭಾಷೆ, ಕಲೆ, ತಾತ್ವಿಕ ಕಲ್ಪನೆಗಳು, ಮೌಲ್ಯಗಳು, ಉಡುಪು, ಆಹಾರ, ಸಂಪ್ರದಾಯಗಳು, ಹಬ್ಬಗಳು, ವ್ಯಾಪಾರ, ವಾಣಿಜ್ಯ, ಆಯುರ್ವೇದ ಮತ್ತು ಯೋಗದಂತಹ ಆರೋಗ್ಯಕರ ಅಭ್ಯಾಸಗಳಲ್ಲಿನ ಸಾಮ್ಯತೆಗಳನ್ನು ಗುರುತಿಸುವ ಮೂಲಕ 'ವೈವಿಧ್ಯತೆಯಲ್ಲಿ ಏಕತೆ'ಯನ್ನು ಇದು ಸ್ಪಷ್ಟಪಡಿಸುತ್ತದೆ.<br><br>C-7.3 ಭಾರತೀಯ ಸಂಪ್ರದಾಯದ ಪ್ರಕಾರ ಸಮುದಾಯಗಳು ಮತ್ತು ಸಾಮಾಜಿಕ ಗುಂಪುಗಳ ಒಳಗೊಳ್ಳುವಿಕೆ ಹಾಗೂ ಸಾಂಸ್ಕೃತಿಕ ಘಟಕಗಳ ಮೂಲಕ ಅವುಗಳು ಜಾಗತಿಕ ಮಟ್ಟದಲ್ಲಿ ಬೀರುವ ಪ್ರಭಾವವನ್ನು ಇದು ತಿಳಿಸಿಕೊಡುತ್ತದೆ.</td><td>1) ಪ್ರಾಚೀನ ಭಾರತೀಯ ಸಂಸ್ಕೃತಿಯ ಶ್ರೀಮಂತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಅಂಶಗಳನ್ನು ಅರ್ಥಮಾಡಿಕೊಂಡು ಅವುಗಳಲ್ಲಿನ ಸಾಮ್ಯತೆಗಳನ್ನು ಗುರುತಿಸಿ ವಿವಿಧತೆಯಲ್ಲಿ ಏಕತೆಯನ್ನು ವಿವರಿಸುತ್ತಾನೆ.<br>ಅ) ಪ್ರಾಚೀನ ಭಾರತದ ಸಾಂಸ್ಕೃತಿಕ ಜೀವನದ ಭಾಷೆ, ಕಲೆ, ಪರಂಪರೆ, ಪೋಷಾಕು, ಆಹಾರ ಇತ್ಯಾದಿ ಅಂಶಗಳ ಮಾಹಿತಿಯನ್ನು ಉದಾಹರಣೆಗಳೊಂದಿಗೆ ವಿವರಿಸುತ್ತಾನೆ.<br>ಬ) ಪ್ರಾಚೀನ ಭಾರತದ ಆರ್ಥಿಕ ಜೀವನದ ವ್ಯಾಪಾರ ಮತ್ತು ವಾಣಿಜ್ಯ ಈ ಅಂಶಗಳ ಮಾಹಿತಿಯನ್ನು ಉದಾಹರಣೆಗಳೊಂದಿಗೆ ವಿವರಿಸುತ್ತಾನೆ.<br>ಕ) ಪ್ರಾಚೀನ ಭಾರತದ ವೈದ್ಯಕೀಯ ಶಾಸ್ತ್ರದ ಜ್ಞಾನ ಶಾಖೆಯ ಆಯುರ್ವೇದ, ಯೋಗ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಅಭ್ಯಾಸಗಳ ಮಾಹಿತಿಯನ್ನು ವರ್ಗೀಕರಣದೊಂದಿಗೆ ವಿವರಿಸುತ್ತಾನೆ.<br>ಡ) ಪ್ರಾಚೀನ ಭಾರತದ ವಿವಿಧ ಪ್ರದೇಶಗಳು ಮತ್ತು ಮಹಾರಾಷ್ಟ್ರದ ಸಾಂಸ್ಕೃತಿಕ ಅಂಶಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ವಿವರಿಸುವ ಮೂಲಕ ವಿವಿಧತೆಯಲ್ಲಿ ಏಕತೆಯನ್ನು ಉದಾಹರಣೆಯೊಂದಿಗೆ ತಿಳಿಸುತ್ತಾನೆ.<br>1) ಪ್ರಾಚೀನ ಕಾಲದ ವಿವಿಧ ಸಮುದಾಯಗಳು, ಅವರ ಪೋಷಾಕು, ಜೀವನಮಟ್ಟ, ಜೀವನಶೈಲಿ, ನಡವಳಿಕೆ, ಸಂಸ್ಕೃತಿ, ಪರಂಪರೆ, ಶಿಕ್ಷಣ ಮತ್ತು ವೃತ್ತಿಗಳನ್ನು ಪರಿಚಯಿಸಿಕೊಳ್ಳುತ್ತಾನೆ.<br>ಕ) ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳ ಮಾಹಿತಿಯನ್ನು ಸಂಗ್ರಹಿಸಿ ಅರ್ಥಮಾಡಿಕೊಳ್ಳುತ್ತಾನೆ.<br>ಡ) ಪ್ರಾಚೀನ ಭಾರತೀಯ ವೃತ್ತಿಗಳು ಅತ್ಯಂತ ಶ್ರೀಮಂತ ಮತ್ತು ಮುಂದುವರಿದಿದ್ದವು ಎಂಬುದನ್ನು ಸಮರ್ಥನೆಯೊಂದಿಗೆ ವಿವರಿಸುತ್ತಾನೆ.</td><td>69,70<br>65,66,67,72,73<br>69<br>69,70,72<br>70,71<br><br>70,71,72,73<br>71,72,73<br>69</td></tr>
<tr><td colspan="4">ಅಭ್ಯಾಸಕ್ರಮ ಧ್ಯೇಯ : CG - 2: ಮಾನವ ಸಂಸ್ಕೃತಿಯಲ್ಲಿನ ನಿರಂತರತೆ ಮತ್ತು ಬದಲಾವಣೆಯ ಪ್ರಕ್ರಿಯೆಗಳನ್ನು ಕೆಲವು ನಿರ್ದಿಷ್ಟ ಉದಾಹರಣೆಗಳು ಮತ್ತು ಅವುಗಳ ಸಂದರ್ಭಗಳು, ಹಾಗೆಯೇ ಕೆಲವು ಐತಿಹಾಸಿಕ ಘಟನೆಗಳ ಸಹಾಯದಿಂದ ಪತ್ತೆಹಚ್ಚುವುದು. CG - 3: ವಿವಿಧ ಸಾಮಾಜಿಕ, ಐತಿಹಾಸಿಕ ಘಟನೆಗಳು ಅಥವಾ ಪ್ರಸಂಗಗಳ ಕಾರಣಗಳು ಮತ್ತು ಪರಿಣಾಮಗಳ ನಡುವಿನ ಸಂಬಂಧವನ್ನು ಕಂಡುಹಿಡಿಯುವುದು ಮತ್ತು ಅವುಗಳನ್ನು ಮಾನವ ಜೀವನದ ಒಟ್ಟಾರೆ ಪರಿಣಾಮಗಳೊಂದಿಗೆ ಜೋಡಿಸುವುದು.</td></tr>
<tr><td>10</td><td>ಪ್ರಾಚೀನ ಭಾರತ ಮತ್ತು ಜಗತ್ತು<br>C-2.2 ಮಾನವ ಜೀವನದಲ್ಲಿನ ವಿಶಿಷ್ಟ ಸಂಬಂಧಗಳು, ಸಂಪ್ರದಾಯಗಳು ಮತ್ತು ಕೃತಿಗಳು ಸಮಾಜದಲ್ಲಿ ಹೇಗೆ ಉಳಿದುಕೊಂಡು ಬಂದಿವೆ ಮತ್ತು ಅವುಗಳ ವಿಶಿಷ್ಟ ಭೌಗೋಳಿಕ ಪ್ರಸರಣದ ಘಟಕಗಳನ್ನು ಗುರುತಿಸುವುದು.<br>C-3.2 ಸಾಮಾಜಿಕ ಗುಂಪುಗಳು ಮತ್ತು ಸಮುದಾಯಗಳ ನಡುವೆ, ಅವರ ಪ್ರದೇಶಗಳಲ್ಲಿ ಮತ್ತು ಇತರರೊಂದಿಗೆ ಇರುವ ಸಾಮರಸ್ಯ ಮತ್ತು ಸಂಘರ್ಷದ ಕಾರಣಗಳನ್ನು ಹಾಗೂ ಮಾನವ ಸಮಾಜದ ಮೇಲಿನ ಅವುಗಳ ಪ್ರಭಾವವನ್ನು ಅರಿಯುವುದು.</td><td>1) ಮಾನವ ಜೀವನದಲ್ಲಿನ ವಿಶಿಷ್ಟ ಸಂಬಂಧಗಳು, ಸಂಪ್ರದಾಯಗಳು ಮತ್ತು ಕೃತಿಗಳು ಸಮಾಜದಲ್ಲಿ ಹೇಗೆ ಉಳಿದುಕೊಂಡು ಬಂದಿವೆ ಎಂಬುದನ್ನು ವಿವರಿಸಿ, ಪರ್ಷಿಯನ್ ಮತ್ತು ಗ್ರೀಕ್ ಸಂಸ್ಕೃತಿಗಳ ಸಮ್ಮಿಲನದ ಘಟಕಗಳನ್ನು ತಿಳಿಸುವುದು.<br>ಅ) ಪರ್ಷಿಯನ್ ಸಂಸ್ಕೃತಿಯು ಭಾರತದ ಮೇಲೆ ಬೀರಿದ ಅನುಕೂಲಕರ ಮತ್ತು ಪ್ರತಿಕೂಲ ಪರಿಣಾಮಗಳನ್ನು ತಿಳಿಸುತ್ತಾನೆ.<br>ಬ) ಗ್ರೀಕ್ ಸಂಬಂಧಗಳು ಭಾರತದ ಮೇಲೆ ಬೀರಿದ ಅನುಕೂಲಕರ ಮತ್ತು ಪ್ರತಿಕೂಲ ಪರಿಣಾಮಗಳನ್ನು ತಿಳಿಸುತ್ತಾನೆ.<br>2) ನಮ್ಮ ಸುತ್ತಮುತ್ತಲಿನ ಮಾನವ ಜೀವನದಲ್ಲಿನ ವೈವಿಧ್ಯತೆಯನ್ನು ಸ್ಪಷ್ಟಪಡಿಸಿ, ಅನೇಕ ಪ್ರಾಚೀನ ಸಂಸ್ಕೃತಿಗಳು ಪರಸ್ಪರ ಹೊಂದಿದ್ದ ಸಂಪರ್ಕ ಮತ್ತು ವಿವಿಧ ಪ್ರದೇಶಗಳ ನಡುವಿನ ಸಾಮರಸ್ಯ ಹಾಗೂ ಸಂಘರ್ಷವನ್ನು ಅರ್ಥಮಾಡಿಕೊಂಡು ಅವುಗಳ ದೀರ್ಘಕಾಲೀನ ಪರಿಣಾಮಗಳನ್ನು ವಿವರಿಸುವುದು.<br>ಅ) ಭಾರತ ಮತ್ತು ನೆರೆಯ ದೇಶಗಳ ನಡುವಿನ ಪರಸ್ಪರ ಸಂಬಂಧಗಳನ್ನು ಸ್ಪಷ್ಟಪಡಿಸುತ್ತಾನೆ.<br>ಬ) ಭಾರತೀಯ ಉಪಖಂಡ ಮತ್ತು ಇರಾನ್, ಗ್ರೀಸ್ ನಡುವಿನ ಸಂಬಂಧಗಳನ್ನು ಸ್ಪಷ್ಟಪಡಿಸಿ, ಏಷ್ಯಾದ ದೇಶಗಳ ಸಾಮ್ರಾಜ್ಯ ವಿಸ್ತರಣೆಯಿಂದಾಗಿ ಭಾರತೀಯ ಉಪಖಂಡದ ಮೇಲೆ ಉಂಟಾದ ರಾಜಕೀಯ, ಸಾಮಾಜಿಕ, ಆರ್ಥಿಕ, ವ್ಯಾಪಾರ, ಸಾರಿಗೆ, ಆಡಳಿತಾತ್ಮಕ ಮತ್ತು ಶೈಕ್ಷಣಿಕ ಪರಿಣಾಮಗಳನ್ನು ವಿವರಿಸುತ್ತಾನೆ.<br>ಕ) ಅಲೆಕ್ಸಾಂಡರ್ ಭಾರತದ ಮೇಲೆ ಮಾಡಿದ ಆಕ್ರಮಣದಿಂದಾಗಿ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಉಂಟಾದ ಬದಲಾವಣೆಗಳನ್ನು ತಿಳಿಸುತ್ತಾನೆ.</td><td>74,75<br>74,75,76<br>76,77<br>78,80,81<br>78,79,81<br>80,81<br>76,77,81</td></tr>
</table>

## ಪಠ್ಯಪುಸ್ತಕ ಉಪಯೋಗಿಸುವ ಮುನ್ನ ಶಿಕ್ಷಕರಿಗಾಗಿ

- ರಾಷ್ಟ್ರೀಯ ಶಿಕ್ಷಣ ನೀತಿಯ ಮುಖ್ಯ ಉದ್ದೇಶ ರಾಜ್ಯದ ಎಲ್ಲಾ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳನ್ನು ಸುಧಾರಿಸುವುದು ಆಗಿರುವುದರಿಂದ, ಪಠ್ಯಪುಸ್ತಕದ ಆರಂಭಿಕ ಪ್ರಾಥಮಿಕ ಪುಟಗಳಲ್ಲಿ ಸೇರಿಸಲಾದ ಕಲಿಕಾ ಫಲಿತಾಂಶಗಳನ್ನು ಬೋಧನೆಯ ಸಮಯದಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ತುಂಬಾ ಅವಶ್ಯಕ ವಾಗಿದೆ.
- ಪ್ರತಿಯೊಂದು ಪಾಠದ ಕಲಿಕಾ ಪ್ರಕ್ರಿಯೆಯನ್ನು ಯೋಜಿಸುವಾಗ, ಕಲಿಕೆಯ ಫಲಿತಾಂಶಗಳಿಗೆ ಅನುಗುಣವಾಗಿ ಕಲಿಕಾ ಅನುಭವಗಳು ಮತ್ತು ಪಾಠದಲ್ಲಿನ ವಿವಿಧ ಚಟುವಟಿಕೆಗಳನ್ನು ಯೋಜಿಸಬೇಕು.
- ಪಾಠಗಳಲ್ಲಿ ಬಹುವಿದ್ಯಾಶಾಖೀಯ ದೃಷ್ಟಿಕೋನದಿಂದ ವಿವಿಧ ಕಲಿಕಾ ಅನುಭವಗಳನ್ನು ಸೂಚಿಸಲಾಗಿದೆ, ಇವುಗಳನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು. ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಸಹಾಯದಿಂದ ಸಂಯೋಜಿತ ರೀತಿಯಲ್ಲಿ ಸುಲಭವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಅರಿತುಕೊಳ್ಳಬೇಕು.
- ಪ್ರಾಚೀನ ಭಾರತದ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ಕಲಿಸುವ ಉದ್ದೇಶವೆಂದರೆ ಅವರಿಗೆ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳ ಸಮಗ್ರ ತಿಳುವಳಿಕೆಯನ್ನು ಒದಗಿಸುವುದು ಮತ್ತು ಆ ಮೂಲಕ ಅವರ ಸಾಮಾಜಿಕ ಮತ್ತು ರಾಷ್ಟ್ರೀಯ ಏಕೀಕರಣದ ಅರಿವನ್ನು ಹೆಚ್ಚಿಸುವುದು. ಪ್ರಾಚೀನ ಭಾರತದ ಇತಿಹಾಸದ ವಿಷಯವನ್ನು ಕಲಿಸುವಾಗ ಶಿಕ್ಷಕರು ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಯೋಜಿಸಬೇಕು.
- ವಿವಿಧ ಚಟುವಟಿಕೆಗಳ ಮೂಲಕ ವಿಷಯದ ತಿಳುವಳಿಕೆಯನ್ನು ಹೆಚ್ಚಿಸಬಹುದು.
- ಅರ್ಥದ ಭಾರ ಹೆಚ್ಚಾಗಬಾರದು ಇದರ ಸಲುವಾಗಿ ಪಠ್ಯಪುಸ್ತಕದಲ್ಲಿನ ಪ್ರತಿಯೊಂದು ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ಪಾಠದಲ್ಲಿ ಉದಾಹರಣೆಗಳೊಂದಿಗೆ ಮತ್ತು ವಿವರಣೆಗಳೊಂದಿಗೆ ಒದಗಿಸುವುದು ಸಾಧ್ಯವಾಗುವುದಿಲ್ಲ, ವಿದ್ಯಾರ್ಥಿಗಳಿಗೆ ವಿಷಯವನ್ನು ಸುಲಭಗೊಳಿಸಲು, ಶಿಕ್ಷಕರು ಅಧ್ಯಯನ ಮಾಡುವ ಮೊದಲು ಸೂಕ್ತ ಸ್ಥಳಗಳಲ್ಲಿ ಅಗತ್ಯ ಮಾಹಿತಿಯನ್ನು ಒದಗಿಸಬೇಕಾಗುತ್ತದೆ.
- ಪ್ರಾಚೀನ ಭಾರತದ ಇತಿಹಾಸದ ಅಧ್ಯಯನದ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಜಾಗೃತಿ ಮೂಡಿಸಲು, ವಿವಿಧ ರೀತಿಯ ಪ್ರಾಚೀನ ವಸ್ತುಗಳು, ನಾಣ್ಯಗಳು, ಪ್ರಾಚೀನ ವಾಸ್ತುಶಿಲ್ಪದ ಮಾದರಿಗಳು ಇತ್ಯಾದಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯುವ ಸಾಧನಗಳು ಯಾವವು, ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕು. ಪಠ್ಯಪುಸ್ತಕದಲ್ಲಿರುವ ಮಾಹಿತಿಯ ಜೊತೆಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಅವರನ್ನು ಪ್ರೋತ್ಸಾಹಿಸಬೇಕು.
- ಹರಪ್ಪಾ ನಾಗರಿಕತೆಯ ಕಾಲದಿಂದಲೂ ದೂರದ ದೇಶಗಳೊಂದಿಗೆ ಭಾರತದ ಸ್ಥಾಪಿತ ವ್ಯಾಪಾರವು ಪ್ರಾಚೀನ ಭಾರತದ ಸಮೃದ್ಧಿಗೆ ಅಡಿಪಾಯವಾಗಿತ್ತು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಅಂತರರಾಷ್ಟ್ರೀಯ ವ್ಯಾಪಾರದ ಸ್ವರೂಪವನ್ನು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ವಿವರಿಸಬೇಕು. ಇಂತಹ ಪ್ರಕಾರದ ವ್ಯಾಪಾರ ವಿಶ್ವಬಂಧುತ್ವ ಮತ್ತು ಅಂತರರಾಷ್ಟ್ರೀಯ ಸಾಮರಸ್ಯವಿಲ್ಲದೆ ಅಂತಹ ವ್ಯಾಪಾರ ಸಾಧ್ಯವಿಲ್ಲ, ಎಂಬುದು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು.
- ರಾಮಾಯಣ ಮತ್ತು ಮಹಾಭಾರತ ಈ ಮಹಾಕಾವ್ಯಗಳನ್ನು ಆಗ್ನೇಯ ಏಷ್ಯದಲ್ಲಿಯ ಇಂಡೋನೇಶಿಯಾ ಮತ್ತು ಕಾಂಬೋಡಿಯಾ ದೇಶಗಳಲ್ಲಿ ನೃತ್ಯನಾಟಕದ ರೂಪದಲ್ಲಿ ಸಾದರಪಡಿಸುವ ಪರಂಪರೆ ಇನ್ನೂವರೆಗೆ ಉಳಿದುಕೊಂಡು ಬಂದಿದೆ. ಅಲ್ಲಿಯ ಪ್ರಾಚೀನ ಶಿಲ್ಪಗಳಲ್ಲಿಯೂ ಅವುಗಳಲ್ಲಿಯ ಕಥೆಗಳ ಸಮಾವೇಶವಾದುದು ಕಂಡುಬರುತ್ತದೆ. ಆ ವಿಷಯದ ಹೆಚ್ಚಿನ ಮಾಹಿತಿಯನ್ನು ದೊರಕಿಸಿ ಅದನ್ನು ವರ್ಗದಲ್ಲಿ ಸಾದರಪಡಿಸಬಹುದು. ಅದಕ್ಕಾಗಿ ವಿದ್ಯಾರ್ಥಿಗಳಿಗೆ ಪ್ರಕಲ್ಪಗಳನ್ನು ಕೊಡಬೇಕು.
- ನಾಗರಿಕಶಾಸ್ತ್ರ ವಿಷಯವನ್ನು ಆರಂಭಿಸುವ ಮೊದಲು ನಮ್ಮ ದೇಶದಲ್ಲಿಯ ಸರಕಾರದ ರಚನೆಯನ್ನು ಸ್ಪಷ್ಟ ವಾಗಿಸಬೇಕು. ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಸ್ಥಾನಿಕ ಸರಕಾರ ಸಂಸ್ಥೆ ಇವುಗಳ ಸ್ವರೂಪವನ್ನು ಸ್ವಲ್ಪದರಲ್ಲಿ ಸ್ಪಷ್ಟಪಡಿಸಬೇಕು.
- ಭಾರತದಲ್ಲಿಯ ಆಹಾರ ವೈವಿಧ್ಯತೆಯನ್ನು ತೋರಿಸುವ ಸಲುವಾಗಿ ನಮ್ಮ ಸಾಮಾಜಿಕ ಜೀವನ ಪಾಠದಲ್ಲಿ ಭಾರತದ ಸ್ಥೂಲ ನಕ್ಷೆಯನ್ನು ಬಳಸಲಾಗಿದೆ.
- ಸ್ಥಾನಿಕ ಆಡಳಿತದ ವಿಷಯದಲ್ಲಿ ರಾಜ್ಯ ಸರಕಾರದ ಸ್ವತಂತ್ರ ಕಾಯ್ದೆಗಳಿವೆ. ವಿದ್ಯಾರ್ಥಿಗಳಿಗೆ ಆ ಕಾಯ್ದೆಗಳ ಸಂಪೂರ್ಣ ಮಾಹಿತಿಯನ್ನು ಕೊಡುವ ಅಪೇಕ್ಷೆಯಿಲ್ಲ, ಆದರೆ ನಮ್ಮ ದೇಶದಲ್ಲಿಯ ಆಡಳಿತವು ಸಂವಿಧಾನ, ಕಾಯ್ದೆ ಮತ್ತು ನಿಯಮಗಳಿಗನುಸಾರವಾಗಿ ನಡೆಯುತ್ತದೆ ಎಂಬುದನ್ನು ಖಂಡಿತವಾಗಿ ಹೇಳಬೇಕು. ಕಾಯ್ದೆಯ ರಾಜ್ಯ ಇರುವುದರ ಲಾಭಗಳನ್ನು ಅವರಿಗೆ ಬೇರೆ ಬೇರೆ ಉದಾಹರಣೆಗಳಿಂದ ತೋರಿಸಿ ಕೊಡಬೇಕು.
- ಎಪ್ಪತ್ತೂರನೆಯ ಮತ್ತು ಎಪ್ಪತ್ನಾಲ್ಕನೆಯ ಸಂವಿಧಾನ ತಿದ್ದುಪಡಿಯಿಂದಾಗಿ ಸ್ಥಳಿಯ ಆಡಳಿತ ಸಂಸ್ಥೆಯು ಸಬಲೀಕರಣವಾಗಿದೆ ಎಂಬ ಅಂಶ ಲಕ್ಷ್ಯ ದಲ್ಲಿಟ್ಟುಕೊಂಡು ಸ್ಥಳಿಯ ಆಡಳಿತ ಸಂಸ್ಥೆಯಲ್ಲಿ ಆದಂಥ ಬದಲಾವಣೆಯನ್ನು ವಿದ್ಯಾರ್ಥಿಗಳಿಗೆ ಹೇಳಬೇಕು.
- ಸ್ಥಳೀಯ ಆಡಳಿತ ಸಂಸ್ಥೆಯಲ್ಲಿಯ ಮಹಿಳೆಯರ ಸಹಭಾಗದ ಮತ್ತು ಅವರ ಸಹಭಾಗದಿಂದ ಆದ ಬದಲಾವಣೆಯನ್ನು ತಪ್ಪದೆ ಉಲ್ಲೇಖ ಮಾಡಬೇಕು.
- ಬ್ರಿಟಿಷ ಆಡಳಿತದಲ್ಲಿ 'ಸ್ಥಳೀಯ ಸ್ವರಾಜ್ಯ ಸಂಸ್ಥೆ' ಹೀಗೆ ಸ್ಥಳೀಯ ಆಡಳಿತಕ್ಕೆ ಕರೆಯಲಾಗಿದೆ. ಸ್ವಾತಂತ್ರಾನಂತರ ಎಲ್ಲ ಹಂತಗಳಲ್ಲಿ ಸ್ವರಾಜ್ಯವಿರುದ್ದರಿಂದ ಈಗ 'ಸ್ಥಳೀಯ ಆಡಳಿತ ಸಂಸ್ಥೆ' ಎಂದು ಕರೆಯವಾಗುತ್ತದೆ.
- ಶಿಕ್ಷಕರಿಗೆ, ಈ ಪುಟದ ಮೇಲೆ ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳ ಕುರಿತು ಬೋಧನೆ-ಕಲಿಕೆಯ ಪ್ರಕ್ರಿಯೆಯಲ್ಲಿ ಸಂಕೇತ ಚಿಹ್ನೆಗಳ ಭಾಷೆ (Sign Language ) ಮತ್ತು ಇತರ ಪೂರಕ ಅಧ್ಯಾಪನ ಶಾಸ್ತ್ರೀಯ ಪದ್ಧತಿಗಳ ಉಪಯೋಗ ಮಾಡಿರಿ.ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ಸೂಕ್ತವಾದ ರೀತಿಯಲ್ಲಿ ತಮ್ಮನ್ನು ತಾವು ವ್ಯಕ್ತಪಡಿಸಲು ಅವಕಾಶ ನೀಡಬೇಕು.

# ಅನುಕ್ರಮಣಿಕೆ


| ಅ ಕ್ರಂ | ಪಾಠದ ಹೆಸರು | ಪುಟ ಸಂಖ್ಯೆ |
|---|---|---|
| 1 | ಇತಿಹಾಸದ ಸಾಧನಗಳು | 1 |
| 2 | ಪ್ರಾಗೈತಿಹಾಸಿಕ ಕಾಲ | 8 |
| 3 | ಹರಪ್ಪಾ ಸಂಸ್ಕೃತಿ | 16 |
| 4 | ವೈದಿಕ ಸಂಸ್ಕೃತಿ | 26 |
| 5 | ವಿವಿಧ ಧರ್ಮಗಳ ಭೋಧನೆಗಳು | 33 |
| 6 | ಜನಪದಗಳು ಮತ್ತು ಮಹಾಜನಪದಗಳು | 43 |
| 7 | ಮೌರ್ಯಕಾಲದ ಭಾರತ | 49 |
| 8 | ಪ್ರಾಚೀನ ಭಾರತದಲ್ಲಿಯ ಮಹಾರಾಷ್ಟ್ರದಲ್ಲಿಯ ರಾಜ್ಯಗಳು ಮತ್ತು ರಾಜ ಮನೆತನಗಳು | 57 |
| 9 | ಪ್ರಾಚೀನ ಭಾರತದ ಸಾಂಸ್ಕೃತಿಕ ಪರಂಪರೆ | 65 |
| 10 | ಪ್ರಾಚೀನ ಭಾರತ ಮತ್ತು ಜಗತ್ತು | 74 |

# 1 ಇತಿಹಾಸದ ಸಾಧನಗಳು



1.1 ಇತಿಹಾಸದ ಹೊಂದಾಣಿಕೆ
1.2 ಭೌತಿಕ ಸಾಧನಗಳು
1.3 ಲಿಖಿತ ಸಾಧನಗಳು
1.4 ಮೌಖಿಕ ಸಾಧನಗಳು
1.5 ಪ್ರಾಚೀನ ಭಾರತದ ಇತಿಹಾಸದ ಸಾಧನಗಳು
1.6 ಮಹಾರಾಷ್ಟ್ರದಲ್ಲಿಯ ವಸ್ತುಸಂಗ್ರಹಾಲಯಗಳು ಮತ್ತು ಪಾರಂಪರಿಕ ಸ್ಥಳಗಳು

**ನಮ್ಮ ದೇಶದ ಇತಿಹಾಸ ಬಹಳ ಪ್ರಾಚೀನವಾದುದು, ಆದರೆ ನಮಗೆ ಅದು ಹೇಗೆ ಗೊತ್ತು ? ನಮ್ಮ ಪೂರ್ವಜರು ಹೇಗೆ ಬದುಕಿದ್ದರು ? ಅವರ ಜೀವನದಲ್ಲಿ ನಡೆದ ಘಟನೆಗಳು, ಅವರ ಸಂಸ್ಕೃತಿ, ಸಮಾಜ ಮತ್ತು ಆಡಳಿತವ್ಯವಸ್ಥೆ ಇವುಗಳ ಅಭ್ಯಾಸ ಹೇಗೆ ಮಾಡಲಾಗುತ್ತದೆ ?**

ಈ ತರಹದ ಪ್ರಶ್ನೆ ನಿಮಗೂ ಸಹ ಬಂದಿವೆಯೇ ? ನಿಮಗೆ ಬಂದಿರುವ ಪ್ರಶ್ನೆಗಳನ್ನು ಬರೆಯಿರಿ.



**ಕಲ್ಪನೆ ಮಾಡಿ.**

ನೀವು ಒಂದು ಕೋಟೆಯ ಸುತ್ತಲೂ ನಡೆಯುತ್ತಿದ್ದೀರಿ. ಇದ್ದಕ್ಕಿದ್ದಂತೆ ನೀವು ನೆಲದ ಮೇಲೆ ಒಂದು ನಾಣ್ಯವನ್ನು ಅಥವಾ ಗೋಡೆಯ ಮೇಲೆ ಒಂದು ಶಾಸನವನ್ನು ಅಥವಾ ಮರದ ಬುಡದಲ್ಲಿ ಹೂತುಹಾಕಿದ ತೊಗಟೆಯ ತುಂಡನ್ನು ಕಂಡುಕೊಂಡರೆ, ಆಗ ನಿಮಗೆ ಕೆಲವು ಪ್ರಶ್ನೆಗಳು ನಿಶ್ಚಿತ ಉಂಟಾಗುವವು. ಇದು ಯಾವ ಕಾಲದಲ್ಲಿಯದು ಇದ್ದಿರಬಹುದು? ಇದರ ಅರ್ಥವೇನು? ಈ ವಸ್ತುಗಳು ಭೂತಕಾಲದ ಬಗ್ಗೆ ನಮಗೆ ಏನು ಹೇಳುತ್ತವೆ ?

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ನಾವು ವಿವಿಧ ಐತಿಹಾಸಿಕ ಸಾಧನಗಳ ಅಧ್ಯಯನ ಮಾಡುತ್ತೇವೆ.

ಸಾವಿರಾರು ವರ್ಷಗಳ ಹಿಂದಿನ ಜನರ ಜೀವನವನ್ನು ಇಣುಕಲು ನಮಗೆ ಅನುವು ಮಾಡಿಕೊಡುವ ಚಮತ್ಕಾರಿಕ ಕೀಲಿ ಇದು.

ನೀವು 5ನೇ ತರಗತಿಯಲ್ಲಿ ಇದರ ಬಗ್ಗೆ ಕಲಿತಿದ್ದೀರಿ. ಇತಿಹಾಸದಲ್ಲಿ ನಾವು ಏನು ಕಲಿಯುತ್ತೇವೆಯೋ ಅದು ಇತಿಹಾಸದ ಪುರಾವೆಗಳ ಆಧಾರದ ಮೇಲೆ ಬರೆಯಲಾಗುತ್ತದೆ. ಯಾವ ಸಂಗತಿಗಳ ಆಧಾರದಿಂದ ಐತಿಹಾಸಿಕ ಪುರಾವೆಗಳು ದೊರೆಯುತ್ತವೆಯೊ ಅಂತಹ ಸಂಗತಿಗಳು ಇತಿಹಾಸದ ಮಾಹಿತಿಯನ್ನು ದೊರಕಿಸಿಕೊಡುವ ಮೂಲಗಳಾಗಿರುತ್ತವೆ.

## 1.1 ಇತಿಹಾಸ ಹೊಂದಾಣಿಕೆ

ಇತಿಹಾಸದ ಹೊಂದಾಣಿಕೆ ಎಂದರೆ ಸಣ್ಣ ಸಣ್ಣ ತುಣುಕುಗಳನ್ನು ಒಟ್ಟುಗೂಡಿಸಿದಂತೆ. ಭೂತಕಾಲದಲ್ಲಿಯ ನಾಣ್ಯಗಳು, ಶಾಸನಗಳು, ಚಿತ್ರಗಳು, ಮಣ್ಣಿನ ಮಡಿಕೆಗಳು ಮತ್ತು ಹಿಂದಿನ ಇತರ ವಸ್ತುಗಳು ಆ ಹೊಂದಾಣಿಕೆಯ ಸಣ್ಣ ತುಣುಕುಗಳಾಗಿರುತ್ತೇವೆ. ಇತಿಹಾಸಕಾರರು ಈ ತುಣುಕುಗಳನ್ನು ಸರಿಯಾಗಿ ಜೋಡಿಸಿದಾಗ, ನಮ್ಮ ಭೂತಕಾಲದ ಸುಂದರವಾದ ಚಿತ್ರಣವು ಸೃಷ್ಟಿಯಾಗುತ್ತದೆ.

ಆ ಸಂಶೋಧನೆಯ ಮೂಲಗಳನ್ನು ಆಧರಿಸಿ, ನಾವು ಹಿಂದಿನ ಘಟನೆಗಳು, ಆಲೋಚನೆಗಳು, ಸಂಸ್ಕೃತಿ ಮತ್ತು ಜೀವನಶೈಲಿಯ ಬಗ್ಗೆ ತಿಳಿದುಕೊಳ್ಳಬಹುದು. ಈ ಮೂಲಗಳನ್ನು ಪ್ರಾಥಮಿಕ ಸಾಧನಗಳು, ದ್ವಿತೀಯ ಸಾಧನಗಳು ಮತ್ತು ಮೌಖಿಕ ಸಾಧನಗಳು ಈ ರೀತಿಯಾಗಿ ವಿಂಗಡಿಸಲಾಗಿದೆ.

ನಮ್ಮ ಪೂರ್ವಜರು ಬಳಸಿದ ವಸ್ತುಗಳು, ಕೊರೆದಿಟ್ಟ ಲೇಖನ, ಕಟ್ಟಿದ ಮನೆಗಳು ಹಾಗೆಯೇ ಆ ಕಾಲದ ರೂಢಿ ಪರಂಪರೆ, ಜಾನಪದ ಕಲೆ, ಜಾನಪದ ಸಾಹಿತ್ಯ, ಐತಿಹಾಸಿಕ ಕಾಗದಪತ್ರಗಳಂತಹ ವಿವಿಧ ಸಾಧನಗಳ ಆಧಾರದ ಮೂಲಕ ನಮಗೆ ನಮ್ಮ ಇತಿಹಾಸವನ್ನು ತಿಳಿದುಕೊಳ್ಳಲು ಬರುತ್ತದೆ. ಇವೆಲ್ಲವುಗಳಿಗೆ **'ಇತಿಹಾಸದ ಸಾಧನಗಳು'** ಎನ್ನುತ್ತಾರೆ.

| ಪ್ರಾಥಮಿಕ ಸಾಧನಗಳು | ದ್ವಿತೀಯ ಸಾಧನಗಳು | ಮೌಖಿಕ ಸಾಧನಗಳು |
|---|---|---|
| ಈ ಸಾಧನಗಳು ನೇರವಾಗಿ ಆ ಕಾಲಕ್ಕೆ ಸಂಬಂಧ ಪಟ್ಟಿರುತ್ತವೆ. | ಈ ಸಾಧನಗಳಲ್ಲಿ ಪ್ರಾಥಮಿಕ ಸಾಧನಗಳ ಅಭ್ಯಾಸ ಮಾಡಿ ಮಾಹಿತಿ ನೀಡಲಾಗಿರುತ್ತದೆ. | ಈ ಸಾಧನಗಳಲ್ಲಿ ಭೂತಕಾಲದಲ್ಲಿಯ ಘಟನೆ, ಪರಂಪರೆ, ಸಂಸ್ಕೃತಿ ಅಥವಾ ಅನುಭವ ಮೌಖಿಕ ಸ್ವರೂಪದಲ್ಲಿ ತಲೆಮಾರುಗಳಿಂದ ತಲೆಮಾರುಗಳಿಗೆ ಜೊಪಾಸನೆ ಮಾಡಲಾಗಿರುತ್ತದೆ. |
| ಉದಾಹರಣೆಗೆ- ಶಾಸನಗಳು, ತಾಮ್ರ ಫಲಕಗಳು, ನಾಣ್ಯಗಳು, ಮೂಲ ಕಾಗದಪತ್ರಗಳು (ಭೂರ್ಜಪತ್ರಗಳು, ಒಪ್ಪಂದಗಳು, ಪತ್ರಗಳು, ಇತ್ಯಾದಿ) ಹಳೆಯ ವಸ್ತುಗಳು, ಆಯುಧಗಳು, ಹಳೆಯ ಕಟ್ಟಡಗಳು, ದೇವಾಲಯಗಳು ಇತ್ಯಾದಿ. | ಉದಾಹರಣೆಗೆ- ಇತಿಹಾಸವಿಷಯದ ಪುಸ್ತಕಗಳು, ಅಭ್ಯಾಸವಿಷಯದ ಲೇಖನ, ಮಾಹಿತಿಚಿತ್ರ, ಸಂಶೋಧನೆಯ ನಿಬಂಧ, ತಜ್ಞರ ಉಪನ್ಯಾಸಗಳು, ವಿಶ್ವಕೋಶ ಇತ್ಯಾದಿ. | ಉದಾಹರಣೆಗೆ- ಜನಪದ ಕಥೆಗಳು, ಪುರಾಣಕಥೆಗಳು,ಜನಪದ ಗೀತೆ, ಓವಿ, ಭಾರುಡ, ಲಾವಣಿ, ಪೋವಾಡ, ಜನಪದನಾಟಕ, ಕೀರ್ತನೆ, ತಮಾಷೆಗಳು ಇತ್ಯಾದಿ. ಶೌರ್ಯಕಥೆ ಮತ್ತು ವೀರಕಥೆ , ಊರಜನರ, ಹಿರಿಯರ ನೆನಪು ಮತ್ತು ಅನುಭವಗಳು, ಪ್ರವಾಸ ವರ್ಣನೆ, ವ್ಯಾಪಾರಿ ಅಥವಾ ಸೈನಿಕರು ಹೇಳಿರುವ ಕಥೆಗಳು. |
| ಮಹತ್ವ: ಈ ಸಾಧನಗಳು ಇತಿಹಾಸ ಬರೆಯುವಾಗ ಆ ಕಾಲದ ಯಥಾರ್ಥವಾಗಿ ಮಾಹಿತಿ ನೀಡುತ್ತವೆ. | ಮಹತ್ವ: ಈ ಸಾಧನೆಗಳಿಂದ ಇತಿಹಾಸದ ಸುಸಂಗತ ಮಾಹಿತಿ ದೊರೆಯುತ್ತದೆ. ಈ ಸಾಧನೆಗಳು ಸಂಶೋಧಕರು ವಿಶ್ಲೇಷಣೆ ಮಾಡಿ ತಯಾರು ಮಾಡಲಾಗಿರುತ್ತವೆ. | ಮಹತ್ವ: ಲಿಖಿತ ಪುರಾವೆಗಳು ಇಲ್ಲದ ಕಾಲದಲ್ಲಿಯ ಜನಜೀವನ, ಪರಂಪರೆ ಮತ್ತು ಸಂಸ್ಕೃತಿ ತಿಳಿದುಕೊಳ್ಳುವ ಸಲುವಾಗಿ ಮೌಖಿಕ ಸಾಧನಗಳ ಉಪಯೋಗ ವಾಗುತ್ತದೆ. |

## 1.2 ಭೌತಿಕ ಸಾಧನಗಳು



**ಮಾಡಿ ನೋಡಿರಿ.**

ನಿಮ್ಮ ಮನೆಯಲ್ಲಿರುವ ಹಳೆಯ ವಸ್ತುಗಳು ನಿಮ್ಮ ಮನೆ ಅಥವಾ ಕುಟುಂಬದ ಇತಿಹಾಸವನ್ನು ಹೇಳುತ್ತವೆ. ಉದಾಹರಣೆಗೆ, ಫೋಟೋ ಸಂಗ್ರಹ, ಹಳೆಯ ಪಾತ್ರೆ, ಚಿತ್ರಕಲೆ ಅಥವಾ ನಿಮ್ಮ ಅಜ್ಜಿಯ ಸಂಗ್ರಹದಿಂದ ಬಂದ ಸೀರೆ, ಇವೆಲ್ಲವನ್ನೂ ಒಂದು ಪೆಟ್ಟಿಗೆಯಲ್ಲಿ ಇರಿಸಿ. ಅದನ್ನು 'ಪರಂಪರೆಯ ಪೆಟ್ಟಿಗೆ' ಎಂದು ಕರೆಯೋಣ. ಈ ವಸ್ತುಗಳು ಯಾವ ಇತಿಹಾಸವನ್ನು ಹೇಳುತ್ತವೆ ಎಂಬುದನ್ನು ತರಗತಿಯಲ್ಲಿ ತಿಳಿಸಿ.

ಈ ವಸ್ತುಗಳು ಇತಿಹಾಸದ ಭೌತಿಕ ಸಾಧನಗಳಾಗಿವೆ. **'ಭೌತಿಕ ಸಾಧನಗಳು' ಎಂದರೆ ನಾವು ನಮ್ಮ ಕಣ್ಣುಗಳಿಂದ ನೋಡಬಹುದಾದ ಮತ್ತು ಕೈಯಿಂದ ಸ್ಪರ್ಶಿಸಬಹುದಾದ ವಸ್ತುಗಳು.** ಇತಿಹಾಸದ ಅಧ್ಯಯನದಲ್ಲಿ ಈ ವಸ್ತುಗಳ ಬಳಕೆ ಬಹಳ ಮುಖ್ಯ. **ಭೌತಿಕ ವಸ್ತುಗಳು ಆ ಕಾಲದ ಜನರ ಜೀವನ, ಸಂಸ್ಕೃತಿ, ಸಂಪ್ರದಾಯಗಳು, ಕ್ರೀಡೆ, ಕಲೆ ಮತ್ತು ವಿಜ್ಞಾನಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ.** ಈ ವಸ್ತುಗಳನ್ನು ಐತಿಹಾಸಿಕ ಸಂಶೋಧನೆಯಲ್ಲಿ ಪ್ರಾಥಮಿಕ ಸಾಧನಗಳೆಂದು ಪರಿಗಣಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಮನುಷ್ಯ ಬಳಸುತ್ತಿದ್ದ ಅನೇಕ ವಸ್ತುಗಳು ಇನ್ನೂ ಕಂಡುಬರುತ್ತವೆ. ಇವುಗಳಲ್ಲಿ ಶಾಸನಗಳು, ತಾಮ್ರದ ತಟ್ಟೆಗಳು, ಹಳೆಯ ನಾಣ್ಯಗಳು, ಆಯುಧಗಳು, ಪಾತ್ರೆಗಳು, ಕಲ್ಲು ಅಥವಾ ಲೋಹದ ವಿಗ್ರಹಗಳು, ಹಳೆಯ ಕಟ್ಟಡಗಳು, ಕೋಟೆಗಳು, ದೇವಾಲಯಗಳು, ಜಲಮೂಲಗಳು ಇತ್ಯಾದಿ ಸೇರಿವೆ. ಇವೆಲ್ಲವೂ 'ಭೌತಿಕ ಸಾಧನ' ಗಳಾಗಿವೆ. ಈ ವಸ್ತುಗಳನ್ನು ಇನ್ನೂ ಪುರಾತತ್ವ ವಸ್ತುಸಂಗ್ರಹಾಲಯಗಳು ಮತ್ತು







ಭೌತಿಕ ಸಾಧನಗಳು

ಐತಿಹಾಸಿಕ ಸ್ಥಳಗಳಲ್ಲಿ ಕಂಡುಬರುತ್ತವೆ. ಉತ್ಖನನದಲ್ಲಿ ಸಿಕ್ಕ ಮಡಕೆ ಚೂರುಗಳು, ಅದಕ್ಕೆ ಬಳಸಿದ ಮಣ್ಣು, ಅದರ ಮೇಲಿನ ಲೇಪನ ಮತ್ತು ಬಣ್ಣದ ವಿನ್ಯಾಸ ಅಥವಾ ಕಲಾಕೃತಿಗಳಿಂದ ಆ ಪಾತ್ರೆಗಳು ಯಾವ ಕಾಲದವು ಮತ್ತು ಅವುಗಳನ್ನು ಯಾವುದಕ್ಕಾಗಿ ಬಳಸಲಾಗುತ್ತಿತ್ತು ಎಂಬುದು ವೈಜ್ಞಾನಿಕ ವಿಧಾನಗಳ ಮೂಲಕ ತಿಳಿಯುತ್ತದೆ. ಧಾನ್ಯಗಳು, ಹಣ್ಣುಗಳ ಬೀಜಗಳು ಮತ್ತು ಪ್ರಾಣಿಗಳ ಮೂಳೆಗಳ ಅವಶೇಷಗಳ ಆಧಾರದ ಮೇಲೆ ಆ ಕಾಲದ ಆಹಾರ ಪದ್ಧತಿಯನ್ನು ತಿಳಿದುಕೊಳ್ಳಬಹುದು. ಕೆತ್ತಲಾದ ಶಿಲಾಶಾಸನಗಳು ಆ ಕಾಲದ ಆಡಳಿತ, ಧಾರ್ಮಿಕ ಮತ್ತು ಸಾಮಾಜಿಕ ಜೀವನದ ಬಗ್ಗೆ ಮಾಹಿತಿ ನೀಡುತ್ತವೆ. ಆ ಕಾಲದ ಶಸ್ತ್ರಾಸ್ತ್ರಗಳು ಮತ್ತು ರಕ್ಷಣಾತ್ಮಕ ಗೋಡೆಗಳು, ಅರಮನೆಗಳು, ಪುರಾತನ ವಾಸ್ತುಶಿಲ್ಪಗಳ ಅಧ್ಯಯನವು ಆ ಕಾಲದ ರಕ್ಷಣಾ ವ್ಯವಸ್ಥೆ, ಯುದ್ಧದ ವಿಧಾನ ಮತ್ತು ವಾಸ್ತುಶಿಲ್ಪದ ಬಗ್ಗೆ ಮಾಹಿತಿ ದೊರೆಯುತ್ತದೆ. ಹಾಗೆಯೇ ಹಳೆಯ ನಾಣ್ಯಗಳು ಅಥವಾ ಮುದ್ರೆಗಳ ಆಧಾರದ ಮೇಲೆ ಆ ಕಾಲದ ಆರ್ಥಿಕ ವ್ಯವಸ್ಥೆ, ರಾಜರ ಹೆಸರುಗಳು, ಧಾರ್ಮಿಕ ಸಂಪ್ರದಾಯಗಳು ಮತ್ತು ಕಾಲದ ಬಗ್ಗೆ ಮಾಹಿತಿ ನೀಡುತ್ತವೆ. ಆದಕ್ಕಾಗಿಯೇ ಭೌತಿಕ ಸಾಧನಗಳು ಆ ಕಾಲದ ಮಾನವ ಜೀವನದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ತುಂಬಾ ಮುಖ್ಯವಾಗಿವೆ.

### 1.3 ಲಿಖಿತ ಸಾಧನಗಳು

**ಲಿಖಿತ ರೂಪದಲ್ಲಿ ಯಾವ ಸಾಧನಗಳು ಉಪಲಬ್ಧವಾಗಿರುತ್ತವೆಯೋ ಅಂತಹ ಸಾಧನಗಳನ್ನು ನಾವು 'ಲಿಖಿತ ಸಾಧನಗಳು' ಎಂದು ಕರೆಯುತ್ತೇವೆ.** ಈ ಲಿಖಿತ ಸಾಧನಗಳಿಂದ ಆ ಕಾಲದ ಭಾಷೆ, ಲಿಪಿ, ಸಂಸ್ಕೃತಿ, ರಾಜಕೀಯ ನೀತಿಗಳು, ಸಮಾಜ ರಚನೆ, ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

ಶಿಲಾಯುಗದ ಕಾಲದಲ್ಲಿ ಅಂದರೆ ಪ್ರಾಗೈತಿಹಾಸಿಕ ಕಾಲದಲ್ಲಿ ಮನುಷ್ಯನಿಗೆ ಬರವಣಿಗೆಯ ಕಲೆ ತಿಳಿದಿರಲಿಲ್ಲ. ಆ ಕಾಲದ ಮಾಹಿತಿಯನ್ನು ನಾವು ಭೌತಿಕ ಸಾಧನಗಳ ಆಧಾರದ ಮೇಲೆ ತಿಳಿದುಕೊಳ್ಳುತ್ತೇವೆ. ಆದರೆ ಮನುಷ್ಯನ ಗ್ರಹಣ ಶಕ್ತಿ ಮತ್ತು ಭಾಷೆ ಬೆಳೆದಂತೆಲ್ಲಾ ಅವರು ತಮ್ಮ ಅನುಭವಗಳನ್ನು ಮತ್ತು ಮಾಹಿತಿಯನ್ನು ಚಿತ್ರಗಳ ಮೂಲಕ ಮತ್ತು ಚಿಹ್ನೆಗಳ ಮೂಲಕ ವ್ಯಕ್ತಪಡಿಸಲು ಪ್ರಾರಂಭಿಸಿದರು. ಈ ರೀತಿಯಲ್ಲಿ ಬರವಣಿಗೆಯ ಆರಂಭವಾಗಿತ್ತು. ಮುಂದೆ ಲೇಖನ ಪದ್ಧತಿಯು ವಿಕಸನಗೊಳ್ಳಲು ದೀರ್ಘಕಾಲಾವಧಿ ಬೇಕಾಯಿತು.



**ನಿಮಗೆ ಗೊತ್ತಿದೆಯೇ ?**

ಇತಿಹಾಸವನ್ನು ಬರೆಯಲು ಯಾವ ಕಾಲದ ಲಿಖಿತ ಪುರಾವೆಗಳು ಲಭ್ಯವಿವೆಯೋ, ಆ ಕಾಲವನ್ನು ನಾವು 'ಐತಿಹಾಸಿಕ ಕಾಲ' ಎಂದು ಗುರುತಿಸುತ್ತೇವೆ. ಯಾವ ಕಾಲದಲ್ಲಿ ಲಿಪಿಗಳ ಉಗಮ ಮತ್ತು ವಿಕಾಸ ಆಗಿರಲಿಲ್ಲವೋ ಆ ಕಾಲವನ್ನು 'ಪ್ರಾಗೈತಿಹಾಸಿಕ ಕಾಲ' ಎಂದು ಕರೆಯಲಾಗುತ್ತದೆ.

ಪ್ರಾಚೀನ ಕಾಲದಲ್ಲಿ ವ್ಯಾಪಾರಿಗಳು, ಪ್ರವಾಸಿಗರು, ರಾಜರು ಮತ್ತು ವಿದ್ವಾಂಸರು ತಮ್ಮ ಅನುಭವಗಳು, ಘಟನೆಗಳು ಅಥವಾ ಆದೇಶಗಳ ದಾಖಲೆಗಳನ್ನು ಬರೆದಿಟ್ಟುಕೊಳ್ಳುತ್ತಿದ್ದರು. ಈ ಲಿಖಿತ ಸಾಧನಗಳಿಂದ ನಮಗೆ ಆ ಕಾಲದ ಲಿಪಿ, ಭಾಷೆ, ಬರವಣಿಗೆಯ ಶೈಲಿ ಮತ್ತು ಜನರ ಆಚಾರ-ವಿಚಾರ, ಸಂಪ್ರದಾಯಗಳು ಹಾಗೂ ಜೀವನ ಪದ್ಧತಿಯ ಬಗ್ಗೆ ಮಾಹಿತಿ ದೊರೆಯುತ್ತದೆ. ಆ ಕಾಲದ ದಾಖಲೆಗಳ ಆಧಾರದ ಮೇಲೆ ಕಾಲಾನುಕ್ರಮದ ಮಾಹಿತಿಯು ಸಿಗುತ್ತದೆ. ಈ ಸಾಧನಗಳ ಆಧಾರದ ಮೇಲೆ ಇತಿಹಾಸಕಾರರು ವಿಶ್ಲೇಷಣೆ ಮಾಡಿ ಆಯಾ ಕಾಲಖಂಡದ ಇತಿಹಾಸವನ್ನು ಬರೆಯುತ್ತಾರೆ. ವಿವಿಧ ವಸ್ತುಸಂಗ್ರಹಾಲಯಗಳು, ಗ್ರಂಥಾಲಯಗಳು ಮತ್ತು ದೇವಾಲಯಗಳಂತಹ ಸ್ಥಳಗಳಲ್ಲಿ ಪ್ರಾಚೀನ ಕಾಲದ ಲಿಖಿತ ಸಾಧನಗಳು ನೋಡಲು ಸಿಗುತ್ತವೆ.



**ಮಾಡಿ ನೋಡಿರಿ.**

ನಿಮ್ಮ ಅಜ್ಜಿ-ತಾತ ಅಥವಾ ಕುಟುಂಬದ ಹಿರಿಯರೊಂದಿಗೆ ಮಾತನಾಡಿ. ಅವರ ಬಾಲ್ಯದ ನೆನಪುಗಳು, ಅವರ ಹಳ್ಳಿ/ನಗರದ ಕಥೆಗಳು, ಹಬ್ಬ-ಹರಿದಿನಗಳು, ಅಲ್ಲದೆ ಅವರು ಅನುಭವಿಸಿದ ಯಾವುದಾದರೂ ಒಂದು ಐತಿಹಾಸಿಕ ಘಟನೆಯ ಬಗ್ಗೆ ತಿಳಿದುಕೊಳ್ಳಿ ಮತ್ತು ನಿಮ್ಮ ಟಿಪ್ಪಣಿ ವಹಿಯಲ್ಲಿ ಬರೆದಿಟ್ಟುಕೊಳ್ಳಿ. ಆಗ ನಿಮಗೆ ಇತಿಹಾಸ ಎಷ್ಟು ಜೀವಂತ ಮತ್ತು ಆಸಕ್ತಿದಾಯಕವಾಗಿದೆ ಎಂಬುದು ತಿಳಿಯುತ್ತದೆ!

## 1.4 ಮೌಖಿಕ ಸಾಧನಗಳು

**ಮೌಖಿಕ ಸಾಧನೆ ಎಂದರೆ ಬರೆದಿಡದೆ ಬಾಯಿಮಾತಿನಿಂದ ಹೇಳಲಾಗುವ ಮಾಹಿತಿಗಳು.** ಅವು ಜನರ ಸ್ಮೃತಿಯಲ್ಲಿ ಉಳಿಯುತ್ತವೆ. ಇವುಗಳಲ್ಲಿ ಜನಪದಕಥೆಗಳು, ದಂತಕಥೆಗಳು, ಓವಿಗಳು (ಒಂದು ರೀತಿಯ ಜನಪದ ಗೀತೆ), ಪೋವಾಡಗಳು (ವೀರಗಾಥೆಗಳು), ಗಾದೆಗಳು, ಜನಪದಗೀತೆಗಳು ಮುಂತಾದವುಗಳ ಸಮಾವೇಶವಾಗುತ್ತವೆ. ಕೆಲವು ಮೌಖಿಕ ರೂಪದಲ್ಲಿ ಒಂದು ಸಮಾಜದ ಇತಿಹಾಸ, ಜೀವನಶೈಲಿ, ಸಾಮಾಜಿಕ ಘಟನೆಗಳು, ಹಬ್ಬ-ಹರಿದಿನಗಳು ಮುಂತಾದವುಗಳ ವರ್ಣನೆಯು ತಲೆಮಾರುಗಳಿಂದ ಜೋಪಾಸನೆ ಮಾಡಲಾಗಿರುತ್ತದೆ. ಕೆಲವು ದಂತಕಥೆಗಳು ಕಾಲ್ಪನಿಕವಾಗಿದ್ದರೂ, ಅವುಗಳ ಹಿಂದೆ ಯಾವುದೋ ಸಾಮಾಜಿಕ ಅಥವಾ ಐತಿಹಾಸಿಕ ಸಂದರ್ಭಗಳು ಅಡಗಿರುತ್ತವೆ. ವ್ಯಕ್ತಿಯ ವೈಚಾರಿಕದೃಷ್ಟಿ ಮತ್ತು ಸಮಾಜದ ವೈಚಾರಿಕದೃಷ್ಟಿಯನ್ನು ರೂಪಿಸುವಲ್ಲಿ ಮೌಖಿಕ ಪರಂಪರೆಯ ಪಾಲು ದೊಡ್ಡದಿದೆ. ಆದ್ದರಿಂದ ಇತಿಹಾಸದ ಅಭ್ಯಾಸದಲ್ಲಿ ಮೌಖಿಕ ಸಾಧನಗಳನ್ನು ಬಳಸುವಾಗ ಇತಿಹಾಸಕಾರರು ಆ ವಿಷಯಗಳನ್ನು ಪರಿಶೀಲಿಸಿ, ತುಲನಾತ್ಮಕವಾಗಿ ವಿಚಾರ ಮಾಡುತ್ತಾರೆ ಮತ್ತು ಇತರ ಸಾಧನಗಳ ಸಹಾಯದಿಂದ ಇತಿಹಾಸ ಬರೆಯಲು ಇವುಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

## 1.5 ಪ್ರಾಚೀನ ಭಾರತದ ಇತಿಹಾಸದ ಸಾಧನಗಳು

ಪ್ರಾಚೀನ ಕಾಲಖಂಡವೆಂದರೆ ಶಿಲಾಯುಗದಿಂದ ಕ್ರಿಸ್ತ. ಶಕ ಎಂಟನೇ ಶತಮಾನದವರೆಗಿನ ಕಾಲಖಂಡ. ಶಿಲಾಯುಗದ ಇತಿಹಾಸವು ಸಂಪೂರ್ಣವಾಗಿ ಪುರಾತತ್ವ ಉತ್ಖನನಗಳಿಂದ ದೊರೆತ ಭೌತಿಕ ಸಾಧನಗಳ ಮೇಲೆ ಅವಲಂಬಿತವಾಗಿದೆ. ಅದರ ನಂತರದ ಕಾಲದ ಇತಿಹಾಸವನ್ನು ತಿಳಿದುಕೊಳ್ಳಲು ಲಿಖಿತ ಸಾಧನಗಳ ದೊಡ್ಡ ಮಟ್ಟದ ಉಪಯೋಗವಾಗುತ್ತದೆ.

ಭಾರತೀಯ ಇತಿಹಾಸದ ಅತೀ ಪ್ರಾಚೀನ ಸಾಧನಗಳೆಂದರೆ ವೇದಗಳು. ಆರಂಭದಲ್ಲಿ ವೇದಗಳು ಲಿಖಿತ ರೂಪದಲ್ಲಿ ಇರಲಿಲ್ಲ, ಅವುಗಳನ್ನು ಕಂಠಪಾಠ ಮಾಡುವ ತಂತ್ರವನ್ನು ಪ್ರಾಚೀನ ಭಾರತೀಯರು ವಿಕಸಿತಗೊಳಿಸಿದ್ದರು. ಕಾಲಾಂತರದಲ್ಲಿ ವೇದಗಳ ಬರವಣಿಗೆಯಾಯಿತು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬ ಈ ನಾಲ್ಕು ವೇದಗಳಲ್ಲಿ ದೇವತೆಗಳ ಸ್ತುತಿ, ಯಜ್ಞವಿಧಿ ಮತ್ತು ಸಾಮಾಜಿಕ ಜೀವನದ ಮಾಹಿತಿಗಳು ದೊರೆಯುತ್ತವೆ. ವೇದಗಳ ನಂತರ ಬ್ರಾಹ್ಮಣ ಗ್ರಂಥಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳ ನಿರ್ಮಿತಿಯಾಯಿತು. ಪ್ರಾಚೀನ ಭಾರತೀಯ ತತ್ವಜ್ಞಾನದ ಪರಿಚಯವು ಈ ಗ್ರಂಥಗಳಿಂದ ಆಗುತ್ತದೆ. ಹಾಗೆಯೇ ರಾಮಾಯಣ ಮತ್ತು ಮಹಾಭಾರತ ಎಂಬ ಮಹಾಕಾವ್ಯಗಳು ಕೂಡ ಪ್ರಾಚೀನ ಭಾರತೀಯ ಇತಿಹಾಸದ ಸಾಧನಗಳಾಗಿವೆ.



**ಹುಡುಕಿ ನೋಡೋಣ**

ಸಂಘಮ ಸಾಹಿತ್ಯ ಇದು ತಮಿಳು ಭಾಷೆಯಲ್ಲಿಯ ಎಲ್ಲಕ್ಕಿಂತ ಪ್ರಾಚಿನ ಸಾಹಿತ್ಯ ವಾಗಿದೆ. ಈ ವಿಷಯದ ಮಾಹಿತಿ ಹುಡುಕಿ ಅದನ್ನು ಬರೆಯಿರಿ.

ಪ್ರಾಚೀನ ಭಾರತದಲ್ಲಿ ಜೈನ ಮತ್ತು ಬೌದ್ಧ ತತ್ವಜ್ಞಾನದ ಆಧಾರದ ಮೇಲೆ ದೊಡ್ಡ ಪ್ರಮಾಣದಲ್ಲಿ ಲಿಖಿತ ಸಾಹಿತ್ಯ ತಯಾರಾಯಿತು. 'ತ್ರಿಪಿಟಕ' ಎಂಬ ಹೆಸರಿನಿಂದ ಗುರುತಿಸಲ್ಪಡುವ ಬೌದ್ಧ ಗ್ರಂಥಗಳಲ್ಲಿ ಗೌತಮ ಬುದ್ಧರ ಬೋಧನೆ, ಭಿಕ್ಷುಗಳಿಗಾಗಿ ನಿಯಮಗಳು ಮತ್ತು ತಾತ್ವಿಕ ಚರ್ಚೆಗಳನ್ನು ನೀಡಲಾಗಿದೆ. ಈ ಗ್ರಂಥಗಳು ಪಾಲಿ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಜೈನ ಧರ್ಮದ ಗ್ರಂಥಗಳಲ್ಲಿ ಆಗಮ ಸಾಹಿತ್ಯ ಸೇರಿದೆ, ಇದರಲ್ಲಿ ವರ್ಧಮಾನ ಮಹಾವೀರರ ಬೋಧನೆ ಮತ್ತು ಅಹಿಂಸೆಯ ಮಹತ್ವವನ್ನು ವರ್ಣಿಸಲಾಗಿದೆ. ಈ ಗ್ರಂಥಗಳು ಅರ್ಧಮಾಗಧಿ, ಪ್ರಾಕೃತ ಭಾಷೆಗಳಲ್ಲಿ ಬರೆಯಲ್ಪಟ್ಟಿವೆ. ಈ ಧಾರ್ಮಿಕ ಗ್ರಂಥಗಳ ಜೊತೆಗೆ ಪ್ರಾಚೀನ ರಾಜ್ಯ ಆಡಳಿತ, ನೀತಿನಿಯಮಗಳು ಮತ್ತು ಕಾಯಿದೆಗಳು, ಹಾಗೆಯೇ ಸಮಾಜ ವ್ಯವಸ್ಥೆಯ ಬಗ್ಗೆಯೂ ಮಾಹಿತಿ ಇದೆ. ಬರೆಯಲ್ಪಟ್ಟ ಮಾಹಿತಿಯು ಕೇವಲ ಗ್ರಂಥಗಳಲ್ಲಿ ಮಾತ್ರವಲ್ಲದೆ, ಕಲ್ಲುಗಳ ಮೇಲೆ, ತಾಮ್ರದ ಫಲಕಗಳ ಮೇಲೆ ಮತ್ತು ಗೋಡೆಗಳ ಮೇಲೆಯೂ ಕೆತ್ತಲ್ಪಟ್ಟಿದೆ. ಸಾಮ್ರಾಟ್ ಅಶೋಕನು ಅನೇಕ ಶಿಲಾಶಾಸನಗಳನ್ನು ತಯಾರಿಸಿ ಧರ್ಮನೀತಿ ಮತ್ತು ಸಮಾಜನೀತಿಯ ಕುರಿತಾದ ವಿಚಾರಗಳನ್ನು ಪ್ರಜೆಗಳಿಗೆ ತಲುಪಿಸಿದನು. ಈ ಲೇಖಗಳು ಪ್ರಮುಖವಾಗಿ ಬ್ರಾಹ್ಮಿ ಲಿಪಿಯಲ್ಲಿ ಕೆತ್ತಲ್ಪಟ್ಟಿವೆ. ಅವುಗಳಲ್ಲಿ ಕೆಲವು ಲೇಖಗಳು ಖರೋಷ್ಠಿ ಮತ್ತು ಅರೆಮಾಯಿಕ್ ಲಿಪಿಗಳಲ್ಲೂ ಕೆತ್ತಲ್ಪಟ್ಟಿವೆ. ಹಾಗೆಯೇ, ಭೂಮಿಯ ದಾನ ಮತ್ತು ತೆರಿಗೆ ವಿನಾಯಿತಿ ಕುರಿತಾದ ಆದೇಶಗಳನ್ನು ತಾಮ್ರದ ಫಲಕಗಳ ಮೇಲೆ ಬರೆಯಲಾಗಿತ್ತು. ಈ ದಾಖಲೆಗಳಿಂದ ಆಡಳಿತದ ಮಾಹಿತಿಯು ತಿಳಿಯುತ್ತದೆ.



**ಮಾಡಿ ನೋಡಿರಿ.**

ನಿಮ್ಮ ನಿಮ್ಮ ಸ್ನೇಹಿತರ ಅಥವಾ ಕುಟುಂಬದ ಸದಸ್ಯರ ಹೆಸರುಗಳನ್ನು ಪಕ್ಕದಲ್ಲಿ ನೀಡಿರುವ ಕೋಷ್ಟಕದ ಆಧಾರದ ಮೇಲೆ ಬ್ರಾಹ್ಮಿ ಲಿಪಿಯಲ್ಲಿ ಬರೆಯಿರಿ.



ಪ್ರಾಚೀನ ಭಾರತದ ಬಗ್ಗೆ ಮಾಹಿತಿ ಪಡೆಯಲು ವಿದೇಶಿ ಪ್ರವಾಸಿಗರು ಬರೆದ ಪ್ರವಾಸ ಕಥನಗಳು ಕೂಡ ಪ್ರಮುಖವಾಗಿವೆ. ಅವರು ಇಲ್ಲಿ ಕಂಡ ಶಿಕ್ಷಣ ವ್ಯವಸ್ಥೆ, ಧಾರ್ಮಿಕ ಜೀವನ, ಜನಜೀವನ ಇವುಗಳ ಬಗ್ಗೆ ಸವಿಸ್ತಾರವಾಗಿ ವರ್ಣಿಸಿದ್ದಾರೆ. ಇದರಿಂದ ನಮಗೆ ಆ ಕಾಲದ ಭಾರತೀಯರ ಜೀವನ ಹೇಗಿತ್ತು ಎಂಬುದು ತಿಳಿಯುತ್ತದೆ.

## 1.6 ಮಹಾರಾಷ್ಟ್ರದಲ್ಲಿನ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆಯ ಸ್ಥಳಗಳು

### ▪ ಮಹಾರಾಷ್ಟ್ರದಲ್ಲಿನ ವಸ್ತುಸಂಗ್ರಹಾಲಯಗಳು

ಇತಿಹಾಸಕ್ಕೆ ಸಂಬಂಧಿಸಿದ ವಸ್ತುಸಂಗ್ರಹಾಲಯಗಳಲ್ಲಿ ಇತಿಹಾಸದ ಸಾಧನಗಳನ್ನು ಸಂಗ್ರಹಿಸಿ ಪ್ರದರ್ಶಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಅನೇಕ ಪ್ರಸಿದ್ಧ ವಸ್ತುಸಂಗ್ರಹಾಲಯಗಳಿವೆ. ಅಲ್ಲಿ ನಮಗೆ ಪ್ರಾಚೀನ ಕಾಲದ ನಾಣ್ಯಗಳು, ಶಸ್ತ್ರಾಸ್ತ್ರಗಳು, ಚಿತ್ರಕಲೆಗಳು, ಮೂರ್ತಿಗಳು, ಹಸ್ತಪ್ರತಿಗಳು, ವೇಷಭೂಷಣಗಳು, ಕರಕುಶಲ ವಸ್ತುಗಳು ಮತ್ತು ಇತರ ಐತಿಹಾಸಿಕ ವಸ್ತುಗಳು ನೋಡಲು ಸಿಗುತ್ತವೆ. ಮಹಾರಾಷ್ಟ್ರದ ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ, ಮುಂಬಯಿ ಇದು ಅತ್ಯಂತ ಪ್ರಸಿದ್ಧವಾದುದು. ಇಲ್ಲಿ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಪುಣೆಯ ಡೆಕ್ಕನ ಕಾಲೇಜ ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿ ಪ್ರಾಗೈತಿಹಾಸಿಕ ಕಾಲದ ವಸ್ತುಗಳನ್ನು ನೋಡಬಹುದು. ರಾಜಾ ದಿನಕರ ಕೇಳ್ಕರ ವಸ್ತುಸಂಗ್ರಹಾಲಯದಲ್ಲಿ ವೈವಿಧ್ಯಮಯ ಗೃಹಬಳಕೆಯ ವಸ್ತುಗಳು, ಆಭರಣಗಳು, ಶಸ್ತ್ರಾಸ್ತ್ರಗಳು, ಸಂಗೀತ ವಾದ್ಯಗಳು, ವಸ್ತ್ರಗಳು ಮತ್ತು ಕಲಾಕೃತಿಗಳ ವಿಭಾಗಗಳಿವೆ. ಇವು ಅಂದಿನ ಕಾಲದ ಜನರ ಜೀವನಶೈಲಿಯನ್ನು ತೋರಿಸುತ್ತವೆ. ನಾಗಪುರದ ಮಧ್ಯವರ್ತಿ ವಸ್ತುಸಂಗ್ರಹಾಲಯ, ಛತ್ರಪತಿ ಸಂಭಾಜಿನಗರದ (ಔರಂಗಾಬಾದ್) ಛತ್ರಪತಿ ಶಿವಾಜಿ



ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ, ಮುಂಬಯಿ

ಮಹಾರಾಜ ವಸ್ತುಸಂಗ್ರಹಾಲಯ, ಕೊಲ್ಹಾಪುರದ ಶ್ರೀ ಛತ್ರಪತಿ ಶಾಹು ವಸ್ತುಸಂಗ್ರಹಾಲಯ ಮತ್ತು ಸಾತಾರಾದಲ್ಲಿನ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ, ನಾಸಿಕ್ ಜಿಲ್ಲೆಯ ತ್ರಯಂಬಕೇಶ್ವರ ಸಮೀಪದ ಅಂಜನೇರಿಯಲ್ಲಿನ ನಾಣ್ಯಶಾಸ್ತ್ರದ ವಸ್ತುಸಂಗ್ರಹಾಲಯ ಮುಂತಾದವು ಐತಿಹಾಸಿಕ ದೃಷ್ಟಿಕೋನದಿಂದ ಪ್ರಮುಖವಾದ ವಸ್ತುಸಂಗ್ರಹಾಲಯಗಳಾಗಿವೆ.

### ▪ ಮಹಾರಾಷ್ಟ್ರದ ಪರಂಪರೆಯ ಸ್ಥಳಗಳು

ಮಹಾರಾಷ್ಟ್ರವು ಶ್ರೀಮಂತ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ರಾಜ್ಯವಾಗಿದೆ. ಯುನೆಸ್ಕೋ (UNESCO) ಜಾಗತಿಕ ಸಂಸ್ಥೆಯಿಂದ ಮಾನ್ಯತೆ ಪಡೆದ ಹಾಗೂ ರಾಜ್ಯಸರ್ಕಾರದಿಂದ ಸಂರಕ್ಷಿಸಲ್ಪಟ್ಟ ಅನೇಕ ಪ್ರಮುಖ ಪರಂಪರೆಯ



ಅಜಿಂತಾ ಗುಹೆಗಳು

ಸ್ಥಳಗಳು ಮಹಾರಾಷ್ಟ್ರದಲ್ಲಿವೆ. ಅವು ನಮ್ಮ ಇತಿಹಾಸದ ಗೌರವದ ಸಂಕೇತಗಳಾಗಿವೆ. ಅತ್ಯಂತ ಪ್ರಸಿದ್ಧ ಪರಂಪರೆಯ ತಾಣಗಳೆಂದರೆ ಅಜಂತಾ ಮತ್ತು ಎಲ್ಲೋರಾ ಗುಹೆಗಳು. ಇವುಗಳನ್ನು 1983 ರಲ್ಲಿ ಯುನೆಸ್ಕೋ ಜಾಗತಿಕ ಪರಂಪರೆಯ ಪಟ್ಟಿಗೆ ಸೇರಿಸಲಾಯಿತು. ಮುಂಬಯಿನಲ್ಲಿಯ ಸಮೀಪದ ಘಾರಾಪುರಿ (ಎಲಿಫೆಂಟಾ) ಗುಹೆಗಳು, ಕನ್ಹೇರಿ ಗುಹೆಗಳು ಕೂಡ ಪ್ರಸಿದ್ಧವಾಗಿವೆ.

ಮುಂಬಯಿ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಈ ಭವ್ಯ ರೈಲ್ವೆ ನಿಲ್ದಾಣವು ಬ್ರಿಟಿಷ್ ಕಾಲದ 'ಗೋಥಿಕ್' ವಾಸ್ತುಶೈಲಿಯ ಅತ್ಯುತ್ತಮ ಉದಾಹರಣೆಯಾಗಿದೆ. ಇದನ್ನು 1997 ರಲ್ಲಿ ಜಾಗತಿಕ ಪರಂಪರೆಯ ತಾಣವೆಂದು ಘೋಷಿಸಲಾಯಿತು.

'ಪಶ್ಚಿಮ ಘಟ್ಟ' ಎಂದು ಕರೆಯಲ್ಪಡುವ ಮಹಾರಾಷ್ಟ್ರದ ಸಹ್ಯಾದ್ರಿ ಪರ್ವತ ಶ್ರೇಣಿಗಳು ಜೀವವೈವಿಧ್ಯತೆಯಿಂದ ಕೂಡಿದ್ದು, ಅವುಗಳಿಗೆ 2012 ರಲ್ಲಿ ಯುನೆಸ್ಕೋ ನೈಸರ್ಗಿಕ ಪರಂಪರೆಯ ತಾಣವಾಗಿ ಮಾನ್ಯತೆ ನೀಡಿದೆ. ಇಲ್ಲಿ ಅನೇಕ ಅಪರೂಪದ ಪ್ರಾಣಿ, ಪಕ್ಷಿ ಮತ್ತು ಸಸ್ಯಗಳು ಕಂಡುಬರುತ್ತವೆ.

ಇತ್ತೀಚೆಗೆ ಯುನೆಸ್ಕೋ 'ಮರಾಠ ಮಿಲಿಟರಿ ಲ್ಯಾಂಡ್ಸ್ಕೇಪ್ಸ್' ಹೆಸರಿನಲ್ಲಿ 12 ಕೋಟೆಗಳನ್ನು ಜಾಗತಿಕ ಪರಂಪರೆಯ ತಾಣಗಳೆಂದು ಮಾನ್ಯತೆ ಮಾಡಿದೆ. ಇವುಗಳಲ್ಲಿ 11 ಕೋಟೆಗಳು ಮಹಾರಾಷ್ಟ್ರದಲ್ಲಿವೆ. ಜಿಂಜಿ ಕೋಟೆಯು ತಮಿಳುನಾಡು ರಾಜ್ಯದಲ್ಲಿದೆ. ಈ ಕೋಟೆಗಳು ಮರಾಠ ಸಾಮ್ರಾಜ್ಯದ ಮಿಲಿಟರಿ ಕುಶಲತೆ, ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರಮುಖ ಸಂಕೇತಗಳಾಗಿವೆ.

ಮಹಾರಾಷ್ಟ್ರದ ಈ ಪರಂಪರೆಯ ತಾಣಗಳು ನಮ್ಮ ಸಂಸ್ಕೃತಿ, ಇತಿಹಾಸ ಮತ್ತು ಸಂಪ್ರದಾಯಗಳ ಸಂಕೇತಗಳಾಗಿವೆ. ಈ ಸ್ಥಳಗಳು ಐತಿಹಾಸಿಕ ಪ್ರವಾಸೋದ್ಯಮದ ಆಕರ್ಷಣೆಯಾಗಿವೆ ಮತ್ತು ಇವುಗಳ ಅಭ್ಯಾಸದಿಂದ ನಮ್ಮ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆಯ ಬಗ್ಗೆ ಹೆಮ್ಮೆ ಹೆಚ್ಚಾಗುತ್ತದೆ.

**ನಿಮ್ಮ ಅಭಿಪ್ರಾಯವೇನು?**

ಪರಂಪರೆಯ ತಾಣಗಳ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ. ಅದಕ್ಕಾಗಿ ನೀವು ಏನು ಕೊಡುಗೆ ನೀಡುತ್ತೀರಿ?



## ಸ್ವಾಧ್ಯಾಯ

**ಪ್ರ.1 ಅ) ಕೊಟ್ಟಿರುವ ಪರ್ಯಾಯಗಳಲ್ಲಿ ಸರಿಯಾದ ಪರ್ಯಾಯವನ್ನು ಆರಿಸಿ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಸಾಮ್ರಾಟ್ ಅಶೋಕನು ತನ್ನ ಶಿಲಾಶಾಸನಗಳನ್ನು.......... ಭಾಷೆಯಲ್ಲಿ ಕೆತ್ತಿಸಿದನು.

   ಅ) ಸಂಸ್ಕೃತ ಬ) ಪಾಲಿ

   ಕ) ಅರ್ಧಮಾಗಧಿ ಡ) ಬ್ರಾಹ್ಮಿ

2. ವರ್ಧಮಾನ ಮಹಾವೀರರ ಬೋಧನೆಗಳು .............. ಈ ಗ್ರಂಥದಿಂದ ದೊರೆಯುತ್ತವೆ.

   ಅ) ಉಪನಿಷತ್ತುಗಳು ಬ) ತ್ರಿಪಿಟಕ

   ಕ) ಆಗಮ ಸಾಹಿತ್ಯ ಡ) ಸಂಗಮ ಸಾಹಿತ್ಯ

**ಬ) ಸರಿಯಾದ ಜೋಡಿಗಳನ್ನು ಹೊಂದಿಸಿ.**

| **ಗುಂಪು 'ಅ'** | **ಗುಂಪು 'ಬ'** |
|---|---|
| 1. ಲಿಖಿತ ಸಾಧನಗಳು. | ಅ) ಜಾನಪದ ಗೀತೆಗಳು |
| 2. ಭೌತಿಕ ಸಾಧನಗಳು | ಬ) ಪರಕೀಯ ಪ್ರವಾಸಿಗರು ಬರೆದ ಪ್ರವಾಸ ಕಥನಗಳು |
| 3. ಮೌಖಿಕ ಸಾಧನಗಳು | ಕ) ನಾಣ್ಯಗಳು, ಶಸ್ತ್ರಾಸ್ತ್ರಗಳು |

**ಪ್ರ.2 ಅ) ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**

**ಇತಿಹಾಸದ ಸಾಧನಗಳು**



**ಬ) ಚಿತ್ರವು ಯಾವ ಸಾಧನದ ಪ್ರಕಾರಕ್ಕೆ ಸೇರುತ್ತದೆ ಎಂದು ಬರೆಯಿರಿ.**



..............................................................



..................................



..................................

**ಪ್ರ. 3 ಅ) ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ.**

1. ಇತಿಹಾಸದ ಲಿಖಿತ ಮತ್ತು ಮೌಖಿಕ ಸಾಧನಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.
2. ಭೌತಿಕ ಸಾಧನಗಳ ಹೆಸರುಗಳನ್ನು ಬರೆದು ಅವುಗಳ ಇತಿಹಾಸದ ಅಭ್ಯಾಸದಲ್ಲಿನ ಮಹತ್ವವನ್ನು ಬರೆಯಿರಿ.
3. ಆಧುನಿಕ ಕಾಲದ ಯಾವ ಸಾಧನಗಳು ಭವಿಷ್ಯದ ಪೀಳಿಗೆಗೆ ಇತಿಹಾಸವನ್ನು ಹೇಳಬಲ್ಲವು? ಅದನ್ನು ಬರೆಯಿರಿ.

**ಪ್ರ. 4**

**ಅ)** ಯಾವುದಾದರೂ ಹಳೆಯ ವಸ್ತು ಎಂದರೆ ಮೂರ್ತಿ, ಶಿಲೆಗಳು, ನಾಣ್ಯಗಳು, ಪಾತ್ರೆಗಳು, ಒಡವೆಗಳು, ಕಾಗದಪತ್ರಗಳು, ಆಟಿಕೆಗಳು ಇತ್ಯಾದಿಗಳಿಂದ ಮಾನವ ಜೀವನದಲ್ಲಿನ ಬದಲಾವಣೆಯ ಯಾವ ಮಾಹಿತಿ ಸಿಗುತ್ತದೆ ಎಂಬುದನ್ನು ಬರೆಯಿರಿ.

**ಬ) ಮುಂದಿನ ಕೋಷ್ಟಕ ಪೂರ್ಣಗೊಳಿಸಿರಿ.**

| ಪಟ್ಟಣದ/ಸ್ಥಳದ ಹೆಸರು | ವಸ್ತು ಸಂಗ್ರಹಾಲಯದ ಹೆಸರು | ವೈಶಿಷ್ಟ್ಯ |
|---|---|---|
| ಮುಂಬೈ | ............. | ............... ............... |
| .............. | ರಾಜಾ ದಿನಕರ ಕೇಳ್ಕರ ಸಂಗ್ರಹಾಲಯ | ............... ............... |
| .............. | ............... ............... | ನಾಣ್ಯಶಾಸ್ತ್ರದ ಸಂಗ್ರಹಾಲಯ |

**ಕೃತಿ**

- ಹಬ್ಬಗಳಿಗೆ ಸಂಬಂಧಿಸಿದ ಜಾನಪದ ಗೀತೆಗಳು, ಕಥೆಗಳು, ಕವಿತೆಗಳು, ಭಾರೂಡೆ ಮತ್ತು ಓವಿಗಳನ್ನು ಸಂಗ್ರಹಿಸಿ ಪರಿಪಾಠದ ಸಮಯದಲ್ಲಿ ಪ್ರಸ್ತುತಪಡಿಸಿ.
- ಮಹಾರಾಷ್ಟ್ರದಲ್ಲಿರುವ 'ಪಾರಂಪರಿಕ ತಾಣಗಳ' ಚಿತ್ರಗಳ ಪಟ್ಟಿಯನ್ನು ಮಾಡಿ ಮತ್ತು ಅದನ್ನು ಶಾಲೆಯಲ್ಲಿ 'ಪಾರಂಪರಿಕ ಗೋಡೆ' ರಚಿಸಲು ಬಳಸಿ.

**ಪ್ರಶ್ನೆ5. 'ಮರಾಠ ಮಿಲಿಟರಿ ಲ್ಯಾಂಡ್‌ಸ್ಕೇಪ್ಸ್' ಈ ಹೆಸರಿನಲ್ಲಿ ಜಾಹೀರು ಮಾಡಿರುವ ಹನ್ನೆರಡು ಕೋಟೆಗಳ ಅತರಜಾಲದ (ಇಂಟರ್ನೆಟ್) ಸಹಾಯದಿಂದ ಹೆಸರುಗಳನ್ನು ಹುಡುಕಿರಿ.**

| | | | | | | | | | | | |
|---|---|---|---|---|---|---|---|---|---|---|---|
| ಸಾ | ಲ್ಹೆ | ರ | ಜ | ಯ | ಗ | ಡ | ಖಾ | ತುಂ | ಗ | ಳ | ಅ |
| ಕು | ಕೆ | ಅ | ವ | ಚಿ | ತ | ಗ | ಡ | ದೇ | ನ್ಹಾ | ರ | ರ್ನಾ |
| ಲಾ | ಳ | ಕ | ಸು | ವ | ರ್ಣ | ದು | ರ್ಗ | ಪ | ರಿ | ಸ | ಳ |
| ಬ | ನಾ | ಹ | ವಂ | ವಾ | ರು | ಗ | ಡ | ವಾ | ಸ್ತೆ | ಟಾ | ಸಿಂ |
| ವಿ | ವಿ | ರಿ | ಡ | ಶೀ | ಭೀ | ಸಿ | ಮಾ | ಲ | ವ | ಣ | ಧೂ |
| ಜ | ಶಾ | ಶ್ಚಂ | ನ | ವ | ವ | ಹ | ಪಾ | ಸ | ಡ | ಪ | ದು |
| ಯ | ಹ | ದ್ರ | ಗ | ನೆ | ಗ | ಗ | ಲೀ | ಗ | ಭೊ | ರ | ರ್ಗ |
| ದು | ಗ | ಗ | ಡ | ರಿ | ಡ | ಡ | ಹ | ನಾ | ಡ | ಗಿ | ರಿ |
| ರ್ಗ | ಡ | ಡ | ಉಂ | ದೇ | ರಿ | ಲೊ | ವಾ | ರು | ಗ | ಡ | ರಾ |
| ಪ್ರ | ತಾ | ಪ | ಗ | ಡ | ತೋ | ರ | ಣಾ | ಕಾಂ | ಗೋ | ರಿ | ಯ |
| ವ | ಸ | ಯಿ | ಯ | ಕಿ | ಲ್ಲಾ | ಕ | ಮ | ಲ | ಗ | ಡ | ಗ |
| ರಾ | ಜಿಂ | ಜೀ | ಸಿಂ | ಖಿ | ಗ | ಡ | ರಾ | ಜ | ಗ | ಡ | ಡ |

1. ರಾಯಗಡ
2. ______
3. ______
4. ______
5. ______
6. ______
7. ______
8. ______
9. ______
10. ______
11. ______
12. ______

**ಉಪಕ್ರಮ**

- ನಿಮ್ಮ ಊರಿನ ಹತ್ತಿರದ/ಜಿಲ್ಹೆಯ ಸಮೀಪದ ಸಂಗ್ರಾಹಲಯಕ್ಕೆ ಭೇಟಿ ಮಾಡಿ. ಅದರ ವರದಿ ಲೇಖನ ಮಾಡಿ.

***

# 2 ಪ್ರಾಗೈತಿಹಾಸಿಕ ಕಾಲ




2.1 ಪ್ರಾಚೀನ ಭಾರತ - ಭೌಗೋಳಿಕ ಹಿನ್ನೆಲೆ

2.2 ಅಲೆಮಾರಿ ಜೀವನದಿಂದ ಸ್ಥಿರ ಜೀವನಕ್ಕೆ

2.3 ಪಶುಪಾಲನೆ ಮತ್ತು ಕೃಷಿ- ಸ್ಥಿರ ಜೀವನದ ಅಡಿಪಾಯ

2.4 ತಾಮ್ರಶಿಲಾಯುಗ

2.5 ಮಹಾರಾಷ್ಟ್ರದಲ್ಲಿ ಉತ್ಖನನ ಸ್ಥಳಗಳು


ವಿದ್ಯಾರ್ಥಿಗಳೇ, ಒಂದು ಕ್ಷಣ ಕಣ್ಣು ಮುಚ್ಚಿ, ಮೊಬೈಲ್ ಫೋನ್ಗಳಿಲ್ಲ, ಕಾರುಗಳಿಲ್ಲ, ಆಟಿಕೆಗಳಿಲ್ಲ, ಮನೆಗಳಿಲ್ಲ, ಹಳ್ಳಿಗಳಿಲ್ಲ, ಶಾಲೆಗಳಿಲ್ಲ, ರಸ್ತೆಗಳಿಲ್ಲ, ಏನೂ ಇಲ್ಲದ ಕಾಲದಲ್ಲಿ ನೀವು ವಾಸಿಸುತ್ತಿದ್ದೀರಿ ಎಂದು ಊಹಿಸಿ!



**ಹೇಳಿ ನೋಡೋಣ!**

- ನೀವು ಅಂತಹ ಕಾಲದಲ್ಲಿ ಬದುಕಿದ್ದರೆ, ನಿಮ್ಮ ದೈನಂದಿನ ಜೀವನ ಹೇಗಿರುತ್ತಿತ್ತು?
- ನೀವು ಎಲ್ಲಿ ವಾಸಿಸುತ್ತಿದ್ದಿರಿ?
- ಅಂತಹ ತಂಪಾದ ಸ್ಥಳದಲ್ಲಿ ಬೆಚ್ಚಗಿರಲು ನೀವು ಏನು ಮಾಡುತ್ತಿದ್ದಿರಿ?
- ನೀವು ಹೇಗೆ ಅಡುಗೆ ಮಾಡುತ್ತೀರಿ?
- ಒಂದು ವೇಳೆ ಕಾಡು ಪ್ರಾಣಿ ನಿಮ್ಮ ಕಡೆಗೆ ಬರುವುದನ್ನು ನೀವು ನೋಡಿದರೆ ಆಗ ನೀವು ಏನು ಮಾಡುತ್ತಿದ್ದಿರಿ?

ಲಕ್ಷಾಂತರ ವರ್ಷಗಳ ಹಿಂದೆ, ಆದಿಮಾನವನ ಕಾಲದಲ್ಲಿ, ಅವನು ಇದೇ ರೀತಿಯ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಇಂದು ನಾವು ನೋಡುತ್ತಿರುವುದು, ನಾವು ಅನುಭವಿಸುವ ಸೌಕರ್ಯಗಳು, ಅವುಗಳನ್ನು ಸಾಧಿಸಲು ಲಕ್ಷಾಂತರ ವರ್ಷಗಳು ಬೇಕಾಯಿತು. ಈ ಅವಧಿಯಲ್ಲಿ ಅಲೆಮಾರಿ ಸ್ಥಿತಿಯಿಂದ ಸ್ಥಿರ ಜೀವನದ ಕಡೆಗೆ, ಕಾಡುಗಳಿಂದ ಹಳ್ಳಿಗಳಕಡೆಗೆ ಮತ್ತು ವಿಕಸನಶೀಲ ಸಂಸ್ಕೃತಿಯ ವರೆಗಿನ ಅದ್ಭುತ ಇತಿಹಾಸ ಸಮಾವೇಶವಾಗಿದೆ. ಹಾಗಿದ್ರೆ ಬನ್ನಿ, ಮನುಷ್ಯನ ಈ ಆರಂಭಿಕ ಹಂತವನ್ನು ಹಂತ ಹಂತವಾಗಿ ಪರಿಚಯ ಮಾಡಿಕೊಳ್ಳೋಣ.



**ನಿಮಗೆ ನೆನಪಿದೆಯೇ ?**

ನೀವು ಮೊದಲು ಮಾನವ ವಿಕಾಸದಲ್ಲಿಯ ಹಂತಗಳು ಮತ್ತು ಆದಿಮಾನವನ ಜೀವನ, ಆಹಾರ ಪದ್ಧತಿ, ಉಪಕರಣಗಳು, ಕಲೆ ಇತ್ಯಾದಿಗಳ ಬಗ್ಗೆ ಅಧ್ಯಯನ ಮಾಡಿದ್ದೀರಿ. ಅದರ ಬಗ್ಗೆ ನಿಮಗೆ ನೆನಪಿರುವದನ್ನು ತರಗತಿಯಲ್ಲಿ ಪರಿಷ್ಕರಿಸಿ.

## 2.1 ಪ್ರಾಚೀನ ಭಾರತ - ಭೌಗೋಳಿಕ ಹಿನ್ನೆಲೆ




ಮಾನವ ಇತಿಹಾಸದ ಬೆಳವಣಿಗೆಯಲ್ಲಿ ಸಂಬಂಧಿತ ಪ್ರದೇಶಗಳ ಭೌಗೋಳಿಕ ಪರಿಸ್ಥಿತಿಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿವೆ. ಯಾವ ಪ್ರದೇಶದಲ್ಲಿ ಮಾನವ ವಾಸವಾಗಿದ್ದನೋ, ಅಲ್ಲಿಯ ಹವಾಮಾನ, ಭೂಮಿ

ಮತ್ತು ನೈಸರ್ಗಿಕ ಸಂಪನ್ಮೂಲಗಳು. ಅಲ್ಲಿ ಇರುವ ಮಾನವ ಸಮೂಹಗಳ ಜೀವನಪದ್ದತಿಗಳನ್ನು ರೂಪಿಸುತ್ತವೆ. ಯಾವ ಬೆಳೆಗಳನ್ನು ಬೆಳೆಯಬೇಕು, ಯಾವ ಪ್ರಾಣಿಗಳನ್ನು ಸಾಕಬೇಕು, ಎಲ್ಲಿ ಮನೆಯನ್ನು ಕಟ್ಟಬೇಕು, ಸಂಚಾರ ಹೇಗೆ ಇರಬೇಕು ಇವೆಲ್ಲವೂ ಆ ಪ್ರದೇಶದ ಭೌಗೋಳಿಕ ಲಕ್ಷಣಗಳ ಮೇಲೆ ಅವಲಂಬಿತವಾಗಿರುತ್ತದೆ. ಪ್ರಾಚೀನ ಭಾರತದಲ್ಲಿ ಮಾನವ ಸಂಸ್ಕೃತಿಯ ವಿಕಾಸ ವಿವಿಧ ಸ್ವರೂಪಗಳಲ್ಲಿ ನಡೆದಿದೆ. ಅದರ ಪ್ರಮುಖ ಕಾರಣ ಭಾರತದ ಭೌಗೋಳಿಕ ವೈವಿಧ್ಯತೆಯಾಗಿದೆ.

ಅಲ್ಲಿ ಇರುವ ಮಾನವ ಸಮೂಹಗಳ ಜೀವನಪದ್ದತಿಗಳನ್ನು ರೂಪಿಸುತ್ತವೆ. ಯಾವ ಬೆಳೆಗಳನ್ನು ಬೆಳೆಯಬೇಕು, ಯಾವ ಪ್ರಾಣಿಗಳನ್ನು ಸಾಕಬೇಕು, ಎಲ್ಲಿ ಮನೆಯನ್ನು ಕಟ್ಟಬೇಕು, ಸಂಚಾರ ಹೇಗೆ ಇರಬೇಕು ಇವೆಲ್ಲವೂ ಆ ಪ್ರದೇಶದ ಭೌಗೋಳಿಕ ಲಕ್ಷಣಗಳ ಮೇಲೆ ಅವಲಂಬಿತವಾಗಿರುತ್ತದೆ. ಪ್ರಾಚೀನ ಭಾರತದಲ್ಲಿ ಮಾನವ ಸಂಸ್ಕೃತಿಯ ವಿಕಾಸ ವಿವಿಧ ಸ್ವರೂಪಗಳಲ್ಲಿ ನಡೆದಿದೆ. ಅದರ ಪ್ರಮುಖ ಕಾರಣ ಭಾರತದ ಭೌಗೋಳಿಕ ವೈವಿಧ್ಯತೆಯಾಗಿದೆ.



ಭಾರತದಲ್ಲಿಯ ನದಿಗಳಿಂದ ನಿರ್ಮಿತವಾದ ಫಲವತ್ತಾದ ಫಲವತ್ತಾದ ಭೂಮಿಯಲ್ಲಿ ಪ್ರಾಚೀನ ಕಾಲದಲ್ಲಿ ಕೃಷಿಯ ಅಭಿವೃದ್ಧಿ ನಡೆದಿದೆ. ಮಧ್ಯ ಭಾರತದ ವಿಶಾಲ ಪ್ರಸ್ಥಭೂಮಿ ಮತ್ತು ಗಂಗಾ-ಯಮುನಾ ನದಿಗಳ ದುಆಬಾದ ಮೈದಾನ ಪ್ರದೇಶವು ಭಾರತದ ಕೃಷಿಗೆ ಅತ್ಯಂತ ಅನುಕೂಲಕರವಾಗಿತ್ತು.

ದಖ್ಖನ್‌ದ ಪ್ರಸ್ಥಭೂಮಿಯಲ್ಲಿ ಖನಿಜ ಸಂಪತ್ತು ಇರುವುದರಿಂದ ಇಲ್ಲಿ ಲೋಹಕಾರ್ಯ, ಮಣ್ಣಿನ ಪಾತ್ರೆಗಳ ತಯಾರಿ ಮತ್ತು ತಾಮ್ರ ಶಿಲಾಯುಗ ಸಂಸ್ಕೃತಿಯ ಅಭಿವೃದ್ಧಿಯಾಯಿತು. ಪ್ರಾಚೀನ ಮಹಾರಾಷ್ಟ್ರದಲ್ಲಿಯ ತಾಮ್ರ ಶಿಲಾಯುಗದ ವಸತಿಗಳು, ಕೃಷಿ ಮತ್ತು ಜೀವನಶೈಲಿ ಇವುಗಳಿಗೆ ಗೋದಾವರಿ ಮತ್ತು ಕೃಷ್ಣ ಇವುಗಳಂತಹ ನದಿಗಳು ಹಾಗೂ ಅವುಗಳ ಉಪನದಿಗಳು ಆಧಾರವಾಗಿದ್ದವು.

ಭಾರತದ ಪಶ್ಚಿಮ ಕರಾವಳಿಯಲ್ಲಿ ಅರಬಿ ಸಮುದ್ರ ಮತ್ತು ಪೂರ್ವ ಕರಾವಳಿಯಲ್ಲಿ ಬಂಗಾಲ ಉಪಸಾಗರ ಇದ್ದುದರಿಂದ ಪ್ರಾಚೀನ ಕಾಲದಿಂದಲೂ ಕಡಲತೀರದ ವ್ಯಾಪಾರಕ್ಕೆ ಚಾಲನೆ ದೊರಕಿತು. ಆದ್ದರಿಂದ ದೂರದ ಪ್ರದೇಶಗಳಲ್ಲಿಯ ಜನರೊಂದಿಗೆ ಮತ್ತು ಸಂಸ್ಕೃತಿಗಳೊಂದಿಗೆ ಭಾರತೀಯರ ಸಂಪರ್ಕ ಹೊಂದಿತು.

ಈ ವೈವಿಧ್ಯಮಯ ಭೌಗೋಳಿಕ ವೈಶಿಷ್ಟ್ಯಗಳಿಂದ ಭಾರತದಲ್ಲಿ ಅನೇಕ ಸಂಸ್ಕೃತಿಗಳು, ಸಂಪ್ರದಾಯಗಳು ಮತ್ತು ಜೀವನಪದ್ಧತಿ ನಿರ್ಮಾಣವಾದವು.

## 2.2 ಅಲೆಮಾರಿ ಜೀವನದಿಂದ ಸ್ಥಿರ ಜೀವನಕ್ಕೆ

ಕಳೆದ ವರ್ಷ ನೀವು ಮಾನವರು ಕೆಲವು ಜಾತಿಯ 'ಎಪ್' ಮಂಗಗಳಿಂದ ವಿಕಸನಗೊಂಡರು ಎಂದು ತಿಳಿದುಕೊಂಡಿದ್ದೀರಿ. ಈ ಆರಂಭಿಕ ಮಾನವರನ್ನು 'ಆದಿಮಾನವ' ಎಂದು ಕರೆಯಲಾಗುತ್ತದೆ.

ಆದಿಮಾನವನ ಜೀವನವು ಅತ್ಯಂತ ಕಠಿಣವಾಗಿತ್ತು. ಅವನು ಅಲೆಮಾರಿ ಸ್ಥಿತಿಯಲ್ಲಿದ್ದರಿಂದ ಆಹಾರ, ನೀರು, ವಸತಿ ಮತ್ತು ರಕ್ಷಣೆಗಾಗಿ ನಿರಂತರವಾಗಿ ಅಲೆದಾಡುತ್ತಿದ್ದನು. ಆಹಾರಕ್ಕಾಗಿ ಅವನು ಬೇಟೆಯಾಡುತ್ತಿದ್ದನು. ಹಣ್ಣುಗಳು ಮತ್ತು ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಿದ್ದನು. ಅವನ ಆಯುಧಗಳು ಕಟ್ಟಿಗೆ, ಕಲ್ಲು ಅಥವಾ ಮೂಳೆಗಳಿಂದ ಮಾಡಲ್ಪಟ್ಟಿದ್ದವು. ಆದಿಮಾನವನು ಸನ್ನೆಗಳು, ವಿವಿಧ ರೀತಿಯ ಶಬ್ದಗಳು ಅಥವಾ ಹಾವಭಾವಗಳ ಸಹಾಯದಿಂದ ಸಂವಹನ ನಡೆಸುತ್ತಿದ್ದಿರಬಹುದು.

ಈ ಅವಧಿಯನ್ನು **'ಪ್ರಾಗೈತಿಹಾಸಿಕ ಕಾಲ'** ಎಂದು ಕರೆಯಲಾಗುತ್ತದೆ. ಲಿಪಿಗಳ ಉಗಮ ಅಥವಾ ವಿಕಾಸವಾಗದಿದ್ದ ಕಾಲವನ್ನು 'ಪ್ರಾಗೈತಿಹಾಸಿಕ ಕಾಲ' ಎಂದು ಕರೆಯುತ್ತಾರೆ ಎಂಬುದನ್ನು ನೀವು ಹಿಂದಿನ ಪಾಠದಲ್ಲಿ ತಿಳಿದುಕೊಂಡಿದ್ದೀರಿ.

ಈ ಅವಧಿಯಲ್ಲಿ ಮಾನವನು ಗಮನಾರ್ಹ ಪ್ರಗತಿಯನ್ನು ಸಾಧಿಸಿದನು. ಅವನ ಜೀವನದ ಅಧ್ಯಯನವನ್ನು ಮುಖ್ಯವಾಗಿ ಕಲ್ಲಿನ ಆಯುಧಗಳು, ಮೂಳೆಗಳು, ಮಣ್ಣಿನ ಪಾತ್ರೆಗಳು ಮತ್ತು ಗುಹಾಚಿತ್ರಗಳಂತಹ ಪುರಾವೆಗಳ ಆಧಾರದ ಮೇಲೆ ಮಾಡಲಾಗುತ್ತದೆ. ಮಾನವನ ಸಾಧನಗಳಲ್ಲಿ, ಜೀವನಶೈಲಿಯಲ್ಲಿ, ಅನ್ನಪದ್ಧತಿಯಲ್ಲಿ ಮತ್ತು ವಸತಿಯ ಸ್ವರೂಪಗಳಲ್ಲಿ ಬದಲಾವಣೆಗಳು ಆಗುತ್ತಾ ಹೋದವು.

**ಮಾನವನ ಉತ್ಕ್ರಾಂತಿಯಲ್ಲಿಯ ಮಹತ್ವದ ಹಂತಗಳು –**

ಕುಶಲ ಮಾನವ (ಹೋಮೋ ಹ್ಯಬಿಲಿಸ) → ನೇರಬೆನ್ನೆಲುಬಿನ ಮಾನವ (ಹೋಮೋ ಇರೆಕ್ಟ್ಸ) → ಬಲಿಷ್ಠ ಮಾನವ (ನಿಯಂಡ್ರತ್ವಲ್ ಮ್ಯಾನ್) → ಬುದ್ಧಿವಂತ ಮಾನವ (ಹೋಮೋ ಸೆಪಿಯನ್) → ವಿಕಸಿತ ಬುದ್ಧಿಯ ಮಾನವ (ಹೋಮೋ ಸೇಪಿಯಾನ್ ಸೇಪಿಯಾನ್)



**ನಿಮಗೆ ಇದು ಗೊತ್ತಿದೆಯೇ?**

ನಿಮಗೆ ಒಂದು ಆಸಕ್ತಿದಾಯಕ ವಿಷಯ ಗೊತ್ತೇ? 'ಯೇತಿ'ಯು ಹಿಮಾಲಯದಲ್ಲಿ ವಾಸಿಸುವ ಒಂದು ನಿಗೂಢ ಮತ್ತು ದೊಡ್ಡದಾದ, ಕೂದಲುಳ್ಳ ಪ್ರಾಣಿ ಎಂಬ ದಂತಕಥೆಯಿದೆ. ಇದನ್ನು 'ಹಿಮಮಾನವ' ಎಂದು ಕರೆಯುತ್ತಾರೆ. ಅನೇಕ ಬಾರಿ ಈ ಪ್ರದೇಶದಲ್ಲಿ ದೊಡ್ಡ ಗಾತ್ರದ ಹೆಜ್ಜೆಗುರುತುಗಳು ಕಂಡುಬಂದಿವೆ ಎಂದು ಹೇಳಲಾಗುತ್ತದೆ. ಆದರೆ, ಸಂಶೋಧನೆಗಳ ಪ್ರಕಾರ, ಈ ಹೆಜ್ಜೆಗುರುತುಗಳು ಹಿಮಾಲಯದ ಕರಡಿಗಳು ಅಥವಾ ಇತರ ಪ್ರಾಣಿಗಳದ್ದಾಗಿವೆ ಎಂದು ತಿಳಿದುಬಂದಿದೆ. ಆದರೂ, ಮಾನವಶಾಸ್ತ್ರಜ್ಞರು ಇಂತಹ ಕಥೆಗಳನ್ನು ಅಧ್ಯಯನ ಮಾಡುತ್ತಾರೆ, ಏಕೆಂದರೆ ಇಂತಹ ದಂತಕಥೆಗಳು ಸಂಸ್ಕೃತಿ, ಸಂಪ್ರದಾಯ ಮತ್ತು ಜನರ ಕಲ್ಪನಾಶಕ್ತಿಯ ಬಗ್ಗೆ ಬಹಳಷ್ಟು ವಿಷಯಗಳನ್ನು ತಿಳಿಸುತ್ತವೆ.

### ■ ಶಿಲಾಯುಗ

ಯಾವ ಕಾಲದ ಆಯುಧಗಳಲ್ಲಿ ಪ್ರಧಾನವಾಗಿ ಕಲ್ಲಿನ ಆಯುಧಗಳು ಸಿಗುತ್ತವೆಯೋ, ಆ ಕಾಲವನ್ನು ನಾವು 'ಶಿಲಾಯುಗ' ಎಂದು ಕರೆಯುತ್ತೇವೆ. ' ಶಿಲೆ' ಎಂದರೆ ಕಲ್ಲು.

**ಯೋಚನೆ ಮಾಡಿ.**

ಶಿಲಾಯುಗದ ಮಾನವನು ಕಲ್ಲನ್ನು ಯಾವ ಕಾರಣಗಳಿಗಾಗಿ ಬಳಸಿಕೊಂಡಿರಬಹುದು?

ಮಾನವನು ಕಲ್ಲಿನ ಉರುಟುಗುಂಡುಗಳನ್ನು ಕೆತ್ತಿ ಕತ್ತರಿಸುವ ಆಯುಧಗಳನ್ನು ತಯಾರಿಸಿರಬಹುದು. ಗಟ್ಟಿಯಾದ ಕವಚದ ಹಣ್ಣುಗಳನ್ನು ಒಡೆಯಲು ಅಥವಾ ಮೂಳೆಗಳೊಳಗಿನ ಮಜ್ಜೆಯನ್ನು ತೆಗೆಯಲು ಅವನು ಈ ಕತ್ತರಿಸುವ ಆಯುಧಗಳನ್ನು ಬಳಸುತ್ತಿರಬಹುದು. ಕಲ್ಲಿಗೆ ಆಕಾರ ನೀಡುವುದು ಅವನ ಬುದ್ಧಿಶಕ್ತಿಯ ಬೆಳವಣಿಗೆಯ ಮೊದಲ ಹಂತವಾಗಿದೆ. ಆಯುಧಗಳ ಆಕಾರ ಮತ್ತು ಪ್ರಕಾರಗಳ ಆಧಾರದ ಮೇಲೆ ಅಶ್ಮಯುಗದ ಕಾಲವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ: ಪುರಾತನ ಶಿಲಾಯುಗ , ಮಧ್ಯಶಿಲಾಯುಗ ಮತ್ತು ನವಶಿಲಾಯುಗ.

### ■ ಪುರಾತನ ಶಿಲಾಯುಗ

ಪುರಾತನ ಶಿಲಾಯುಗದ ಮಾನವನು ಸಂಪೂರ್ಣವಾಗಿ ಪ್ರಕೃತಿಯ ಮೇಲೆ ಅವಲಂಬಿತನಾಗಿದ್ದನು. ಅವನು ಗುಹೆಗಳಲ್ಲಿ ಅಥವಾ ದೊಡ್ಡ ಮರಗಳ ಕೊಂಬೆಗಳ ಮೇಲೆ ವಾಸಿಸುತ್ತಾ ತನ್ನನ್ನು ರಕ್ಷಿಸಿಕೊಳ್ಳುತ್ತಿದ್ದನು. ಪುರಾತನ ಶಿಲಾಯುಗದ ಆರಂಭಿಕ ಆಯುಧಗಳು ಒರಟಾಗಿದ್ದವು. ಇವುಗಳನ್ನು ಬೇಟೆಯಾಡಲು, ಕೆರೆಯಲು, ಅಗೆಯಲು ಇತ್ಯಾದಿ ಕೆಲಸಗಳಿಗೆ ಬಳಸುತ್ತಿದ್ದನು. ಮಾನವನ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಆವಿಷ್ಕಾರವಾದ ಬೆಂಕಿಯ ಶೋಧವು ಇದೇ ಅವಧಿಯಲ್ಲಿ ಆಯಿತು.

**ಯೋಚನೆ ಮಾಡಿ.**

ಬೆಂಕಿಯ ಬಳಕೆಯನ್ನು ಕಲಿತಿದ್ದರಿಂದ ಮಾನವನ ಜೀವನದಲ್ಲಿ ಯಾವ ಬದಲಾವಣೆಗಳಾಗಿರಬಹುದು? ಯೋಚಿಸಿ ಮತ್ತು ಬರೆಯಿರಿ.

- ಆಹಾರವನ್ನು ಬೇಯಿಸಲು ಸಾಧ್ಯವಾಯಿತು, ಇದರಿಂದಾಗಿ ಅದು ಜೀರ್ಣಿಸಿಕೊಳ್ಳಲು ಸುಲಭವಾಯಿತು.
- ---------------------------
- ---------------------------
- ---------------------------

ಪುರಾತನ ಶಿಲಾಯುಗದ ಆಯುಧಗಳು ನದಿ ಅಥವಾ ಹಳ್ಳಗಳ ದಡದಲ್ಲಿ ಕಂಡುಬರುತ್ತವೆ. ಮಹಾರಾಷ್ಟ್ರದ ಹಳೆಯ ಶಿಲಾಯುಗದ ಪ್ರಮುಖ ಸ್ಥಳಗಳಲ್ಲಿ ನಾಸಿಕ ಹತ್ತಿರದ ಗಂಗಾಪುರ ಮತ್ತು ನೆವಾಸ ಹತ್ತಿರದ ಚಿರಕಿ-ನೆವಾಸ ಪ್ರಸಿದ್ಧವಾಗಿವೆ.

## 2.3 ಮಧ್ಯ ಶಿಲಾಯುಗದಿಂದ ನವಶಿಲಾಯುಗ

### ■ ಮಧ್ಯ ಶಿಲಾಯುಗ

ಈ ಕಾಲದಲ್ಲಿ ಬುದ್ಧಿವಂತ ಮಾನವನು ಪರ್ವತಗಳ ಕಣಿವೆಯಲ್ಲಿ ನೈಸರ್ಗಿಕವಾಗಿ ನಿರ್ಮಾಣವಾದ ಗುಹೆಗಳಲ್ಲಿ ಮತ್ತು ಶಿಲಾಶ್ರಯಗಳಲ್ಲಿ ವಾಸಿಸಲು ಪ್ರಾರಂಭಿಸಿದನು. 'ಶಿಲಾಶ್ರಯ' ಎಂದರೆ ಬೆಟ್ಟದ ಮುಂಚಾಚಿರುವ ಭಾಗದ ಅಡಿಯಲ್ಲಿನ ಆಶ್ರಯ ತಾಣ. ಅಲ್ಲಿ ಜನರು ಗುಂಪುಗಳಾಗಿ ವಾಸಿಸುತ್ತಿದ್ದರು. ಈ ಕಾಲದಲ್ಲಿ ಕಲ್ಲಿನ ಆಯುಧಗಳನ್ನು ತಯಾರಿಸುವ ತಂತ್ರಜ್ಞಾನದಲ್ಲಿ ಸಾಕಷ್ಟು ಪ್ರಗತಿಯಾಯಿತು. ಆಯುಧಗಳ ಗಾತ್ರವು ಚಿಕ್ಕದಾಯಿತು. ಮಾನವನು ಈಗ ವಿವಿಧ ರೀತಿಯ ಕಲ್ಲುಗಳನ್ನು ಬಳಸಲು ಪ್ರಾರಂಭಿಸಿದನು. ಬೇಟೆ, ಮೀನುಗಾರಿಕೆ, ಕಟಾವು ಮಾಡುವುದು ಮತ್ತು ಮರಗಳನ್ನು ಕಡಿಯುವಂತಹ ಅನೇಕ ಕೆಲಸಗಳಿಗೆ ಈ ಆಯುಧಗಳು ಉಪಯುಕ್ತವಾಗಿದ್ದವು. ಅವನು ಪ್ರಾಣಿಗಳ ಕೊಂಬು ಮತ್ತು ಮೂಳೆಗಳನ್ನು ಉಜ್ಜಿ ಚೂಪಾದ ಆಯುಧಗಳನ್ನು ತಯಾರಿಸಲು ಕಲಿತನು. ಮಾನವನು ನಾಯಿ, ಮೇಕೆ ಮತ್ತು ಕುರಿಗಳಂತಹ ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದನು. ನಾಯಿ ಮಾನವನು ಸಾಕಿದ ಮೊದಲ ಪ್ರಾಣಿ. ಇದೇ ಕಾಲದಲ್ಲಿ ಮೀನುಗಾರಿಕೆಯೂ ಪ್ರಾರಂಭವಾಯಿತು. ಮುಂದೆ ಅವನು ಗುಹೆಗಳಲ್ಲಿ ಅಥವಾ ತಾತ್ಕಾಲಿಕ ಶಿಬಿರಗಳಲ್ಲಿ ವಾಸಿಸತೊಡಗಿದನು. ಅಲೆಮಾರಿ ಜೀವನದಿಂದ ಸ್ಥಿರ ಜೀವನದ ಕಡೆಗೆ ಸಾಗುವ ಸಂಕ್ರಮಣ ಕಾಲ ಇದಾಗಿದೆ. ಮಹಾರಾಷ್ಟ್ರದ ಜಳಗಾಂವ್ ಜಿಲ್ಲೆಯ ಪಾಟಣೇ ಒಂದು ಪ್ರಮುಖ ಮಧ್ಯ ಶಿಲಾಯುಗದ ತಾಣವಾಗಿದೆ.

**ಹೇಳಿ ನೋಡೋಣ!**

ನೀಡಿರುವ ಚಿತ್ರವನ್ನು ಗಮನಿಸಿ. ಅದರ ಬಗ್ಗೆ ತರಗತಿಯಲ್ಲಿ ಚರ್ಚಿಸಿ.



ನೈಸರ್ಗಿಕ ಗುಹೆ

## ನವಶಿಲಾಯುಗ

ನವಶಿಲಾಯುಗದಲ್ಲಿ ಆಯುಧಗಳನ್ನು ತಯಾರಿಸುವ ತಂತ್ರಜ್ಞಾನದಲ್ಲಿ ಮತ್ತಷ್ಟು ಪ್ರಗತಿಯಾಯಿತು. ಇದರಲ್ಲಿ 'ಕೊಡಲಿ' ಎಂಬ ಹೊಸ ಕಲ್ಲಿನ ಆಯುಧ ಬಳಕೆಗೆ ಬಂದಿತು. ಪುರಾತನ ಶಿಲಾಯುಗದಲ್ಲಿ ಕೊಡಲಿಯು ಕೇವಲ ಕಲ್ಲಿನ ಅಲಗಿನ ಆಕಾರದಲ್ಲಿತ್ತು, ಆದರೆ ಈಗ ಮಾನವನು ಅದಕ್ಕೆ ಹಿಡಿಕೆಯನ್ನು ಅಳವಡಿಸುವ ತಂತ್ರವನ್ನು ಕಂಡುಹಿಡಿದನು. ಇದನ್ನು ಆಧುನಿಕ ಕೊಡಲಿಯ ಮುನ್ಸೂಚನೆ ಎಂದು ಕರೆಯಬಹುದು.



ನವಶಿಲಾಯುಗದ ಕೊಡಲಿ

ನವಶಿಲಾಯುಗದಲ್ಲಿ ಸಂಭವಿಸಿದ ಪ್ರಮುಖ ಬದಲಾವಣೆಯೆಂದರೆ ಕೃಷಿ ತಂತ್ರಜ್ಞಾನದಲ್ಲಿನ ಪ್ರಗತಿ. ಮಧ್ಯಶಿಲಾಯುಗದಲ್ಲಿ ಮಾನವನು ನೈಸರ್ಗಿಕವಾಗಿ ಬೆಳೆದ ಧಾನ್ಯಗಳನ್ನು ಕಟಾವು ಮಾಡಲು ಕಲಿತನು. ನವಶಿಲಾಯುಗದಲ್ಲಿ ಆತ ಸೂಕ್ತ ಋತುವಿನಲ್ಲಿ ಧಾನ್ಯಗಳನ್ನು ಬಿತ್ತಲು ಪ್ರಾರಂಭಿಸಿದನು. ಇದರಿಂದ ಬಿತ್ತನೆಯಿಂದ ಕೊಯ್ಲಿನವರೆಗೆ ಒಂದೇ ಸ್ಥಳದಲ್ಲಿ ನೆಲೆಸುವುದು ಅನಿವಾರ್ಯವಾಯಿತು. ಇದು ಕ್ರಮೇಣ ಹಳ್ಳಿಗಳ ವಸಾಹತುಗಳ ಉದಯಕ್ಕೆ ಕಾರಣವಾಯಿತು.



**ಮಾಡಿ ನೋಡಿರಿ.**

ಪುರಾತನ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನವ ಮಾನವನ ಜೀವನಶೈಲಿಯಲ್ಲಿ ಆದಂತ ಬದಲಾವಣೆಯ ತುಲನಾತ್ಮಕ ತಕ್ತೆಯನ್ನು ತಯಾರಿಸಿ.

ಕೃಷಿಯ ಆವಿಷ್ಕಾರವು ನವಶಿಲಾಯುಗದ ಪ್ರಮುಖ ಘಟನೆಯಾಗಿದೆ. ಧಾನ್ಯ ಮತ್ತು ಹಾಲಿನ ಉತ್ಪಾದನೆಯ ಕಲೆಯನ್ನು ಮಾನವ ಈ ಕಾಲದಲ್ಲಿ ರೂಢಿಸಿಕೊಂಡನು. ಕೃಷಿಯ ಆರಂಭದ ಕೀರ್ತಿಯು ಸ್ತ್ರೀಯರಿಗೆ ಸಲ್ಲುತ್ತದೆ. ಚೂಪಾದ ಕೋಲಿನ ಸಹಾಯದಿಂದ ಸ್ತ್ರೀಯರು ಬೀಜಗಳನ್ನು ಬಿತ್ತುತ್ತಿರಬಹುದು ಎಂದು ನಂಬಲಾಗಿದೆ. ಕೋಲು ಮಣ್ಣಿನಲ್ಲಿ ಆಳವಾಗಿ ಹೋಗಲು ಅನುಕೂಲವಾಗುವಂತೆ ಆ ಕೋಲುಗಳಿಗೆ ಮಧ್ಯದಲ್ಲಿ ರಂಧ್ರವಿರುವ ಕಲ್ಲುಗಳನ್ನು ಬಳಸಲಾಗುತ್ತಿತ್ತು ಕೆಲವು ಬುಡಕಟ್ಟು ಜನಾಂಗದ ಮಹಿಳೆಯರು ಇಂದಿಗೂ ಇದೇ ರೀತಿಯಲ್ಲಿ ಬಿತ್ತನೆ ಮಾಡುತ್ತಾರೆ. ಅಗತ್ಯಕ್ಕೆ ತಕ್ಕಷ್ಟು ಧಾನ್ಯಗಳು ದೊರೆಯಲಾರಂಭಿಸಿದ್ದರಿಂದ ಮಾನವನ ಅಲೆಮಾರಿ ಜೀವನವು ಕೊನೆಗೊಂಡಿತು. ಕೃಷಿಯಿಂದ ದೊರೆತ



ಚೂಪಾದ ಕೋಲಿನಿಂದ ಬಿತ್ತನೆ ಮಾಡುತ್ತಿರುವ ಸ್ತ್ರೀಯರು

ಸ್ಥಿರತೆಯಿಂದಾಗಿ, ಬೆಳೆದ ಧಾನ್ಯಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಿಡಲು ಸಾಧ್ಯವಾಯಿತು. ಗುಂಪಿನ ಎಲ್ಲರ ಅಗತ್ಯಗಳನ್ನು ಪೂರೈಸಿದ ನಂತರವೂ ಉಳಿಯುವಷ್ಟು ಧಾನ್ಯಗಳು ಸಿಗಲಾರಂಭಿಸಿದವು. ಇದರಿಂದಾಗಿ, ಸಮೂಹದ ಸ್ತ್ರೀ-ಪುರುಷರಿಗೆ ಹೊಸ ವಿಷಯಗಳನ್ನು ಅನ್ವೇಷಿಸಲು ಮತ್ತು ಕಲ್ಪನಾಶಕ್ತಿಯ ಆಧಾರದ ಮೇಲೆ ಹೊಸ ಕೌಶಲಗಳನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಸಮಯ ಸಿಕ್ಕಿತು. ಜೀವನದಲ್ಲಿ ಸ್ಥಿರತೆ ಬಂದಿದ್ದರಿಂದ ಮಾನವನು ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಯಿತು.

ಕೃಷಿಯ ಜೊತೆಗೆ ಮಾನವನು ಪ್ರಾಣಿಗಳನ್ನು ಪಳಗಿಸುವುದನ್ನು ಕಲಿತನು. ಕೆಲವು ಪ್ರಾಣಿಗಳನ್ನು ಕಠಿಣ ಕೆಲಸಗಳಿಗಾಗಿ ಮತ್ತು ಹೊರೆ ಹೊರಲು ಬಳಸಿಕೊಳ್ಳಲಾಯಿತು.

ಕೃಷಿಯ ಅಭಿವೃದ್ಧಿಯೊಂದಿಗೆ ಮಣ್ಣಿನ ಪಾತ್ರೆಗಳನ್ನು ಮಾಡುವ ಕಲೆಯು ಅಸ್ತಿತ್ವಕ್ಕೆ ಬಂದಿತು. ವಿವಿಧ ಆಕಾರಗಳ ಮತ್ತು ಬಣ್ಣಗಳ ಪಾತ್ರೆಗಳನ್ನು ತಯಾರಿಸಿ ಅವುಗಳ ಮೇಲೆ ಸುಂದರವಾದ ಕೆತ್ತನೆಗಳನ್ನು ಮಾಡಲು ಮಾನವನು ಆರಂಭಿಸಿದನು. ಬಟ್ಟೆ ನೇಯುವ ಕಲೆಯನ್ನು ಮಾನವನು ಇದೇ ಸಮಯದಲ್ಲಿ ಕಲಿತನು. ಮರದ ದೋಣಿಗಳನ್ನು ತಯಾರಿಸಿ ನೀರಿನ ಮೇಲೆ ಸಂಚರಿಸುವ ತಂತ್ರವನ್ನು ನವಶಿಲಾಯುಗದಲ್ಲಿ ಕಲಿತನು.

ನವಶಿಲಾಯುಗದಲ್ಲಿ ಕೃಷಿಯ ಅಭಿವೃದ್ಧಿಯೊಂದಿಗೆ ನದಿ ತೀರದಫಲವತ್ತಾದಪ್ರದೇಶಗಳಲ್ಲಿಮಾನವನುನೆಲೆಸತೊಡಗಿದನು. ಅವನ ಅಲೆಮಾರಿ ಜೀವನ ಕೊನೆಗೊಂಡಿತು. ಕುಟುಂಬ ಎಂಬ ವ್ಯವಸ್ಥೆಯು ಈ ಸಮಯದಲ್ಲಿ ರೂಪುಗೊಳ್ಳಲಾರಂಭಿಸಿತು.

## 2.4 ತಾಮ್ರಶಿಲಾಯುಗ

ಮಾನವನಿಗೆ ತಾಮ್ರ ಎಂಬ ಲೋಹದ ಶೋಧವಾಯಿತು. ತಾಮ್ರದ ಬಳಕೆ ಆರಂಭವಾಯಿತು. ಆದರೆ ಈ ಕಾಲದಲ್ಲಿ ಕಲ್ಲಿನ ಆಯುಧಗಳನ್ನೂ ಬಳಸಲಾಗುತ್ತಿತ್ತು. ಆದ್ದರಿಂದ ಈ ಕಾಲಖಂಡವನ್ನು ತಾಮ್ರಶಿಲಾಯುಗ ಎಂದು ಕರೆಯಲಾಗುತ್ತದೆ. ತಾಮ್ರಶಿಲಾಯುಗದಲ್ಲಿ ಚಕ್ರದ ಶೋಧವಾಯಿತು. ಚಕ್ರದ ಬಳಕೆಯಿಂದ ಸಾರಿಗೆಯು ವೇಗವಾಗಿ ಮತ್ತು ಸುಲಭವಾಯಿತು. ಈ ಕಾಲದಲ್ಲಿ ಹೆಚ್ಚಿನ ಪ್ರಮಾಣದ ಭೂಮಿಯನ್ನು ಸಾಗುವಳಿಗೆ ತರಲಾಯಿತು. ಸರಕುಗಳ ಸಾಗಾಣಿಕೆಯೂ ಆರಂಭವಾಯಿತು. ವ್ಯಾಪಾರವು ವೃದ್ಧಿಸಿತು. ತಾಮ್ರಶಿಲಾಯುಗದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಬೆಳೆಯಿತು. ಅದೇ ರೀತಿ ಕೌಶಲ್ಯ ಆಧಾರಿತ ಮರಗೆಲಸ, ಲೋಹದ ಕೆಲಸಗಳಂತಹ ವ್ಯವಹಾರಗಳು ಪ್ರಾರಂಭವಾದವು. ಇದರಿಂದ ವ್ಯಾಪಾರ ಕೇಂದ್ರಗಳು ನಿರ್ಮಾಣವಾಗಿ ಅವುಗಳ ವಿಸ್ತರಣೆಯಾಗಿ ನಗರಗಳು ಅಸ್ತಿತ್ವಕ್ಕೆ ಬಂದವು.

ತಾಮ್ರಶಿಲಾಯುಗದ ಮಾನವ ಗೋದಿ, ಜೋಳ, ಅಕ್ಕಿ, ದ್ವಿದಳ ಧಾನ್ಯಗಳು, ಹತ್ತಿ ಇವುಗಳನ್ನು ಬೆಳೆಯುತ್ತಿದ್ದನು. ಅವನು ಬೇಟೆ ಮತ್ತು ಮೀನುಗಾರಿಕೆಯನ್ನು ಸ್ವಲ್ಪ ಮಟ್ಟಿಗೆ ಮಾಡುತ್ತಿದ್ದನು, ಆದರೆ ಇವು ಅವನ ಜೀವನದ ಪ್ರಮುಖ ಸಾಧನಗಳಾಗಿರಲಿಲ್ಲ. ಕೃಷಿಗೆ ಪೂರಕವಾಗಿ ಹಸು, ಎತ್ತು, ಕೋಳಿಗಳಂತಹ ಸಾಕುಪ್ರಾಣಿಗಳ ಸಾಕಣೆ ಕೂಡ ಅವನ ಜೀವನದ ಮುಖ್ಯ ಭಾಗವಾಗಿತ್ತು.

ಈ ಕಾಲದಲ್ಲಿ ಮೃತ ವ್ಯಕ್ತಿಗಳನ್ನು ಮನೆಯೊಳಗೆ ಅಥವಾ ಮನೆಯ ಅಂಗಳದಲ್ಲಿ ಹೂಳಲಾಗುತ್ತಿತ್ತು. ದಫನ್ ಮಾಡುವಾಗ (ಹೂಳುವಾಗ) ಮೃತರ ಪಕ್ಕದಲ್ಲಿ ಅವರು ಬಳಸುತ್ತಿದ್ದ ವಸ್ತುಗಳು ಮತ್ತು ಮಡಿಕೆಗಳನ್ನು ಇಡಲಾಗುತ್ತಿತ್ತು.

## 2.5 ಮಹಾರಾಷ್ಟ್ರದಲ್ಲಿನ ಉತ್ಖನನ ಸ್ಥಳಗಳು

ಮಹಾರಾಷ್ಟ್ರದಲ್ಲಿ ತಾಮ್ರಶಿಲಾ ಸಂಸ್ಕೃತಿಯ ತಾಣಗಳು ತಾಪಿ, ಗೋದಾವರಿ, ಕೃಷ್ಣಾ, ಭೀಮಾ, ಪ್ರವರ ಮುಂತಾದ ನದಿಗಳ ದಂಡೆಗಳಲ್ಲಿ ಕಂಡುಬಂದಿವೆ. ಇಲ್ಲಿ ಕಲ್ಲಿನ ಆಯುಧಗಳು, ಮಣ್ಣಿನ ಮಡಿಕೆಗಳು, ತಾಮ್ರದ ವಸ್ತುಗಳು, ಧಾನ್ಯಗಳ ಸಂಗ್ರಹಣೆಗಾಗಿ ಕೈಯಿಂದ ಮಾಡಿದ ಮಣ್ಣಿನ ದೊಡ್ಡ ಜಾಡಿಗಳು (ರಾಂಜಣಗಳು) ಪುರಾವೆಯಾಗಿ ಸಿಕ್ಕಿವೆ.

| ಮಹತ್ವದ ಉತ್ಖನನ ಸ್ಥಳಗಳು | ಉತ್ಖನನದಲ್ಲಿಯ ಮುಖ್ಯ ಪುರಾವೆಗಳು |
|---|---|
| ದಾಯಮಾಬಾದ್ (ಜಿಲ್ಲೆ – ಅಹಲ್ಯಾನಗರ)<br>ಮಹಾರಾಷ್ಟ್ರದ ಅತ್ಯಂತ ಪ್ರಸಿದ್ಧ ಮತ್ತು ಸಂಶೋಧನಾ ದೃಷ್ಟಿಯಿಂದ ಮಹತ್ವದ ಸ್ಥಳ. ಇದನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಬಿ.ಪಿ. ಬೋಪರ್ಡಿಕರ್ ಅವರು ಪತ್ತೆಹಚ್ಚಿದರು. | ಕಂಚಿನ ಲೋಹದ ನಾಲ್ಕು ವಸ್ತುಗಳು ದೊರೆತಿವೆ: ರಥ ಎಳೆಯುತ್ತಿರುವ ಎತ್ತು, ಎಮ್ಮೆ, ಗೆಂಡಾಮೃಗ ಮತ್ತು ಆನೆ. ಇವುಗಳನ್ನು ಈಗ 'ದಾಯಮಾಬಾದ್ ಬ್ರಾಂಜಸ್' ಎಂದು ಕರೆಯಲಾಗುತ್ತದೆ. |
| ಇನಾಮಗಾಂವ್ (ಜಿಲ್ಲೆ- ಪುಣೆ)<br>ಇದು ಅಭಿವೃದ್ಧಿ ಹೊಂದಿದ ತಾಮ್ರಶಿಲಾಯುಗದ ಹಳ್ಳಿಯ ವಸಾಹತಿಗೆ ಉತ್ತಮ ಉದಾಹರಣೆ. ಇಲ್ಲಿನ ಉತ್ಖನನವನ್ನು ಡಾ. ಎಚ್.ಡಿ. ಸಾಂಕಲಿಯಾ, ಡಾ. ಝಡ್.ಡಿ. ಅನ್ಸಾರಿ ಮತ್ತು ಡಾ. ಎಂ.ಕೆ. ಢವಳೀಕರ್ ಅವರು ನಡೆಸಿದರು. | ಗೋದಿ, ಬಾರ್ಲಿ, ಅಕ್ಕಿ, ಬೇಳೆಕಾಳುಗಳು, ಜೋಳ ಮತ್ತು ಎಳ್ಳು ಬೆಳೆಯುತ್ತಿದ್ದ ಪುರಾವೆಗಳು ಸಿಕ್ಕಿವೆ.<br>ಸಾಕಿದ ಪ್ರಾಣಿಗಳಾದ ಎತ್ತು, ಆಡು, ಕುರಿಗಳ ಮೂಳೆಗಳು ಮತ್ತು ಕಾಡು ಪ್ರಾಣಿಗಳಾದ ಜಿಂಕೆ, ನೀಲಗಾಯ್ ಹಂದಿಗಳ ಮೂಳೆಗಳು ದೊರೆತಿವೆ.<br>ಚಕ್ರದ ಮೇಲೆ ತಯಾರಿಸಿದ ಕೆಂಪು ಮತ್ತು ಕಪ್ಪು ಬಣ್ಣದ, ಜ್ಯಾಮಿತೀಯ ವಿನ್ಯಾಸವಿರುವ ಮಣ್ಣಿನ ಪಾತ್ರೆಗಳು ಇಲ್ಲಿ ಪತ್ತೆಯಾಗಿವೆ.<br>ಒಂದು ವಿಶೇಷ ಸಂಗತಿಯೆಂದರೆ, ಎರಡು ಮಡಕೆಗಳ ಬಾಯಿಗಳನ್ನು ಒಂದಕ್ಕೊಂದು ಜೋಡಿಸಿ ಅದರಲ್ಲಿ ಸಣ್ಣ ಮಕ್ಕಳನ್ನು ದಫನ ಮಾಡಿರುವುದು ಕಂಡುಬಂದಿದೆ. |

| | |
|---|---|
| ಜೋರ್ವೆ (ಜಿಲ್ಲೆ - ಅಹಲ್ಯಾನಗರ)<br>ಜೋರ್ವೆ ಸಂಸ್ಕೃತಿಯು ಮಹಾರಾಷ್ಟ್ರದ ಅತ್ಯಂತ ಹಳೆಯ ಮತ್ತು ಪ್ರಸಿದ್ಧ ತಾಮ್ರಶಿಲಾ ಸಂಸ್ಕೃತಿಯಾಗಿದೆ. ಇಲ್ಲಿ ಮೊಟ್ಟಮೊದಲು ಈ ಸಂಸ್ಕೃತಿಯ ಪುರಾವೆಗಳು ಸಿಕ್ಕವು. ಉತ್ಖನನವನ್ನು ಡಾ. ಎಚ್.ಡಿ. ಸಾಂಕಲಿಯಾ ಮತ್ತು ಡಾ. ಶಾಂತಾರಾಮ್ ಭಾಲಚಂದ್ರ ದೇವ್ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು | ಕೆಂಪು ಮತ್ತು ಕಪ್ಪು ಬಣ್ಣದ ಮಣ್ಣಿನ ಪಾತ್ರೆಗಳು, ತಾಮ್ರದ ಬಳೆಗಳು ಮತ್ತು ಮಣಿಗಳು ದೊರೆತಿವೆ.<br>ಮನೆಗಳು ವೃತ್ತಾಕಾರ ಅಥವಾ ಆಯತಾಕಾರವಾಗಿದ್ದು, ಧಾನ್ಯ ಸಂಗ್ರಹಿಸಲು ಮಣ್ಣಿನ ಕೋಣೆಗಳು ಮತ್ತು ಜೋಳ ಬೆಳೆಯುತ್ತಿದ್ದ ಪುರಾವೆಗಳು ಇಲ್ಲಿ ಸಿಕ್ಕಿವೆ. |
| ಸಾವಳದಾ (ಜಿಲ್ಲೆ- ನಂದುರಬಾರ)<br>ಸಾವಳದಾ ಸಂಸ್ಕೃತಿಯ ಮಹಾರಾಷ್ಟ್ರದಲ್ಲಿನ ಆರಂಭಿಕ ರೈತರ ಅತ್ಯಂತ ಹಳೆಯ ಸಂಸ್ಕೃತಿಯಲ್ಲಿ ಒಂದಾಗಿದೆ. ಸಾವಳದಾ ಸ್ಥಳದ ಉತ್ಖನನವನ್ನು ಪುರಾತತ್ವಶಾಸ್ತ್ರಜ್ಞರಾದ ಡಾ. ಹ.ಧಿ. ಸಾಂಕಲಿಯಾ ಅವರು ಮಾಡಿದ್ದಾರೆ. | ಕೆಂಪು ಮಣ್ಣಿನ ಪಾತ್ರೆಗಳು, ಅದರ ಮೇಲೆ ಕಪ್ಪು ಬಣ್ಣದ ಕರಕುಶಲದಿಂದ ಚಿತ್ರ ಬಿಡಿಸಿದ್ದು ಕಂಡುಬರುತ್ತದೆ. |
| ನೆವಾಸಾ (ಜಿಲ್ಲೆ - ಅಹಲ್ಯಾನಗರ)<br>ನೆವಾಸಾ ಮಹಾರಾಷ್ಟ್ರದ ಒಂದು ಪ್ರಮುಖ ಉತ್ಖನನ ತಾಣವಾಗಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಮಾಜಿ ಮಹಾನಿರ್ದೇಶಕ ಡಾ. ಎಂ. ಎನ್. ದೇಶಪಾಂಡೆ ಅವರು ಈ ತಾಣವನ್ನು ಪತ್ತೆಹಚ್ಚಿದ್ದರು. | ಇಲ್ಲಿ ಮಣ್ಣಿನ ಪಾತ್ರೆಗಳು, ಕಲ್ಲಿನ ಕೊಡಲಿಗಳು, ತಾಮ್ರದ ಆಭರಣಗಳ ಅವಶೇಷಗಳು ಮತ್ತು ಹಸು, ಮೇಕೆ, ಕುರಿ, ಎತ್ತು ಮುಂತಾದ ಪ್ರಾಣಿಗಳ ಅವಶೇಷಗಳು ಕಂಡುಬಂದಿವೆ. |



**ಹುಡುಕಿ ನೋಡೋಣ.**

ಮಹಾರಾಷ್ಟ್ರದಲ್ಲಿ ಮೇಲಿನ ತಕ್ತೆಯಲ್ಲಿರುವ ಉತ್ಖನನ ಸ್ಥಳಗಳು ಯಾವ ನದಿಯ ದಂಡೆಯ ಮೇಲಿವೆ ಎಂಬುದನ್ನು ಅಂತರ್ಜಾಲದ ಸಹಾಯದಿಂದ ಹುಡುಕಿರಿ.



## ಸ್ವಾಧ್ಯಾಯ

**ಪ್ರ.1 ಅ) ಹೆಸರುಗಳನ್ನು ಬರೆಯಿರಿ.**

1. ಭಾರತದಲ್ಲಿ ಕಪ್ಪು ಮಣ್ಣನ್ನು ಹೊಂದಿರುವ ಪ್ರಸ್ಥಭೂಮಿ ............
2. ಭಾರತದಲ್ಲಿನ ಕೃಷಿಗೆ ಅತ್ಯಂತ ಅನುಕೂಲಕರವಾದ ಪ್ರದೇಶ ..............
3. ಲಿಪಿಯ ಉಗಮ ಅಥವಾ ವಿಕಾಸವಾಗದಕಾಲ.........
4. ದಾಯಮಾಬಾದ ಈ ಉತ್ಖನನ ಸ್ಥಳವನ್ನು ಸಂಶೋಧನೆ ಮಾಡಿದ ಭಾರತೀಯ ಪ್ರರಾತತ್ವ ಸರ್ವೇಕ್ಷಕ ..........

**ಬ) ಸರಿಯಾದ ಜೋಡಿಗಳನ್ನು ಹೊಂದಿಸಿ.**

| **'ಅ' ಗುಂಪು** | **'ಬ' ಗುಂಪು** |
|---|---|
| 1. ಪುರಾತನ ಶಿಲಾಯುಗ | ಅ) ದೊಡ್ಡ ಚೂಪಾದ ಆಯುಧ |
| 2. ಮಧ್ಯ ಶಿಲಾಯುಗ | ಬ) ಚಕ್ರದ ಶೋಧ |
| 3. ನವ ಶಿಲಾಯುಗ | ಕ) ಕೃಷಿ ತಂತ್ರಜ್ಞಾನದಲ್ಲಿ ಪ್ರಗತಿ |
| 4. ತಾಮ್ರ ಶಿಲಾಯುಗ | ಡ) ಅಗ್ನಿಯ ಶೋಧ |

**ಪ್ರಶ್ನೆ.2 ಅ) ಕೆಳಗಿನ ಕೋಷ್ಟಕ ಪೂರ್ಣ ಮಾಡಿರಿ.**

| ಕ್ರ. | ವೈಶಿಷ್ಟ್ಯ | ಮಧ್ಯಶಿಲಾಯುಗ | ನವ ಶಿಲಾಯುಗ |
| --- | --- | --- | --- |
| 1. | ನಿವಾಸ | ಗುಹೆಗಳು | ----------- |
| 2. | ಆಹಾರ | ----------- | ಕೃಷಿ,ಪಶುಪಾಲನೆ |
| 3. | ಸಾಧನಗಳು | ಸೂಕ್ಷ್ಮ ಶಿಲೆಗಳು | ----------- |
| 4. | ಕಲೆ | ----------- | ಮಣ್ಣಿನ ಬಣ್ಣದ ಮಡಿಕೆ |
| 5. | ಜೀವನಶೈಲಿ | ಅಲೆಮಾರಿ ಜೀವನ | ----------- |

**ಬ) ಕೆಳಗಿನ ಹೇಳಿಕೆಗಳು ಸರಿ ಅಥವಾ ತಪ್ಪು ಎಂದು ಹೇಳಿ ತಪಾಗಿದ್ದನ್ನು ತಿದ್ದಿ ಬರೆಯಿರಿ.**

1. ಜೋರ್ವೆ ಅಲ್ಲಿ ತಾಮ್ರದ ನಾಲ್ಕು ವಸ್ತುಗಳು ಸಿಕ್ಕಿವೆ.

[ ]

----------------------------------------

2. ನೆವಾಸಾ ಎಂಬಲ್ಲಿ ಜೋರ್ವೆ ಸಂಸ್ಕೃತಿಯ ಮೊದಲ ಪುರಾವಗಳ ದೊರೆತವೆ.

[ ]

----------------------------------------

3. ಮಹಾರಾಷ್ಟ್ರದಲ್ಲಿನ ಆರಂಭಿಕ ಒಂದು ಹಳೆಯ ತಾಮ್ರಶಿಲಾಯುಗದ ಸಂಸ್ಕೃತಿ ಇನಾಮಗಾಂವ ಎಂಬಲ್ಲಿ ಇದೆ.

[ ]

----------------------------------------

**ಪ್ರ. 3 ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

2. ನವಶಿಲಾಯುಗದಲ್ಲಿ ಮಾನವನ ಜೀವನಶೈಲಿ ಹೇಗೆ ಬದಲಾಯಿತು?
3. ತಾಮ್ರಶಿಲಾಯುಗದ ಪ್ರಮುಖ ಲಕ್ಷಣಗಳು ಯಾವುವು?

**ಬ) ಕೆಳಗಿನ ಯುಗಗಳ ತಲಾ ಎರಡು ಲಕ್ಷಣಗಳನ್ನು ಬರೆಯಿರಿ.**

1. ಪುರಾತನ ಶಿಲಾಯುಗ
2. ತಾಮ್ರಶಿಲಾಯುಗ

**ಪ್ರ. 4 ಅ) ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಒಂದು ವೇಳೆ ನವಶಿಲಾಯುಗದ ಮಾನವನು ಕೃಷಿ ತಂತ್ರಜ್ಞಾನವನ್ನು ಕಂಡುಹಿಡಿಯದಿದ್ದರೆ, ಇಂದಿನ ಮಾನವ ಜೀವನ ಹೇಗಿರುತ್ತಿತ್ತು? ಕಾರಣಗಳೊಂದಿಗೆ ಉತ್ತರಿಸಿ.
2. ನವಶಿಲಾಯುಗದಲ್ಲಿ 'ಮಣ್ಣಿನ ಪಾತ್ರೆ' ಮಾಡುವ ಕಲೆ ಅಭಿವೃದ್ಧಿಗೊಂಡಿದ್ದರಿಂದ ಮಾನವನ ದೈನಂದಿನ ಜೀವನ ಹೇಗೆ ಬದಲಾಯಿತು?

**ಪ್ರ. 5 ನೀವು ಹೊಸ ಮನೆಯನ್ನು ಖರೀದಿಸಬೇಕಿದೆ. ಅದಕ್ಕಾಗಿ ನೀವು ಯಾವ ಅಗತ್ಯ ಅಂಶಗಳನ್ನು ಪರಿಗಣಿಸಿ ಹೊಸ ಮನೆಯನ್ನು ಖರೀದಿಸುತ್ತೀರಿ?**

ಉದಾಹರಣೆ: ನೀರು.

**ಕೃತಿ-**

- ಕರಕುಶಲ ಕಾರ್ಮಿಕರು ಚಕ್ರದ ಸಹಾಯದಿಂದ ಪಾತ್ರೆಗಳನ್ನು ತಯಾರಿಸುವಾಗ ಯಾವ ಯಾವ ಕೃತಿಗಳು ಮಾಡುತ್ತಾರೆ, ಇದನ್ನು ತಿಳಿದುಕೊಳ್ಳಲು, ಅವರನ್ನು ಶಾಲೆಗೆ ಆಹ್ವಾನಿಸಿ ಸಂದರ್ಶನ ಮಾಡಿ. ನೀವು ಸ್ವತಃ ಕೆಲವು ವಸ್ತುಗಳನ್ನು ತಯಾರಿಸಿ ನೋಡಿ.
- ವಿಶ್ವದ ಭೂಪಟದಲ್ಲಿ ಈ ಕೆಳಗಿನ ಸಂಸ್ಕೃತಿಗಳ ಸ್ಥಳಗಳನ್ನು ಗುರುತಿಸಿ:.

  1) ಭಾರತದಲ್ಲಿನ ಪರ್ವತ ಶ್ರೇಣಿ

  2) ಭಾರತದ ನದಿಗಳು

  3) ಭಾರತಕ್ಕೆ ದೊರೆತಿರುವ ಸಮುದ್ರತೀರಗಳು

**ಉಪಕ್ರಮ**

1. ಮಹಾರಾಷ್ಟ್ರದ ಉತ್ಖನನ ಸ್ಥಳಗಳನ್ನು ಮಹಾರಾಷ್ಟ್ರದ ನಕ್ಷೆಯಲ್ಲಿ ತೋರಿಸಿ.
2. 'ನಾನೇನಾದರೂ ಆದಿಮಾನವನಾಗಿದ್ದರೆ'... ಎಲ್ಲಿ ವಾಸಿಸುತ್ತಿದ್ದೆ ? ಏನು ತಿನ್ನುತ್ತಿದ್ದೆ ? ಇದರ ಮೇಲೆ ಆಧಾರಿತವಾದ ನಾಟಕ ಅಥವಾ ಪಾತ್ರಾಭಿನಯವನ್ನು (ರೋಲ್ ಪ್ಲೇ) ಪ್ರಸ್ತುತಪಡಿಸಿ.

***

# 3 ಹರಪ್ಪಾ ಸಂಸ್ಕೃತಿ



3.1 ಕಾಲಖಂಡ

3.2 ಸ್ಥಳ ಮತ್ತು ವಿಸ್ತಾರ

3.3 ಜನಜೀವನ

3.4 ಹರಪ್ಪಾ ಸಂಸ್ಕೃತಿಯ ವಿನಾಶದ ಕಾರಣಗಳು

ಸುಮಾರು 4500 ವರ್ಷಗಳ ಹಿಂದೆ ಭಾರತೀಯ ಉಪಖಂಡದಲ್ಲಿ ಒಂದು ನಾಗರಿಕ ಸಂಸ್ಕೃತಿಯು ವಿಕಸನಗೊಂಡಿತು. ಇದನ್ನು ನಾವು 'ಹರಪ್ಪಾ ಸಂಸ್ಕೃತಿ' ಎಂದು ಕರೆಯುತ್ತೇವೆ. ಆಶ್ಚರ್ಯದ ಸಂಗತಿಯೆಂದರೆ, ಈ ಸಂಸ್ಕೃತಿಯು ಇಂದಿನ ಆಧುನಿಕ ನಗರಗಳಷ್ಟೇ ಮುಂದುವರಿದಿತ್ತು. ಅವರ ನಗರಗಳಲ್ಲಿ ಸ್ವಚ್ಛ ಮತ್ತು ವಿಶಾಲವಾದ ರಸ್ತೆಗಳು, ವ್ಯವಸ್ಥಿತ ನಗರ ಯೋಜನೆ, ಸಮೃದ್ಧ ವ್ಯಾಪಾರ ಮತ್ತು ಲೇಖನ ಕಲೆಗಳ ಬಳಕೆಯಾಗುತ್ತಿತ್ತು. ನಮ್ಮ ಪೂರ್ವಜರ ಜೀವನಶೈಲಿಯು ಸಾವಿರಾರು ವರ್ಷಗಳ ಹಿಂದೆಯೇ ಎಷ್ಟು ಶಿಸ್ತುಬದ್ಧ ಮತ್ತು ಪ್ರಗತಿಪರವಾಗಿತ್ತು ಎಂಬುದು ಹರಪ್ಪಾ ಸಂಸ್ಕೃತಿಯಿಂದ ನಮಗೆ ತಿಳಿಯುತ್ತದೆ.



**ಹೇಳಿ ನೋಡೋಣ!**

ನಿಮಗೆ ನಾಗರಿಕ ಸಂಸ್ಕೃತಿಯ ಬಗ್ಗೆ ಮಾಹಿತಿ ಇದೆಯೇ? ಅದರ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

- ಹರಪ್ಪಾ ಕಾಲದಲ್ಲಿ ನಗರಗಳ ರಚನೆ ಹೇಗಿತ್ತು?
- ಜನರ ಜೀವನಶೈಲಿ ಹೇಗಿತ್ತು?
- ವ್ಯಾಪಾರ ವ್ಯವಸ್ಥೆ ಮತ್ತು ಕೃಷಿ ತಂತ್ರಜ್ಞಾನ ಹೇಗಿತ್ತು?
- ಈ ನಗರಗಳ ವಿನಾಶ ಹೇಗೆ ಮತ್ತು ಏಕೆ ಆಯಿತು?

ಬನ್ನಿ, ಇತಿಹಾಸದ ಕಿಟಕಿಯ ಮೂಲಕ ನೇರವಾಗಿ ಹರಪ್ಪಾ ಸಂಸ್ಕೃತಿಯ ಕಾಲಕ್ಕೆ ಇಣುಕಿ ನೋಡಿ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳೋಣ.

'ಸಂಸ್ಕೃತಿ ಎಂದರೆ ನೈಸರ್ಗಿಕ ಸಂಪನ್ಮೂಲಗಳ ಆಧಾರದ ಮೇಲೆ ವಿಕಸನಗೊಂಡ ಜೀವನ ವಿಧಾನ'. ಈ ವಾಕ್ಯದ ಬಗ್ಗೆ ನಿಮ್ಮ ತರಗತಿಯಲ್ಲಿ ಚರ್ಚಿಸಿ.

ಸಂಸ್ಕೃತಿಯು ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯಾಗಿದೆ. ನದಿಯ ದಡದಲ್ಲಿ ಸಂಸ್ಕೃತಿಗಳು ಹೇಗೆ ಉದಯಿಸಿದವು ಎಂಬುದನ್ನು ನಾವು ಹಿಂದಿನ ಪಾಠದಲ್ಲಿ ಕಲಿತಿದ್ದೇವೆ. ಅವು ಕ್ರಮೇಣ ವಿಕಸನಗೊಂಡು ನಾಗರಿಕ ಸಂಸ್ಕೃತಿಗಳಾಗಿ ರೂಪಾಂತರಗೊಂಡವು. ಅವುಗಳಲ್ಲಿ ಅತ್ಯಂತ ಪ್ರಾಚೀನ ಮತ್ತು ಪ್ರಗತಿಪರ ಸಂಸ್ಕೃತಿಯೆಂದರೆ ಹರಪ್ಪಾ ಸಂಸ್ಕೃತಿ. ಈ ಸಂಸ್ಕೃತಿಯ ಅನೇಕ ಸ್ಥಳಗಳು ಸಿಂಧೂ ನದಿಯ ಕಣಿವೆಯಲ್ಲಿ ಕಂಡುಬಂದಿವೆ. ಆದ್ದರಿಂದ ಇದನ್ನು 'ಸಿಂಧೂ ಸಂಸ್ಕೃತಿ' ಎಂದೂ ಕರೆಯುತ್ತಾರೆ. ಒಂದು ಸಂಸ್ಕೃತಿಯ ಪುರಾವೆಗಳನ್ನು ಮೊದಲು ಯಾವ ನಗರದಲ್ಲಿ ಉತ್ಖನನ ಮಾಡಿ ಪತ್ತೆಹಚ್ಚಲಾಗುತ್ತದೆಯೋ, ಅದೇ ಹೆಸರನ್ನು ಆ ಸಂಸ್ಕೃತಿಗೆ ಇಡಲಾಗುತ್ತದೆ. ಪಂಜಾಬಿನ ರಾವಿ ನದಿಯ ದಡದಲ್ಲಿರುವ ಹರಪ್ಪಾದಲ್ಲಿ ಕ್ರಿ.ಶ. 1921 ರಲ್ಲಿ ಮೊದಲು ಉತ್ಖನನ ಪ್ರಾರಂಭವಾಯಿತು, ಆದ್ದರಿಂದ ಈ ಸಂಸ್ಕೃತಿಗೆ 'ಹರಪ್ಪಾ ಸಂಸ್ಕೃತಿ' ಎಂಬ ಹೆಸರು ಬಂದಿತು.

**ನದಿತೀರದ ಸಂಸ್ಕೃತಿ**

ನವಶಿಲಾಯುಗದಲ್ಲಿ ಮಾನವನ ಜೀವನ ಕೃಷಿಯ ಮೇಲೆ ಹೆಚ್ಚು ಅವಲಂಬಿತವಾಗಿತ್ತು. ಆದರಿಂದ ಸ್ಥಿರ ಜೀವನದ ಆರಂಭವಾಯಿತು. ಮನುಷ್ಯನು ಹಳ್ಳಿ, ವಸಾಹತುಗಳನ್ನು ನಿರ್ಮಿಸಿದನು.

**ಮನುಷ್ಯನು ಹಳ್ಳಿ-ವಸಾಹತುಗಳನ್ನು ಎಲ್ಲಿ ಸ್ಥಾಪಿಸಿರಬಹುದು?**

ಎಲ್ಲಿ ಹೇರಳವಾಗಿ ನೀರು, ಫಲವತ್ತಾದ ಭೂಮಿ, ಸಾರಿಗೆ ಸಂಪರ್ಕದ ವ್ಯವಸ್ಥೆ ಇರುವುದೋ ಅಂತಹ ಸ್ಥಳದಲ್ಲಿ, ಅಂದರೆ ನದಿಗಳ ತೀರದಲ್ಲಿ ಹಳ್ಳಿ-ವಸಾಹತುಗಳ ಸ್ಥಾಪನೆ ಮಾಡಿದರು. ಪ್ರಪಂಚದ ಪ್ರಾಚೀನ ಸಂಸ್ಕೃತಿಗಳು ಟಾಯಗ್ರಿಸ್-ಯುಫ್ರೆಟಿಸ್ (ಮೆಸೊಪೊಟೆಮಿಯಾ), ನಾಯಿಲ್ (ಈಜಿಪ್ತ್), ಹೊಯಾಂಗ್ ಹೊ (ಚೀನಾ), ಸಿಂಧೂ (ಹರಪ್ಪ) ಈ ನದಿಗಳ ತೀರದಲ್ಲಿ ವಿಕಾಸಗೊಂಡವು.

## 3.1 ಕಾಲಖಂಡ

ನಾವು ಸಾವಿರಾರು ವರ್ಷಗಳ ಹಿಂದಿನ ಕಾಲಕ್ಕೆ ಪ್ರವೇಶಿಸುತ್ತಿದ್ದೇವೆ ಎಂದು ಕಲ್ಪಿಸಿಕೊಳ್ಳಿ. ಹರಪ್ಪಾ ಸಂಸ್ಕೃತಿಯ ಇತಿಹಾಸವು ಕೇವಲ ಒಂದು ಕಾಲಖಂಡವಲ್ಲ, ಅದು ಮಾನವ ಸಂಸ್ಕೃತಿಯ ಇತಿಹಾಸದ ಒಂದು ಪ್ರಯಾಣವಾಗಿದೆ. ಈ ಕಾಲಖಂಡದಲ್ಲಿ ವಿವಿಧ ಬೆಳವಣಿಗೆಗಳು ಸಂಭವಿಸಿದವು, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳಾದವು. ಈ ಸಂಸ್ಕೃತಿಯು ಹಂತ ಹಂತವಾಗಿ ಸಮೃದ್ಧವಾಗುತ್ತಾ ಹೋಯಿತು, ಆದರೆ ನಂತರ ವಿವಿಧ ವಿಪತ್ತುಗಳನ್ನು ಎದುರಿಸಬೇಕಾದ ಕಾರಣ ಈ ಸಂಸ್ಕೃತಿಯು ನಾಶವಾಯಿತು. ಅಂದರೆ, ಈ ಸಂಸ್ಕೃತಿಯ ಕಾಲಾವಧಿಯಲ್ಲಿ ವಿವಿಧ ಘಟನೆಗಳು ನಡೆದವು, ಇದರಿಂದಾಗಿ ಹರಪ್ಪಾ ಸಂಸ್ಕೃತಿಯ ವಿಕಾಸ, ಉತ್ಕರ್ಷ ಮತ್ತು ಅಂತಿಮವಾಗಿ ವಿನಾಶವಾಯಿತು.

ನಾವು ಹರಪ್ಪಾ ಸಂಸ್ಕೃತಿಯ ಮೂರು ಮಹತ್ವಪೂರ್ಣ ಹಂತಗಳ ಶೋಧ ಮಾಡೋಣ ಬನ್ನಿ.

ಹರಪ್ಪ ನಾಗರಿಕತೆಯ ಕಾಲವನ್ನು ಈ ಕೆಳಗಿನಂತೆ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ:




**ಹರಪ್ಪಾ ಸಂಸ್ಕೃತಿಯ ಊರು ವಸಾಹತು -** ಪ್ರಾರಂಭದ ಕಾಲ ಇದು ಪೂರ್ವ ಹರಪ್ಪಾ ಸಂಸ್ಕೃತಿಯ ಕಾಲ (ಸುಮಾರು ಕ್ರಿ.ಪೂ. 3300 ರಿಂದ 2600) ಎಂದು ಗುರುತಿಸಲಾಗುತ್ತದೆ. ಹರಪ್ಪಾ ಸಂಸ್ಕೃತಿಯ ಆರಂಭಿಕ ಹಂತ. ಈ ಕಾಲದಲ್ಲಿ ಹಳ್ಳಿಗಳು ಕ್ರಮೇಣ ಪಟ್ಟಣಗಳಾಗಿ ಅಭಿವೃದ್ಧಿ ಹೊಂದಲು ಪ್ರಾರಂಭಿಸಿದವು ಮತ್ತು ನಗರೀಕರಣದ ಪ್ರಕ್ರಿಯೆ ಆರಂಭವಾಯಿತು.

**ಪರಿಪಕ್ವ ಹರಪ್ಪಾ ಸಂಸ್ಕೃತಿಯ ಕಾಲ -** ಪರಿಪಕ್ವ ಹರಪ್ಪಾ ಸಂಸ್ಕೃತಿಯ ಕಾಲ (ಸುಮಾರು ಕ್ರಿ.ಪೂ. 2600 ರಿಂದ 1900) ಇದು ಹರಪ್ಪ ನಾಗರಿಕತೆಯ ಅತ್ಯಂತ ಸಮೃದ್ಧವಾದ ಕಾಲ. ಇದನ್ನು ಸಿಂಧೂ ನಾಗರಿಕತೆಯ 'ಸುವರ್ಣಯುಗ' ಎಂದು ಪರಿಗಣಿಸಲಾಗುತ್ತದೆ. ಈ ಅವಧಿಯಲ್ಲಿ ನಗರಗಳ ರಚನೆ, ಆಡಳಿತ, ವ್ಯಾಪಾರ, ಹಸ್ತಕಲೆ ಮತ್ತು ಶಿಲ್ಪಕಲೆಗಳು ಹೆಚ್ಚು ಅಭಿವೃದ್ಧಿ ಹೊಂದಿದವು. ಮೊಹೆಂಜೋದಾರೋ, ಹರಪ್ಪ, ಧೋಲಾವಿರಾ ಮತ್ತು ಲೋಥಲನಂತಹ ಪ್ರಮುಖ ನಾಗರಿಕ ಕೇಂದ್ರಗಳು ಈ ಸಮಯದಲ್ಲಿ ವಿಕಸನಗೊಂಡವು.

**ಹರಪ್ಪಾ ಸಂಸ್ಕೃತಿಯ ವಿನಾಶದ ಕಾಲ -** ನಂತರದ ಹರಪ್ಪ ನಾಗರಿಕತೆಯ ಕಾಲ (ಸುಮಾರು ಕ್ರಿ.ಪೂ. 1900 ರಿಂದ 1300) ಇದು ಹರಪ್ಪ ನಾಗರಿಕತೆಯ ಅವನತಿಯ ಹಂತ. ಈ ಕಾಲದಲ್ಲಿ ನಾಗರಿಕತೆಯು ಹಂತ ಹಂತವಾಗಿ ಕ್ಷೀಣಿಸಲು ಪ್ರಾರಂಭಿಸಿತು. ಪ್ರಮುಖ ಕೇಂದ್ರಗಳು ನಾಶವಾದವು. ಕೆಲವು ಸ್ಥಳಗಳಲ್ಲಿ ಸಂಸ್ಕೃತಿಯ ಅವಶೇಷಗಳು ಕಂಡುಬಂದವು ಅವುಗಳ ಆಧಾರದ ಮೇಲೆ ಈ ಸಂಸ್ಕೃತಿಯ ಬದಲಾವಣೆಯ ಸ್ವರೂಪದ ಬಗ್ಗೆ ಮಾಹಿತಿ ಸಿಗುತ್ತದೆ.



**ಹುಡುಕಿ ನೋಡೋಣ.**

ಪ್ರಾಚೀನ ಭಾರತದ ನಕ್ಷೆಯಲ್ಲಿ ಹರಪ್ಪ ನಾಗರಿಕತೆಯು ಎಲ್ಲಿ ಹರಡಿತ್ತು ಎಂಬುದನ್ನು ತೋರಿಸಿ. ಹರಪ್ಪ, ಮೊಹೆಂಜೋದಾರೋ, ಲೋಥಾಲ್, ಕಾಲಿಬಂಗನ್, ಧೋಲಾವಿರಾ ಮತ್ತು ರಾಖಿಗಡಿಯಂತಹ ನಗರಗಳು ಪ್ರಸ್ತುತ ಯಾವ ಭಾಗಗಳಲ್ಲಿವೆ? ಈ ಸ್ಥಳಗಳು ಸದ್ಯದ ಯಾವ ಭಾಗದಲ್ಲಿ ಇವೆ ಎಂಬುದನ್ನು ಬರೆಯಿರಿ.

## 3.2 ಸ್ಥಳ ಮತ್ತು ವ್ಯಾಪ್ತಿ

ಹರಪ್ಪ ಸಂಸ್ಕೃತಿಯ ಮುಖ್ಯ ವಸಾಹತುಗಳು ಸಿಂಧೂ ಮತ್ತು ಅದರ ಉಪನದಿಗಳ ದಡದಲ್ಲಿದ್ದವು. ಈ ನದಿ ದಡದ ಫಲವತ್ತಾದ ಮಣ್ಣಿನಿಂದ ಕೃಷಿಗೆ ಉತ್ತೇಜನ ಸಿಕ್ಕಿತು.




ನದಿ ತೀರದಲ್ಲಿ ಗ್ರಾಮ ವಸಾಹತುಗಳು ಸ್ಥಾಪನೆಯಾದವು. ಇವುಗಳಲ್ಲಿ ಹರಪ್ಪ, ಮೊಹೆಂಜೋದಾರೋ, ಕಾಲಿಬಂಗನ್, ಲೋಥಲ್, ಧೋಲಾವೀರಾ, ರಾಖಿಗಡಿ, ಬನಾವಲಿ ಮತ್ತು ಚನ್ಹುದಾರೋ ಪ್ರಮುಖ ಸ್ಥಳಗಳಾಗಿವೆ. ಈ ಸಂಸ್ಕೃತಿಯ ಭೌಗೋಳಿಕ ವ್ಯಾಪ್ತಿಯು ಸುಮಾರು 15 ಲಕ್ಷ ಚದರ ಕಿಲೋಮೀಟರಗಳಷ್ಟಿತ್ತು. ಹರಪ್ಪ ಸಂಸ್ಕೃತಿಯ ಉತ್ತರದ ಜಮ್ಮು ಕಾಶ್ಮೀರದ ಮಂಡಾಪಾಸಿನಿಂದ ಭಾರತದ ಪಶ್ಚಿಮ ಘಟ್ಟದಲ್ಲಿರುವ ಗುಜರಾತನಲ್ಲಿಯ ಧೋಲಾವೀರಾ ಮತ್ತು ಲೋಥಲ್, ಹಾಗೆಯೇ ಮಹಾರಾಷ್ಟ್ರದ ಅಹಿಲ್ಯಾನಗರದ ಸಮೀಪ ವಿರುವ ದೈಮಾಬಾದವರೆಗೆ ಹರಡಿತ್ತು. ಪಶ್ಚಿಮದ ಕಡೆಗೆ ಬಲೂಚಿಸ್ತಾನದವರೆಗೆ (ಈಗಿನ ಪಾಕಿಸ್ತಾನ) ಹರಪ್ಪಾ ಸಂಸ್ಕೃತಿ ತಲುಪಿತ್ತು. ಅಲ್ಲದೆ ಪೂರ್ವದ ಕಡೆಗೆ ಉತ್ತರ ಪ್ರದೇಶದ ಆಲಮಗಿರಪೂರದವರೆಗೆ ಹರಡಿತ್ತು. ದೂರದ ಪ್ರದೇಶಗಳೊಂದಿಗಿನ ವ್ಯಾಪಾರವು ಈ ಸಂಸ್ಕೃತಿಯ ವಿಸ್ತರಣೆಗೆ ಪ್ರಮುಖ ಕಾರಣವಾಗಿತ್ತು.

### 3.3 ಜನಜೀವನ

ಹರಪ್ಪ ನಾಗರಿಕತೆಯ ಸ್ಥಳಗಳ ಉತ್ಖನನದಲ್ಲಿ ದೊರೆತ ಪುರಾವೆಗಳಿಂದ ಅಲ್ಲಿನ ಜನರ ಜೀವನದ ಬಗ್ಗೆ ಮಾಹಿತಿ ತಿಳಿಯುತ್ತದೆ. ಅವರ ಜೀವನಶೈಲಿಯು ಶಿಸ್ತುಬದ್ಧವಾಗಿತ್ತು ಎಂದು ಕಂಡುಬರುತ್ತದೆ. ನಗರ ಯೋಜನೆ, ಸುಸಜ್ಜಿತ ರಸ್ತೆಗಳು, ಮನೆಗಳ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಮುದ್ರೆಗಳು, ಮಣ್ಣಿನ ಪಾತ್ರೆಗಳು ಮತ್ತು ವಿವಿಧ ರೀತಿಯ ಆಟಿಕೆಗಳು ಹರಪ್ಪ ಸಂಸ್ಕೃತಿಯ ವೈಶಿಷ್ಟ್ಯಗಳಾಗಿವೆ.

### ಜೀವನಶೈಲಿ ಮತ್ತು ಮನೆಗಳ ರಚನೆ:

ಹರಪ್ಪಾ ಸಂಸ್ಕೃತಿ ಜನರ ಮನೆಗಳು ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಲ್ಪಟ್ಟಿದ್ದವು.



**ನಿಮಗಿದು ಗೊತ್ತಿದೆಯೇ?**

ಹರಪ್ಪಾ ಸಂಸ್ಕೃತಿಯಲ್ಲಿಯ ಜನರು ತಮ್ಮ ಮನೆಗಳ ನಿರ್ಮಾಣಕ್ಕಾಗಿ ಯಾವ ಪದ್ಧತಿ ಉಪಯೋಗ ಮಾಡುತ್ತಿದ್ದರೋ ಆ ಪದ್ಧತಿಗೆ 'ಇಂಗ್ಲಿಷ್ ಬಾಂಡ್' ಎಂದು ಸಹ ಕರೆಯುತ್ತಿದ್ದರು. ಈ ಪದ್ಧತಿಯಲ್ಲಿ ಇಟ್ಟಿಗೆಗಳನ್ನು ಅಡ್ಡಲಾಗಿ ಮತ್ತು ಲಂಬವಾಗಿ ಜೋಡಿಸಲಾಗುತ್ತಿತ್ತು, ಇದರಿಂದ ಗೋಡೆಗಳು ಹೆಚ್ಚು ಬಲವಾಗಿ ಮತ್ತು ಬಾಳಿಕೆ ಬರುವಂತೆ ಇರುತ್ತಿದ್ದವು. ಇಟ್ಟಿಗೆಗಳ ಆಕಾರ ಸಾಮಾನ್ಯವಾಗಿ ಒಂದೇ ಪ್ರಮಾಣದಲ್ಲಿ ಇರುತ್ತಿದ್ದವು. ಅಂದರೆ 1:2:4 ಈ ಪ್ರಮಾಣದಲ್ಲಿದ್ದವು. ಹರಪ್ಪಾ ಸಂಸ್ಕೃತಿಯ ಜನರು ಈ ಪದ್ಧತಿ ಉಪಯೋಗ ಮಾಡಲು ಮುಖ್ಯ ಕಾರಣವೆಂದರೆ ಅವರಿಗೆ ತಮ್ಮ ಮನೆಗಳಿಗೆ ಮಹಾಪೂರ, ಭೂಕಂಪ ಮತ್ತು ಕಾಲಾಂತರದಿಂದ ಸಂಭವಿಸುವ ಸವೆತದಿಂದ ರಕ್ಷಣೆ ಪಡೆಯಲು ಅವರು ಈ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು ಎಂದು ತೋರುತ್ತದೆ.

ಮನೆಗಳ ಮಧ್ಯದಲ್ಲಿ ಅಂಗಳವಿದ್ದು, ಅದರ ಸುತ್ತಲೂ ಕೋಣೆಗಳು, ಪ್ರವೇಶ ದ್ವಾರದ ಬಳಿ ಸ್ನಾನಗೃಹ ಮತ್ತು ಶೌಚಾಲಯಗಳಿದ್ದವು. ನೀರು ಸರಬರಾಜು ಮತ್ತು ಕೊಳಚೆ ನೀರನ್ನು ವಿಲೇವಾರಿ ಮಾಡುವ ವ್ಯವಸ್ಥೆ ಅತ್ಯುತ್ತಮವಾಗಿತ್ತು. ಪ್ರತಿಯೊಂದು ಮನೆಯಿಂದ ನೀರು ಹೊರಹೋಗಲು ಮಣ್ಣಿನ ಪೈಪಗಳನ್ನು ಬಳಸಲಾಗುತ್ತಿತ್ತು. ಇನ್ನೊಂದು ವಿಶೇಷ ಸಂಗತಿ ಏನೆಂದರೆ ರಸ್ತೆಯ ಚರಂಡಿಗಳನ್ನು ಇಟ್ಟಿಗೆಗಳಿಂದ ಕಟ್ಟಲಾಗಿತ್ತು ಅಲ್ಲದೆ ಅವುಗಳನ್ನು ವ್ಯವಸ್ಥಿತವಾಗಿ ಮುಚ್ಚಲಾಗಿರುತಿತ್ತು. ಇದು ಸಾರ್ವಜನಿಕ ಆರೋಗ್ಯದ ಬಗ್ಗೆ ಅವರಿಗಿದ್ದ ಕಾಳಜಿಯನ್ನು ತೋರಿಸುತ್ತದೆ.

**ನಿಮ್ಮ ಅಭಿಪ್ರಾಯವೇನು?**

ಹರಪ್ಪಾ ಸಂಸ್ಕೃತಿಯಿಂದ 'ಸ್ವಚ್ಛ ಭಾರತ ಅಭಿಯಾನ'ದವರೆಗೆ ವಿಚಾರ ಮಾಡಿದರೆ, ಸ್ವಚ್ಛತೆಯು ಒಂದು ಮೂಲಭೂತ ಅವಶ್ಯಕತೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.



**ಹೇಳಿ ನೋಡೋಣ!**

ನಿಮ್ಮ ಗ್ರಾಮ ಅಥವಾ ನಗರದಲ್ಲಿ ಸ್ವಚ್ಛತೆಯನ್ನು ಹೇಗೆ ಕಾಪಾಡಲಾಗುತ್ತದೆ ಎಂಬ ಬಗ್ಗೆ ಐದು ವಾಕ್ಯಗಳಲ್ಲಿ ಮಾಹಿತಿ ಬರೆಯಿರಿ.

ಹರಪ್ಪಾಕಾಲದಲ್ಲಿನ ನಗರಗಳ ರಸ್ತೆಗಳ ಜಾಲವು ಒಂದಕ್ಕೊಂದು ಸಮಾನಾಂತರವಾಗಿದ್ದವು ಮತ್ತು ಪರಸ್ಪರ ಲಂಬಕೋನದಲ್ಲಿ ಛೇದಿಸುವಂತೆ ನಿರ್ಮಿಸಲಾಗಿತ್ತು. ಇದರಿಂದಾಗಿ ರೂಪುಗೊಂಡ ಚೌಕಾಕಾರದ ಖಾಲಿ ಜಾಗಗಳಲ್ಲಿ ಮನೆಗಳನ್ನು ಕಟ್ಟಲಾಗುತ್ತಿತ್ತು.

ನಗರಗಳ ಎರಡು ಅಥವಾ ಅದಕ್ಕಿಂತ ಹೆಚ್ಚು ಭಾಗಗಳಾಗಿ ವಿಂಗಡಿಸಲಾಗಿತ್ತು. ಅವುಗಳಲ್ಲಿ 'ಕೋಟ' ಎಂದು ಗುರುತಿಸಲ್ಪಡುವ ವಿಭಾಗದಲ್ಲಿ ನಗರದ ಆಡಳಿತಗಾರರು ವಾಸಿಸುತ್ತಿರಬಹುದು ಎಂದು ನಂಬಲಾಗಿದೆ. ಈ ಕೋಟ ಗಡ-ಕೋಟೆಗಳಲ್ಲಿಯ ಬಾಲೆಕಿಲ್ಲೆಯ ಹಾಗೆ ಎತ್ತರದ ಪ್ರದೇಶದಲ್ಲಿ ನಿರ್ಮಿತವಾಗಿರುತ್ತಿತ್ತು.



**ಮಾಡಿ ನೋಡಿರಿ.**

ಬಾಲೆಕಿಲ್ಲಾ ಎಂದರೆ ಕೋಟೆಯ ಅತ್ಯಂತ ಒಳಗಿನ ಮತ್ತು ಸುರಕ್ಷಿತ ಭಾಗ, ಇದನ್ನು ಕೋಟೆಯ ಹೃದಯ ಎಂದು ಪರಿಗಣಿಸಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಕೋಟೆಯ ಅತ್ಯಂತ ಎತ್ತರದ ಸ್ಥಳದಲ್ಲಿ ನಿರ್ಮಿಸಲಾಗಿರುತ್ತದೆ, ಇದರಿಂದಾಗಿ ಸುತ್ತಮುತ್ತಲಿನ ಪ್ರದೇಶದ ಮೇಲೆ ಕಣ್ಣಿಡುವುದು ಸುಲಭವಾಗುತ್ತದೆ ಮತ್ತು ಶತ್ರುಗಳ ದಾಳಿಯ ಸಮಯದಲ್ಲಿ ಇದು ಕೊನೆಯ ರಕ್ಷಣಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ಬಾಲೆಕಿಲ್ಲಾದಲ್ಲಿ ಅರಮನೆ, ದರ್ಬಾರ್, ಶಸ್ತ್ರಾಗಾರ, ಧಾನ್ಯದ ಉಗ್ರಾಣ ಮತ್ತು ದೇವಾಲಯಗಳಂತಹ ಪ್ರಮುಖ ಕಟ್ಟಡಗಳಿರುತ್ತಿದ್ದವು. ರಾಯಗಡ, ರಾಜಗಡದಂತಹ ಕೋಟೆಗಳಲ್ಲಿ ಬಾಲೆಕಿಲ್ಲಾ ಅತ್ಯಂತ ಪ್ರಮುಖ ಸ್ಥಾನವಾಗಿತ್ತು. ಅಂತಹ ಯಾವುದಾದರೂ ಒಂದು ಬಾಲೆಕಿಲ್ಲಾದ ಚಿತ್ರವನ್ನು ಬೋರ್ಡ್ ಮೇಲೆ ಅಥವಾ ನಿಮ್ಮ ನೋಟಬುಕನಲ್ಲಿ ಬಿಡಿಸಿ ನೋಡಿ.

ಮೊಹೆಂಜೋದಾರೋದ ಮಹಾಸ್ನಾನಗೃಹವು ಆ ಕಾಲದ ವಾಸ್ತುಶಿಲ್ಪದ ಒಂದು ವಿಶೇಷ ಮಾದರಿಯಾಗಿದೆ. ಈ ಮಹಾಸ್ನಾನಗೃಹ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲವು ಧಾರ್ಮಿಕ ವಿಧಿಗಳನ್ನು ನಡೆಸಲಾಗುತ್ತಿತ್ತು ಎಂದು



ಮೊಹೆಂಜೋದಾರೋದ ಮಹಾಸ್ನಾನಗೃಹ

ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಮಹಾಸ್ನಾನಗೃಹದಲ್ಲಿ ಒಂದು ದೊಡ್ಡ ಜಲಕುಂಡವಿದ್ದು, ಇದರ ಉದ್ದ ಸುಮಾರು 12 ಮೀಟರ್, ಅಗಲ 7 ಮೀಟರ್ ಮತ್ತು ಆಳ 2.5 ಮೀಟರ್ ಇದೆ. ಇದನ್ನು ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಲಾಗಿದ್ದು, ನೀರು ಸರಾಗವಾಗಿ ಹೊರಹೋಗಲು ಯೋಗ್ಯವಾದ ಚರಂಡಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಅದರಲ್ಲಿ ನೀರು ತುಂಬುವ ಸಲುವಾಗಿ ಮತ್ತು ನೀರು ಹೊರಗೆ ತೆಗೆಯುವ ಸಲುವಾಗಿ ವಿಶೇಷ ತಂತ್ರಜ್ಞಾನದ ಉಪಯೋಗ ಮಾಡಲಾಗಿತ್ತು. ಇದರ ಸುತ್ತಮುತ್ತಲು ಚಿಕ್ಕ ಚಿಕ್ಕ ಕೋಣೆಗಳು ಇದ್ದವು.

### ಆಹಾರ ಪದ್ಧತಿ

ಗೋಧಿ, ಬಾರ್ಲಿ (ಸಾತು), ಬಟಾಣಿ, ಎಳ್ಳು, ರಾಗಿ, ಮಸೂರ ಮತ್ತು ವಿವಿಧ ರೀತಿಯ ಬೇಳೆಕಾಳುಗಳು ಈ ಜನರ ಆಹಾರದ ಮುಖ್ಯ ಘಟಕಗಳಾಗಿದ್ದವು. ಹಾಲು, ಮಾಂಸ ಮತ್ತು ಮೀನುಗಳನ್ನು ಸಹ ಕೆಲವು ಸ್ಥಳಗಳಲ್ಲಿ ಸೇವಿಸಲಾಗುತ್ತಿತ್ತು ಎಂಬ ಕುರುಹುಗಳು ಸಿಕ್ಕಿವೆ. ಅನ್ನವನ್ನು ಬೇಯಿಸಲು ಅವರು ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದರು. ಕೆಲವು ಪಾತ್ರೆಗಳ ಮೇಲೆ ಸುಂದರವಾದ ಬಣ್ಣ ಮತ್ತು ವಿನ್ಯಾಸಗಳಿರುತ್ತಿದ್ದವು. ಈ ವಿನ್ಯಾಸಗಳು ಸಾಮಾನ್ಯವಾಗಿ ಕೆಂಪು ಬಣ್ಣದ ಪಾತ್ರೆಗಳ ಮೇಲೆ ಕಪ್ಪು ಬಣ್ಣದಿಂದ ಚಿತ್ರಿಸಲಾಗುತ್ತಿತ್ತು. ವಿನ್ಯಾಸಗಳಲ್ಲಿ ಮೀನಿನ ಚಿಪ್ಪುಗಳು, ಒಂದಕ್ಕೊಂದು ಹೆಣೆದುಕೊಂಡಿರುವ ವೃತ್ತಗಳು ಮತ್ತು ಅಶ್ವತ್ಥದಎಲೆಯಂತಹ ಚಿಹ್ನೆಗಳು ಸೇರಿವೆ.



ಪಾತ್ರೆಗಳು

**ಮಾಡಿ ನೋಡಿರಿ.**

ಗೋಧಿ, ಕಡಲೆ, ಅಕ್ಕಿ, ಬಾರ್ಲಿ, ಮಸೂರ, ಉದ್ದು, ಸಜ್ಜೆ ಇತ್ಯಾದಿಗಳಲ್ಲಿ ಹರಪ್ಪ ಕಾಲದಲ್ಲಿ ಯಾವ ಧಾನ್ಯಗಳಿದ್ದವು ಮತ್ತು ಯಾವುವು ಇರಲಿಲ್ಲ ಮತ್ತು ಇರಲಿಲ್ಲ ಎಂದರೆ ಯಾಕೆ ಇರಲಿಲ್ಲ? ಎಂಬುದನ್ನು ವರ್ಗದಲ್ಲಿ ಚರ್ಚೆ ಮಾಡಿರಿ.

### ವಸ್ತ್ರಗಳು ಮತ್ತು ಆಭರಣಗಳು

ಹರಪ್ಪಾ ಸಂಸ್ಕೃತಿಯ ಜನರ ವಸ್ತ್ರಗಳು ಮತ್ತು ಆಭರಣಗಳು ಅಂದಿನ ಕಾಲದ ತಂತ್ರಜ್ಞಾನ, ಸೌಂದರ್ಯ ಪ್ರಜ್ಞೆ ಮತ್ತು ಜೀವನಶೈಲಿಯ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಹರಪ್ಪಾ ಕಾಲದ ಜನರು ಹತ್ತಿ ಮತ್ತು ರೇಷ್ಮೆ ದಾರಗಳಿಂದ ಬಟ್ಟೆಗಳನ್ನು ತಯಾರಿಸುತ್ತಿದ್ದರು.



ಹರಪ್ಪಾ ಸಂಸ್ಕೃತಿಯಲ್ಲಿಯ ಆಭರಣಗಳು

ಪುರಾತತ್ವ ಶಾಸ್ತ್ರದ ಉತ್ಖನನದಲ್ಲಿ ಸಿಕ್ಕಿದ ಮುದ್ರೆಗಳು ಮತ್ತು ಮೂರ್ತಿಗಳಂತಹ ಪುರಾವೆಗಳ ಆಧಾರದ ಮೇಲೆ ಅವರ ಉಡುಪುಗಳ ಬಗ್ಗೆ ಅಂದಾಜು ಮಾಡಬಹುದು. ಸ್ತ್ರೀ ಮತ್ತು ಪುರುಷರಿಬ್ಬರೂ ಮೊಣಕಾಲಿನವರೆಗಿನ ವಸ್ತ್ರ ಮತ್ತು ಮೇಲಂಗಿಯನ್ನು (ಶಾಲಿನಂತಹ ಬಟ್ಟೆ) ಧರಿಸುತ್ತಿದ್ದರು. ಹರಪ್ಪಾ ಸಂಸ್ಕೃತಿಯ ಜನರು ಆಭರಣಗಳನ್ನು ತಯಾರಿಸುವಲ್ಲಿ ಬಹಳ ನುರಿತವರಾಗಿದ್ದರು. ಅವರು ಮಣ್ಣು, ವಿವಿಧ ಬಣ್ಣದ ಕಲ್ಲುಗಳು, ಶಂಖ, ತಾಮ್ರ, ಬೆಳ್ಳಿ ಮತ್ತು ಚಿನ್ನದಿಂದ ಮಣಿಗಳನ್ನು ತಯಾರಿಸುತ್ತಿದ್ದರು. ಈ ಮಣಿಗಳಿಗೆ ಇತರ ದೇಶಗಳಲ್ಲಿ,ವಿಶೇಷವಾಗಿ ಮೆಸೊಪೊಟೋಮಿಯಾದಲ್ಲಿ ಹೆಚ್ಚಿನ ಬೇಡಿಕೆಯಿತ್ತು. ಹರಪ್ಪಾ ಸಂಸ್ಕೃತಿಯ ಜನರು ಹಾರಗಳು, ಕರ್ಣಾಭರಣಗಳು (ಕಿವಿ ಓಲೆ), ಬಳೆಗಳು, ಉಂಗುರಗಳು ಮತ್ತು ಸೊಂಟದ ಪಟ್ಟಿಗಳಂತಹ ಆಭರಣಗಳನ್ನು ಬಳಸುತ್ತಿದ್ದರು.

### ವ್ಯವಸಾಯ ಮತ್ತು ವ್ಯಾಪಾರ

ಹರಪ್ಪಾ ಸಂಸ್ಕೃತಿಯ ಜನರು ಕೃಷಿ ಮಾಡಿ ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ ಗೋಧಿ ಮತ್ತು ಬಾರ್ಲಿ ಮುಖ್ಯ ಬೆಳೆಗಳಾಗಿದ್ದವು. ಹರಪ್ಪಾ ನಾಗರಿಕತೆಯ ಜನರಿಗೆ ಹತ್ತಿಯ ಬಗ್ಗೆಯೂ ತಿಳಿದಿತ್ತು. ಹರಪ್ಪಾ ನಾಗರಿಕತೆಯ ಕುಶಲಕರ್ಮಿಗಳು ಕಬ್ಬಿಣ, ಕಂಚು, ಮಣ್ಣು, ಬೆಳ್ಳಿ ಮತ್ತು ಚಿನ್ನದಿಂದ ವಸ್ತುಗಳನ್ನು ತಯಾರಿಸುವುದು, ಬಟ್ಟೆ ನೇಯುವುದು ಮುಂತಾದ ಉದ್ಯೋಗಗಳನ್ನು ಮಾಡುತ್ತಿದ್ದರು. ಅವರು ಅತ್ಯುತ್ತಮವಾದ ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು. ನೌಕಾಯಾನದ (ಹಡಗು ಪ್ರಯಾಣ) ಜ್ಞಾನವಿದ್ದ ಕಾರಣ ಅವರು ದೂರದ

ಪ್ರದೇಶಗಳೊಂದಿಗೆ ವ್ಯಾಪಾರ ಮಾಡಲು ಸಾಧ್ಯವಾಯಿತು.

### ನಿಮಗೆ ಗೊತ್ತಿದೆಯೇ?

ಕಾಲಿಬಂಗನನಲ್ಲಿ ವಿಶ್ವದ ಅತ್ಯಂತ ಹಳೆಯ ಉಳುಮೆ ಮಾಡಿದ ಕೃಷಿ ಭೂಮಿ ಕಂಡುಬಂದಿದೆ. ಇದು ಇಂದಿನ ರಾಜಸ್ಥಾನ ರಾಜ್ಯದ ಹನುಮಾನಗಢ ಜಿಲ್ಲೆಯ ಘಗ್ಗರ ನದಿಯ ದಡದಲ್ಲಿದೆ.

ಇದರಿಂದ ಕಾಲಿಬಂಗನ ಜನರು ಕೃಷಿಯಲ್ಲಿ ಮುಂದುವರಿದಿದ್ದರು ಎಂದು ತಿಳಿಯುತ್ತದೆ. ಅವರು ಗೋಧಿ, ಬಾರ್ಲಿ, ಕಡಲೆ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರು. ಇಂದಿಗೂ ಕಾಲಿಬಂಗನ ಪ್ರದೇಶದಲ್ಲಿ ಕೃಷಿ ಕೆಲಸಗಳಿಗಾಗಿ ಒಂಟೆಗಳನ್ನು ಬಳಸಲಾಗುತ್ತದೆ ಮತ್ತು ವಿಶೇಷವಾಗಿ ಅಲ್ಲಿನ ಉಳುಮೆಯ ಗುರುತುಗಳು ಹರಪ್ಪಾ ನಾಗರಿಕತೆಯ ಕಾಲದ ಗುರುತುಗಳಿಗೆ ಹೋಲುತ್ತವೆ.

ಕಾಲಿಬಂಗನನ ಮತ್ತೊಂದು ವೈಶಿಷ್ಟ್ಯವೆಂದರೆ ಇಲ್ಲಿ



ಅಗ್ನಿಕುಂಡಗಳು ಪತ್ತೆಯಾಗಿವೆ, ಇವುಗಳನ್ನು ಧಾರ್ಮಿಕ ಆಚರಣೆಗಳಿಗಾಗಿ ಬಳಸಲಾಗುತ್ತಿರಬಹುದು. ಹರಪ್ಪಾ ಸಂಸ್ಕೃತಿಯ ಇತರ ನಗರಗಳಂತೆ ಇಲ್ಲಿಯೂ ಸಹ ಯೋಜಿತ ಒಳಚರಂಡಿ ವ್ಯವಸ್ಥೆ, ಇಟ್ಟಿಗೆಯ ಮನೆಗಳು ಮತ್ತು ಮುದ್ರೆಗಳ ಮಾದರಿಗಳು ಕಂಡುಬಂದಿವೆ.

ಹರಪ್ಪಾ ಸಂಸ್ಕೃತಿಯ ಜನರು ಕೇವಲ ಗ್ರಾಮಗಳ ಅಥವಾ ನೆರೆಯ ನಗರಗಳೊಂದಿಗೆ ಮಾತ್ರವಲ್ಲದೆ, ದೂರದ ದೇಶಗಳೊಂದಿಗೂ ವ್ಯಾಪಾರ ಮಾಡುತ್ತಿದ್ದರು. ಅವರು ಇಂದಿನ ಇರಾಕ್ (ಮೆಸೊಪೊಟೋಮಿಯ), ಇರಾನ್ ಮತ್ತು ಈಜಿಪ್ತನಂತಹ ಪ್ರದೇಶಗಳೊಂದಿಗೆ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಅವರು ಮಣಿಗಳು, ಆಭರಣಗಳು, ಮಣ್ಣಿನ... ಪಾತ್ರೆಗಳು ಮತ್ತು ಹತ್ತಿಯನ್ನು ಮಾರಾಟ ಮಾಡಲಾಗುತ್ತಿತ್ತು. ಬದಲಾಗಿ ಲೋಹ, ಅಮೂಲ್ಯ ಕಲ್ಲುಗಳು ಮತ್ತು ಇತರ ವಸ್ತುಗಳನ್ನು ಪಡೆಯಲಾಗುತ್ತಿತ್ತು. ಅದರಲ್ಲಿ ಫಾಯನ್ಸ ಮತ್ತು ಕಾರ್ನೇಲಿಯನ್ ಉದ್ದದ ಮಣಿಗಳ ಹೆಚ್ಚಿನ ಸಮಾವೇಶ ಇತ್ತು. ಫಾಯನ್ಸ ಒಂದು ಗಾಜಿನಹಾಗೆ ಇದ್ದು ಮುಖ್ಯವಾಗಿ ನೀಲಿ, ಹಸಿರು ಮತ್ತು ಚಿಂತಾಮಣಿ ಬಣ್ಣಗಳಲ್ಲಿ ತಯಾರಿಸಲಾಗುತ್ತಿತ್ತು. ಹರಪ್ಪದಲ್ಲಿ ತಯಾರಾದ ಫಾಯನ್ಸ ಬಳೆಗಳು, ಮಣಿಗಳು ಮತ್ತು ಒಡವೆಗಳು ದಕ್ಷಿಣ ಮೆಸೊಪೊಟೆಮಿಯಾದ ಸುಮೇರಿಯಾಕ್ಕೆ ವ್ಯಾಪಾರ ಮಾರ್ಗಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ತಲುಪುತ್ತಿದ್ದವು. ಅಲ್ಲದೆ, ಅಕಿಕ್ (ಕಾರ್ನೇಲಿಯನ್) ಎಂಬ ಕೆಂಪು ಬಣ್ಣದ ರತ್ನ ಇತ್ತು, ಇದರಿಂದ ಉದ್ದನೆಯ ಮತ್ತು ದುಂಡಗಿನ ಮಣಿಗಳನ್ನು ತಯಾರಿಸಲಾಗುತ್ತಿತ್ತು. ಈ ಮಣಿಗಳನ್ನು ಮೆಸೊಪೊಟೇಮಿಯಾಕ್ಕೆ ರಫ್ತು ಮಾಡಲಾಗುತ್ತಿತ್ತು. ಅಲ್ಲಿ ಇವುಗಳನ್ನು ಆಭರಣಗಳಲ್ಲಿ ಮತ್ತು ಧಾರ್ಮಿಕ ವಸ್ತುಗಳಲ್ಲಿ ಬಳಸಲಾಗುತ್ತಿತ್ತು. ಈ ವ್ಯಾಪಾರದಿಂದ ಹರಪ್ಪ ಸಂಸ್ಕೃತಿಗೆ ಆರ್ಥಿಕ ಸಮೃದ್ಧಿ ಲಭಿಸಿತು.

### ನಿಮಗೆ ತಿಳಿದಿದೆಯೇ?

ಇನನ್ನಾ ದೇವಿ ಸುಮೇರಿಯನ್ ಸಂಸ್ಕೃತಿಯ ಪ್ರಮುಖ ದೇವತೆಯಾಗಿದ್ದಳು. ಮೆಸೊಪೊಟೆಮಿಯಾದ ಮಹಾಕಾವ್ಯಗಳಲ್ಲಿ ನೀಡಲಾದ ಪೌರಾಣಿಕ ಕಥೆಗಳಿಂದ ನಮಗೆ ಹರಪ್ಪ ಕಾಲದ ವ್ಯಾಪಾರದ ಬಗ್ಗೆ ಪ್ರಮುಖ ಮಾಹಿತಿ



ತಿಳಿಯುತ್ತದೆ. ಇನನ್ನಾ ದೇವಿಯು ತನ್ನ ವೈಭವದ ಸಂಕೇತವಾಗಿ ಲ್ಯಾಪಿಸ್ ಲಾಜುಲಿ (Lapis Lazuli) ಅನ್ನು ಬಳಸುತ್ತಿದ್ದಳು.

ಲ್ಯಾಪಿಸ್ ಲಾಜುಲಿ ಎಂಬುದು ಒಂದು ನೀಲಿ ಬಣ್ಣದ ಅಮೂಲ್ಯ ಕಲ್ಲು. ಪ್ರಾಚೀನ ಕಾಲದಲ್ಲಿ ಇದು ಅತ್ಯಂತ ಅಪರೂಪದ ಮತ್ತು ಬೆಲೆಬಾಳುವ ಕಲ್ಲು ಎಂದು ಪರಿಗಣಿಸಲ್ಪಟ್ಟಿತ್ತು. ಇದರ ಗಣಿಗಳು ಅಫಘಾನಿಸ್ತಾನದಲ್ಲಿದ್ದವು. ಹರಪ್ಪನ್ ವ್ಯಾಪಾರಿಗಳು ಇದರ ವ್ಯಾಪಾರ ಮಾಡುತ್ತಿದ್ದರು. ಮೆಸೊಪೊಟೇಮಿಯಾದಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆಯಿತ್ತು. ಈ ಕಥೆಗಳಲ್ಲಿ ವಾಸ್ತವಿಕ ಐತಿಹಾಸಿಕ ಘಟನೆಗಳು, ವ್ಯಕ್ತಿಗಳು ಅಥವಾ ಸ್ಥಳಗಳ ಉಲ್ಲೇಖವಿರುತ್ತದೆ, ಆದ್ದರಿಂದ ಅವು ಇತಿಹಾಸದ ಅಧ್ಯಯನಕ್ಕೆ ಉಪಯುಕ್ತವಾಗಿವೆ.

ಆ ಕಾಲದ ಲೋಥಲ್ ನಗರವು ಒಂದು ಪ್ರಮುಖ ಬಂದರು ಆಗಿತ್ತು, ಇಲ್ಲಿ ಒಂದು ಬೃಹತ್ ಗಾತ್ರದ ಹಡಗು ಕಟ್ಟೆ (Dockyard) ಪತ್ತೆಯಾಗಿದೆ. ಹರಪ್ಪ ಸಂಸ್ಕೃತಿಯ ವ್ಯಾಪಾರವು ಅರಬ್ಬಿ ಸಮುದ್ರದ ತೀರದ ಮೂಲಕ ಇರಾನ್ ಕೊಲ್ಲಿಯವರೆಗೆ ನಡೆಯುತ್ತಿತ್ತು. ಹರಪ್ಪ ಜನರ ಮುದ್ರೆಗಳನ್ನು ಪ್ರಮುಖವಾಗಿ ವ್ಯಾಪಾರಕ್ಕಾಗಿ ಬಳಸಲಾಗುತ್ತಿತ್ತು. ಮುದ್ರೆಗಳ ಮೇಲೆ ಎತ್ತು, ಆನೆ, ಎಮ್ಮೆ, ಖಡ್ಗಮೃಗ, ಹುಲಿ ಅಂತಹ ಪ್ರಾಣಿಗಳ ಹಾಗೂ ಕೆಲವು ಮನುಷ್ಯಾಕೃತಿಗಳ ಚಿತ್ರಗಳನ್ನು ಕಾಣಬಹುದು.



**ಹೇಳಿ ನೋಡೋಣ!**

ಚಿತ್ರದಲ್ಲಿರುವ ಹರಪ್ಪ ಕಾಲದ ಮುದ್ರೆಯನ್ನು ನೋಡಿ, ಅದರ ಮೇಲೆ 'ಏಕಶೃಂಗ' (Unicorn) ಎಂಬ ಕಾಲ್ಪನಿಕ ಪ್ರಾಣಿಯ ಚಿತ್ರವಿದೆ. ನೀವು ಇಂತಹ ಕಾಲ್ಪನಿಕ ಪ್ರಾಣಿಗಳನ್ನು ಬೇರೆ ಯಾವ ವಸ್ತುಗಳ ಮೇಲೆ ಅಥವಾ ಕಟ್ಟಡಗಳ ಮೇಲೆ ನೋಡಿದ್ದೀರಾ?



### ಕಲೆ ಮತ್ತು ಮನರಂಜನೆ

ಹರಪ್ಪ ಸಂಸ್ಕೃತಿಯ ಜನರು ಕಲಾಪ್ರೇಮಿಗಳು ಮತ್ತು ಕುಶಲ ಕರ್ಮಿಗಳಾಗಿದ್ದರು. ಅವರು ಮಣ್ಣು, ಲೋಹ ಮತ್ತು ಅಮೂಲ್ಯ ಕಲ್ಲುಗಳನ್ನು ಬಳಸಿ ಅನೇಕ ಸುಂದರ ವಸ್ತುಗಳನ್ನು ತಯಾರಿಸಿದರು.

ಹರಪ್ಪ ಸಂಸ್ಕೃತಿಯಲ್ಲಿ ಒಂದು ಕಂಚಿನ ಮೂರ್ತಿ ಪತ್ತೆಯಾಗಿದೆ, ಅದನ್ನು 'ನರ್ತಕಿ' ಎಂದು ಗುರುತಿಸಲಾಗುತ್ತದೆ. ಇದಲ್ಲದೆ, ಹರಪ್ಪ ಜನರು ಪ್ರಾಣಿಗಳ ಆಕೃತಿಗಳು, ಆಟಿಕೆಗಳು ಮತ್ತು ಮುದ್ರೆಗಳನ್ನು ತಯಾರಿಸಿದ್ದರು. ಹರಪ್ಪ ಸಂಸ್ಕೃತಿಯಲ್ಲಿಯ ಅತ್ಯಂತ ಪ್ರಸಿದ್ಧ ಮತ್ತು ಪ್ರಮುಖವಾದ ಒಂದು ವಸ್ತು ಎಂದರೆ ಅಲ್ಲಿ ಕಂಡುಬಂದಿರುವ ಈ ವಿಶಿಷ್ಟವಾದ ಪ್ರತಿಮೆ. ಈ ಪ್ರತಿಮೆಯು ಮೊಹೆಂಜೋದಾರೋ ಎಂಬ ಸ್ಥಳದಲ್ಲಿ ನಡೆದ ಉತ್ಖನನದ ಸಮಯದಲ್ಲಿ ಪತ್ತೆಯಾಯಿತು. ಪ್ರಸ್ತುತ ಈ ಪ್ರತಿಮೆಯನ್ನು



ಹರಪ್ಪಾಕಾಲದ ಕಲೆಯ ಪ್ರತಿಕೃತಿ

ನವದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಈ ಪ್ರತಿಮೆಯು ಶಾಂತ, ನಿಗೂಢ ಮತ್ತು ಗೌರವಪೂರ್ಣ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಇದನ್ನು ಸಾಮಾನ್ಯವಾಗಿ ''ರಾಜಾ-ಧರ್ಮಗುರು'' ಎಂದು ಕರೆಯಲಾಗುತ್ತದೆ



ಹರಪ್ಪಾ ಕಾಲದ ಮಣ್ಣಿನ ಆಟಿಕೆಗಳು

ಪುರಾತತ್ವ ಉತ್ಖನನದಲ್ಲಿ ಕಂಡುಬಂದ ವಸ್ತುಗಳಿಂದ ಮಕ್ಕಳಿಗಾಗಿ ವಿಶೇಷ ಆಟಿಕೆಗಳನ್ನು ತಯಾರಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಈ ಆಟಿಕೆಗಳನ್ನು ಮಣ್ಣಿನಿಂದ ತಯಾರಿಸಲಾಗುತ್ತಿತ್ತು. ಅವುಗಳಲ್ಲಿ ಎತ್ತು, ನಾಯಿ, ಆನೆ ಮುಂತಾದ ಪ್ರಾಣಿಗಳ ಪ್ರತಿಕೃತಿಗಳು ಹಾಗೂ ಚಕ್ರದ ಬಂಡಿ, ಬುಗುರಿ ಮತ್ತು ಸೀಟಿಗಳು ಸೇರಿದ್ದವು.

### 3.4 ಹರಪ್ಪ ನಾಗರಿಕತೆಯ ವಿನಾಶಕ್ಕೆ ಕಾರಣಗಳು

ಹರಪ್ಪ ನಾಗರಿಕತೆಯು ಭಾರತದ ಅತ್ಯಂತ ಮುಂದುವರಿದ ಮತ್ತು ಸಮೃದ್ಧ ನಾಗರಿಕತೆಯಾಗಿತ್ತು. ಆದರೆ ಕೆಲವು ಸಮಯದ ನಂತರ ಈ ನಾಗರಿಕತೆಯು ಕ್ರಮೇಣ ವಿನಾಶಗೊಳ್ಳಲು ಪ್ರಾರಂಭಿಸಿತು. ಈ ಹರಪ್ಪ ನಾಗರೀಕತೆಯ ವಿನಾಶಕ್ಕೆ ಕಾರಣಗಳೇನು ಎಂಬ ಬಗ್ಗೆ ಸಂಶೋಧನೆಗಳು ನಡೆದಿವೆ. ಅದಕ್ಕೆ ಈ ಕೆಳಗಿನವು ಪ್ರಮುಖ ಕಾರಣಗಳಾಗಿವೆ: ನದಿಗಳ ಹರಿವಿನಲ್ಲಿ ಬದಲಾವಣೆ: ನದಿಗಳ ಹರಿವಿನ ದಾರಿ ಬದಲಾದ ಕಾರಣ ನೀರಿನ ಅಭಾವ ಉಂಟಾಯಿತು. ಇದು ಕೃಷಿ ಮತ್ತು ಜೀವನದ ಮೇಲೆ ಗಂಭೀರ ಪರಿಣಾಮ ಬೀರಿದೆ. ನೈಸರ್ಗಿಕ ಆಪತ್ತುಗಳು: ಪ್ರವಾಹಗಳು, ಬರಗಾಲಗಳು ಅಥವಾ ಭೂಕಂಪಗಳಂತಹ ನೈಸರ್ಗಿಕ ವಿಕೋಪಗಳಿಂದ ನಗರಗಳು ನಾಶವಾಗಿರಬಹುದು. ವ್ಯಾಪಾರದಲ್ಲಿ ಇಳಿಮುಖ: ಕ್ರಿ.ಪೂ. 2300 ರ ಸುಮಾರಿಗೆ ಸುಮೇರಿಯನ್ನರ ಜೊತೆಗಿನ ವ್ಯಾಪಾರವು ಕುಸಿಯಲು ಪ್ರಾರಂಭಿಸಿತು, ಇದು ನಾಗರೀಕತೆಯ ಅವನತಿಗೆ ಮತ್ತೊಂದು ಪ್ರಮುಖ ಕಾರಣವಾಯಿತು.



**ನಿಮಗೆ ತಿಳಿದಿದೆಯೇ?**

ಅಕ್ಕಡ ಸಾಮ್ರಾಜ್ಯದ ಪ್ರಬಲ ರಾಜನಾದ ಸರ್ಗೋನ್ ಕಾಲದಲ್ಲಿ ಮೆಸೊಪೋಟೆಮಿಯಾ ಮತ್ತು ಹರಪ್ಪ ಸಂಸ್ಕೃತಿಯ ನಡುವೆ ವ್ಯಾಪಾರ ಸಂಬಂಧವಿತ್ತು. ಈ ವ್ಯಾಪಾರದ ಮೂಲಕ ಚಿನ್ನ, ಬೆಳ್ಳಿ, ಮಣಿಗಳು ಮತ್ತು ಅಮೂಲ್ಯ ರತ್ನಗಳ ವಿನಿಮಯ ನಡೆಯುತ್ತಿತ್ತು. ಆದರೆ ರಾಜಕೀಯ ಅಸ್ಥಿರತೆಯಿಂದಾಗಿ ವ್ಯಾಪಾರವು ಕ್ರಮೇಣ ನಿಂತುಹೋಯಿತು, ಇದು ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಬೀರಿ ಜನರು ನಗರಗಳನ್ನು ಬಿಟ್ಟು ಹಳ್ಳಿಗಳ ಕಡೆಗೆ ವಲಸೆ ಹೋಗಲು ಕಾರಣವಾಯಿತು.

ಹರಪ್ಪಾನಾಗರೀಕತೆಯಪ್ರಭಾವವುದೀರ್ಘಕಾಲದವರೆಗೆ ಉಳಿಯಿತು. ಹರಪ್ಪಾ ನಾಗರೀಕತೆಯ ನಗರಗಳು ಇಂದು ಅಳಿದುಹೋಗಿದ್ದರೂ, ಅವುಗಳ ಅವಶೇಷಗಳಿಂದ ನಮಗೆ ಅಲ್ಲಿನಇತಿಹಾಸ,ಸಂಪ್ರದಾಯಮತ್ತುಅಂದಿನಜೀವನಶೈಲಿಯ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಸಂಸ್ಕೃತಿಯಿಂದ ನಾವು ಪ್ರಕೃತಿಯೊಂದಿಗೆ ಸಮತೋಲನ, ಸ್ವಚ್ಛತೆ, ಶಿಸ್ತು ಮತ್ತು ಸಹಬಾಳ್ವೆಯ ಮಹತ್ವವನ್ನು ಕಲಿಯಬಹುದು. ಆದ್ದರಿಂದಲೇ, ಹರಪ್ಪಾ ಕೇವಲ ಒಂದು ಪ್ರಾಚೀನ ಸಂಸ್ಕೃತಿಯಲ್ಲ, ಬದಲಾಗಿ ನಮ್ಮ ಸಂಸ್ಕೃತಿಯ ಒಂದು ಹೆಮ್ಮೆಯ ಪರಂಪರೆಯಾಗಿದೆ.



**ಮಾಡಿ ನೋಡಿರಿ.**

ಕೆಳಗಿನ ಸಾಲುಗಳಲ್ಲಿ, ಹರಪ್ಪಾ ನಾಗರಿಕತೆಯ ನಗರಗಳ ಹೆಸರುಗಳೇನು? ಆ ನಗರಗಳು ಹೇಗಿದ್ದವು? ಯಾವ ಕಲಾಕೃತಿಗಳು ಕಂಡುಬಂದಿವೆ? ಯಾವ ವಸ್ತುಗಳ ವ್ಯಾಪಾರ ನಡೆಯುತ್ತಿತ್ತು? ಮುಂತಾದ ಮಾಹಿತಿಗಳನ್ನು ಬರೆಯಿರಿ.



# ಸ್ವಾಧ್ಯಾಯ

**ಪ್ರ. 1 ಅ) ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಆಯ್ಕೆಯನ್ನು ಆರಿಸಿ.**

1. ಹರಪ್ಪಾ ನಾಗರಿಕತೆಯು ............ ನದಿಯ ದಡದಲ್ಲಿ ಪತ್ತೆಯಾಯಿತು.
   ಅ) ಗಂಗಾ ಬ) ಯಮುನಾ
   ಕ) ಸಿಂಧೂ ಡ) ಗೋದಾವರಿ
2. ಹರಪ್ಪಾ ನಾಗರಿಕತೆಯ ಮಹಾ ಸ್ನಾನಗೃಹವು .......... ಈ ಸ್ಥಳದಲ್ಲಿ ಕಂಡುಬಂದಿದೆ.
   ಅ) ಧೋಲಾವೀರಾ ಬ) ಲೋಥಲ್
   ಕ) ಕಾಲಿಬಂಗನ್ ಡ) ಮೊಹೆಂಜೊದಾರೊ
3. ಹರಪ್ಪಾ ನಾಗರಿಕತೆಯ ............ ಎಂಬ ನಗರದಲ್ಲಿ ಹಡಗುಕಟ್ಟೆ ಪತ್ತೆಯಾಗಿದೆ.
   ಅ) ಲೋಥಲ್ ಬ) ರಾಖಿಗಢಿ
   ಕ) ಬನವಾಲಿ ಡ) ಧೋಲಾವೀರಾ

**ಬ) ಸರಿ ಅಥವಾ ತಪ್ಪು ಎಂದು ಬರೆಯಿರಿ.**

1. ದೂರದ ಪ್ರದೇಶಗಳೊಂದಿಗಿನ ವ್ಯಾಪಾರವು ಹರಪ್ಪಾ ನಾಗರಿಕತೆಯ ವಿಸ್ತರಣೆಗೆ ಪ್ರಮುಖ ಕಾರಣವಾಗಿತ್ತು. ☐
2. ಹರಪ್ಪಾ ನಾಗರಿಕತೆಯ ಜನರು ಸಾರ್ವಜನಿಕ ಆರೋಗ್ಯದ ಬಗ್ಗೆ ಜಾಗೃತರಾಗಿರಲಿಲ್ಲ. ☐
3. ಹರಪ್ಪಾ ನಾಗರಿಕತೆಯ ಅವನತಿಗೆ ವ್ಯಾಪಾರ ಕುಂಠಿತಗೊಂಡಿದ್ದು ಒಂದು ಕಾರಣವಾಗಿತ್ತು. ☐

**ಪ್ರ. 2 ಅ) ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**




**ಪ್ರ. 2 ಬ) ಪದಬಂಧದಿಂದ ಉತ್ಖನನ ಮಾಡಿದ ನಗರಗಳ ಹೆಸರುಗಳನ್ನು ಪೂರ್ಣಗೊಳಿಸಿ.**




**ಪ್ರ. 3 ಅ) ಟಿಪ್ಪಣಿ ಬರೆಯಿರಿ.**

1. ಮಹಾ ಸ್ನಾನಗೃಹ
2. ವಸ್ತ್ರ ಮತ್ತು ಆಭರಣಗಳು
3. ಕಲೆ ಮತ್ತು ಮನರಂಜನೆ

**ಪ್ರ. 4 ಪಾಠದಲ್ಲಿರುವ ನಕ್ಷೆಯನ್ನು ಗಮನಿಸಿ ಮತ್ತು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಭಾರತದ ರಾಜಸ್ಥಾನ ರಾಜ್ಯದಲ್ಲಿರುವ ಹರಪ್ಪ ಸಂಸ್ಕೃತಿಯ ಯಾವುದೇ ಒಂದು ಸ್ಥಳದ ಹೆಸರನ್ನು ಬರೆಯಿರಿ.
2. ಭಾರತದ ಅಂತರರಾಷ್ಟ್ರೀಯ ಗಡಿಯ ಹೊರಗಿರುವ ಹರಪ್ಪ ಸಂಸ್ಕೃತಿಯ ಯಾವುದಾದರೂ ಒಂದು ಸ್ಥಳದ ಹೆಸರನ್ನು ಬರೆಯಿರಿ.
3. ಮಾಂಡಾ ಎಂಬ ಹರಪ್ಪ ಸಂಸ್ಕೃತಿಯ ಸ್ಥಳವು ಯಾವ ನದಿಯ ದಡದಲ್ಲಿದೆ?
4. ದಾಯಾಮಾಬಾದ್ ಎಂಬ ಹರಪ್ಪ ಸಂಸ್ಕೃತಿಯ ಸ್ಥಳವು ಪ್ರಸ್ತುತ ಭಾರತದ ಯಾವ ರಾಜ್ಯದಲ್ಲಿದೆ?

**ಪ್ರ. 5 ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹರಪ್ಪ ಸಂಸ್ಕೃತಿಯ ಸುಸಜ್ಜಿತ ನಗರ ಯೋಜನೆಯು ಇಂದಿನ ನಗರಗಳ ಯೋಜನೆಗೆ ಹೇಗೆ ಮಾದರಿಯಾಗಬಲ್ಲದು ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.
2. ಹರಪ್ಪ ಸಂಸ್ಕೃತಿಯ ನಗರಗಳ ಆರ್ಥಿಕತೆಯು ಏಕೆ ಕ್ಷೀಣಿಸತೊಡಗಿತು?

**ಕೃತಿ -**

- ಮಣ್ಣು, ಕೆಸರು, ಇಟ್ಟಿಗೆ ಮುಂತಾದ ವಸ್ತುಗಳನ್ನು ಬಳಸಿ ಹರಪ್ಪ ಸಂಸ್ಕೃತಿಯ ಯಾವುದಾದರೂ ಒಂದು ಉತ್ಖನನ ಸ್ಥಳದ ಮಾದರಿಯನ್ನು (Model) ತಯಾರಿಸಿ.
- ಹರಪ್ಪ, ಮೊಹೆಂಜೊದಾರೊ, ಲೋಥಲ್, ಧೋಲಾವಿರಾ, ರಾಖಿಗಢಿ ಇವುಗಳ ಬಗ್ಗೆ ಮಾಹಿತಿ ಪಡೆದು, ನಿಮ್ಮ ಪರಿಸರದಲ್ಲಿ ಈ ಬಗ್ಗೆ ಯಾವ ಬದಲಾವಣೆಗಳು ಕಂಡುಬರುತ್ತವೆ ಎಂಬುದರ ಕುರಿತು ತರಗತಿಯಲ್ಲಿ ಚರ್ಚಿಸಿ.

**ಉಪಕ್ರಮ**

1. ಹರಪ್ಪ ಕಾಲದ ಸುಸಜ್ಜಿತ ನಗರ, ಮನೆಗಳು, ರಸ್ತೆಗಳು, ಜಲ ನಿರ್ವಹಣೆ, ಚರಂಡಿ ವ್ಯವಸ್ಥೆಗಳ ಮಾದರಿಯನ್ನು ತಯಾರಿಸಿ.
2. ಮಹಾರಾಷ್ಟ್ರ ಸರ್ಕಾರದ ವೆಬ್‌ಸೈಟನಿಂದ *https://water.maharashtra.gov.in/en/scheme/sant-gadgebaba-gram-swachhta-abhiyan/* 'ಸಂತ ಗಾಡ್ಗೆಬಾಬಾ ಗ್ರಾಮ ಸ್ವಚ್ಛತಾ ಅಭಿಯಾನ'ದ ಬಗ್ಗೆ ಮಾಹಿತಿ ಪಡೆದು ತರಗತಿಯಲ್ಲಿ ಪ್ರಸ್ತುತಪಡಿಸಿ.

***

# 5 ವೈದಿಕ ಸಂಸ್ಕೃತಿ



**4.1 ವೈದಿಕ ವಾಙ್ಮಯ** **4.2 ವೈದಿಕ ಕಾಲದ ಜನಜೀವನ**

**ನೀವು ಎಂದಾದರೂ ಸುಡೋಕು ಆಟ ಆಡಿದ್ದೀರಾ?**

ಸುಡೋಕು ಆಟ ಎಂದರೆ ತರ್ಕಶಕ್ತಿ ಮತ್ತು ಸಂಖ್ಯಾಜ್ಞಾನದ ಸಂಗಮವಾಗಿದೆ. ಈ ಆಟವನ್ನು ಆಧುನಿಕ ಕಾಲದಲ್ಲಿ ನಿರ್ಮಿಸಲಾಗಿದೆ.

ಕೆಳಗಿನ ಚೌಕಟ್ಟಿನಲ್ಲಿ 1 ರಿಂದ 9 ಅಂಕಗಳನ್ನು ಪ್ರತ್ಯೇಕ ಅಡ್ಡ ಮತ್ತು ಉದ್ದ ಸಾಲಗಳಲ್ಲಿ ಹೇಗೆ ಬರೆಯಬೇಕೆಂದರೆ ಪ್ರತಿ ಸಾಲಿನಲ್ಲಿ ಪ್ರತಿಯೊಂದು ಅಂಕ ಒಂದೆ ಬಾರಿ ಬರಬೇಕು.

| | | | | | | | | |
|---|---|---|---|---|---|---|---|---|
| 5 | | 3 | | 7 | | 2 | 4 | |
| 1 | | | | 2 | 5 | | 7 | 8 |
| | | 5 | 6 | | | 9 | | |
| 2 | | | 9 | | | | 6 | |
| | 9 | 8 | | | | 5 | 3 | |
| | 3 | | | | 8 | | | 7 |
| | | 1 | | | 2 | 4 | | |
| 9 | 5 | | 7 | 4 | | | | 1 |
| | 8 | 6 | | 3 | | 7 | | 9 |

ಈಗ ಯೋಚಿಸಿ, ಸಾವಿರಾರು ವರ್ಷಗಳ ಹಿಂದೆ ಕಂಪ್ಯೂಟರ್ ಮತ್ತು ಕ್ಯಾಲ್ಕುಲೇಟರ್‌ಗಳು ಇಲ್ಲದ ಕಾಲದಲ್ಲಿ, ವೈದಿಕ ಋಷಿಗಳು ಗಣಿತದ ಸೂತ್ರಗಳನ್ನು ಸಿದ್ಧಪಡಿಸಿದ್ದರು. ಇವುಗಳ ಸಹಾಯದಿಂದ ದೊಡ್ಡ ಸಂಖ್ಯೆಗಳ ಲೆಕ್ಕಾಚಾರಗಳನ್ನು ಕ್ಷಣಮಾತ್ರದಲ್ಲಿ ಬಿಡಿಸಬಹುದು! ಈ ಸೂತ್ರಗಳೇ 'ವೈದಿಕ ಗಣಿತ'. ಇದಕ್ಕೊಂದು ಸಣ್ಣ ಉದಾಹರಣೆ ನೋಡೋಣ

–ನಮಗೆ 98 × 99 ಈ ಉದಾಹರಣೆಯನ್ನು ಬಿಡಿಸಬೇಕಿದೆ.

ವೈದಿಕ ಗಣಿತದಲ್ಲಿ ಒಂದು ಸೂತ್ರವಿದೆ: 'ನಿಖಿಲಂ ನವತಶ್ಚರಮಂ ದಶತಃ' ಅದರಂತೆ –

ಹಂತ 1

98 – 100 (ಆಧಾರ) = –02

99 – 100 (ಆಧಾರ) = –01

ಹಂತ 2

98 ↘↗ –02

99 ↗↘ –01

---------------------

ಆದ್ದರಿಂದ ಗುಣಾಕಾರ 9702

(ಓರೆ-ವ್ಯವಕಲನ ಮಾಡಿ, ನಿಮಗೆ ಒಂದೇ ಉತ್ತರ ಸಿಗುತ್ತದೆ. ಉತ್ತರ 97, ಅದನ್ನು ಎಡಭಾಗದಲ್ಲಿ ಬರೆಯಿರಿ ಮತ್ತು (–02) × (–01) = 02. ಈ ಉತ್ತರವನ್ನು ಬಲಭಾಗದಲ್ಲಿ ಬರೆಯಿರಿ).

**ಉತ್ತರ : 98 × 99 = 9702**

ವಿದ್ಯುತ್, ಕಂಪ್ಯೂಟರ್ ಮತ್ತು ಮೊಬೈಲ್ ಇಲ್ಲದ ಕಾಲದಲ್ಲಿ, ಜ್ಞಾನ ಮತ್ತು ವಿಜ್ಞಾನದಲ್ಲಿ ಮುಂದುವರಿದ ಸಂಸ್ಕೃತಿ ನಮ್ಮ ದೇಶದಲ್ಲಿತ್ತು. ವೈದಿಕ ಸಂಸ್ಕೃತಿಯು ನಮ್ಮ ಭಾರತದ ಪ್ರಾಚೀನ ಮತ್ತು ಸಮೃದ್ಧ ಸಂಸ್ಕೃತಿಯಾಗಿದೆ. 'ವೇದ' ಈ ಗ್ರಂಥಗಳಲ್ಲಿ ಆ ಕಾಲದ ಜನರು ಹೇಗೆ ಬದುಕುತ್ತಿದ್ದರು, ಏನು ಕಲಿಯುತ್ತಿದ್ದರು ಮತ್ತು ಅವರ ಜೀವನಶೈಲಿ ಹೇಗಿತ್ತು ಎಂಬುದರ ಸುಂದರ ವರ್ಣನೆ ಇದೆ.

**ವೈದಿಕ ಸಂಸ್ಕೃತಿಯ ಜನರಿಗೆ ಜ್ಞಾನವು ಹೇಗೆ ಲಭಿಸಿರಬಹುದು?**
**ವೇದ ಎಂದರೆ ಏನು?**
**ಆ ಕಾಲದ ಸಮಾಜ ರಚನೆ ಹೇಗಿತ್ತು?**
**ವೈದಿಕ ಪರಂಪರೆಯು ಇಂದಿಗೂ ಅಸ್ತಿತ್ವದಲ್ಲಿದೆಯೇ?**
**ಗಣಿತ, ವಿಜ್ಞಾನ, ಯೋಗ, ಆಯುರ್ವೇದದಂತಹ ಅನೇಕ ವಿಷಯಗಳ ಜ್ಞಾನ ಅವರಿಗೆ ಇತ್ತೇ?**
**ಬನ್ನಿ, ನಾವು ತಿಳಿದುಕೊಳ್ಳೋಣ - ಈ ಜ್ಞಾನವು ಎಲ್ಲಿಂದ ಬಂದಿತು ಮತ್ತು ನಮಗೆ ಏನನ್ನು ತಿಳಿಸಿತು?**

## 4.1 ವೈದಿಕ ವಾಙ್ಮಯ

'ವಿದ್' ಎಂದರೆ ತಿಳಿಯುವುದು ಅಥವಾ ಜ್ಞಾನ ಪಡೆಯುವುದು. ಆದರಿಂದಲೇ 'ವೇದ' ಎಂಬ ಸಂಜ್ಞೆ (ಹೆಸರು) ಸಿದ್ಧವಾಯಿತು. ಇದರ ಅರ್ಥ 'ಜ್ಞಾನ' ಎಂದಾಗುತ್ತದೆ. ವೈದಿಕ ಸಾಹಿತ್ಯವನ್ನು ಭಾರತದ ಪ್ರಾಚೀನ ಕಾಲದ ಅತ್ಯಂತ ಪ್ರಮುಖ ಗ್ರಂಥಗಳೆಂದು ಪರಿಗಣಿಸಲಾಗಿದೆ. ಈ ಸಾಹಿತ್ಯವು ಮುಖ್ಯವಾಗಿ ವೇದಗಳಲ್ಲಿ ಸಂಗ್ರಹಿಸಲ್ಪಟ್ಟಿದೆ. ವೇದಗಳು ಪ್ರಾಚೀನ ಕಾಲದ ಜ್ಞಾನ, ಧರ್ಮ, ತತ್ವಜ್ಞಾನ ಮತ್ತು ಜೀವನಶೈಲಿಯ ಪ್ರಮುಖ ಮೂಲಗಳಾಗಿವೆ. ವೇದಗಳಲ್ಲಿನ ಋಚೆಗಳು (ಮಂತ್ರಗಳು) ಋಷಿಗಳಿಗೆ ಸ್ಫುರಿಸಿದವು. ವೇದಗಳ ಕೆಲವು ಸೂಕ್ತಗಳನ್ನು ಸ್ತ್ರೀಯರೂ ಸಹ ರಚಿಸಿದ್ದಾರೆ.

**ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬ ನಾಲ್ಕು ವೇದಗಳಿವೆ.** ವೇದಗಳನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಲಾಗಿದೆ. ಅವು ಪ್ರಮುಖವಾಗಿ ಮಂತ್ರ, ಸ್ತುತಿ, ಯಜ್ಞವಿಧಿ ಮತ್ತು ತತ್ವಜ್ಞಾನವನ್ನು ಒಳಗೊಂಡಿವೆ. ಸಮಾಜ ಜೀವನಕ್ಕೆ ಸಂಬಂಧಿಸಿವೆ. ಋಗ್ವೇದವು ಅತ್ಯಂತ ಪ್ರಾಚೀನ ವೇದವಾಗಿದೆ.

ಈ ನಾಲ್ಕು ವೇದಗಳನ್ನು 'ಸಂಹಿತಾ' ಎಂದು ಕರೆಯಲಾಗುತ್ತದೆ. ಸಂಹಿತೆಗಳ ರಚನೆಯ ನಂತರ ಪ್ರತಿಯೊಂದು ವೇದಕ್ಕೂ ಬ್ರಾಹ್ಮಣ ಗ್ರಂಥಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳನ್ನು ರಚಿಸಲಾಯಿತು. ಇವುಗಳನ್ನು ವೇದ ಸಾಹಿತ್ಯದಲ್ಲಿ ಸೇರಿಸಲಾಗಿದೆ.

**ಬ್ರಾಹ್ಮಣ ಗ್ರಂಥಗಳು -** ಬ್ರಾಹ್ಮಣ ಗ್ರಂಥಗಳು ವೇದಗಳ ಒಂದು ಪ್ರಮುಖ ಭಾಗವಾಗಿದೆ. ಈ ಗ್ರಂಥಗಳು ಮುಖ್ಯವಾಗಿ ಯಜ್ಞ, ಪೂಜೆ ಮತ್ತು ಧಾರ್ಮಿಕ ವಿಧಿವಿಧಾನಗಳಿಗೆ ಸಂಬಂಧಿಸಿವೆ. ಯಜ್ಞಗಳನ್ನು ಹೇಗೆ ಮಾಡಬೇಕು, ಯಾವ ಮಂತ್ರಗಳನ್ನು ಬಳಸಬೇಕು ಮತ್ತು ಅವುಗಳ ಹಿಂದಿನ ಅರ್ಥವೇನು ಎಂಬ ಬಗ್ಗೆ ಇದರಲ್ಲಿ ವಿವರವಾದ ವರ್ಣನೆ ನೀಡಲಾಗಿದೆ.

**ಅರಣ್ಯಕಗಳು -** 'ಅರಣ್ಯಕ' ಎಂಬ ಪದವು 'ಅರಣ್ಯ' ಅಂದರೆ ಕಾಡು ಎಂಬ ಶಬ್ದದಿಂದ ಬಂದಿದೆ, ಏಕೆಂದರೆ ಈ ಗ್ರಂಥಗಳನ್ನು

**ಕೆಳಗೆ ಕೊಟ್ಟ ಕೊಷ್ಟಕವನ್ನು ವರ್ಗದಲ್ಲಿ ಎಲ್ಲರೊಂದಿಗೆ ಓದಿರಿ. ಈ ನಾಲ್ಕು ವೇದಗಳ ಮುಖ್ಯ ವಿಷಯ, ಅವುಗಳ ವೈಶಿಷ್ಟ್ಯ ಮತ್ತು ಮಹತ್ವ ನಿಮಗೆ ಸಜವಾಗಿ ತಿಳಿಯುವುದು.**

| ಋಗ್ವೇದ | ಯಜುರ್ವೇದ | ಸಾಮವೇದ | ಅಥರ್ವವೇದ |
|---|---|---|---|
| ಮುಖ್ಯ ವಿಷಯ- ಮಂತ್ರಗಳು, ದೇವತೆಗಳ ಸ್ತುತಿಗಳು | ಮುಖ್ಯ ವಿಷಯ- ಯಜ್ಞಗಳು, ಧಾರ್ಮಿಕ ವಿಧಿವಿಧಾನಗಳು | ಮುಖ್ಯ ವಿಷಯ- ಸಂಗೀತ, ಗಾಯನ, ಮಂತ್ರ ಪಠಣ. | ಮುಖ್ಯ ವಿಷಯ- ಜೀವನಶೈಲಿ, ಕೃಷಿ, ಔಷಧೋಪಚಾರ. |
| ವೈಶಿಷ್ಟ್ಯಗಳು- ಅಗ್ನಿ, ಇಂದ್ರ, ವರುಣ ಮುಂತಾದ ದೇವತೆಗಳ ಸ್ತೋತ್ರಗಳು. | ವೈಶಿಷ್ಟ್ಯಗಳು - ಯಜ್ಞಕರ್ಮ ಮತ್ತು ಹವನ ಪದ್ಧತಿಗಳು | ವೈಶಿಷ್ಟ್ಯಗಳು- ಮಂತ್ರಗಳ ಲಯಬದ್ಧ ಗಾಯನ | ವೈಶಿಷ್ಟ್ಯಗಳು - ಔಷಧೋಪಚಾರ ಮತ್ತು ಮನೆಬಳಕೆಯ ಹವನ ಪದ್ಧತಿಗಳು |
| ಮಹತ್ವ- ಪ್ರಾಚೀನ ವೇದವಾಗಿದ್ದು, ದೇವತೆಗಳ ಸ್ತುತಿ ಮತ್ತು ಯಜ್ಞದ ಮಹತ್ವವನ್ನು ಕಲಿಸುತ್ತದೆ | ಮಹತ್ವ- ಧಾರ್ಮಿಕ ವಿಧಿಗಳು ಮತ್ತು ಧಾರ್ಮಿಕ ಆಚಾರ-ವಿಚಾರಗಳನ್ನು ಕಲಿಸುತ್ತದೆ | ಮಹತ್ವ- ಸಂಗೀತದ ಅಭ್ಯಾಸ ಮತ್ತು ಯಜ್ಞದಲ್ಲಿ ಗಾಯನದ ಮಹತ್ವವನ್ನು ತಿಳಿಸುತ್ತದೆ. | ಮಹತ್ವ- ಆರೋಗ್ಯ, ದೈನಂದಿನ ಜೀವನ ಮತ್ತು ಜೀವನೋಪಯೋಗಿ ಜ್ಞಾನದ ಬಗ್ಗೆ ಮಾರ್ಗದರ್ಶನ ನೀಡುತ್ತದೆ. |

ಅರಣ್ಯದಲ್ಲಿ ವಾಸಿಸುವ ಸಾಧಕರಿಗಾಗಿ ರಚಿಸಲಾಗಿದೆ. ಈ ಗ್ರಂಥಗಳಲ್ಲಿ ಯಜ್ಞಗಳ ಗೂಢ ಅರ್ಥಗಳು, ಧ್ಯಾನ, ಸಾಧನೆ ಮತ್ತು ಆತ್ಮಜ್ಞಾನದ ಬಗ್ಗೆ ವಿಚಾರಗಳನ್ನು ಮಂಡಿಸಲಾಗಿದೆ.

**ಉಪನಿಷತ್ತುಗಳು** – 'ಉಪನಿಷತ್' ಎಂಬ ಪದದ ಅರ್ಥ ಗುರುವಿನ ಹತ್ತಿರ ಕುಳಿತು ಜ್ಞಾನವನ್ನು ಪಡೆಯುವುದು ಎಂದಾಗಿದೆ. ಈ ಗ್ರಂಥಗಳಲ್ಲಿ ಆತ್ಮ, ಪರಮಾತ್ಮ, ಬ್ರಹ್ಮ ಮತ್ತು ವಿಶ್ವದ ತತ್ವಜ್ಞಾನವನ್ನು ತಿಳಿಸಲಾಗಿದೆ. ಉಪನಿಷತ್ತುಗಳಲ್ಲಿ ದೈನಂದಿನ ಜೀವನವನ್ನು ಮೀರಿ ಪ್ರಾಯೋಗಿಕ ಆತ್ಮಜ್ಞಾನಕ್ಕೆ ಒತ್ತು ನೀಡಲಾಗಿದೆ.



**ಹೇಳಿ ನೋಡೋಣ!**

1. ಈ ವೇದದಲ್ಲಿ ಮುಖ್ಯವಾಗಿ ದೇವತೆಗಳ ಸ್ತುತಿಗಳಿವೆ. ಇದರಲ್ಲಿ ನಿಸರ್ಗದೇವತೆಗಳ ವರ್ಣನೆ ಇದೆ.

ಉತ್ತರ: ------------------------------------

2. ಈ ವೇದದಲ್ಲಿ ಯಜ್ಞ ಮಾಡುವ ವಿಧಿ ಮತ್ತು ಪದ್ಧತಿಗಳನ್ನು ನೀಡಲಾಗಿದೆ.

ಉತ್ತರ: ------------------------------------

3. ಈ ವೇದದ ಸ್ತುತಿಗಳನ್ನು ಸ್ವರಬದ್ಧವಾಗಿ ಮಾಡಲಾಗಿದೆ. ಇಲ್ಲಿನ ಶ್ಲೋಕಗಳನ್ನು ಸಂಗೀತದೊಂದಿಗೆ ಹಾಡಲಾಗುತ್ತದೆ.

ಉತ್ತರ: ------------------------------------

4. ಈ ವೇದವನ್ನು 'ಸಾಮಾನ್ಯ ಜನರ ಜೀವನಕ್ಕೆ ಸಂಬಂಧಿಸಿದ ವೇದ' ಎಂದು ಪರಿಗಣಿಸಲಾಗುತ್ತದೆ, ಏಕೆಂದರೆ ಇದರಲ್ಲಿ ಆರೋಗ್ಯ ಮತ್ತು ಮನೆಮದ್ದುಗಳ ಬಗ್ಗೆ ಮಾಹಿತಿ ಇದೆ.

ಉತ್ತರ: ------------------------------------

## 4.2 ವೈದಿಕ ಕಾಲದ ಜನಜೀವನ

ವೈದಿಕ ಕಾಲವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ – ಪೂರ್ವ ವೈದಿಕ ಕಾಲ (ಇದನ್ನು ಋಗ್ವೇದ ಕಾಲ ಎಂದೂ ಕರೆಯುತ್ತಾರೆ) ಮತ್ತು ಉತ್ತರ ವೈದಿಕ ಕಾಲ.

ವೈದಿಕ ಕಾಲವು ಸಾಮಾನ್ಯವಾಗಿ ಕ್ರಿ.ಪೂ. 1500 ರಿಂದ ಕ್ರಿ.ಪೂ. 1000 ರವರೆಗೆ ಎಂದು ಪರಿಗಣಿಸಲಾಗಿದೆ. ಈ ಕಾಲದ ಮಾಹಿತಿಯು ನಮಗೆ ಮುಖ್ಯವಾಗಿ ಋಗ್ವೇದದಿಂದ ಲಭ್ಯವಾಗುತ್ತದೆ. ಈ ಕಾಲದ ಜನರ ಜೀವನವು ಪಶುಪಾಲನೆಯ ಮೇಲೆ ಆಧಾರಿತವಾಗಿತ್ತು. ಕ್ರಮೇಣ ಕೃಷಿ ಪ್ರಾರಂಭವಾಯಿತು ಮತ್ತು ಹಸುಗಳನ್ನು ಮುಖ್ಯ ಆಸ್ತಿ ಎಂದು ಪರಿಗಣಿಸಲಾಗುತ್ತಿತ್ತು.

ಉತ್ತರ ವೈದಿಕ ಕಾಲವು ಕ್ರಿ.ಪೂ. 1000 ರಿಂದ ಕ್ರಿ.ಪೂ. 600 ರವರೆಗೆ ಎಂದು ಪರಿಗಣಿಸಲಾಗಿದೆ. ಈ ಕಾಲದಲ್ಲಿ ವೈದಿಕ ಜನರು ಗಂಗಾ ನದಿಯ ಬಯಲಿಗೆ ವಲಸೆ ಬಂದು ಅಲ್ಲಿ ನೆಲೆಸಿದರು. ಕೃಷಿ, ವ್ಯಾಪಾರ ಮತ್ತು ಹಸ್ತಕಲೆಗಳು ಹೆಚ್ಚು ಅಭಿವೃದ್ಧಿ ಹೊಂದಿದವು. ಇದೇ ಕಾಲದಲ್ಲಿ ನಗರಗಳ ಉದಯವಾಯಿತು.

**ವೈದಿಕ ಕಾಲ**

| ಪೂರ್ವ ವೈದಿಕ ಕಾಲ | ಉತ್ತರ ವೈದಿಕ ಕಾಲ |
|---|---|
| ಕ್ರಿ.ಪೂ. 1500 ರಿಂದ ಕ್ರಿ.ಪೂ. 1000 | ಕ್ರಿ.ಪೂ. 1000 ರಿಂದ ಕ್ರಿ.ಪೂ. 600 |

### ಕುಟುಂಬ ಮತ್ತು ಸಮಾಜ ರಚನೆ

ವೈದಿಕ ಕಾಲದಲ್ಲಿ 'ಕುಟುಂಬ'ವು ಸಮಾಜದ ಅತ್ಯಂತ ಸಣ್ಣ ಘಟಕವಾಗಿತ್ತು. ಪ್ರತಿ ಕುಟುಂಬದಲ್ಲಿ ತಂದೆ, ತಾಯಿ, ಮಕ್ಕಳು, ಅಜ್ಜ–ಅಜ್ಜಿ ಮತ್ತು ಇತರ ಸಂಬಂಧಿಕರು ಒಟ್ಟಾಗಿ ವಾಸಿಸುತ್ತಿದ್ದರು.

ಆ ಕಾಲದ ಸಮಾಜವು ಪಿತೃಪ್ರಧಾನವಾಗಿತ್ತು, ಅಂದರೆ ಕುಟುಂಬದ ಎಲ್ಲಾ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಕುಟುಂಬದ ಮುಖ್ಯಸ್ಥನಿಗಿರುತ್ತಿತ್ತು. ಕುಟುಂಬದ ಮುಖ್ಯಸ್ಥನನ್ನು 'ಗೃಹಪತಿ' ಎಂದು ಕರೆಯಲಾಗುತ್ತಿತ್ತು. ಕುಟುಂಬದ ಇತರ ಸದಸ್ಯರು ಗೃಹಪತಿಯ ಆಜ್ಞೆಯನ್ನು ಪಾಲಿಸುತ್ತಿದ್ದರು. **ಅನೇಕ ಕುಟುಂಬಗಳು ಸೇರಿ 'ಗ್ರಾಮ' (ಹಳ್ಳಿ) ರಚನೆಯಾಗುತ್ತಿತ್ತು, ಮತ್ತು ಅನೇಕ ಗ್ರಾಮಗಳು ಸೇರಿ 'ಜನ' ಅಥವಾ 'ರಾಜ್ಯ' ನಿರ್ಮಾಣವಾಗುತ್ತಿತ್ತು.** ಗ್ರಾಮದ ಮುಖ್ಯಸ್ಥನನ್ನು **'ಗ್ರಾಮಣಿ'** ಎಂದು ಮತ್ತು ರಾಜ್ಯದ ಮುಖ್ಯಸ್ಥನನ್ನು **'ರಾಜ'** ಎಂದು ಕರೆಯಲಾಗುತ್ತಿತ್ತು. ಸಮಾಜದಲ್ಲಿನ ಪ್ರತಿಯೊಬ್ಬರೂ ಧರ್ಮ, ಸತ್ಯ ಮತ್ತು ನ್ಯಾಯವನ್ನು ಪಾಲಿಸುವುದು ಅತ್ಯಗತ್ಯವೆಂದು ಪರಿಗಣಿಸಲಾಗಿತ್ತು. ಜನರು ಪರಸ್ಪರ ಸಹಕಾರ ಮತ್ತು ಪ್ರೀತಿಯಿಂದ ಬದುಕುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಗೂ ಸಮಾಜದಲ್ಲಿ ನಿರ್ದಿಷ್ಟ ಜವಾಬ್ದಾರಿ ಮತ್ತು ಸ್ಥಾನವಿತ್ತು. ವೈದಿಕ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಿದ್ದವು.

### ಶಿಕ್ಷಣ

ವೈದಿಕ ಕಾಲದಲ್ಲಿ ಶಿಕ್ಷಣಕ್ಕೆ ಸಮಾಜದಲ್ಲಿ ಅತ್ಯಂತ ಮಹತ್ವದ ಸ್ಥಾನವಿತ್ತು. ವಿದ್ಯಾರ್ಥಿಗಳಿಗೆ ಗುರುಕುಲ ಪದ್ಧತಿಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು, ಗುರುಕುಲ ಅಂದರೆ ವಿದ್ಯಾರ್ಥಿಗಳು ಗುರುವಿನ ಆಶ್ರಮದಲ್ಲಿಯೇ ವಾಸಿಸುತ್ತಾ, ಗುರುವಿನ ಮುಂದೆ ಕುಳಿತು ಅಧ್ಯಯನ ಮಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ಗುರುಕುಲದಲ್ಲಿ ಶಿಸ್ತುಬದ್ಧ ಜೀವನವನ್ನು ನಡೆಸಲು ಕಲಿಸಲಾಗುತ್ತಿತ್ತು, ಇದರಿಂದ ಅವರು ಜ್ಞಾನ, ನೈತಿಕತೆ ಮತ್ತು ಕರ್ತವ್ಯನಿಷ್ಠೆಯ ಆದರ್ಶಗಳನ್ನು ಇಟ್ಟುಕೊಂಡು ಸಮಾಜದಲ್ಲಿ ಕೆಲಸ ಮಾಡಲಿ ಎಂಬ



ಗುರುಕುಲ

ಉದ್ದೇಶವಿತ್ತು. ಗುರುಗಳು ಈ ಆದರ್ಶ ಜೀವನ ನಡೆಸಲು ಮಾರ್ಗದರ್ಶಕರಾಗಿದ್ದರು. ವಿದ್ಯಾರ್ಥಿಗಳು ವೇದಗಳು, ಗಣಿತ, ಖಗೋಳಶಾಸ್ತ್ರ, ಆಯುರ್ವೇದ, ಸಂಗೀತ, ನೀತಿಶಾಸ್ತ್ರ ಮತ್ತು ಯುದ್ಧಕಲೆಗಳನ್ನು ಅಭ್ಯಾಸ ಮಾಡುತ್ತಿದ್ದರು. ಶಿಕ್ಷಣದ ಉದ್ದೇಶ ಕೇವಲ ಜ್ಞಾನ ಸಂಪಾದನೆಯಷ್ಟೇ ಆಗಿರದೆ, ನಮ್ರತೆ, ಶಿಸ್ತು, ಧರ್ಮ ಮತ್ತು ಆತ್ಮನಿಯಂತ್ರಣದಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದೂ ಆಗಿತ್ತು.



**ಯೋಚನೆ ಮಾಡಿ.**

ನೀವು ಗುರುಕುಲದಲ್ಲಿ ಕಲಿಯುತ್ತಿದ್ದರೆ, ನಿಮ್ಮ ದಿನಚರಿ ಹೇಗಿರುತ್ತಿತ್ತು? ಅದರ ಬಗ್ಗೆ ಒಂದು ಪ್ರಬಂಧ ಬರೆಯಿರಿ.



**ಮಾಡಿ ನೋಡಿರಿ.**

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿನ ಕಥೆಗಳು ಇತಿಹಾಸ ಮತ್ತು ಸಂಸ್ಕೃತಿಯ ಕೆಲವು ಆಯಾಮಗಳ ಮೇಲೆ ಬೆಳಕು ಚೆಲ್ಲಲು ಉಪಯುಕ್ತವಾಗಿವೆ. ಅವುಗಳಿಂದ ಸಮಾಜದ ರಚನೆ ಮತ್ತು ಅಂದಿನ ಜೀವನದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಅಂತಹ ಕೆಲವು ಕಥೆಗಳನ್ನು ನೀವು ಹುಡುಕಿ ಮತ್ತು ತರಗತಿಯಲ್ಲಿ ಅವುಗಳ ನಾಟಕೀಯ ಪ್ರದರ್ಶನವನ್ನು ಮಾಡಿ.

### ಆಶ್ರಮ ವ್ಯವಸ್ಥೆ

ಪ್ರಾಚೀನ ಭಾರತದ ವೈದಿಕ ಸಂಸ್ಕೃತಿಯಲ್ಲಿ ಆಶ್ರಮ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು. ಈ ವ್ಯವಸ್ಥೆಯಲ್ಲಿ ವ್ಯಕ್ತಿಯ ಜೀವನವನ್ನು ನಾಲ್ಕು ಹಂತಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಆಶ್ರಮಕ್ಕೂ ನಿರ್ದಿಷ್ಟ ಕರ್ತವ್ಯಗಳು ಮತ್ತು ಉದ್ದೇಶಗಳನ್ನು ನೀಡಲಾಗಿತ್ತು.

### ನಾಲ್ಕು ಆಶ್ರಮಗಳು:

**ಬ್ರಹ್ಮಚರ್ಯಾಶ್ರಮ:** ಬ್ರಹ್ಮಚರ್ಯಾಶ್ರಮವು ಜೀವನದ ಮೊದಲ ಹಂತವಾಗಿದೆ. ಈ ಹಂತದಲ್ಲಿ ಮಕ್ಕಳು ಗುರುಗಳ ಮೇಲ್ವಿಚಾರಣೆಯಲ್ಲಿ ಶಿಕ್ಷಣ ಪಡೆಯುವುದು ಅಗತ್ಯವಾಗಿತ್ತು. ಆ ಕಾಲದಲ್ಲಿ ವಿದ್ಯಾರ್ಥಿಗಳು ಮನಸ್ಸಿಟ್ಟು ಅಧ್ಯಯನ ಮಾಡುತ್ತಿದ್ದರು.

**ಗೃಹಸ್ಥಾಶ್ರಮ –** ಶಿಕ್ಷಣ ಪೂರ್ಣಗೊಂಡ ನಂತರ ವ್ಯಕ್ತಿಯು ಗೃಹಸ್ಥಾಶ್ರಮಕ್ಕೆಪ್ರವೇಶಿಸುತ್ತಿದ್ದನು. ಇದರಲ್ಲಿಮದುವೆ, ಕೌಟುಂಬಿಕ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನುನಿಭಾಯಿಸುವುದಕ್ಕೆ ಮಹತ್ವವಿತ್ತು.

**ವಾನಪ್ರಸ್ಥಾಶ್ರಮ –** ಗೃಹಸ್ಥಾಶ್ರಮದ ಜವಾಬ್ದಾರಿಗಳನ್ನು ಪೂರೈಸಿದ ನಂತರದ ಒಂದು ನಿರ್ದಿಷ್ಟ ಹಂತದಲ್ಲಿ ವ್ಯಕ್ತಿಯು ಕುಟುಂಬದಿಂದ ದೂರ ಹೋಗಿ ಧ್ಯಾನ, ತಪಸ್ಸು ಮತ್ತು ತಾತ್ವಿಕ ಚಿಂತನೆಗಳನ್ನು ಮಾಡುವುದು ಅಪೇಕ್ಷಿತವಾಗಿತ್ತು.

**ಸನ್ಯಾಸಾಶ್ರಮ –** ಸನ್ಯಾಸಾಶ್ರಮವು ಜೀವನದ ಅಂತಿಮ ಹಂತವಾಗಿತ್ತು. ಈ ಹಂತದಲ್ಲಿಮನುಷ್ಯನು ಎಲ್ಲಾ ಸಂಬಂಧಗಳನ್ನು ತ್ಯಜಿಸಿ ಮಾನವ ಜನ್ಮದ ಅರ್ಥವನ್ನು ಅರ್ಥಮಾಡಿಕೊಳ್ಳಲು ಬದುಕಬೇಕು ಮತ್ತು ಬಹಳ ಕಾಲ ಒಂದೇ ಸ್ಥಳದಲ್ಲಿ ಇರಬಾರದು ಎಂಬ ಸಂಕೇತವಿತ್ತು.



**ಪ್ರಯತ್ನಿಸಿ ನೋಡಿ.**

'ಆಶ್ರಮ ವ್ಯವಸ್ಥೆಯ ಆಧಾರಿತ ಜೀವನಶೈಲಿಯ ನಾಲ್ಕು ಹಂತಗಳು' ಎಂಬ ವಿಷಯದ ಮೇಲೆ ಭಿತ್ತಿಪತ್ರವನ್ನು ತಯಾರಿಸಿ. ಪ್ರತಿ ಹಂತದ ಚಿತ್ರ, ಅದರ ಕರ್ತವ್ಯಗಳು ಮತ್ತು ಪ್ರಾಮುಖ್ಯತೆಯ ಬಗ್ಗೆ ಮಾಹಿತಿಯನ್ನು ಬರೆದು ತರಗತಿಯಲ್ಲಿ ಪ್ರದರ್ಶಿಸಿ.

ವೈದಿಕ ಕಾಲದ ಜನರ ಜೀವನವು ಸರಳವಾಗಿತ್ತು ಆದರೆ ಶಿಸ್ತುಬದ್ಧವಾಗಿತ್ತು. ಅವರಿಗೆ ಸತ್ಯ, ಸಂಯಮ ಮತ್ತು ಉದಾರತೆಯಂತಹ ಮೌಲ್ಯಗಳನ್ನು ಪಾಲಿಸುವ ಮಹತ್ವವನ್ನು ಕಲಿಸಲಾಗುತ್ತಿತ್ತು. ಸಮಾಜದಲ್ಲಿ ಏಕತೆ, ಸಹಕಾರ ಮತ್ತು ಪರಸ್ಪರ ಗೌರವಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಜನರು ಕಾಲೋಚಿತವಾಗಿ ಬರುವ ಉತ್ಸವಗಳು, ಯಜ್ಞಗಳು, ಗೀತೆ-ಸಂಗೀತ ಮತ್ತು ನೃತ್ಯಗಳ ಮೂಲಕ ಜೀವನದ ಆನಂದವನ್ನು ಆಚರಿಸುತ್ತಿದ್ದರು. ಧಾನ್ಯಗಳನ್ನು ವ್ಯರ್ಥ ಮಾಡದಿರುವುದು, ಬಡವರಿಗೆ ಸಹಾಯ ಮಾಡುವುದು ಮತ್ತು ಶಿಸ್ತಿನಿಂದ ಜೀವನ ನಡೆಸುವುದನ್ನು ನೈತಿಕತೆಯ ಭಾಗವೆಂದು ಪರಿಗಣಿಸಲಾಗಿತ್ತು. ಈ ನೀತಿಮೌಲ್ಯಗಳ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಸಂಸ್ಕಾರಗಳು ಸ್ಥಾಪಿತವಾಗುತ್ತಿದ್ದವು ಮತ್ತು ಅದರ ಆಧಾರದ ಮೇಲೆ ವ್ಯಕ್ತಿತ್ವವು ವಿಕಸನಗೊಳ್ಳುತ್ತಿತ್ತು. ವೈದಿಕ ಜೀವನಶೈಲಿಯು ಪ್ರಕೃತಿಯೊಂದಿಗೆ ಸುಸಂಗತವಾದ ಕಠಿಣ ಪರಿಶ್ರಮವಾಗಿತ್ತು.

**ನಿಮ್ಮ ಅಭಿಪ್ರಾಯವೇನು?**

ಆಶ್ರಮ ವ್ಯವಸ್ಥೆಯು ವ್ಯಕ್ತಿಯ ಜೀವನದಲ್ಲಿ ಯೋಜನೆ, ಶಿಸ್ತು, ಸಂಯಮ ಮತ್ತು ಕರ್ತವ್ಯದ ಪ್ರಜ್ಞೆಯನ್ನು ನಿರ್ಮಾಣ ಮಾಡಲು ಸಹಾಯ ಮಾಡುತ್ತದೆ.

### ದೈನಂದಿನ ಜೀವನ

ವೈದಿಕ ಕಾಲದ ಜನರ ಆಹಾರವು ಸರಳ ಮತ್ತು ಪೌಷ್ಟಿಕವಾಗಿತ್ತು. ಆ ಕಾಲದಲ್ಲಿ ಜನರು ಕೃಷಿ ಮತ್ತು ಪಶುಪಾಲನೆಯ ಮೇಲೆ ಅವಲಂಬಿತರಾಗಿದ್ದರು, ಆದ್ದರಿಂದ ಅವರ ಆಹಾರದಲ್ಲಿ ಧಾನ್ಯಗಳು, ಹಾಲು, ಮೊಸರು, ತುಪ್ಪ, ಜೇನುತುಪ್ಪ, ಹಣ್ಣುಗಳು ಮತ್ತು ತರಕಾರಿಗಳು ಸೇರಿದ್ದವು. ಸತು , ಗೋದಿ, ಅಕ್ಕಿ, ಸಜ್ಜೆ ಮುಂತಾದ ಧಾನ್ಯಗಳನ್ನು ಅವರು ಆಹಾರದಲ್ಲಿ ಬಳಸುತ್ತಿದ್ದರು. ಅವರು ಸಸ್ಯಜನ್ಯ ಆಹಾರವನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಋತುಮಾನಕ್ಕೆ ಅನುಗುಣವಾಗಿ ಹಣ್ಣುಗಳನ್ನು ಸೇವಿಸುತ್ತಿದ್ದರು. ಆಹಾರವು ಶುದ್ಧ ಮತ್ತು ಸಾತ್ವಿಕವಾಗಿರಬೇಕು, ಹಾಗೆಯೇ ಸರಿಯಾದ ಸಮಯದಲ್ಲಿ ಆಹಾರ ಸೇವಿಸಬೇಕು ಎಂಬುದು ಸಾಮಾನ್ಯ ನಿಯಮವಾಗಿತ್ತು. ಅವರ ಆಹಾರ ಪದ್ಧತಿಯು ಒಟ್ಟಾರೆಯಾಗಿ ಆರೋಗ್ಯ ಮತ್ತು ನಿಯಮಿತತೆಯ ಮೇಲೆ ಆಧಾರಿತವಾಗಿತ್ತು.



**ಸ್ವಲ್ಪ ಯೋಚಿಸಿ.**

ನಿಮ್ಮ ದಿನಚರಿಯಲ್ಲಿ ಏಳುವ ಸಮಯ, ಆಹಾರ, ವ್ಯಾಯಾಮ, ಅಭ್ಯಾಸ, ವಿಶ್ರಾಂತಿ ಇವುಗಳಲ್ಲಿ ನಿಯಮಿತತೆ ಇರಬೇಕು ಎಂಬ ಬಗ್ಗೆ ನಿಮ್ಮ ಅಭಿಪ್ರಾಯವೇನು?

ವೈದಿಕ ಲೋಕಜೀವನದಲ್ಲಿ ಆರೋಗ್ಯಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಪ್ರಾಚೀನ ಭಾರತೀಯ ವೈದ್ಯಕೀಯ ಶಾಸ್ತ್ರದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಮತೋಲಿತ ಆಹಾರ, ಯೋಗ ಮತ್ತು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಒತ್ತು ನೀಡಲಾಗಿತ್ತು. ಇದರಿಂದ ಜನರು ದೀರ್ಘಾಯುಷಿಗಳಾಗಿ ಮತ್ತು ಆರೋಗ್ಯಕರ ಜೀವನವನ್ನು ನಡೆಸುತ್ತಿದ್ದರು.



**ಮಾಡಿ ನೋಡಿ.**

ಕುಟುಂಬದ ಒಂದು ದಿನದ ಊಟದ ಪಟ್ಟಿಯನ್ನು ನೀವೇ ತಯಾರಿಸಿ. ಅದರಲ್ಲಿ ಯಾವ ಪದಾರ್ಥಗಳು ಹೆಚ್ಚು ಆರೋಗ್ಯಕರವಾಗಿವೆ ಮತ್ತು ಏಕೆ? ಇದರ ಬಗ್ಗೆ ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿ.

ಮನೋರಂಜನೆಯ ದೃಷ್ಟಿಯಿಂದ ವೈದಿಕ ಜನರು ಸಂಗೀತ, ನೃತ್ಯ, ಗಾಯನ, ವಾದ್ಯ ನುಡಿಸುವುದು, ಕಥೆ ಹೇಳುವುದು, ತಾತ್ವಿಕ ಚರ್ಚೆ ಅಂತಹ ವಿಷಯಗಳಲ್ಲಿ ಮಗ್ನರಾಗಿರುತ್ತಿದ್ದರು. ಧನುರ್ವಿದ್ಯೆ, ರಥದ ಓಟ, ಕುಸ್ತಿ, ದಾಳದಂತಹ ಆಟಗಳನ್ನು ಅವರು ಆಡುತ್ತಿದ್ದರು. ಉತ್ಸವಗಳು ಮತ್ತು ಧಾರ್ಮಿಕ ಕೂಟಗಳು ಸಾಮಾಜಿಕ ಒಗ್ಗಟ್ಟನ್ನು ಕಾಪಾಡುವ ಮತ್ತು ಮನೋರಂಜನೆಯ ಪ್ರಮುಖ ಸಾಧನಗಳಾಗಿದ್ದವು.

ವೈದಿಕ ಕಾಲದಲ್ಲಿ ಸಂಗೀತಕ್ಕೆ ಅತ್ಯಂತ ಮಹತ್ವದ ಸ್ಥಾನವಿತ್ತು. ಸಂಗೀತವು ಕೇವಲ ಮನೋರಂಜನೆಯ ಸಾಧನವಾಗಿರಲಿಲ್ಲ; ವೈದಿಕ ಪಠಣದಲ್ಲಿ ಸ್ವರಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇತ್ತು. ಸಂಗೀತವು ಧಾರ್ಮಿಕ ಮತ್ತು ಆಧ್ಯಾತ್ಮಿಕ ಹಾಗೂ ಲೋಕಜೀವನದ ಅವಿಭಾಜ್ಯ ಅಂಗವಾಗಿತ್ತು. ಮಂತ್ರೋಚ್ಚಾರಣೆಗಾಗಿ ಸ್ವರಗಳ ಜ್ಞಾನ ಅಗತ್ಯವಾಗಿತ್ತು. ಸಾಮವೇದವು ವಿಶೇಷವಾಗಿ ಸಂಗೀತಕ್ಕೆ ಸಂಬಂಧಿಸಿದೆ. ಆ ಕಾಲದಲ್ಲಿ ವೀಣೆ, ಮೃದಂಗ, ಶಂಖ ಮತ್ತು ಕೊಳಲಿನಂತಹ ವಾದ್ಯಗಳನ್ನು ಬಳಸಲಾಗುತ್ತಿತ್ತು. ಈ ವಾದ್ಯಗಳನ್ನು ಯಜ್ಞ, ನೃತ್ಯ ಮತ್ತು ಧಾರ್ಮಿಕ ವಿಧಿಗಳಿಗಾಗಿ ಬಳಸಲಾಗುತ್ತಿತ್ತು. ಪುರುಷರು ಮತ್ತು ಮಹಿಳೆಯರು ಇಬ್ಬರೂ ಗಾಯನ ಮತ್ತು ನೃತ್ಯದಲ್ಲಿ ಭಾಗವಹಿಸುತ್ತಿದ್ದರು. ವೈದಿಕ ಕಾಲದ ಸಂಗೀತವು ಭಕ್ತಿ, ಆನಂದ ಮತ್ತು ಆಧ್ಯಾತ್ಮಿಕತೆಯ ಪ್ರತೀಕವಾಗಿತ್ತು. ಇದರ ಮೇಲಿಂದಲೇ ಭಾರತೀಯ ಶಾಸ್ತ್ರೀಯ ಸಂಗೀತ ಪರಂಪರೆಯ ವಿಕಾಸವಾಯಿತು

**ಸ್ತ್ರೀಯರ ಸ್ಥಾನಮಾನ:** ಆರಂಭಿಕ ವೈದಿಕ ಕಾಲದಲ್ಲಿ ಮಹಿಳೆಯರ ಸಮಾಜದಲ್ಲಿ ಸಮಾನ ಸ್ಥಾನಮಾನವನ್ನು ಹೊಂದಿದ್ದರು. ಅವರಿಗೆ ಶಿಕ್ಷಣ ಪಡೆಯುವ ಪೂರ್ಣ ಅಧಿಕಾರವಿತ್ತು. ಪುರುಷರಂತೆ ಅವರಿಗೆ ವೇದಾಧ್ಯಯನ ಮಾಡುವ ಅವಕಾಶವಿತ್ತು. ಅನೇಕ ಮಹಿಳೆಯರು ವಿದ್ವಾಂಸರಾಗಿ ಪ್ರಸಿದ್ಧರಾಗಿದ್ದರು. ಲೋಪಾಮುದ್ರಾ, ಘೋಷಾ, ಗಾರ್ಗಿ, ಮೈತ್ರೇಯಿ ಮತ್ತು ಅಪಾಲಾ ಈ ಕಾಲದ ಕೆಲವು ಪ್ರಸಿದ್ಧ ವಿದ್ವಾಂಸರು. ಮಹಿಳೆಯರು ಧಾರ್ಮಿಕ ವಿಧಿವಿಧಾನಗಳಲ್ಲಿ ಮತ್ತು ಯಜ್ಞಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಆದರೆ, ಉತ್ತರ ವೈದಿಕ ಕಾಲದಲ್ಲಿ ಸಮಾಜವು ಹೆಚ್ಚು ಪಿತೃಪ್ರಧಾನವಾಯಿತು, ಸ್ತ್ರೀಯರ ಶಿಕ್ಷಣದ ಮೇಲೆ ನಿರ್ಬಂಧಗಳನ್ನು ಹೇರಲಾಯಿತು ಮತ್ತು ಅವರ ಸ್ವಾತಂತ್ರ್ಯ ಕಡಿಮೆಯಾಯಿತು. ಕ್ರಮೇಣ ಅವರ ಮೇಲಿನ ನಿರ್ಬಂಧಗಳು ಹೆಚ್ಚಾದವು ಮತ್ತು ಕುಟುಂಬ ಹಾಗೂ ಸಮಾಜದಲ್ಲಿ ಅವರ ಸ್ಥಾನಮಾನವು ಕ್ಷೀಣಿಸುತ್ತಾ ಹೋಯಿತು.

**ಆರ್ಥಿಕ ಜೀವನ: ಈ ಕಾಲದ ಜನರ ಆರ್ಥಿಕ ಜೀವನವು ಮುಖ್ಯವಾಗಿ ಕೃಷಿ ಮತ್ತು ಪಶುಸಂಗೋಪನೆಯನ್ನು ಆಧರಿಸಿತ್ತು.** ಗೋದಿ, ಬಾರ್ಲಿ, ಅಕ್ಕಿಯಂತಹ ಧಾನ್ಯಗಳನ್ನು ಬೆಳೆಯಲಾಗುತ್ತಿತ್ತು. ವೈದಿಕ ಕಾಲದಲ್ಲಿ ಹಸುಗಳಿಗೆ ಅತ್ಯಂತ

ಮಹತ್ವದ ಸ್ಥಾನವಿತ್ತು. ಹಸುಗಳು, ಎತ್ತುಗಳು, ಕುದುರೆಗಳು, ಕುರಿಗಳು ಮತ್ತು ಮೇಕೆಗಳು ಪ್ರಮುಖ ಪ್ರಾಣಿಗಳಾಗಿದ್ದವು. ಹಸುಗಳನ್ನು ವಿನಿಮಯದ ಮಾಧ್ಯಮವಾಗಿ ಬಳಸಲಾಗುತ್ತಿತ್ತು. ಕುದುರೆಗಳನ್ನು ಯುದ್ಧಗಳಲ್ಲಿ ಮತ್ತು ಯಜ್ಞಕಾರ್ಯದಲ್ಲಿ ಬಳಸಲಾಗುತ್ತಿತ್ತು, ಆದರೆ ಎತ್ತುಗಳನ್ನು ಕೃಷಿ ಮತ್ತು ಸಾರಿಗೆಗೆ ಬಳಸಲಾಗುತ್ತಿತ್ತು.

**ಕೃಷಿಯ ಹೊರತಾಗಿ ಅನೇಕ ಇತರ ಉದ್ಯೋಗಗಳೂ ಅಸ್ತಿತ್ವದಲ್ಲಿದ್ದವು. ಪಶುಸಂಗೋಪನೆ, ಲೋಹದ ಕೆಲಸ, ಕುಂಬಾರಿಕೆ, ನೇಯ್ಗೆ, ಚಿನ್ನದ ಕೆಲಸ ಮತ್ತು ರತ್ನಗಳ ತಯಾರಿಕೆ ಇವು ಕೆಲವು ಪ್ರಮುಖ ಉದ್ಯೋಗಗಳಾಗಿದ್ದವು.** ವ್ಯಾಪಾರವು ನಿಧಾನವಾಗಿ ಅಭಿವೃದ್ಧಿ ಹೊಂದುತ್ತಿತ್ತು. ವ್ಯವಹಾರಗಳನ್ನು ವಿನಿಮಯ ಪದ್ಧತಿಯ ಮೂಲಕ ನಡೆಸಲಾಗುತ್ತಿತ್ತು. ಕೆಲವು ಸ್ಥಳಗಳಲ್ಲಿ ಸಣ್ಣ ಮಾರುಕಟ್ಟೆಗಳು ನಿರ್ಮಾಣಗೊಂಡಿದ್ದವು. ದೋಣಿ ಮತ್ತು ನದಿ ಮಾರ್ಗಗಳ ಮೂಲಕ ವ್ಯಾಪಾರ ನಡೆಯುತ್ತಿತ್ತು ಎಂಬ ಉಲ್ಲೇಖಗಳೂ ಇವೆ. ವೃತ್ತಿಪರರು ಮತ್ತು ಕುಶಲಕರ್ಮಿಗಳು ಸಾಮಾಜಿಕ ವ್ಯವಸ್ಥೆಯ ಪ್ರಮುಖ ಭಾಗವಾಗಿದ್ದರು. ಅವರ ಸ್ವತಂತ್ರ ಸಂಘಗಳನ್ನು 'ಶ್ರೇಣಿ' ಎಂದು ಕರೆಯಲಾಗುತ್ತಿತ್ತು ಮತ್ತು ಅವುಗಳ ಮುಖ್ಯಸ್ಥರನ್ನು 'ಶ್ರೇಷ್ಠಿ' ಎಂದು ಕರೆಯಲಾಗುತ್ತಿತ್ತು.

**ಧಾರ್ಮಿಕ ಜೀವನ:** ವೈದಿಕ ಕಾಲದ ಜನರ ಧರ್ಮವು ಪ್ರಕೃತಿ ಪೂಜೆಯ ಮೇಲೆ ಆಧಾರಿತವಾಗಿತ್ತು. ವೈದಿಕ ಜನರು ಪ್ರಕೃತಿಯ ಅಂಶಗಳಿಗೆ ದೇವತೆಗಳ ಸ್ಥಾನವನ್ನು ನೀಡಿದ್ದರು. ಉದಾಹರಣೆಗೆ: ಅಗ್ನಿ, ವರುಣ, ಮರುತ್ತ (ಗಾಳಿ), ಸೂರ್ಯ, ಉಷಾ (ಮುಂಜಾನೆ), ಪೃಥ್ವಿ, ಸೋಮ (ಚಂದ್ರ). ಇಂದ್ರನನ್ನು ಅತ್ಯಂತ ಬಲಶಾಲಿ ದೇವರೆಂದು ಪರಿಗಣಿಸಲಾಗುತ್ತಿತ್ತು. ಯಜ್ಞದಲ್ಲಿ ಅರ್ಪಿಸಿದ ಹವಿಸ್ಸು (ಆಹುತಿ) ಅಗ್ನಿಯ ಮೂಲಕ ದೇವತೆಗಳಿಗೆ ತಲುಪುತ್ತದೆ ಎಂಬ ನಂಬಿಕೆ ಇತ್ತು. ಯಜ್ಞದಲ್ಲಿ ಅನ್ನ, ತುಪ್ಪ ಮತ್ತು ಧಾನ್ಯಗಳನ್ನು ಅರ್ಪಿಸಲಾಗುತ್ತಿತ್ತು. ವೈದಿಕ ಮಂತ್ರಗಳನ್ನು ಪಠಿಸುವ ಮೂಲಕ ದೇವತೆಗಳನ್ನು ಪ್ರಸನ್ನಗೊಳಿಸಲಾಗುತ್ತಿತ್ತು. ಧರ್ಮದ ಅಡಿಪಾಯವು ಸತ್ಯ, ನ್ಯಾಯ ಮತ್ತು 'ಋತ' ಅಂದರೆ ನೈಸರ್ಗಿಕ ನಿಯಮಗಳನ್ನು ಕಾಪಾಡುವುದು ಎಂಬ ತತ್ವಗಳ ಮೇಲೆ ನಿಂತಿತ್ತು.



**ನಿಮಗೆ ತಿಳಿದಿದೆಯೇ?**

ಭಾರತೀಯ ನೌಕಾಪಡೆಯ ಬೋಧಚಿನ್ಹೆಯ ಮೇಲಿನ ಧ್ಯೇಯವಾಕ್ಯ 'ಶಂ ನೊ ವರುಣ:' ಇದು ಉಪನಿಷತ್ತಿನ ಶ್ಲೋಕದ ಮೇಲೆ ಆಧಾರಿತವಾಗಿದೆ. ಇದರ ಅರ್ಥ ವರುಣ ದೇವನು ನಮಗೆ ಮಂಗಳವನ್ನುಂಟು ಮಾಡಲಿ ಮತ್ತು ವರುಣ ದೇವನು ನಮ್ಮನ್ನು ರಕ್ಷಿಸಲಿ ಎಂದಾಗಿದೆ. ಸಮುದ್ರದ ದೇವತೆಯಾದ ವರುಣನಿಗೆ ಗೌರವ ಸಲ್ಲಿಸಲು ಈ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಈ ಧ್ಯೇಯವಾಕ್ಯವನ್ನು ಅಂದಿನ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ ಅವರು ಸೂಚಿಸಿದ್ದರು. ಭಾರತೀಯ ನೌಕಾಪಡೆಯ ಹೊಸ ಲಾಂಛನವು ಛತ್ರಪತಿ ಶಿವಾಜಿ ಮಹಾರಾಜರ ರಾಜಮುದ್ರೆಯಿಂದ ಪ್ರೇರಿತವಾಗಿದೆ.




**ರಾಜಕೀಯ ವ್ಯವಸ್ಥೆ:** ವೈದಿಕ ಕಾಲದ ಸಮಾಜದಲ್ಲಿ ರಾಜನ ಸ್ಥಾನವು ಬಹಳ ಮಹತ್ವದ್ದಾಗಿತ್ತು. ರಾಜನು ಕೇವಲ ಆಡಳಿತಗಾರನಲ್ಲದೆ, ಧರ್ಮ ಮತ್ತು ನ್ಯಾಯವನ್ನು ಪಾಲಿಸುವ ಒಬ್ಬ ಆದರ್ಶ ರಾಜನಾಗಿರಬೇಕು ಎಂಬ ಕಲ್ಪನೆ ಇತ್ತು. ರಾಜನ ನಿರ್ಧಾರಗಳಲ್ಲಿ ಅವನಿಗೆ ಸಲಹೆ ನೀಡಲು ಎರಡು ಸಂಸ್ಥೆಗಳು ಕೆಲಸ ಮಾಡುತ್ತಿದ್ದವು. ಅವುಗಳನ್ನು 'ಸಭಾ' ಮತ್ತು 'ಸಮಿತಿ' ಎಂದು ಕರೆಯಲಾಗುತ್ತಿತ್ತು. 'ಸಭಾ' ಎಂದರೆ ಹಿರಿಯ ಮತ್ತು ಅನುಭವಿ ವ್ಯಕ್ತಿಗಳ ಮಂಡಳಿಯಾಗಿದ್ದು, ಅದು ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತಿತ್ತು. 'ಸಮಿತಿ' ಎಂದರೆ ಊರು ಅಥವಾ ಸಮೂಹದ ಸಾಮಾನ್ಯ ಜನರ ಸಭೆಯಾಗಿತ್ತು. ಇದರ ಹೊರತಾಗಿ 'ವಿದಥ' ಮತ್ತು 'ಜನ' ಎಂಬ ಸಂಸ್ಥೆಗಳೂ ರಾಜನಿಗೆ ಮಾರ್ಗದರ್ಶನ ನೀಡುತ್ತಿದ್ದವು. 'ಸಭಾ' ಮತ್ತು 'ವಿದಥ'ಗಳ ಕೆಲಸಗಳಲ್ಲಿ ಮಹಿಳೆಯರೂ ಸಹ ಪಾಲ್ಗೊಳ್ಳುತ್ತಿದ್ದರು.



ವೇದಕಾಲಿನ ರಥ

ರಾಜ್ಯದ ಆಡಳಿತವನ್ನು ಸುಗಮವಾಗಿ ನಡೆಸಲು ರಾಜನು ಅಧಿಕಾರಿಗಳನ್ನು ನೇಮಿಸುತ್ತಿದ್ದನು. **ಪುರೋಹಿತ, ಸೇನಾಪತಿ ಮತ್ತು ಸಭಾಪತಿಗಳು ವಿಶೇಷ ಅಧಿಕಾರ ಹೊಂದಿದ್ದರು.** ತೆರಿಗೆ ವಸೂಲಿ ಮಾಡಲು ನೇಮಕಗೊಂಡ ಅಧಿಕಾರಿಯನ್ನು 'ಭಾಗದುಘ' ಎಂದು ಕರೆಯಲಾಗುತ್ತಿತ್ತು (ಜನರ ಆದಾಯದಲ್ಲಿ ರಾಜನ ಪಾಲನ್ನು ಅಂದರೆ 'ಭಾಗ'ವನ್ನು ಸಂಗ್ರಹಿಸುವವನೇ ಭಾಗದುಘ). ಯುದ್ಧದ ಸಮಯದಲ್ಲಿ ರಾಜನು ಸ್ವತಃ ಸೈನ್ಯದ ನೇತೃತ್ವ ವಹಿಸುತ್ತಿದ್ದನು. ಆಡಳಿತವು ಮುಖ್ಯವಾಗಿ ಧರ್ಮ, ನ್ಯಾಯ, ರಕ್ಷಣೆ ಮತ್ತು ಸಮಾಜದ ಸುವ್ಯವಸ್ಥೆಯ ತತ್ವಗಳ ಮೇಲೆ ಆಧಾರಿತವಾಗಿತ್ತು.

ವೈದಿಕ ಕಾಲದಲ್ಲಿ ರಾಜನು ರಾಜ್ಯದ ಮುಖ್ಯಸ್ಥನಾಗಿದ್ದರೂ, ಅವನಿಗೆ ಸರ್ವಾಧಿಕಾರವಿರಲಿಲ್ಲ. ಅವನು 'ಸಭಾ' ಮತ್ತು 'ಸಮಿತಿ'ಯ ಸಲಹೆಯಂತೆ ರಾಜ್ಯಭಾರ ಮಾಡಬೇಕಾಗುತ್ತಿತ್ತು.



## ಸ್ವಾಧ್ಯಾಯ

**ಪ್ರ. 1 ಅ) ಒಂದೇ ಶಬ್ದದಲ್ಲಿ ಉತ್ತರಿಸಿ.**

1. 'ವಿದ್' ಎಂದರೆ – ತಿಳಿಯುವುದು ......................
2. ಗುರುಗಳ ಹತ್ತಿರ ಕುಳಿತು ಜ್ಞಾನ ಪಡೆಯುವುದು ಎಂದರೆ .. ..................................
3. ಹಿರಿಯ ವ್ಯಕ್ತಿಗಳ ಮಂಡಳಿ ಎಂದರೆ .......................

**ಬ) ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| 1) ಋಗ್ವೇದ | ಅ) ಯಜ್ಞದ ಮಂತ್ರಗಳ ಗಾಯನ |
| 2) ಯಜುರ್ವೇದ | ಬ) ಆರೋಗ್ಯ ಮತ್ತು ಔಷಧೋಪಚಾರ |
| 3) ಸಾಮವೇದ | ಕ) ದೇವತೆಗಳ ಸ್ತೋತ್ರಗಳು |
| 4) ಅಥರ್ವವೇದ | ಡ) ಯಜ್ಞವಿಧಿಗಳ ವರ್ಣನೆ |

**ಪ್ರ. 2 ಅ) ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**




**ಬ) ಟಿಪ್ಪಣಿ ಬರೆಯಿರಿ.**

1. ವೈದಿಕ ಕಾಲದ ಶಿಕ್ಷಣ ವ್ಯವಸ್ಥೆ.
2. ವೈದಿಕ ಕಾಲದ ಆರ್ಥಿಕ ಜೀವನ.
3. ಸ್ತ್ರೀಯರ ಸ್ಥಾನಮಾನ

**ಪ್ರ. 3 ಅ) ಕೆಳಗಿನ ಹೇಳಿಕೆಗಳನ್ನು ಕಾರಣದೊಂದಿಗೆ ಸ್ಪಷ್ಟಪಡಿಸಿ.**

1. ವೈದಿಕ ಸಂಸ್ಕೃತಿಯಲ್ಲಿ ಕೃಷಿಗೆ ಮಹತ್ವವಿತ್ತು.
2. ವೈದಿಕ ಕಾಲದ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಗೌರವಯುತವಾಗಿತ್ತು.

**ಬ) ವೈದಿಕ ಕಾಲದ ಮನೋರಂಜನೆಯ ಸಾಧನಗಳು ಮತ್ತು ಇಂದಿನ ಕಾಲದ ಮನೋರಂಜನೆಯ ಸಾಧನಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಬರೆಯಿರಿ.**

**ಪ್ರ. 4 ವೈದಿಕ ಕಾಲದ ರಾಜಕೀಯ ವ್ಯವಸ್ಥೆಯ ಈ ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ.**

| ಪದ/ಸಂಸ್ಥೆ | ಕಾರ್ಯ |
|---|---|
| ಸಭಾ | ------------------------------ |
| ಸಮಿತಿ | ------------------------------ |
| ಭಾಗದುಘ | ------------------------------ |

**ಪ್ರ. 5 ಯೋಗಾಭ್ಯಾಸ ಮಾಡುವುದರಿಂದ ನಮ್ಮ ಜೀವನಶೈಲಿಯಲ್ಲಿ ಯಾವ ಬದಲಾವಣೆಗಳು ಉಂಟಾಗಬಹುದು?**

### ಉಪಕ್ರಮ

- ಶಿಕ್ಷಣಕ್ಕಾಗಿ ದೃಢ ಸಂಕಲ್ಪ ಮಾಡಿದ ಏಕಲವ್ಯನ ಕಥೆಯನ್ನು ನಾಟಕದ ರೂಪದಲ್ಲಿ ಪ್ರಸ್ತುತಪಡಿಸಿ.
- ಅಂತರಜಾಲದ ಸಹಾಯದಿಂದ ವೇದಗಳಲ್ಲಿನ ಶ್ಲೋಕಗಳನ್ನು ಸಂಗ್ರಹಿಸಿ.
- ಭಾರತೀಯ ವಾಯುಸೇನೆ ಮತ್ತು ಭೂಸೇನೆಯ ಲಾಂಛನ ಹಾಗೂ ಧ್ಯೇಯವಾಕ್ಯಗಳನ್ನು ಸಂಗ್ರಹಿಸಿ ಬರೆಯಿರಿ

***

# 5 ವಿವಿಧ ಧರ್ಮಗಳ ಬೋಧನೆ




5.1. ವೈದಿಕ ಧರ್ಮ
5.2. ಜೈನ ಧರ್ಮ
5.3. ಬೌದ್ಧ ಧರ್ಮ
5.4. ಯಹೂದಿ(ಜ್ಯೂ) ಧರ್ಮ
5.5. ಕ್ರೈಸ್ತ ಧರ್ಮ
5.6. ಇಸ್ಲಾಂ ಧರ್ಮ
5.7. ಪಾರ್ಸಿ ಧರ್ಮ


ಭಾರತವು ಧಾರ್ಮಿಕ ವೈವಿಧ್ಯತೆಯ ದೇಶವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ವಿವಿಧ ಧರ್ಮಗಳು ಉದಯಿಸಿವೆ ಮತ್ತು ವಿಸ್ತರಿಸಿವೆ. ವೈದಿಕ, ಜೈನ, ಬೌದ್ಧ, ಯಹೂದಿ, ಕ್ರಿಶ್ಚಿಯನ್, ಇಸ್ಲಾಂ ಮತ್ತು ಪಾರ್ಸಿ ಧರ್ಮಗಳು ಭಾರತೀಯ ಸಂಸ್ಕೃತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ. ಮುಂದೆ ಮಧ್ಯಕಾಲೀನ ಯುಗದಲ್ಲಿ ಸಿಖ್ ಧರ್ಮವು ಸ್ಥಾಪನೆಯಾಯಿತು. ಪ್ರತಿಯೊಂದು ಧರ್ಮದ ಬೋಧನೆಗಳಲ್ಲಿ ಮೂಲಭೂತ ಜೀವನ ಮೌಲ್ಯಗಳು, ಸಹಿಷ್ಣುತೆ, ನ್ಯಾಯ ಮತ್ತು ನೈತಿಕತೆಗೆ ಒತ್ತು ನೀಡಲಾಗಿದೆ.

ಈ ಧಾರ್ಮಿಕ ವೈವಿಧ್ಯತೆಯು ಭಾರತೀಯ ಸಮಾಜದ ಸಂಸ್ಕೃತಿಗೆ ವಿಶಿಷ್ಟ ಗುರುತನ್ನು ನೀಡುತ್ತದೆ. ಸರ್ವಸಮಾವೇಶಕತೆ ಭಾರತೀಯ ಸಂಸ್ಕೃತಿಯ ಅಂತರ್ಗತ ಗುಣವಾಗಿದೆ. ಈ ಗುಣದಿಂದಾಗಿ ನಮ್ಮ ದೇಶದ ವೈವಿಧ್ಯತೆಯಲ್ಲಿನ ಏಕತೆಯು ಇಂದಿನವರೆಗೂ ಉಳಿದುಕೊಂಡು ಬಂದಿದೆ.

**ಪ್ರಾಚೀನ ಭಾರತದಲ್ಲಿ ಯಾವ ಧರ್ಮಗಳು ಪ್ರಸಾರವಾದವು? ಈ ವಿವಿಧ ಧರ್ಮಗಳ ತತ್ವಶಾಸ್ತ್ರವು ನಮಗೆ ಏನನ್ನು ಕಲಿಸುತ್ತದೆ?**

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು, ಈ ಪಾಠದಲ್ಲಿ ನಾವು ಪ್ರಾಚೀನ ಭಾರತದ ವಿವಿಧ ಧರ್ಮಗಳ ತತ್ವಶಾಸ್ತ್ರ, ಬೋಧನೆಗಳು ಮತ್ತು ಆ ಧರ್ಮಗಳ ಪದ್ಧತಿಗಳನ್ನು ಪರಿಚಯ ಮಾಡಿಕೊಳ್ಳಲಿದ್ದೇವೆ.

ಪ್ರಾಚೀನ ಭಾರತದಲ್ಲಿ ಧರ್ಮದ ಅಸ್ತಿತ್ವವು ವೈಯಕ್ತಿಕ ನಂಬಿಕೆಗಿಂತ ಹೆಚ್ಚಿನ ವಿಶಾಲವಾದ ಚಿಂತನೆಗೆ ಮಹತ್ವ ನೀಡುತ್ತಿತ್ತು. ಅದರಲ್ಲಿ ಜೀವನದ ಅಂತಿಮ ಗುರಿಗಳ ಪ್ರಾಪ್ತಿ, ಸತ್ಯದ ಅನ್ವೇಷಣೆ ಮತ್ತು ಸಹಿಷ್ಣುತೆಗೆ ಹೆಚ್ಚಿನ ಮಹತ್ವವಿತ್ತು. ಪ್ರಾಚೀನ ಭಾರತದಲ್ಲಿ ಅನೇಕ ಧರ್ಮಗಳು ಪ್ರಸಾರಗೊಂಡವು. ವೈದಿಕ ಧರ್ಮವು ಶ್ರುತಿ ಅಂದರೆ ವೇದಗಳು, ಸ್ಮೃತಿ ಅಂದರೆ ವೇದಗಳ ಆಧಾರಿತ ವೈದಿಕ ಸಾಹಿತ್ಯ ಮತ್ತು ಪುರಾಣಗಳ ಪ್ರಕಾರ ಆಚರಿಸಲ್ಪಡುವ ಧರ್ಮವಾಗಿದೆ. ಜೈನ ಮತ್ತು ಬೌದ್ಧ ಧರ್ಮಗಳು ಪ್ರಾಚೀನ ಧರ್ಮದ ಹರಿವುಗಳಾಗಿವೆ. ಕ್ರಿಶ್ಚಿಯನ್ ಶಕೆಯ ಮೊದಲ ಶತಮಾನದಲ್ಲಿ ಯಹೂದಿ (ಜ್ಯೂ) ಮತ್ತು ಕ್ರಿಶ್ಚಿಯನ್ ಧರ್ಮಗಳು ಭಾರತಕ್ಕೆ ಪ್ರವೇಶಿಸಿದವು. ಇಸ್ಲಾಂ ಮತ್ತು ಪಾರ್ಸಿ ಧರ್ಮಗಳ ಅನುಯಾಯಿಗಳು ಸಾಮಾನ್ಯವಾಗಿ ಕ್ರಿ.ಶ. ಏಳನೇ-ಎಂಟನೇ ಶತಮಾನದಲ್ಲಿ ಭಾರತಕ್ಕೆ ಬಂದರು.



**ಸ್ವಲ್ಪ ಯೋಚಿಸಿ**

ನಿಮ್ಮ ಕುಟುಂಬದ ಧಾರ್ಮಿಕ ಹಬ್ಬಗಳು, ಪೂಜೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳ ಬಗ್ಗೆ ನಿಮ್ಮ ಅಜ್ಜ-ಅಜ್ಜಿ ಅಥವಾ ಪೋಷಕರಿಂದ ತಿಳಿದುಕೊಳ್ಳಿ. ಈ ಹಬ್ಬಗಳನ್ನು ಆಚರಿಸಲು ಮತ್ತು ಸಂಪ್ರದಾಯಗಳನ್ನು ಅನುಸರಿಸಲು ಇರುವ ತಾರ್ಕಿಕ ಕಾರಣಗಳೇನಿರಬಹುದು ಎಂಬುದರ ಬಗ್ಗೆ ಅವರೊಂದಿಗೆ ಚರ್ಚಿಸಿ.

## 5.1. ವೈದಿಕ ಧರ್ಮ

ವೈದಿಕ ಧರ್ಮವನ್ನು ಭಾರತದ ಅತ್ಯಂತ ಹಳೆಯ ಧರ್ಮವೆಂದು ಪರಿಗಣಿಸಲಾಗಿದೆ. ವೇದ ಸಾಹಿತ್ಯವು ಈ ಧರ್ಮದ ಮೂಲಭೂತ ಆಧಾರವಾಗಿದೆ. ವೈದಿಕ ಜನರು ಯಜ್ಞ, ಪ್ರಕೃತಿ ಪೂಜೆ ಮತ್ತು ಅದಕ್ಕಾಗಿ ವೇದಗಳ ಮಂತ್ರಗಳ ಮೂಲಕ ಹವಿಸ್ಸುಗಳನ್ನು ಅರ್ಪಿಸುತ್ತಿದ್ದರು. ಪ್ರಾಚೀನ ಭಾರತದ ಸಾಮಾನ್ಯ ಜನರ ಜೀವನವು ಸರಳವಾಗಿತ್ತು. ಧರ್ಮದ ಮೇಲೆ ಮತ್ತು ನೈತಿಕ ಮೌಲ್ಯಗಳನ್ನು ಆಧರಿಸಿತ್ತು.

ಉದಾಹರಣೆಗೆ, ಸತ್ಯವನ್ನೇ ನುಡಿಯುವುದು, ಕುಟುಂಬದಲ್ಲಿ ಹಿರಿಯ ವ್ಯಕ್ತಿಗಳನ್ನು ಗೌರವಿಸುವುದು, ಸಂಬಂಧಗಳ ಮರ್ಯಾದೆಯನ್ನು ಕಾಪಾಡುವುದು, ಇತರರಿಗೆ ಹಾನಿಯಾಗದಂತೆ ನಡೆದುಕೊಳ್ಳುವುದು ಮೊದಲಾದವುಗಳಿಗೆ ಒತ್ತು ನೀಡಲಾಗುತ್ತಿತ್ತು. ಕಾಲಾನಂತರದಲ್ಲಿ ಈ ವಿಧಿ-ವಿಧಾನಗಳು ಸಂಕೀರ್ಣಗೊಂಡವು.

ವೈದಿಕ ಧರ್ಮದ ಪ್ರಮುಖ ಗ್ರಂಥಗಳಲ್ಲಿ ವೇದಗಳು, ಉಪನಿಷತ್ತುಗಳು, ಪುರಾಣಗಳು ಮತ್ತು ಧರ್ಮಶಾಸ್ತ್ರಗಳು ಸೇರಿವೆ. ವೇದಾಂಗಗಳಲ್ಲಿ ಯಜ್ಞ, ಮಂತ್ರ ಮತ್ತು ದೇವತೆಗಳ ಕುರಿತು ಮಾಹಿತಿಯನ್ನು ನೀಡಲಾಗಿದೆ. ಉಪನಿಷತ್ತುಗಳಲ್ಲಿನ ತತ್ವಜ್ಞಾನದಲ್ಲಿ ಆತ್ಮ, ಬ್ರಹ್ಮ, ಜೀವನದ ಉದ್ದೇಶ ಮತ್ತು ಮೋಕ್ಷದ ಕುರಿತು ಚರ್ಚೆ ನಡೆದಿದೆ. ಅದರ ಪ್ರಕಾರ, ಮಾನವ ಜೀವನ, ನಿಸರ್ಗ ಮತ್ತು ವಿಶ್ವ ಇವೆಲ್ಲವೂ ಒಂದೇ ಆಗಿದ್ದು, ಇದು 'ಪರಬ್ರಹ್ಮನ' ಆವಿಷ್ಕಾರವಾಗಿದೆ. ಅದನ್ನೇ 'ತತ್' ಎಂದು ಕರೆಯಲಾಗುತ್ತದೆ. ಈ ವಿಚಾರವನ್ನು ಎರಡು ಪ್ರಸಿದ್ಧ ವಾಕ್ಯಗಳಲ್ಲಿ ಮಂಡಿಸಲಾಗಿದೆ:

**ಆ ಎರಡು ವಾಕ್ಯಗಳು ಹೀಗಿವೆ:**

ಅಹಂ ಬ್ರಹ್ಮಾಸ್ಮಿ - ನಾನು ಬ್ರಹ್ಮನಾಗಿದ್ದೇನೆ.

ತತ್ ತ್ವಂ ಅಸಿ - ಅದು ನೀನೇ ಆಗಿದ್ದೀಯೆ (ನೀನು 'ತತ್' ಆಗಿದ್ದೀಯೆ).

ಹಿಂದೂ ಧರ್ಮವು ವೈದಿಕ ಧರ್ಮದ ಹೆಚ್ಚು ವ್ಯಾಪಕವಾದ ರೂಪವಾಗಿದೆ. ಹಿಂದೂ ಧರ್ಮವು ವೇದಗಳ ಜ್ಞಾನವನ್ನು ಕಾಪಾಡಿಕೊಂಡಿತು ಹಾಗೂ ಭಕ್ತಿ, ತತ್ವಜ್ಞಾನ ಮತ್ತು ಮೋಕ್ಷ ಕಲ್ಪನೆಗಳನ್ನು ರೂಢಿಸಿತು. ಹಿಂದೂ ಧರ್ಮದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯವು ಅವರ ಕರ್ಮದ ಮೇಲೆ ಅವಲಂಬಿತವಾಗಿರುತ್ತದೆ ಎಂದು ನಂಬಲಾಗುತ್ತದೆ. ಧರ್ಮ ಎಂದರೆ ಕೇವಲ ಧಾರ್ಮಿಕ ವಿಧಿಗಳಲ್ಲ, ಸತ್ಯ, ನೈತಿಕತೆ, ಕರ್ತವ್ಯ ಪಾಲನೆ ಮತ್ತು ಸಮಾಜಸೇವೆಯಂತಹ ಮೌಲ್ಯಗಳನ್ನು ಪಾಲಿಸುವುದು ವ್ಯಕ್ತಿಯ ಸಹಜ ಧರ್ಮವಾಗಿದೆ. ಈ ಮೌಲ್ಯಗಳಂತೆ ನಡೆಯುವುದು ಎಂದರೆ ಧರ್ಮವನ್ನು ಪಾಲಿಸುವುದು ಎಂದರ್ಥ. ಯಜ್ಞ-ಯಾಗ, ಉಪಾಸನೆ-ಪೂಜೆ ಮಾಡುವುದು, ಹಬ್ಬ ಹರಿದಿನಗಳನ್ನು ಆಚರಿಸುವುದು ಇವೆಲ್ಲವೂ ಹಿಂದೂ ಧರ್ಮದ ಜೀವನಶೈಲಿಯ ಭಾಗವಾಗಿವೆ. ಧರ್ಮ ಪಾಲನೆ ಮತ್ತು ದೈನಂದಿನ ಜೀವನದ ವ್ಯವಹಾರಗಳ ನಡುವೆ ಹಿಂದೂ ಜೀವನಶೈಲಿಯಲ್ಲಿ ಉತ್ತಮ ಸಮನ್ವಯ ಸಾಧಿಸಲಾಗಿದೆ. ಪ್ರಾಚೀನ ಭಾರತೀಯ ಸಮಾಜದಲ್ಲಿ ವಿಕಸಿತಗೊಂಡ ಸಂಸ್ಕೃತಿ, ಕಲೆ, ಸಾಹಿತ್ಯ ಮತ್ತು ವಿಜ್ಞಾನದಲ್ಲೂ ಧರ್ಮದ ಜೀವನ ಮತ್ತು ವ್ಯವಹಾರಿಕತೆಯ ಸಮನ್ವಯ ಕಂಡುಬರುತ್ತದೆ.

'ಭಗವದ್ಗೀತೆ' ಹಿಂದೂಗಳ ಪವಿತ್ರ ಗ್ರಂಥವಾಗಿದೆ. ಫಲದ ಅಪೇಕ್ಷೆ ಇಲ್ಲದೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಮಾಡಬೇಕು ಎಂದು ಈ ಗ್ರಂಥದಲ್ಲಿ ಹೇಳಲಾಗಿದೆ. ಕ್ರಿಸ್ತ ಶಕ ಎಂಟನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರು ಆಗಿ ಹೋದರು. ಅವರು ಜ್ಞಾನ ಮತ್ತು ವೈರಾಗ್ಯದ ವಿಷಯಗಳ ಮೇಲೆ ಹೆಚ್ಚಿನ ಒತ್ತು ನೀಡಿದರು. 'ಉಪನಿಷತ್ತುಗಳು', 'ಬ್ರಹ್ಮಸೂತ್ರಗಳು' ಮತ್ತು 'ಭಗವದ್ಗೀತೆ' ಎಂಬ ಗ್ರಂಥಗಳ ಮೇಲೆ ಭಾಷ್ಯಗಳನ್ನು ಬರೆಯುವ ಮೂಲಕ ಅವುಗಳ ಅರ್ಥವನ್ನು ಸ್ಪಷ್ಟಪಡಿಸಿದರು. ಅವರು ಭಾರತದ ನಾಲ್ಕು ದಿಕ್ಕುಗಳಲ್ಲಿ ಬದರಿನಾಥ್, ದ್ವಾರಕಾ, ಜಗನ್ನಾಥಪುರಿ ಮತ್ತು ಶೃಂಗೇರಿ ಎಂಬ ಸ್ಥಳಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು.



ಆದಿ ಶಂಕರಾಚಾರ್ಯರು

ಸರ್ವೇ ಭವಂತು ಸುಖಿನಃ: - ಎಲ್ಲರೂ ಸುಖಿಯಾಗಿರಲಿ.

ಸರ್ವೇ ಸಂತು ನಿರಾಮಯಾಃ: - ಎಲ್ಲರೂ ರೋಗಮುಕ್ತರಾಗಿರಲಿ.

ಸರ್ವೇ ಭದ್ರಾಣಿ ಪಶ್ಯಂತು: - ಎಲ್ಲರಿಗೂ ಮಂಗಳಕರವಾದ ವಿಷಯಗಳು ಗೋಚರಿಸಲಿ.

ಮಾ ಕಶ್ಚಿದ್ ದುಃಖಭಾಗ್ಭವೇತ್: - ಯಾರೂ ದುಃಖಿಯಾಗದಿರಲಿ.

ಈ ಸಂಸ್ಕೃತ ಶ್ಲೋಕದ ಸಾಲುಗಳಲ್ಲಿ ಎಲ್ಲಾ ಪ್ರಾಣಿಮಾತ್ರರ ಕಲ್ಯಾಣವಾಗಲಿ ಎಂಬ ವಿಚಾರ ಮತ್ತು ಅವರ ಬಗ್ಗೆ ಕರುಣೆಯನ್ನು ವ್ಯಕ್ತಪಡಿಸಲಾಗಿದೆ.



**ಮಾಡಿ ನೋಡಿ.**

''ಏಳು ದಿನಗಳಲ್ಲಿ ನೀವು ಮಾಡಿದ ಒಳ್ಳೆಯ ಕೆಲಸಗಳನ್ನು'' ನಿಮ್ಮ ನೋಟ್‌ಬುಕ್‌ಲ್ಲಿ ಬರೆದಿಡಿ. ಉದಾಹರಣೆಗೆ: ಸ್ನೇಹಿತನಿಗೆ ಸಹಾಯ ಮಾಡಿದ್ದು, ಮನೆಯಲ್ಲಿ ಸ್ವಚ್ಛತೆ ಮಾಡಿದ್ದು, ಗಿಡಗಳಿಗೆ ನೀರು ಹಾಕಿದ್ದು ಇತ್ಯಾದಿ. ವಾರದ ಕೊನೆಯಲ್ಲಿ ತರಗತಿಯಲ್ಲಿ ಈ ಕೆಲಸಗಳನ್ನು ಮಾಡುವಾಗ ನೀವು ಏನು ಕಲಿತಿದ್ದೀರಿ ಎಂದು ಹೇಳಿ.



### ನಿಮಗೆ ಗೊತ್ತಿದೆಯೇ ?

ಭಾರತೀಯ ತತ್ವಶಾಸ್ತ್ರದ ಪರಂಪರೆಯಲ್ಲಿ ವಿವಿಧ ವಿಚಾರಧಾರೆಗಳಿಂದ ಆರು ಪ್ರಮುಖ ದರ್ಶನಗಳು (ಸಿದ್ಧಾಂತಗಳು) ರೂಪುಗೊಂಡಿವೆ. ಇವುಗಳನ್ನು 'ಷಡ್ದರ್ಶನ' ಎಂದು ಕರೆಯಲಾಗುತ್ತದೆ. ಭಾರತೀಯ ತತ್ವಜ್ಞಾನದಲ್ಲಿ ಈ ಆರು ದರ್ಶನಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಇಲ್ಲಿ 'ದರ್ಶನ' ಎಂದರೆ ತತ್ವಜ್ಞಾನ ಎಂಬ ಅರ್ಥವಿದೆ.

ಷಡ್ದರ್ಶನಗಳಲ್ಲಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸೆ ಮತ್ತು ವೇದಾಂತ ಎಂಬ ಆರು ದರ್ಶನಗಳು ಸೇರಿವೆ. ಈ ದರ್ಶನಗಳಲ್ಲಿ ವಿಶ್ವದ ಉತ್ಪತ್ತಿ, ಸೃಷ್ಟಿ, ಆತ್ಮ ಮತ್ತು ಮೋಕ್ಷದಂತಹ ಮೂಲಭೂತ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲಾಗಿದೆ.

1. **ಸಾಂಖ್ಯ ದರ್ಶನ:** ಈ ದರ್ಶನದಲ್ಲಿ ವಿಶ್ವದ ಉತ್ಪತ್ತಿ ಹೇಗೆ ಆಯಿತು ಎಂಬುದರ ಬಗ್ಗೆ ಸ್ಪಷ್ಟನೆಯನ್ನು ನೀಡಲಾಗಿದೆ.
2. **ಯೋಗ ದರ್ಶನ:** ಇದು ಆರೋಗ್ಯವಂತ ಶರೀರಕ್ಕಾಗಿ ಸಾಧನೆ ಮತ್ತು ಧ್ಯಾನದ ಮೂಲಕ ಆತ್ಮಜ್ಞಾನವನ್ನು ಪಡೆಯುವುದಕ್ಕೆ ಒತ್ತು ನೀಡುತ್ತದೆ.
3. **ನ್ಯಾಯ ದರ್ಶನ:** ಈ ದರ್ಶನವು ತರ್ಕಶಾಸ್ತ್ರ ಮತ್ತು ಜ್ಞಾನದ ಮೇಲೆ ಆಧಾರಿತವಾಗಿದೆ.
4. **ವೈಶೇಷಿಕ ದರ್ಶನ:** ವಿಶ್ವವು ಅಣುಗಳಿಂದ ಮಾಡಲ್ಪಟ್ಟಿದೆ ಎಂಬುದು ಈ ದರ್ಶನದ ಒಂದು ಪ್ರಮುಖ ಸಿದ್ಧಾಂತವಾಗಿದೆ.
5. **ಪೂರ್ವಮೀಮಾಂಸೆ ದರ್ಶನ:** ಈ ದರ್ಶನವು ವೇದಗಳಲ್ಲಿನ ಕರ್ಮಕಾಂಡಗಳನ್ನು ವಿಶ್ಲೇಷಿಸುತ್ತದೆ.
6. **ವೇದಾಂತ ದರ್ಶನ:** ಈ ದರ್ಶನವು ಉಪನಿಷತ್ತುಗಳ ತತ್ವಜ್ಞಾನದ ಮೇಲೆ ಆಧಾರಿತವಾಗಿದೆ.

## 5.2 ಜೈನ ಧರ್ಮ

ಜೈನ ಧರ್ಮವು ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಈ ಧರ್ಮದಲ್ಲಿ 'ಅಹಿಂಸೆ' ತತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಧರ್ಮದ ಜ್ಞಾನವನ್ನು ಪ್ರಕಟಿಸುವವರನ್ನು ಜೈನ ಧರ್ಮದಲ್ಲಿ 'ತೀರ್ಥಂಕರ' ಎಂದು ಕರೆಯುತ್ತಾರೆ. ಜೈನ ಪರಂಪರೆಯ ಪ್ರಕಾರ ಒಟ್ಟು 24 ತೀರ್ಥಂಕರರಿದ್ದಾರೆ. ವರ್ಧಮಾನ ಮಹಾವೀರರು ಜೈನ ಧರ್ಮದ ಪರಂಪರೆಯ 24ನೇ ತೀರ್ಥಂಕರರಾಗಿದ್ದಾರೆ.

### ವರ್ಧಮಾನ್ ಮಹಾವೀರ (ಕ್ರಿ.ಪೂ. 599 ರಿಂದ ಕ್ರಿ.ಪೂ. 527)

ಇಂದು ನಾವು ಬಿಹಾರ ಎಂದು ಕರೆಯುವ ರಾಜ್ಯದಲ್ಲಿ ಪ್ರಾಚೀನ ಕಾಲದಲ್ಲಿ 'ವೃಜ್ಜಿ' ಎಂಬ ಹೆಸರಿನ ಮಹಾಜನಪದವಿತ್ತು. ಅದರ ರಾಜಧಾನಿ ವೈಶಾಲಿ ಆಗಿತ್ತು. ವೈಶಾಲಿ ನಗರದ ಒಂದು ಭಾಗವಾಗಿದ್ದ ಕುಂಡಗ್ರಾಮದಲ್ಲಿ ವರ್ಧಮಾನ್ ಮಹಾವೀರರು ಜನಿಸಿದರು. ಅವರ ತಂದೆಯ ಹೆಸರು ಸಿದ್ಧಾರ್ಥ ಮತ್ತು ತಾಯಿಯ ಹೆಸರು ತ್ರಿಶಲಾ.

ವರ್ಧಮಾನ್ ಮಹಾವೀರರು ಜ್ಞಾನದ ಅನ್ವೇಷಣೆಗಾಗಿ ಮನೆ-ಮಠಗಳನ್ನು ತ್ಯಜಿಸಿದರು. ಹನ್ನೆರಡುವರೆ ವರ್ಷಗಳ ಕಠಿಣ ತಪಸ್ಸಿನ ನಂತರ ಅವರಿಗೆ ಜ್ಞಾನೋದಯವಾಯಿತು. ಈ ಜ್ಞಾನವು 'ಕೇವಲ' ಅಂದರೆ 'ವಿಶುದ್ಧ' ಸ್ವರೂಪದ್ದಾಗಿತ್ತು, ಆದ್ದರಿಂದ ಅವರನ್ನು 'ಕೇವಲಿ' ಎಂದು ಕರೆಯಲಾಗುತ್ತದೆ. ಶರೀರಕ್ಕೆ ಸುಖ ನೀಡುವ ವಿಷಯಗಳಿಂದಾಗುವ ಆನಂದ ಮತ್ತು ಕಷ್ಟ ನೀಡುವ ವಿಷಯಗಳಿಂದಾಗುವ ಪೀಡೆ - ಇವೆರಡೂ ತನ್ನ ಮೇಲೆ ಯಾವುದೇ ಪರಿಣಾಮ ಬೀರದಂತೆ ತಡೆಯುವುದು ಎಂದರೆ ವಿಕಾರಗಳ ಮೇಲೆ ವಿಜಯ ಸಾಧಿಸುವುದು. ಇಂತಹ ವಿಜಯವನ್ನು ಅವರು ಸಾಧಿಸಿದ ಕಾರಣ ಅವರಿಗೆ 'ಜಿನ್' ಎಂದರೆ 'ಗೆದ್ದವನು' ಎಂದು ಕರೆಯತೊಡಗಿದರು. 'ಜಿನ್' ಎಂಬ ಶಬ್ದದಿಂದಲೇ 'ಜೈನ್' ಎಂಬ ಶಬ್ದವು ಬಂದಿದೆ. ವಿಕಾರಗಳ ಮೇಲೆ ವಿಜಯ ಸಾಧಿಸಿದ ಮಹಾನ್ ವೀರರಾದ ಕಾರಣ



ವರ್ಧಮಾನ್ ಮಹಾವೀರ

ವರ್ಧಮಾನರನ್ನು 'ಮಹಾವೀರ' ಎಂದು ಕರೆಯಲಾಗುತ್ತದೆ. ಜ್ಞಾನೋದಯದ ನಂತರ ಜನರಿಗೆ ಧರ್ಮವನ್ನು ಬೋಧಿಸಲು ಅವರು ಸುಮಾರು ಮೂವತ್ತು ವರ್ಷಗಳ ಕಾಲ ಉಪದೇಶ ನೀಡಿದರು. ಜನರಿಗೆ ಸುಲಭವಾಗಿ ಅರ್ಥವಾಗಲಿ ಎಂದು

ವರ್ಧಮಾನ್ ಮಹಾವೀರರು ಆ ಕಾಲದ ಲೋಕಭಾಷೆಯಾದ 'ಅರ್ಧಮಾಗಧಿ'ಯಲ್ಲಿ ಸಂವಹನ ನಡೆಸುತ್ತಿದ್ದರು. ಅವರು ಹೇಳಿದ ಧರ್ಮವು ಶುದ್ಧ ನಡವಳಿಕೆಗೆ ಒತ್ತು ನೀಡುತ್ತಿತ್ತು. ಶುದ್ಧ ನಡವಳಿಕೆಗಾಗಿ ಅವರು ಸೂಚಿಸಿದ ಮಾರ್ಗದ ಸಾರವು 'ಪಂಚಮಹಾವ್ರತಗಳು' ಮತ್ತು 'ತ್ರಿರತ್ನ'ಗಳಲ್ಲಿ ಅಡಗಿದೆ.

**ಪಂಚಮಹಾವ್ರತಗಳು:** ಪಂಚಮಹಾವ್ರತಗಳು ಎಂದರೆ ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಐದು ನಿಯಮಗಳು.

**1. ಅಹಿಂಸೆ:** ಯಾವುದೇ ಜೀವಿಗೆ ನೋವುಂಟು ಮಾಡಬಾರದು ಅಥವಾ ಹಿಂಸೆ ನೀಡಬಾರದು.

**2. ಸತ್ಯ:** ಪ್ರತಿಯೊಂದು ಮಾತು ಮತ್ತು ಕೃತಿಯು ಪ್ರಾಮಾಣಿಕವಾಗಿರಬೇಕು.

**3. ಅಸ್ತೇಯ:** 'ಸ್ತೇಯ' ಎಂದರೆ ಕಳ್ಳತನ. ಬೇರೆಯವರ ಮಾಲೀಕತ್ವದ ಅಥವಾ ಹಕ್ಕಿನ ವಸ್ತುವನ್ನು ಅವರ ಒಪ್ಪಿಗೆಯಿಲ್ಲದೆ ತೆಗೆದುಕೊಳ್ಳುವುದು ಕಳ್ಳತನ. ಕಳ್ಳತನ ಮಾಡದಿರುವುದು ಅಸ್ತೇಯ.

**4. ಅಪರಿಗ್ರಹ:** ಮನಸ್ಸಿನಲ್ಲಿ ಆಸೆಯನ್ನು ಇಟ್ಟುಕೊಂಡು ಆಸ್ತಿ-ಪಾಸ್ತಿಗಳನ್ನು ಸಂಗ್ರಹಿಸುವ ಪ್ರವೃತ್ತಿ ಮನುಷ್ಯನಿಗಿರುತ್ತದೆ. ಅಂತಹ ಸಂಗ್ರಹ ಮಾಡದಿರುವುದೇ ಅಪರಿಗ್ರಹ.

**5. ಬ್ರಹ್ಮಚರ್ಯ:** ಶರೀರಕ್ಕೆ ಸುಖ ನೀಡುವ ವಿಷಯಗಳನ್ನು ತ್ಯಜಿಸಿ ವ್ರತಗಳನ್ನು ಪಾಲಿಸುವುದೇ ಬ್ರಹ್ಮಚರ್ಯ.

**ತ್ರಿರತ್ನಗಳು:** ತ್ರಿರತ್ನಗಳೆಂದರೆ: 1. ಸಮ್ಯಕ್ ದರ್ಶನ, 2. ಸಮ್ಯಕ್ ಜ್ಞಾನ ಮತ್ತು 3. ಸಮ್ಯಕ್ ಚಾರಿತ್ರ್ಯ. ಈ ಮೂರು ತತ್ವಗಳು. ಸಮ್ಯಕ್ ಎಂದರೆ ಸಮತೋಲಿತ ಎಂದರ್ಥ.

**1.ಸಮ್ಯಕ್ ದರ್ಶನ:** ತೀರ್ಥಂಕರರ ಉಪದೇಶದಲ್ಲಿರುವ ಸತ್ಯವನ್ನು ಅರಿತು ಅದರ ಮೇಲೆ ಶ್ರದ್ಧೆ ಇಡುವುದು.

**2. ಸಮ್ಯಕ್ ಜ್ಞಾನ:** ತೀರ್ಥಂಕರರ ಉಪದೇಶಗಳನ್ನು ಮತ್ತು ತತ್ವಜ್ಞಾನವನ್ನು ನಿರಂತರವಾಗಿ ಅಭ್ಯಾಸ ಮಾಡಿ, ಅದರ ಆಳವಾದ ಅರ್ಥವನ್ನು ತಿಳಿದುಕೊಳ್ಳುವುದು.

**3. ಸಮ್ಯಕ್ ಚಾರಿತ್ರ್ಯ:** ಪಂಚಮಹಾವ್ರತಗಳನ್ನು ಕಟ್ಟುನಿಟ್ಟಾಗಿ ಆಚರಿಸುವುದು.

**ಉಪದೇಶದ ಸಾರ:** ಮಹಾವೀರರ ಉಪದೇಶಗಳಲ್ಲಿ ಅನೇಕಾಂತವಾದ ಎಂದು ಕರೆಯಲ್ಪಡುವ ಸಿದ್ಧಾಂತವು ಸತ್ಯದ ಶೋಧನೆಗಾಗಿ ಬಹಳ ಮುಖ್ಯವೆಂದು ಪರಿಗಣಿಸಲಾಗಿದೆ. ಅನೇಕಾಂತ ಎಂಬ ಪದದಲ್ಲಿ ಅಂತ ಎಂದರೆ ಆಯಾಮ ಎಂದರ್ಥ. ಸತ್ಯವನ್ನು ಶೋಧಿಸುವಾಗ ವಿಷಯದ ಕೇವಲ ಒಂದೆರಡು ಆಯಾಮಗಳ ಕಡೆಗೆ ಗಮನಕೊಟ್ಟು ನಿರ್ಣಯ ತೆಗೆದುಕೊಂಡರೆ ಸತ್ಯದ ಸಂಪೂರ್ಣ ಜ್ಞಾನವಾಗಲಾರದು. ಆದ್ದರಿಂದ ಆ ವಿಷಯದ ಅನೇಕ ಆಯಾಮಗಳ ಕಡೆಗೆ ಗಮನಕೊಡುವುದು ಅವಶ್ಯಕವಾಗಿರುತ್ತದೆ ಎಂಬುದನ್ನು ಈ ಸಿದ್ಧಾಂತದಲ್ಲಿ ಮನ್ನಿಸಲಾಗಿದೆ. ಈ ಸಿದ್ಧಾಂತದಿಂದಾಗಿ ಸಮಾಜದಲ್ಲಿ ಸ್ವಂತದ ಅಭಿಪ್ರಾಯವನ್ನು ಕುರಿತು ದುರಾಗ್ರಹವನ್ನಿಟ್ಟುಕೊಳ್ಳುವ ಸ್ಥಿತಿ ಉಳಿಯುವುದಿಲ್ಲ, ಇತರರ ಅಭಿಪ್ರಾಯಗಳ ಬಗ್ಗೆ ಸಹಿಷ್ಣುತೆ ನಿರ್ಮಾಣವಾಗುತ್ತದೆ.

ವ್ಯಕ್ತಿಯ ಘನತೆಯು ಅವನ ವರ್ಣದ ಮೇಲೆ ಅವಲಂಬಿಸಿರದೆ ಅದು ಅವನ ಉತ್ತಮ ಚಾರಿತ್ರ್ಯವನ್ನು ಅವಲಂಬಿಸಿರುತ್ತದೆ ಎಂಬುದು ವರ್ಧಮಾನ ಮಹಾವೀರರ ಉಪದೇಶವಾಗಿತ್ತು. ಸ್ತ್ರೀಯರಿಗಿರುವ ಜ್ಞಾನಾರ್ಜನೆ ಮಾಡುವ ಅಧಿಕಾರವು ವೈದಿಕ ಪರಂಪರೆಯಲ್ಲಿ ಕ್ರಮೇಣವಾಗಿ ಇಲ್ಲದಂತಾಗಿತ್ತು. ಆದರೆ ವರ್ಧಮಾನ ಮಹಾವೀರರು ಸ್ತ್ರೀಯರಿಗೂ ಸಂನ್ಯಾಸವನ್ನು ಸ್ವೀಕರಿಸುವ ಅಧಿಕಾರವನ್ನು ನೀಡಿದರು. ಎಲ್ಲ ಪ್ರಾಣಿಗಳನ್ನು ಪ್ರೀತಿಸಿರಿ. ಅಂತಃಕರಣದಲ್ಲಿ ಇತರರ ಬಗ್ಗೆ ದಯೆ ಮತ್ತು ಕರುಣೆ ಇರಲಿ. ನೀವೂ ಜೀವಿಸಿರಿ ಹಾಗೂ ಮತ್ತೊಬ್ಬರಿಗೂ ಜೀವಿಸಲು ಅವಕಾಶ ಮಾಡಿಕೊಡಿ, ಎಂಬ ಉಪದೇಶವನ್ನು ಅವರು ಮಾಡಿದರು.



**ವಿಚಾರ ಮಾಡಿ.**

'ಸತ್ಯ ನುಡಿಯುವುದು' ಈ ತತ್ವವನ್ನು ಆಚರಣೆಗೆ ತರುವುದರಿಂದ ಇಂದಿನ ಕಾಲದಲ್ಲಿ ಹೇಗೆ ಉಪಯೋಗವಾಗಬಹುದು?

'ಪ್ರೀತಿ ಮತ್ತು ದಯೆ' ಎಂಬ ತತ್ವಜ್ಞಾನದ ಉಪಯೋಗ ಆಧುನಿಕ ಸಮಾಜದಲ್ಲಿ ಹೇಗೆ ಆಗಬಹುದು?

'ಅಹಿಂಸೆ' ಎಂಬ ತತ್ವಕ್ಕೆ ಇಂದಿನ ಕಾಲದಲ್ಲಿರುವ ಮಹತ್ವವೇನು?

ನಾವು ಒಬ್ಬ ನಾಗರಿಕರಾಗಿ ಈ ತತ್ವಗಳನ್ನು ಆಚರಣೆಯಲ್ಲಿ ಹೇಗೆ ತರಬಹುದು?

## 5.3 ಬೌದ್ಧ ಧರ್ಮ

ಬೌದ್ಧ ಧರ್ಮದ ಪ್ರಸಾರ ಭಾರತದಲ್ಲಿ ಹಾಗೂ ಭಾರತದ ಹೊರಗಿನ ಅನೇಕ ದೇಶಗಳಲ್ಲಿಯೂ ಆಯಿತು. ಗೌತಮ ಬುದ್ಧರು ಬೌದ್ಧ ಧರ್ಮದ ಸಂಸ್ಥಾಪಕರಾಗಿದ್ದರು.

### ಗೌತಮ ಬುದ್ಧ (ಕ್ರಿ.ಪೂ. 563 ರಿಂದ ಕ್ರಿ.ಪೂ. 483):

ಗೌತಮ ಬುದ್ಧರ ಜನ್ಮ ನೇಪಾಳದ ಲುಂಬಿನಿ ವನದಲ್ಲಿ ಆಯಿತು. ಅವರ ತಂದೆಯ ಹೆಸರು ಶುದ್ಧೋದನ ಮತ್ತು ತಾಯಿಯ ಹೆಸರು ಮಾಯಾದೇವಿ (ಮಹಾಮಾಯಾ). ಗೌತಮ ಬುದ್ಧರ ಮೂಲ ಹೆಸರು ಸಿದ್ಧಾರ್ಥವಾಗಿತ್ತು. ಅವರಿಗೆ ಮಾನವ ಜೀವನದ ಸಂಪೂರ್ಣ ಜ್ಞಾನ ಪ್ರಾಪ್ತವಾಗಿತ್ತು, ಆದ್ದರಿಂದ ಅವರನ್ನು



ಗೌತಮ ಬುದ್ಧ

'ಬುದ್ಧ' ಎಂದು ಕರೆಯಲಾಯಿತು. ಗೌತಮ ಬುದ್ಧನು ಮಾನವ ಜೀವನದಲ್ಲಿ 'ದುಃಖ ಏಕೆ ಇದೆ?' ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಲು ತನ್ನ ಮನೆಯನ್ನು ತ್ಯಜಿಸಿದನು. ಒಂದು ವೈಶಾಖ ಪೂರ್ಣಿಮೆಯ ದಿನದಂದು ಬಿಹಾರದ ಗಯಾ ನಗರದ ಹತ್ತಿರವಿರುವ 'ಉರುವೇಲ' ಎಂಬಲ್ಲಿ ಅಶ್ವತ್ಥ ಮರದ ಕೆಳಗೆ ಧ್ಯಾನಕ್ಕೆ ಕುಳಿತಿದ್ದಾಗ ಅವನಿಗೆ 'ಜ್ಞಾನೋದಯ'ವಾಯಿತು. ಅಂದಿನಿಂದ ಆ ಅಶ್ವತ್ಥ ಮರವನ್ನು 'ಬೋಧಿ ವೃಕ್ಷ' ಎಂದು ಕರೆಯಲಾಗುತ್ತದೆ ಮತ್ತು ಆ ಸ್ಥಳವನ್ನು 'ಬೋಧಗಯಾ' ಎಂದು ಕರೆಯಲಾಗುತ್ತದೆ.

ಬುದ್ಧನು ತನ್ನ ಮೊದಲ ಬೋಧನೆಯನ್ನು ವಾರಣಾಸಿಯ ಸಮೀಪವಿರುವ ಸಾರನಾಥದಲ್ಲಿ ನೀಡಿದನು. ಅವನ ಈ ಮೊದಲ ಬೋಧನೆಯನ್ನು 'ಧಮ್ಮ' ಎಂದು ಕರೆಯಲಾಗುತ್ತದೆ. ಈ ಘಟನೆಯು ಧರ್ಮದ ಚಕ್ರಕ್ಕೆ ಚಾಲನೆ ನೀಡಿದ ಕಾರಣ ಇದನ್ನು ಪಾಲಿ ಭಾಷೆಯಲ್ಲಿ 'ಧಮ್ಮಚಕ್ಕಪ್ಪವತ್ತನ' ಮತ್ತು ಸಂಸ್ಕೃತದಲ್ಲಿ 'ಧರ್ಮಚಕ್ರ ಪ್ರವರ್ತನ' ಎಂದು ಕರೆಯಲಾಗುತ್ತದೆ. ನಂತರದ ಸಮಯದಲ್ಲಿ ಅವರು ಧರ್ಮವನ್ನು ಬೋಧಿಸಲು ಸುಮಾರು ನಲವತ್ತೈದು ವರ್ಷಗಳ ಕಾಲ ಪಾದಯಾತ್ರೆ ಮಾಡಿದರು. ಪಾದಯಾತ್ರೆ ಎಂದರೆ ಕಾಲ್ನಡಿಗೆಯಲ್ಲಿ ಸಂಚರಿಸುವುದು ಎಂದರ್ಥ. ಅವರು ತಮ್ಮ ಬೋಧನೆಗಳನ್ನು ಆಗಿನ ಸಾಮಾನ್ಯ ಜನರ ಭಾಷೆಯಾದ ಪಾಲಿಯಲ್ಲಿ ಮಾಡಿದರು. ಬೌದ್ಧಧರ್ಮದಲ್ಲಿ ಬುದ್ಧ, ಧಮ್ಮ ಮತ್ತು ಸಂಘ ಇವರಿಗೆ ಶರಣು ಹೋಗುವ ಪರಿಕಲ್ಪನೆಯು ಬಹಳ ಮಹತ್ವದ್ದಾಗಿದೆ. ಈ ಪರಿಕಲ್ಪನೆಯನ್ನು 'ತ್ರಿಶರಣ' ಎಂದು ಕರೆಯಲಾಗುತ್ತದೆ. ಅವರು ಹೇಳಿದ ಧಮ್ಮದ ಸಾರವು ಈ ಕೆಳಗಿನಂತಿದೆ:



ಭೋಧಿವೃಕ್ಷ

**ಆರ್ಯಸತ್ಯಗಳು:** ಮಾನವ ಜೀವನದ ಎಲ್ಲಾ ವ್ಯವಹಾರಗಳ ಮೂಲದಲ್ಲಿ ನಾಲ್ಕು ಸತ್ಯಗಳಿವೆ. ಇವುಗಳನ್ನು ಆರ್ಯಸತ್ಯಗಳು ಎಂದು ಕರೆಯಲಾಗುತ್ತದೆ.

**1. ದುಃಖ:** ಮಾನವ ಜೀವನದಲ್ಲಿ ದುಃಖವಿರುತ್ತದೆ.

**2. ದುಃಖದ ಕಾರಣ:** ದುಃಖಕ್ಕೆ ಒಂದು ಕಾರಣವಿರುತ್ತದೆ.

**3. ದುಃಖ-ನಿವಾರಣೆ:** ದುಃಖವನ್ನು ದೂರ ಮಾಡಬಹುದು.

**4. ಪ್ರತಿಪದ:** ಪ್ರತಿಪದ ಎಂದರೆ ಮಾರ್ಗ. ಇದು ದುಃಖವನ್ನು ಅಂತ್ಯಗೊಳಿಸುವ ಮಾರ್ಗವಾಗಿದೆ. ಈ ಮಾರ್ಗವು ಶುದ್ಧ ನಡವಳಿಕೆಯಾಗಿದೆ. ಈ ಮಾರ್ಗವನ್ನು 'ಅಷ್ಟಾಂಗಿಕ ಮಾರ್ಗ' ಎಂದು ಕರೆಯಲಾಗುತ್ತದೆ.

**ಪಂಚಶೀಲ :** ಗೌತಮ್ ಬುದ್ಧರು ಐದು ನಿಯಮಗಳನ್ನು ಪಾಲಿಸಲು ತಿಳಿಸಿದರು. ಆ ನಿಯಮಗಳನ್ನು 'ಪಂಚಶೀಲ' ಎಂದು ಕರೆಯಲಾಗುತ್ತದೆ.

1. ಪ್ರಾಣಿಗಳನ್ನು ಹತ್ಯೆ ಮಾಡದಿರುವುದು.
2. ಕಳ್ಳತನ ಮಾಡುವುದರಿಂದ ದೂರವಿರುವುದು.
3. ಅನೈತಿಕ ನಡವಳಿಕೆಯಿಂದ ದೂರವಿರುವುದು.
4. ಸುಳ್ಳು ಹೇಳುವುದರಿಂದ ದೂರವಿರುವುದು.
5. ಮಾದಕ ಪದಾರ್ಥಗಳ ಸೇವನೆಯಿಂದ ದೂರವಿರುವುದು.

**ಬೌದ್ಧಸಂಘ :** ತಮ್ಮ ಧಮ್ಮದ (ಧರ್ಮದ) ಉಪದೇಶವನ್ನು ನೀಡಲು ಅವರು ಭಿಕ್ಷುಗಳ ಸಂಘವನ್ನು ನಿರ್ಮಿಸಿದರು. ಗೃಹಸ್ಥ ಜೀವನವನ್ನು ತ್ಯಜಿಸಿ ಸಂಘವನ್ನು ಪ್ರವೇಶಿಸುವ ಅನುಯಾಯಿಗಳನ್ನು 'ಭಿಕ್ಷು' ಎಂದು ಕರೆಯಲಾಗುತ್ತದೆ. ಬುದ್ಧನಂತೆ ಭಿಕ್ಷುಗಳೂ ಸಹ ಸಂಚರಿಸುತ್ತಾ ಜನರಿಗೆ ಧಮ್ಮದ ಉಪದೇಶ ನೀಡುತ್ತಿದ್ದರು. ಸ್ತ್ರೀಯರಿಗಾಗಿ ಸ್ವತಂತ್ರ ಸಂಘವಿತ್ತು, ಅವರನ್ನು 'ಭಿಕ್ಷುಣಿ' ಎಂದು ಕರೆಯಲಾಗುತ್ತಿತ್ತು. ಬೌದ್ಧ ಧರ್ಮದಲ್ಲಿ ಎಲ್ಲಾ ವರ್ಣದ ಮತ್ತು ಜಾತಿಯ ಜನರಿಗೆ ಪ್ರವೇಶವಿತ್ತು.



### ನಿಮಗಿದು ಗೊತ್ತಿದೆಯೇ?

**ಅಷ್ಟಾಂಗಿಕ ಮಾರ್ಗ**

**1. ಸಮ್ಯಕ್ ದೃಷ್ಟಿ:** ನಾಲ್ಕು ಆರ್ಯಸತ್ಯಗಳ ಜ್ಞಾನವನ್ನು ಹೊಂದಿರುವುದು.

**2. ಸಮ್ಯಕ್ ಸಂಕಲ್ಪ:** ಹಿಂಸೆ ಮತ್ತು ಕೆಟ್ಟ ಆಲೋಚನೆಗಳನ್ನು ತ್ಯಜಿಸುವುದು.

**3. ಸಮ್ಯಕ್ ವಾಚಾ:** ಅಸತ್ಯ, ಚಾಡಿ, ಕಠೋರ ಮಾತು ಮತ್ತು ವ್ಯರ್ಥ ಹರಟೆಯನ್ನು ಮಾಡದಿರುವುದು.

**4. ಸಮ್ಯಕ್ ಕರ್ಮಾಂತ:** ಪ್ರಾಣಿಹತ್ಯೆ, ಕಳ್ಳತನ ಮತ್ತು ಅಧರ್ಮದಿಂದ ದೂರವಿರುವುದು.

**5. ಸಮ್ಯಕ್ ಆಜೀವ:** ತಪ್ಪು ಮಾರ್ಗದಲ್ಲಿ ಜೀವನೋಪಾಯ ಮಾಡದೆ, ನ್ಯಾಯಯುತ ಮಾರ್ಗದಲ್ಲಿ ಬದುಕುವುದು.

**6. ಸಮ್ಯಕ್ ವ್ಯಾಯಾಮ:** ಕೆಟ್ಟ ಆಲೋಚನೆಗಳು ಬರದಂತೆ ಪ್ರಯತ್ನಿಸುವುದು; ಒಂದು ವೇಳೆ ಬಂದರೆ ಅವುಗಳನ್ನು ತ್ಯಜಿಸುವುದು ಮತ್ತು ಒಳ್ಳೆಯ ವಿಚಾರಗಳನ್ನು ಬೆಳೆಸಿಕೊಳ್ಳುವುದು.

**7. ಸಮ್ಯಕ್ ಸ್ಮೃತಿ:** ಮನಸ್ಸ ನ್ನು ಏಕಾಗ್ರಗೊಳಿಸಿ ಲೋಭ ಮತ್ತು ವಿಕಾರಗಳನ್ನು ದೂರ ಮಾಡಿ, ಚಿತ್ತವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು.

**8. ಸಮ್ಯಕ್ ಸಮಾಧಿ:** ಮನಸ್ಸನ್ನು ಏಕಾಗ್ರಗೊಳಿಸಿ ಧ್ಯಾನದ ಅನುಭವವನ್ನು ಪಡೆಯುವುದು.

**ಉಪದೇಶದ ಸಾರ:** ಗೌತಮ ಬುದ್ಧರು ಮಾನವ ಬುದ್ಧಿಶಕ್ತಿಯ ಸ್ವಾತಂತ್ರ್ಯವನ್ನು ಘೋಷಿಸಿದರು. ವರ್ಣ ಮೊದಲಾದವುಗಳ ಆಧಾರದ ಮೇಲೆ ಸಮಾಜದಲ್ಲಿ ಮಾಡಲಾಗುತ್ತಿದ್ದ ತಾರತಮ್ಯವನ್ನು ಅವರು ತಿರಸ್ಕರಿಸಿದರು. ಜನನದಿಂದ ಯಾರೂ ಶ್ರೇಷ್ಠ ಅಥವಾ ಕನಿಷ್ಠರಾಗುವುದಿಲ್ಲ, ಬದಲಿಗೆ ಅವರ ನಡವಳಿಕೆಯಿಂದ ಶ್ರೇಷ್ಠತೆ ಅಥವಾ ಕನಿಷ್ಠತೆ ನಿರ್ಧರಿಸಲ್ಪಡುತ್ತದೆ ಎಂದು ಅವರು ಪ್ರತಿಪಾದಿಸಿದರು. 'ಒಂದು ಸಣ್ಣ ಗುಬ್ಬಚ್ಚಿ ಕೂಡ ತನ್ನ ಗೂಡಿನಲ್ಲಿ ಸ್ವತಂತ್ರವಾಗಿ ಚಿಲಿಪಿಲಿಗುಟ್ಟುತ್ತದೆ' ಎಂಬ ಅವರ ಮಾತು ಪ್ರಖ್ಯಾತವಾಗಿದೆ. ಇದು ಸ್ವಾತಂತ್ರ್ಯ ಮತ್ತು ಸಮಾನತೆಯ ಮೌಲ್ಯಗಳ ಬಗ್ಗೆ ಅವರ ಚಿಂತನೆಯನ್ನು ತೋರಿಸುತ್ತದೆ. ಪುರುಷರಂತೆ ಮಹಿಳೆಯರಿಗೂ ತಮ್ಮ ಪ್ರಗತಿಯನ್ನು ಸಾಧಿಸಿಕೊಳ್ಳುವ ಹಕ್ಕಿದೆ ಎಂದು ಅವರು ಬೋಧಿಸಿದರು. ಯಜ್ಞದಂತಹ ಕರ್ಮಕಾಂಡಗಳನ್ನು ಅವರು ವಿರೋಧಿಸಿದರು. ಅವರು ಬೋಧಿಸಿದ ಪ್ರಜ್ಞೆ, ಶೀಲ ಮತ್ತು ಕರುಣೆಯಂತಹ ಮೌಲ್ಯಗಳು ಮಾನವನ ಕಲ್ಯಾಣವನ್ನು ಸಾಧಿಸುವಂತಹವುಗಳಾಗಿವೆ. ಎಲ್ಲಾ ಪ್ರಾಣಿಗಳ ಮೇಲಿನ 'ಕರುಣೆ'ಯು ಅವರ ವ್ಯಕ್ತಿತ್ವದ ಅಸಾಧಾರಣ ವೈಶಿಷ್ಟ್ಯವಾಗಿತ್ತು.



### ಹೇಳಿ ನೋಡೋಣ!

ಗೌತಮ ಬುದ್ಧರು ಬೋಧಿಸಿದ ಸಹಿಷ್ಣುತೆಯು ಕೇವಲ ಭಾರತೀಯ ಸಮಾಜಕ್ಕಷ್ಟೇ ಅಲ್ಲದೆ, ಇಡೀ ಮಾನವಕುಲಕ್ಕೆ ಇಂದಿಗೂ ಮಾರ್ಗದರ್ಶಕವಾಗಿರುವುದು ಏಕೆ?



### ಮಾಡಿ ನೋಡಿ.

ಜಾತಕ ಕಥೆಗಳಿಂದ ಬೌದ್ಧ ಧರ್ಮದ ಮೂಲಭೂತ ಬೋಧನೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಅವುಗಳಿಂದ ನಮಗೆ ನೈತಿಕ ಮೌಲ್ಯಗಳು ಮತ್ತು ಜೀವನದ ಪಾಠಗಳು ತಿಳಿಯುತ್ತವೆ. ನಿಮ್ಮ ಗ್ರಂಥಾಲಯದಲ್ಲಿ ಲಭ್ಯವಿರುವ ಪುಸ್ತಕಗಳಿಂದ ಅಥವಾ ಇಂಟರ್ನೆಟ್ ಸಹಾಯದಿಂದ ಒಂದು ಜಾತಕ ಕಥೆಯನ್ನು ಆರಿಸಿ ಮತ್ತು ಅದನ್ನು ತರಗತಿಯಲ್ಲಿ ಪ್ರಸ್ತುತಪಡಿಸಿ.

**ಲೋಕಾಯತ:** ಲೋಕಾಯತ ಅಥವಾ ಚರ್ವಾಕ ಎಂಬ ಹೆಸರಿನಿಂದ ಕರೆಯಲ್ಪಡುವ ಪ್ರಾಚೀನ ಕಾಲದ ವೈಚಾರಿಕ ಪ್ರವಾಹವು ಸಹ ಪ್ರಮುಖವಾಗಿದೆ. ಇದು ಸ್ವತಂತ್ರ ಚಿಂತನೆಗೆ ಒತ್ತು ನೀಡಿತ್ತು ಇದು ವೇದಗಳ ಪ್ರಾಮಾಣ್ಯವನ್ನು (ಅಧಿಕಾರವನ್ನು) ತಿರಸ್ಕರಿಸಿತು.

ಪ್ರಾಚೀನ ಕಾಲದಲ್ಲಿ ಭಾರತೀಯ ಭೂಮಿಯಲ್ಲಿ ಹೊಸ ಹೊಸ ಧಾರ್ಮಿಕ ವಿಚಾರಗಳ ಪ್ರವಾಹಗಳು ನಿರಂತರವಾಗಿ ನಿರ್ಮಾಣವಾಗುತ್ತಲೇ ಇದ್ದವು. ಕಾಲಾನಂತರದಲ್ಲಿ ಯಹೂದಿ, ಕ್ರಿಶ್ಚಿನ್, ಇಸ್ಲಾಂ ಮತ್ತು ಪಾರ್ಸಿ ಧರ್ಮಗಳು ಭಾರತೀಯ ಸಮಾಜದಲ್ಲಿ ನೆಲೆವೂರಿದವು.

## 5.4 ಯಹೂದಿ ಧರ್ಮ (ಜ್ಯೂ ಧರ್ಮ)

ಯಹೂದಿ ಜನರ ಭಾರತದೊಂದಿಗಿನ ಸಂಬಂಧವು ಎರಡು ಸಾವಿರ ವರ್ಷಗಳಿಗಿಂತಲೂ ಹಳೆಯದು. ಯಹೂದಿಗಳು ಭಾರತಕ್ಕೆ ಮೊದಲ ಬಾರಿಗೆ ವ್ಯಾಪಾರಕ್ಕಾಗಿ ಬಂದರು.



ಸಿನಗಾಗ್

'ತೋರಾಹ' ಇದು ಯಹೂದಿ ಧರ್ಮದ ಪ್ರಮುಖ ಗ್ರಂಥವಾಗಿದೆ. ಯಹೂದಿ ಧರ್ಮದಲ್ಲಿ ನ್ಯಾಯ, ಸತ್ಯ, ಶಾಂತಿ, ಪ್ರೇಮ, ಕರುಣೆ, ವಿನಮ್ರತೆ, ದಾನ, ಒಳ್ಳೆಯ ಮಾತು ಮತ್ತು ಸ್ವಾಭಿಮಾನ ಈ ಗುಣಗಳ ಮೇಲೆ ಒತ್ತು ಕೊಡಲಾಗಿದೆ.ಅವರ ಪ್ರಾರ್ಥನಾ ಸ್ಥಳವನ್ನು 'ಸಿನಗಾಗ' ಎಂದು ಕರೆಯುತ್ತಾರೆ.

## 5.5 ಕ್ರೈಸ್ತ ಧರ್ಮ

ಕ್ರೈಸ್ಥ ಧರ್ಮದ ಸ್ಥಾಪನೆಯನ್ನು ಯೆಸು ಕ್ರಿಸ್ತನು ಮಾಡಿದನು. ಅದು ಜಗತ್ತಿನ ಎಲ್ಲೆಡೆ ಹಬ್ಬಿದೆ. ಯೆಸು ಕ್ರಿಸ್ತರ 12 ಶಿಷ್ಯರಲ್ಲಿ ಒಬ್ಬನಾದ ಸೆಂಟ ಥಾಮಸ್ ಅವರು ಕ್ರಿ.ಶ.ದ ಒಂದನೆಯ ಶತಮಾನದಲ್ಲಿ ಕೇರಳಕ್ಕೆ ಬಂದರು. ಅವರು ತ್ರಿಚೂರ ಜಿಲ್ಹೆಯ ಪಲ್ಲಯೂರನಲ್ಲಿ ಕ್ರಿ.ಶ. 52 ರಲ್ಲಿ ಚರ್ಚ ಸ್ಥಾಪನೆ ಮಾಡಿದರು. ಕ್ರೈಸ್ತ ಧರ್ಮದ ಪ್ರಕಾರ ದೇವನೊಬ್ಬನೆ ಇದ್ದಾನೆ. ಆತನು ಎಲ್ಲರ ಪ್ರೀತಿಯ ತಂದೆಯಾಗಿದ್ದಾನ, ಸರ್ವಶಕ್ತನಾಗಿದ್ದಾನೆ. ಯೆಸು ಕ್ರಿಸ್ತ ದೇವರ ಮಗನಾಗಿದ್ದಾರೆ. ಮಾನವಜಾತಿಯ ಉದ್ಧಾರಕ್ಕಾಗಿ ಈ ಭೂಮಿಗೆ ಬಂದಿದ್ದಾನೆಂಬ ನಂಬಿಕೆಯಿದೆ. ನಾವೆಲ್ಲ ಸಹೋದರ-ಸಹೋದರಿಯರಂತೆ ಇರಬೇಕು. ನಾವು ಎಲ್ಲರನ್ನೂ ಪ್ರೀತಿಸಬೇಕು. ಶತ್ರುಗಳನ್ನೂ ಸಹ. ತಪ್ಪು ಮಾಡಿದವರನ್ನು ಕ್ಷಮಿಸಬೇಕು. ಎಂದು ಕ್ರೈಸ್ತ ಧರ್ಮದಲ್ಲಿ ಹೇಳಲಾಗಿದೆ. 'ಬಾಯಬಲ್' ಇದು ಕ್ರೈಸ್ತ ಧರ್ಮದ ಪವಿತ್ರ ಧರ್ಮಗ್ರಂಥವಾಗಿದೆ. ಕ್ರೈಸ್ತರ ಪ್ರಾರ್ಥನಾ ಸ್ಥಳವನ್ನು 'ಚರ್ಚ' ಎನ್ನುತ್ತಾರೆ.



ಚರ್ಚ್



**ಮಾಡಿ ನೋಡಿ.**

ಒಂದು ಕಾಗದದ ಮೇಲೆ ಎಲ್ಲಾ ಧರ್ಮಗಳ ಸಕಾರಾತ್ಮಕ ಸಂದೇಶಗಳನ್ನು ಬರೆಯಿರಿ ಮತ್ತು ಪರಸ್ಪರ ಹಂಚಿಕೊಳ್ಳಿ. ಎಲ್ಲರೂ ಸೇರಿ ಆ ಸಕಾರಾತ್ಮಕ ಸಂದೇಶಗಳ ಒಂದು ಸರಪಳಿಯನ್ನು ತಯಾರಿಸಿ ಮತ್ತು ತರಗತಿಯಲ್ಲಿ ಅದನ್ನು ಓದಿ.

## 5.6 ಇಸ್ಲಾಂ ಧರ್ಮ

ಇಸ್ಲಾಂ ಧರ್ಮವು ಏಕೇಶ್ವರವಾದವನ್ನು ಪ್ರತಿಪಾದಿಸುವ ಧರ್ಮವಾಗಿದೆ. ಅಲ್ಲಾಹನು ಒಬ್ಬನೇ ಆಗಿದ್ದು, ಮುಹಮ್ಮದ್ ಪೈಗಂಬರರು ಅವನ ಪ್ರವಾದಿಯಾಗಿದ್ದಾರೆ. ದೇವರ ಸಂದೇಶವು ಪೈಗಂಬರರ ಮೂಲಕ ಪವಿತ್ರ 'ಕುರಾನ್' ಎಂಬ ಧರ್ಮಗ್ರಂಥದಲ್ಲಿ ಪ್ರಕಟವಾಗಿದೆ. 'ಇಸ್ಲಾಂ' ಎನ್ನುವ ಪದದ ಅರ್ಥ 'ಶಾಂತಿ' ಎಂದಾಗಿದೆ. ಈ ಪದದ ಅರ್ಥ 'ಅಲ್ಲಾಹನಿಗೆ ಶರಣಾಗುವುದು' ಎಂದೂ ಆಗುತ್ತದೆ. ಎಲ್ಲಾ ಕಾಲದಲ್ಲೂ ಮತ್ತು ಎಲ್ಲೆಡೆಯೂ ಕೇವಲ ಅಲ್ಲಾಹನಿದ್ದಾನೆ, ಅವನು ಸರ್ವಶಕ್ತನು ಮತ್ತು ಪರಮ ದಯಾಮಯನು ಎಂದು ಇಸ್ಲಾಂ ಧರ್ಮದಲ್ಲಿ ಹೇಳಲಾಗಿದೆ. ಮಾನವ ಅಸ್ತಿತ್ವದ ಉದ್ದೇಶವು ಅಲ್ಲಾಹನ ಆರಾಧನೆ ಮಾಡುವುದೇ ಆಗಿದೆ ಎಂದು ನಂಬಲಾಗಿದೆ. ಮನುಷ್ಯನು ಜೀವನವನ್ನು ಹೇಗೆ ನಡೆಸಬೇಕು ಎನ್ನುವ ಮಾರ್ಗದರ್ಶನವನ್ನು ಪವಿತ್ರ 'ಕುರಾನ್' ಧರ್ಮಗ್ರಂಥದಲ್ಲಿ ನೀಡಲಾಗಿದೆ. ಭಾರತ ಮತ್ತು ಅರಬಸ್ತಾನದ ನಡುವೆ ಬಹಳ ಪ್ರಾಚೀನ ಕಾಲದಿಂದಲೂ ವ್ಯಾಪಾರ ಸಂಬಂಧಗಳಿದ್ದವು. ಅರಬ್ ವ್ಯಾಪಾರಿಗಳು ಕೇರಳ ಕರಾವಳಿಯ ಬಂದರುಗಳಿಗೆ ಭೇಟಿ ನೀಡುತ್ತಿದ್ದರು. ಕ್ರಿ.ಶ. ಏಳನೇ ಶತಮಾನದಲ್ಲಿ ಅರಬ್ ರಾಷ್ಟ್ರಗಳಲ್ಲಿ ಇಸ್ಲಾಂ ಧರ್ಮವು ಹರಡಿತು. ಅದೇ ಶತಮಾನದಲ್ಲಿ ಅರಬ್ ವ್ಯಾಪಾರಿಗಳ ಮೂಲಕ ಭಾರತಕ್ಕೆ ಇಸ್ಲಾಂ ಧರ್ಮದ ಆಗಮನವಾಯಿತು. ಇಸ್ಲಾಂ ಧರ್ಮದ ಪ್ರಾರ್ಥನಾ ಮಂದಿರವನ್ನು 'ಮಸೀದಿ' ಎಂದು ಕರೆಯಲಾಗುತ್ತದೆ.



ಮಸೀದಿ

## 5.7 . ಪಾರ್ಸಿ ಧರ್ಮ

ಪಾರ್ಸಿ ಜನರು ಮತ್ತು ವೈದಿಕ ಸಂಸ್ಕೃತಿಯ ಜನರ ನಡುವೆ ಪ್ರಾಚೀನ ಕಾಲದಿಂದಲೂ ಸಂಬಂಧವಿತ್ತು. ಪಾರ್ಸಿ ಧರ್ಮದ ಪವಿತ್ರ ಗ್ರಂಥದ ಹೆಸರು 'ಅವೆಸ್ತಾ'. 'ಋಗ್ವೇದ' ಮತ್ತು ಅವೆಸ್ತಾ ಗ್ರಂಥಗಳ ಭಾಷೆಯಲ್ಲಿ ಸಾಮ್ಯತೆಯಿದೆ. ಪಾರ್ಸಿ ಜನರು ಇರಾನಿನ 'ಪಾರ್ಸ್' ಅಥವಾ 'ಫಾರ್ಸ್' ಎಂಬ ಪ್ರಾಂತ್ಯದಿಂದ ಭಾರತಕ್ಕೆ ಬಂದರು, ಆದ್ದರಿಂದ ಅವರನ್ನು 'ಪಾರ್ಸಿ' ಎಂದು ಕರೆಯಲಾಗುತ್ತದೆ. ಅವರು ಮೊದಲು ಗುಜರಾತ್‌ಗೆ ಬಂದರು. ಅವರು ಕ್ರಿ.ಶ. ಎಂಟನೇ ಶತಮಾನದಲ್ಲಿ ಬಂದಿರಬಹುದು ಎಂದು ಕೆಲವರ ಅಭಿಪ್ರಾಯವಾಗಿದೆ. ಜರತುಷ್ಟ್ರರು ಪಾರ್ಸಿ ಧರ್ಮದ ಸ್ಥಾಪಕರಾಗಿದ್ದರು. 'ಅಹುರ್ ಮಜ್ದ್' ಎಂಬ ಹೆಸರಿನಿಂದ ಅವರ

ದೇವರನ್ನು ಉಲ್ಲೇಖಿಸಲಾಗುತ್ತದೆ. ಪಾರ್ಸಿ ಧರ್ಮದಲ್ಲಿ ಅಗ್ನಿ ಮತ್ತು ನೀರಿಗೆ ಹೆಚ್ಚಿನ ಮಹತ್ವವಿದೆ. ಅವರ ದೇವಾಲಯಗಳಲ್ಲಿ ಪವಿತ್ರ ಅಗ್ನಿಯನ್ನು ಜ್ವಲಂತವಾಗಿ ಇಡಲಾಗಿರುತ್ತದೆ. ಈ ದೇವಾಲಯಗಳನ್ನು 'ಅಗ್ಯಾರಿ' ಎಂದು ಕರೆಯಲಾಗುತ್ತದೆ. ಉತ್ತಮ ವಿಚಾರ, ಉತ್ತಮ ವಾಣಿ ಮತ್ತು ಉತ್ತಮ ಕೃತಿ ಎಂಬ ಈ ಮೂರು ಪ್ರಮುಖ ಆಚರಣೆಗಳೇ ಪಾರ್ಸಿ ವಿಚಾರಧಾರೆಯ ಮೂಲತತ್ವಗಳಾಗಿವೆ.



ಅಗ್ಯಾರಿ

**ಪಾರ್ಸಿ ಧರ್ಮದ ತತ್ವಜ್ಞಾನ ಹೀಗೆ ಹೇಳುತ್ತದೆ:**

''ಜಗತ್ತಿನಲ್ಲಿ ಒಳ್ಳೆಯತನ ಮತ್ತು ಕೆಟ್ಟತನಗಳ ನಡುವೆ ಸಂಘರ್ಷ ನಿರಂತರವಾಗಿ ನಡೆಯುತ್ತಿರುತ್ತದೆ. ಮನುಷ್ಯನು ಯಾವಾಗಲೂ ಒಳ್ಳೆಯತನದ ಮಾರ್ಗವನ್ನೇ ಆರಿಸಿಕೊಳ್ಳಬೇಕು.''



**ಮಾಡಿ ನೋಡಿ.**

'ಧಾರ್ಮಿಕ ಏಕತೆ ಮತ್ತು ಸಾಮರಸ್ಯ' ಎಂಬ ವಿಷಯದ ಮೇಲೆ ಪೋಸ್ಟರ್ ಅಥವಾ ಚಾರ್ಟ್ ತಯಾರಿಸಿ, ಅದರಲ್ಲಿ ವಿವಿಧ ಧರ್ಮಗಳ ತತ್ವಜ್ಞಾನಗಳನ್ನು ಅಳವಡಿಸಿ. ಅದರ ಪ್ರದರ್ಶನವನ್ನು ತರಗತಿಯಲ್ಲಿ ಏರ್ಪಡಿಸಿ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಧಾರ್ಮಿಕ ಸಹಿಷ್ಣುತೆ ಇತ್ತು. ಭಾರತೀಯ ಸಂಸ್ಕೃತಿಯಲ್ಲಿ 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ಸೂತ್ರವು ಹಾಸುಹೊಕ್ಕಾಗಿದೆ. ಇದರ ಅರ್ಥ ಅಂತಿಮ ಸತ್ಯವು ಒಂದೇ ಆಗಿದೆ, ಅದಕ್ಕೆ ಅನೇಕ ಹೆಸರುಗಳನ್ನು ನೀಡಲಾಗಿದೆ ಎಂದರ್ಥ. ಇದರಿಂದಾಗಿ ಭಾರತೀಯ ಸಮಾಜವು ಯಾವಾಗಲೂ ಎಲ್ಲರನ್ನೂ ತನ್ನಲ್ಲಿ ಒಳಗೊಡಿಸಿಕೊಂಡಿದೆ. ಎಲ್ಲಾ ಧರ್ಮಗಳು ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯ ಮೇಲೆ ದೊಡ್ಡ ಪ್ರಭಾವ ಬೀರಿವೆ. ಈ ಧರ್ಮಗಳ ಅನುಯಾಯಿಗಳು ಸಾಂಸ್ಕೃತಿಕ ಸಮೃದ್ಧಿ, ಸಾಮಾಜಿಕ ಸೌಹಾರ್ದತೆ ಮತ್ತು ಧಾರ್ಮಿಕ ಸಹಿಷ್ಣುತೆ ಎಂಬ ವಿಚಾರಗಳಿಗೆ ಪ್ರೋತ್ಸಾಹ ನೀಡಿದರು. ಧಾರ್ಮಿಕ ವೈವಿಧ್ಯತೆ ಹೊಂದಿರುವ ಭಾರತವು ಇಂದಿಗೂ ಈ ಎಲ್ಲಾ ಧರ್ಮಗಳ ಸಮನ್ವಯದಿಂದ ಸಮೃದ್ಧವಾಗಿದೆ ಮತ್ತು ಇತರ ಧರ್ಮಗಳೊಂದಿಗೆ ಸಹಿಷ್ಣುತೆಯಿಂದ ಬದುಕುವುದು ಅದರ ವೈಶಿಷ್ಟ್ಯವಾಗಿದೆ.



**ನಿಮಗೆ ಗೊತ್ತಿದೆಯೇ ?**

'ಪ್ರತಿಯೊಂದು ಧರ್ಮದ ತತ್ವಜ್ಞಾನವು ಜೀವನದ ನೈತಿಕತೆ, ಶಾಂತಿ ಮತ್ತು ಸಮಾಜದ ನ್ಯಾಯದ ಮೇಲೆ ಆಧಾರಿತವಾಗಿದೆ.'



## ಸ್ವಾಧ್ಯಾಯ

**ಪ್ರ. 1 ಅ) ಒಂದು ಪದದಲ್ಲಿ ಉತ್ತರಿಸಿ.**

1. ಭಾರತೀಯ ಸಂಸ್ಕೃತಿಯ ಅಂತರ್ಗತ ಗುಣ:............
2. ಜೈನ ಧರ್ಮದಲ್ಲಿ ಧರ್ಮಜ್ಞಾನವನ್ನು ಪ್ರಕಟಿಸುವವರು: ...............
3. ಗೌತಮ ಬುದ್ಧರು ತಮ್ಮ ಮೊದಲ ಪ್ರವಚನವನ್ನು ವಾರಣಾಸಿಯ ಸಮೀಪದ ............ ನಲ್ಲಿ ನೀಡಿದರು.
4. ಯಹೂದಿ (ಜೂ) ಧರ್ಮದ ಪ್ರಮುಖ ಧರ್ಮಗ್ರಂಥ: ........................
5. ಇಸ್ಲಾಂ ಧರ್ಮೀಯರ ಪ್ರಾರ್ಥನಾ ಮಂದಿರ................

**ಪ್ರ. 2 ಅ) ಕೋಷ್ಟಕವನ್ನು ಪೂರ್ಣಗೊಳಿಸಿ.**

| ಧರ್ಮ | ಧರ್ಮಗ್ರಂಥ | ಪ್ರಾರ್ಥನಾ ಮಂದಿರ |
|---|---|---|
| ----------- | ----------- | ಸಿನಗೋಗ್ |
| ----------- | ಬೈಬಲ್ | ----------- |
| ----------- | ----------- | ಮಸೀದಿ |
| ----------- | ಅವೆಸ್ತಾ | ----------- |

ಬ)

| ದರ್ಶನ | ವಿವರಣೆ |
|---|---|
| ----------- | ವಿಶ್ವದ ಉತ್ಪತ್ತಿ ಹೇಗೆ ಆಯಿತು ಎಂಬ ವಿವೇಚನೆ |
| ಯೋಗದರ್ಶನ | |
| ----------- | ತರ್ಕಶಾಸ್ತ್ರ ಮತ್ತು ಜ್ಞಾನದ ಮೇಲೆ ಆಧಾರಿತ |
| ವೈಶೇಷಿಕ ದರ್ಶನ | ----------- |
| ----------- | ವೇನದಗಳಲ್ಲಿನ ಕರ್ಮಕಾಂಡಗಳ ವಿಶ್ಲೇಷಣೆ |
| ವೇದಾಂತ ದರ್ಶನ | ----------- |

**ಕ) ಘಟನೆಗಳನ್ನು ಕಾಲಾನುಕ್ರಮದಲ್ಲಿ ಸರಿಯಾದ ಕ್ರಮದಲ್ಲಿ ಜೋಡಿಸಿ.**

1. ಗೌತಮ ಬುದ್ಧರು ಸಂಚರಿಸಿ ಜನರಿಗೆ ಉಪದೇಶ ಮಾಡಿದರು.
2. ಗೌತಮ ಬುದ್ಧರ ಜನನ ಲುಂಬಿನಿಯಲ್ಲಿ ಆಯಿತು.
3. ಬೋಧಗಯಾದಲ್ಲಿ ಬೋಧಿ ವೃಕ್ಷದ ಕೆಳಗೆ ಧ್ಯಾನ ಮಾಡುತ್ತಿರುವಾಗ ಅವರಿಗೆ ಜ್ಞಾನೋದಯವಾಯಿತು.

**ಪ್ರ. 3 ಅ) ಟಿಪ್ಪಣಿ ಬರೆಯಿರಿ.**

1. ಆರ್ಯಸತ್ಯಗಳು
2. ಭಗವದ್ಗೀತೆ
3. ಪಂಚಶೀಲ ತತ್ವಗಳು
4. ತ್ರಿರತ್ನಗಳು

**ಪ್ರ. 4 ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ವಿವಿಧ ಧರ್ಮಗಳಲ್ಲಿನ ಅಹಿಂಸೆ, ಕರುಣೆ ಮತ್ತು ಸತ್ಯದಂತಹ ಮೌಲ್ಯಗಳು ಸಮಾಜದ ಮೇಲೆ ಯಾವ ಪ್ರಭಾವ ಬೀರುತ್ತವೆ?
2. ಯಾವುದೇ ಎರಡು ವಿಭಿನ್ನ ಧರ್ಮಗಳ ಬೋಧನೆಗಳಲ್ಲಿರುವ ಸಮಾನತೆಯನ್ನು ಉದಾಹರಣೆಗಳೊಂದಿಗೆ ತಿಳಿಸಿ.

**ಪ್ರ. 5 ಪ್ರಾರ್ಥನೆ/ಧ್ಯಾನ-ಧಾರಣಾ, ವಿಪಶ್ಯನಾಗಳಿಂದ ಮಾನವ ಸಮೂಹಕ್ಕೆ ಆಗುವ ಲಾಭಗಳೇನು?**

**ಚಟುವಟಿಕೆ**

- ವಿವಿಧ ಧರ್ಮಗಳ ಹಬ್ಬಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ.
- 'ಸರ್ವಧರ್ಮ ಸಮಭಾವ' ಎಂಬ ವಿಷಯದ ಮೇಲೆ ಗುಂಪು ಚರ್ಚೆ ನಡೆಸಿ.
- ಭೂಪಟದಲ್ಲಿ ಪಾಠದಲ್ಲಿ ಬಂದಿರುವ ಪ್ರಮುಖ ಸ್ಥಳಗಳನ್ನು ಗುರುತಿಸಿ.
- ಉದಾಹರಣೆಗೆ: ಧಾರ್ಮಿಕ ಸ್ಥಳಗಳು, ಸ್ತೂಪಗಳು, ಜನ್ಮ ಸ್ಥಳಗಳು ಇತ್ಯಾದಿ.

**ಉಪಕ್ರಮ**

1. ಕೆಳಗಿನ ಬರಿದಾದ ಚೌಕಟ್ಟಿನಲ್ಲಿ ನಿಮ್ಮ ಮೆಚ್ಚಿನ ಹಬ್ಬ ಮತ್ತು ನಿಸರ್ಗ ಇವುಗಳ ಸಂಬಂಧ ದರ್ಶಿಸುವ ಚಿತ್ರ ತಗೆಯಿರಿ.

***

# 6 ಜನಪದಗಳು ಮತ್ತು ಮಹಾಜನಪದಗಳು



6.1 ಜನಪದ
6.2 ಮಹಾಜನಪದ
6.3 ಗಣರಾಜ್ಯ
6.4 ಮಗಧ ಸಾಮ್ರಾಜ್ಯದ ಉದಯ



**ತಿಳಿದುಕೊಳ್ಳೋಣ ಬನ್ನಿ.**

ಗ್ರಾಮ ಅಥವಾ ನಗರದ ಆಡಳಿತವು ಯಾರ ಮೂಲಕ ಮತ್ತು ಹೇಗೆ ನಡೆಯುತ್ತದೆ ಎಂಬುದರ ಕುರಿತು ಮಾಹಿತಿ ಪಡೆಯಿರಿ.

ಪ್ರಾಚೀನ ಭಾರತದಲ್ಲಿ ಅನೇಕ ಸಣ್ಣ-ಸಣ್ಣ ಹಳ್ಳಿಗಳಿದ್ದವು, ಅಲ್ಲಿ ಜನರು ಕೃಷಿ, ವ್ಯಾಪಾರ ಮಾಡುತ್ತಾ ಒಗ್ಗಟ್ಟಿನಿಂದ ವಾಸಿಸುತ್ತಿದ್ದರು. ಕ್ರಮೇಣ ಹಳ್ಳಿಗಳ ಆಡಳಿತಕ್ಕಾಗಿ ಹಳ್ಳಿಗಳ ಗುಂಪುಗಳು ರೂಪುಗೊಂಡವು. ಇಂತಹ ಗುಂಪುಗಳಿಗೆ 'ಜನಪದ' ಎಂಬ ಹೆಸರು ಬಂದಿತು.

ಕಾಲ ಕಳೆದಂತೆ ಕೆಲವು ಜನಪದಗಳು ಪ್ರಬಲವಾದವು. ಅವುಗಳ ಬಳಿ ಸೈನ್ಯ, ಫಲವತ್ತಾದ ಭೂಮಿ, ಉತ್ತಮ ಆಡಳಿತ ಮತ್ತು ಸಮೃದ್ಧ ವ್ಯಾಪಾರವಿತ್ತು. ಜನಪದಗಳ ವಿಸ್ತಾರವಾಗುತ್ತಾ ಹೋದಂತೆ, ಅವು ಮುಂದೆ ಮಹಾಜನಪದಗಳಾಗಿ ರೂಪಾಂತರಗೊಂಡವು.



**ಚರ್ಚೆ ಮಾಡಿ.**

ಇಷ್ಟೊಂದು ದೊಡ್ಡ ರಾಜ್ಯಗಳಲ್ಲಿ ಯಾರು ಅತ್ಯಂತ ಶಕ್ತಿಶಾಲಿಯಾಗಿರಬಹುದು?

ಜನಪದಗಳು, ಮಹಾಜನಪದಗಳು ಮತ್ತು ರಾಜ್ಯಗಳ ನಡುವಿನ ವ್ಯತ್ಯಾಸವೇನು?

ಕೆಲವು ಜನಪದಗಳ ವಿಸ್ತರಣೆ ಹೇಗೆ ಆಯಿತು?

ಈಗ ನಾವು ಅಂದಿನ ಸಮಾಜ ಜೀವನ ಮತ್ತು ಆಡಳಿತ ವ್ಯವಸ್ಥೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳೋಣ.

## 6.1 ಜನಪದ

ಸಾಮಾನ್ಯವಾಗಿ ಕ್ರಿ.ಪೂ. 1000 ರಿಂದ ಕ್ರಿ.ಪೂ. 600 ರವರೆಗಿನ ಅವಧಿಯನ್ನು 'ಉತ್ತರ-ವೈದಿಕ ಕಾಲ' ಎಂದು ಪರಿಗಣಿಸಲಾಗುತ್ತದೆ. ಈ ಕಾಲದಲ್ಲಿ ಜನರು ಕ್ರಮೇಣ ಸ್ಥಿರವಾಗಿ ನೆಲೆಸಲಾರಂಭಿಸಿದರು. ಕೆಲವು ಕಡೆಗಳಲ್ಲಿ ಅವರ ಶಾಶ್ವತ ವಸಾಹತುಗಳು ನಿರ್ಮಾಣವಾದವು. ಈ ವಸಾಹತುಗಳನ್ನು ಮುಂದೆ 'ಜನಪದ' ಎಂದು ಗುರುತಿಸಲಾಯಿತು. 'ಜನಪದ' ಎಂದರೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನರ ಗುಂಪು; ಅಲ್ಲಿ ಜನರು ಒಟ್ಟಾಗಿ ವಾಸಿಸುತ್ತಾ ಕೃಷಿ, ಪಶುಸಂಗೋಪನೆ ಮತ್ತು ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಮಾಡುತ್ತಿದ್ದರು. ಈ ಜನರ ಗುಂಪುಗಳು ಒಂದೇ ಬುಡಕಟ್ಟಿಗೆ ಸೇರಿದವರಾಗಿದ್ದರಿಂದ, ಅವರ ಬುಡಕಟ್ಟಿನ ಹೆಸರನ್ನೇ ಆ ಜನಪದಗಳಿಗೆ ಇಡಲಾಗುತ್ತಿತ್ತು. ಜನಪದಕ್ಕೆ ಒಬ್ಬ ಪ್ರಮುಖ (ಮುಖ್ಯಸ್ಥ) ಇರುತ್ತಿದ್ದನು. ಎಲ್ಲಾ ಪ್ರಮುಖ ನಿರ್ಧಾರಗಳನ್ನು ಸಮಾಜದ ಹಿರಿಯರ ಸಲಹೆಯಂತೆ ತೆಗೆದುಕೊಳ್ಳಲಾಗುತ್ತಿತ್ತು. ಜನಪದದ ಜೀವನ ಪದ್ಧತಿಯು ಪರಸ್ಪರ ಸಹಕಾರದ ಮೇಲೆ ಅವಲಂಬಿತವಾಗಿತ್ತು. ಜನಪದಗಳನ್ನು ಪ್ರಾಚೀನ ಭಾರತೀಯ ರಾಜಕೀಯ ವ್ಯವಸ್ಥೆಯ ಮೊದಲ ಹಂತವೆಂದು ಪರಿಗಣಿಸಲಾಗುತ್ತದೆ. ಅಲ್ಲಿ ಜನರ ಸಹಭಾಗಿತ್ವ, ಸಾಮೂಹಿಕ ನಿರ್ಧಾರ ಮತ್ತು ಸಾಮಾಜಿಕ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗಿತ್ತು.

## 6.2 ಮಹಾಜನಪದ

ಕ್ರಿ.ಪೂ. ಸುಮಾರು 6ನೇ ಶತಮಾನದಲ್ಲಿ, ಕೆಲವು ಜನಪದಗಳು ಆರ್ಥಿಕ ವ್ಯವಹಾರ, ಸೈನ್ಯ ವ್ಯವಸ್ಥೆ ಮತ್ತು ಆಡಳಿತದ ದೃಷ್ಟಿಯಿಂದ ಹೆಚ್ಚು ಶಕ್ತಿಶಾಲಿಯಾದವು. ಇಂತಹ ದೊಡ್ಡ ರಾಜ್ಯಗಳಿಗೆ 'ಮಹಾಜನಪದ' ಎಂಬ ಗುರುತು ಸಿಕ್ಕಿತು. ಮಹಾಜನಪದಗಳಲ್ಲಿ ಅನೇಕ ಹಳ್ಳಿಗಳು, ನಗರಗಳು, ವ್ಯಾಪಾರ ಮಾರ್ಗಗಳು ಮತ್ತು ಸುಸಜ್ಜಿತ ಸೈನ್ಯಗಳು ಸೇರಿದ್ದವು.




ಮಹಾಜನಪದಗಳಲ್ಲಿ ರಾಜ ಅಥವಾ ಸಲಹೆಗಾರರ ಮಂಡಳಿಯು ನಾಯಕತ್ವವನ್ನು ವಹಿಸುತ್ತಿತ್ತು. ಇಲ್ಲಿನ ಆಡಳಿತ ವ್ಯವಸ್ಥೆಯು ಸುಸಜ್ಜಿತವಾಗಿತ್ತು. ಮಹಾಜನಪದಗಳ ಕಾಲದಲ್ಲಿ ಕೃಷಿ, ವ್ಯಾಪಾರ, ಮಾರುಕಟ್ಟೆಗಳು ಮತ್ತು ಕಲೆಗಳು ಅಭಿವೃದ್ಧಿ ಹೊಂದಿದವು. ಕೆಲವು ಮಹಾಜನಪದಗಳು ತಮ್ಮ ಸೈನ್ಯಬಲದ ಆಧಾರದ ಮೇಲೆ ವಿಸ್ತರಣೆಗೊಂಡು ನೆರೆಯ ರಾಜ್ಯಗಳ ಮೇಲೆ ಪ್ರಭುತ್ವ ಸಾಧಿಸಿದವು. ಕ್ರಿಸ್ತಪೂರ್ವ 6ನೇ ಶತಮಾನದ ಹೊತ್ತಿಗೆ ಮಹಾಜನಪದಗಳಲ್ಲಿ ಹದಿನಾರು ಮಹಾಜನಪದಗಳು ವಿಶೇಷ ಮಹತ್ವವನ್ನು ಪಡೆದುಕೊಂಡಿದ್ದವು.

ಅವುಗಳ ಹೆಸರುಗಳು ಈ ಕೆಳಗಿನಂತಿವೆ:

**ಮಹಾಜನಪದ ಮತ್ತು ರಾಜಧಾನಿ ನಗರ:**

1. ಕಾಶಿ ವಾರಾಣಸಿ
2. ಕೋಸಲ – ಶ್ರಾವಸ್ತಿ
3. ಅಂಗ – ಚಂಪಾ
4. ಮಗಧ – ಗಿರಿವ್ರಜ/ರಾಜಗೃಹ
5. ವೃಜ್ಜಿ/ವಜ್ಜಿ – ವೈಶಾಲಿ
6. ಮಲ್ಲ/ಮಾಲವ– ಕುಶಿನಾರ / ಕುಶಿನಗರ

7. ಚೇದಿ – ಶುಕ್ತಿಮತಿ/ಸೋತ್ಥಿವತಿ

8. ವಂಶ/ವತ್ಸ – ಕೌಶಾಂಬಿ

9. ಕುರು – ಇಂದ್ರಪ್ರಸ್ಥ/ಇಂದ್ರಪಟ್ಟಣ

10. ಉತ್ತರ ಪಾಂಚಾಲ – ಅಹಿಚ್ಛತ್ರ, ದಕ್ಷಿಣ ಪಾಂಚಾಲ – ಕಾಂಪಿಲ್ಯ

11. ಮತ್ಸ್ಯ – ವಿರಾಟನಗರ

12. ಶೂರಸೇನ – ಮಥುರಾ

13. ಅಶ್ಮಕ / ಅಸ್ಸಕ – ಪೋಟ್ಲಿ/ ಪೋತನ / ಪೋದನ

14. ಅವಂತಿ – ಉಜ್ಜಯಿನಿ ಮತ್ತು ಮಹಿಷ್ಮತಿ

15. ಗಾಂಧಾರ – ತಕ್ಷಶಿಲಾ

16. ಕಂಬೋಜ – ರಾಜಪುರ

ಮಹಾಜನಪದಗಳ ವಿಕಸನವು ಪ್ರಾಚೀನ ಭಾರತದಲ್ಲಿ ರಾಜ್ಯಗಳು ಉದಯಿಸುವ ಮೊದಲ ಹಂತವಾಗಿತ್ತು. ಹದಿನಾರು ಮಹಾಜನಪದಗಳಲ್ಲಿ ಮಗಧ, ಕೋಸಲ, ವತ್ಸ ಮತ್ತು ಅವಂತಿ ಈ ನಾಲ್ಕು ಮಹಾಜನಪದಗಳು ಹೆಚ್ಚು ಶಕ್ತಿಶಾಲಿಯಾಗುತ್ತಾ ಹೋದವು. ಮಹಾಜನಪದಗಳು ಜನಪದಗಳಿಗಿಂತ ಜನಸಂಖ್ಯೆ, ಭೂಪ್ರದೇಶ ಮತ್ತು ಸಂಪನ್ಮೂಲಗಳ ದೃಷ್ಟಿಯಿಂದ ದೊಡ್ಡದಾಗಿದ್ದವು.

## 6.3 ಗಣರಾಜ್ಯ

ಕೆಲವು ಮಹಾಜನಪದಗಳಲ್ಲಿ ಆಡಳಿತ ಪದ್ಧತಿಯಲ್ಲಿ ಜನಪದದ ಸಾಮಾನ್ಯ ಜನರ ಸಹಭಾಗಿತ್ವವಿರುತ್ತಿತ್ತು, ಇದನ್ನು 'ಗಣರಾಜ್ಯ' ಎಂದು ಕರೆಯಲಾಗುತ್ತಿತ್ತು. ಗಣರಾಜ್ಯಗಳಲ್ಲಿ ಎಲ್ಲಾ ನಿರ್ಧಾರಗಳು ಒಬ್ಬ ವ್ಯಕ್ತಿಯ ಕೈಯಲ್ಲಿರದೆ, ಲೋಕಪ್ರತಿನಿಧಿಗಳ ಅಥವಾ ಸಲಹಾ ಮಂಡಳಿಯ ಸಹಾಯದಿಂದ ತೆಗೆದುಕೊಳ್ಳಲಾಗುತ್ತಿತ್ತು. ಈ ಮಂಡಳಿಯಲ್ಲಿ ಹಿರಿಯ ವ್ಯಕ್ತಿಗಳು, ಯೋಧರು ಅಥವಾ ಚುನಾಯಿತ ಜನರು ಇರುತ್ತಿದ್ದರು. ಜನಪದಗಳಲ್ಲಿನ ಹಿರಿಯ ವ್ಯಕ್ತಿಗಳನ್ನು 'ಗಣಪರಿಷದ್' ಎಂದು ಕರೆಯಲಾಗುತ್ತಿತ್ತು. ಗಣಪರಿಷತ್ತಿನ ಸದಸ್ಯರು ಒಟ್ಟಾಗಿ ಚರ್ಚಿಸಿ ರಾಜ್ಯಭಾರಕ್ಕೆಸಂಬಂಧಿಸಿದನಿರ್ಧಾರಗಳನ್ನುತೆಗೆದುಕೊಳ್ಳುತ್ತಿದ್ದರು. ಈ ಚರ್ಚೆಗಳು ನಡೆಯುವ ಸಭಾಂಗಣಕ್ಕೆ 'ಸಂಥಾಗಾರ' ಎಂದು ಕರೆಯಲಾಗುತ್ತಿತ್ತು. ಉದಾಹರಣೆಗೆ, ವೃಜ್ಜಿ ಸಂಘವು ಒಂದು ಗಣರಾಜ್ಯವಾಗಿತ್ತು, ಅಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಾಮಾನ್ಯರ ಸಹಭಾಗಿತ್ವವಿತ್ತು. ಅದೇ ರೀತಿ ಮಲ್ಲ ಗಣರಾಜ್ಯದಲ್ಲೂ ಸಾಮೂಹಿಕ ನಾಯಕತ್ವದ ಪದ್ಧತಿಯಿತ್ತು. ಈ ಗಣರಾಜ್ಯಗಳಿಂದಾಗಿಯೇ ಪ್ರಾಚೀನ ಭಾರತದಲ್ಲಿ ಲೋಕಶಾಹಿಯ (ಪ್ರಜಾಪ್ರಭುತ್ವದ) ಆರಂಭವಾಯಿತು ಎಂದು ಹೇಳಬಹುದು. ಗಣರಾಜ್ಯವು ಮಹಾಜನಪದಗಳ ವಿವಿಧ ಸ್ವರೂಪದ ಒಂದು ಪ್ರಮುಖ ಉದಾಹರಣೆಯಾಗಿದೆ, ಏಕೆಂದರೆ ಪ್ರಾಚೀನ ಭಾರತದಲ್ಲಿ ರಾಜಪ್ರಭುತ್ವ ಮತ್ತು ಜನರ ಸಹಭಾಗಿತ್ವದ ಎರಡೂ ಪದ್ಧತಿಗಳು ಕಾರ್ಯನಿರ್ವಹಿಸುತ್ತಿದ್ದವು ಎಂಬುದು ಇದರಿಂದ ಕಂಡುಬರುತ್ತದೆ. ಈ ವ್ಯವಸ್ಥೆಯಿಂದಾಗಿ ರಾಜ್ಯ ವ್ಯವಸ್ಥೆಯಲ್ಲಿ ಸ್ಥಿರತೆ ಹಾಗೂ ಜನರ ಪಾತ್ರವು ಸುನಿಶ್ಚಿತವಾಯಿತು.



**ಮಾಹಿತಿ ತಿಳಿದುಕೊಳ್ಳಿ.**

**ಗಣಪರಿಷತ್ತಿನಲ್ಲಿ ಮತದಾನದ ಪದ್ಧತಿ –** ಸಭಾಂಗಣದಲ್ಲಿನ ವಿಧೇಯಕವು ಸದಸ್ಯರ ಬಹುಮತದಿಂದ ಅಂಗೀಕರಿಸಲ್ಪಡುತ್ತಿತ್ತು. ಮತದಾನದ ಸ್ವರೂಪವು ಬಹಿರಂಗ ಮತದಾನ, ಧ್ವನಿ ಮತದಾನ ಅಥವಾ ರಹಸ್ಯ ಮತದಾನ ಹೀಗೆ ವಿಭಿನ್ನ ಪ್ರಕಾರದ್ದಾಗಿರುತ್ತಿತ್ತು. ಸದಸ್ಯರ ಮತಕ್ಕೆ 'ಛಂದ್' ಎಂದು ಕರೆಯಲಾಗುತ್ತಿತ್ತು. ವಿವಿಧ ಬಣ್ಣಗಳ 'ದಂಡಿಕೆಗಳನ್ನು' (ಕೋಲುಗಳನ್ನು) ಮತಪತ್ರಗಳಾಗಿ ಬಳಸಲಾಗುತ್ತಿತ್ತು, ಅದನ್ನು 'ಶಲಾಕಾ' ಎಂದು ಕರೆಯುತ್ತಿದ್ದರು. ಮತದಾನದ ಅಧಿಕಾರಿಯನ್ನು 'ಶಲಾಕಾ ಗ್ರಾಹಕ' ಎಂದು ಕರೆಯುತ್ತಿದ್ದರು. ಅನುಪಸ್ಥಿತ ಸದಸ್ಯರಿಗೂ ಮತದಾನ ಮಾಡುವ ಹಕ್ಕನ್ನು ನೀಡಲಾಗಿತ್ತು. ಆದರೆ, ಸಾಮಾನ್ಯವಾಗಿ ಉಪಸ್ಥಿತ ಮತದಾರರ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿತ್ತು.



**ವಿಚಾರ ಮಾಡಿ.**

ಗಣರಾಜ್ಯದ ಮತದಾನ ಪದ್ಧತಿ ಮತ್ತು ಈಗಿನ ಮತದಾನ ಪದ್ಧತಿಯನ್ನು ಹೋಲಿಕೆ ಮಾಡಿ.

## 6.4 ಮಗಧ ರಾಜ್ಯದ ಉದಯ

ಸುಮಾರು ಕ್ರಿ.ಪೂ. 6ನೇ ಶತಮಾನದಲ್ಲಿ ಮಹಾಜನಪದಗಳಲ್ಲಿ ಮಗಧವು ಅತ್ಯಂತ ಶಕ್ತಿಶಾಲಿ ಮತ್ತು ಪ್ರಭಾವಿ ಮಹಾಜನಪದವಾಗಿ ಉದಯಿಸಿತು. ಪ್ರಾಚೀನ ಭಾರತದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಇದು ಮಹತ್ವಪೂರ್ಣವೆನಿಸಿತು. ಮಗಧ ರಾಜ್ಯದ ಉದಯದ ಹಿಂದೆ ಕೆಲವು ಪ್ರಮುಖ ಕಾರಣಗಳಿದ್ದವು –

**ಭೌಗೋಳಿಕ ಸ್ಥಾನದ ಅನುಕೂಲ**

- ಗಂಗಾ ನದಿಯ ದಡದಲ್ಲಿರುವ ಫಲವತ್ತಾದ ಭೂಮಿ.
- ಜಲಮಾರ್ಗಗಳ ಮೂಲಕ ವ್ಯಾಪಾರ ಮತ್ತು ಸಂಪರ್ಕದ ಅನುಕೂಲ.

**ಖನಿಜ ಸಂಪತ್ತು**

- ವಿಶೇಷವಾಗಿ ಕಬ್ಬಿಣದ ದೊಡ್ಡ ನೈಸರ್ಗಿಕ ನಿಕ್ಷೇಪಗಳು ದೊರೆತಿದ್ದು.
- ಹೊಸ-ಹೊಸ ತಂತ್ರದ ಪರಿಚಯವಾಯಿತು.
- ಹೊಸ-ಹೊಸ ಶಸ್ತ್ರಗಳ ಉಪಯೋಗ ಆಗತೊಡಗಿತ.

**ಬಲಿಷ್ಠ ನಾಯಕತ್ವ**

- ಬಿಂಬಿಸಾರ ಮತ್ತು ಅಜಾತಶತ್ರು ಅಂತಹ ಮಹಾನ್ ರಾಜರು ಸಾಮ್ರಾಜ್ಯವನ್ನು ವಿಸ್ತರಿಸಿದರು.
- ಪಾಟಲಿಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು, ಇದು ಮಿಲಿಟರಿ, ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದ ಬಹಳ ಮುಖ್ಯವಾಗಿತ್ತು.
- ಆಡಳಿತಾತ ್ಮಕ ಸುಧಾರಣೆಗಳಿಂದ ರಾಜ್ಯವು ಹೆಚ್ಚು ಸಂಘಟಿತವಾಯಿತು

**ಬಲವಾದ ಆರ್ಥಿಕ ವ್ಯವಸ್ಥೆ**

- ವ್ಯಾಪಾರ ಮತ್ತು ಮಾರುಕಟ್ಟೆಗಳ ಅಭಿವೃದ್ಧಿ.
- ಮಗಧವು ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು, ಇಲ್ಲಿಂದ ಬಟ್ಟೆ, ಮಸಾಲೆ ಪದಾರ್ಥಗಳು ಮತ್ತು ಲೋಹಗಳನ್ನು ಇತರ ಪ್ರದೇಶಗಳಿಗೆ ಮಾರಾಟ ಮಾಡಲಾಗುತ್ತಿತ್ತು

**ರಾಜಕೀಯ ಮೈತ್ರಿಗಳು**

- ಇತರ ಮಹಾಜನಪದಗಳ ಮೇಲೆ ಪ್ರಭಾವವನ್ನು ಹೆಚ್ಚಿಸಿಕೊಂಡರು.
- ಸಾಮ್ರಾಜ್ಯದ ವಿಸ್ತರಣೆಗಾಗಿ ವೈವಾಹಿಕ ಸಂಬಂಧಗಳನ್ನು (ಮದುವೆಯ ಮೈತ್ರಿಗಳು) ಬಳಸಿಕೊಂಡರು.

ಇದು ಪ್ರಾಚೀನ ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆಯ ಮೊದಲ ಉದಾಹರಣೆ ಎಂದು ಪರಿಗಣಿಸಲಾಗಿದೆ.

ಬಿಂಬಿಸಾರ ರಾಜನು ಮಗಧ ಸಾಮ್ರಾಜ್ಯದ ಅಡಿಪಾಯ ಹಾಕಿದನು. ಅವನ ಕಾಲದಲ್ಲಿ ಮಗಧದ ವ್ಯಾಪಾರ ವೃದ್ಧಿಸಿತು, ಕೃಷಿ ವ್ಯವಸ್ಥೆಯು ಸುಧಾರಿಸಿತು ಮತ್ತು ಆರ್ಥಿಕ ಸ್ಥಿತಿಯು ಉತ್ತಮಗೊಂಡಿತು. ಅವನು ರಾಜಗೃಹದಲ್ಲಿ ಮಗಧದ ರಾಜಧಾನಿಯನ್ನು ಸ್ಥಾಪಿಸಿದನು. ಬಿಂಬಿಸಾರನ ನಂತರ ಅವನ ಮಗ ಅಜಾತಶತ್ರು ಅಧಿಕಾರಕ್ಕೆ ಬಂದನು. ಅವನು ಕೂಡ ಮಗಧದ ವಿಸ್ತರಣೆಯ ನೀತಿಯನ್ನು ಅನುಸರಿಸಿದನು. ಅಜಾತಶತ್ರುವು ವೃಜ್ಜಿ ಗಣರಾಜ್ಯ ಮತ್ತು ಕೋಸಲ ರಾಜ್ಯಗಳ ಮೇಲೆ ವಿಜಯ ಸಾಧಿಸಿದನು.



**ನಿಮಗೆ ತಿಳಿದಿದೆಯೇ?**

ಅಜಾತಶತ್ರು ತನ್ನ ಯುದ್ಧ ಕೌಶಲ್ಯದ ಆಧಾರದ ಮೇಲೆ ಮಗಧ ಸಾಮ್ರಾಜ್ಯವನ್ನು ಮತ್ತಷ್ಟು ಬಲಪಡಿಸಲು





ಎರಡು ಹೊಸ ಆಯುಧಗಳನ್ನು ಬಳಸಿದನು: ಕೆಲವು ಹೊಸ ಆಯುಧಗಳನ್ನು ತಯಾರಿಸಲಾಯಿತು ಎಂದು ಹೇಳಲಾಗುತ್ತದೆ. ಅವನು 'ಮಹಾಶಿಲಾಕಂಟಕ' ಎಂಬ ಹೆಸರಿನ ದೊಡ್ಡ ಕಲ್ಲುಗಳನ್ನು ಎಸೆಯುವ ಯಂತ್ರವನ್ನು ತಯಾರಿಸಿದನು, ಇದರಿಂದ ಶತ್ರುಗಳ ಕೋಟೆಯ ಗೋಡೆಗಳು ಸುಲಭವಾಗಿ ಕುಸಿಯುತ್ತಿದ್ದವು. ಹಾಗೆಯೇ, 'ರಥಮುಸಲ' ಎಂಬ ಹೆಸರಿನ ಚೂಪಾದ ಕಬ್ಬಿಣದ ಮೊಳೆಗಳಿರುವ ವಿಶೇಷ ರಥವನ್ನು ಅವನು ಸಿದ್ಧಪಡಿಸಿದನು, ಇದು ಶತ್ರು ಸೈನ್ಯದೊಳಗೆ ನುಗ್ಗಿ ಭಾರಿ ಹಾನಿ ಉಂಟುಮಾಡುತ್ತಿತ್ತು. ಈ ಹೊಸ ಶಸ್ತ್ರಾಸ್ತ್ರಗಳಿಂದಾಗಿ ಅಜಾತಶತ್ರುವಿಗೆ ವೃಜ್ಜಿಗಳಂತಹ ಬಲಿಷ್ಠ ಗಣರಾಜ್ಯದ ವಿರುದ್ಧದ ಯುದ್ಧದಲ್ಲಿ ನಿರ್ಣಾಯಕ ವಿಜಯವನ್ನು ಸಾಧಿಸಲು ಸಾಧ್ಯವಾಯಿತು ಮತ್ತು ಮಗಧದ ಸಾಮರ್ಥ್ಯವು ಹೆಚ್ಚಾಯಿತು.

ಅಜಾತಶತ್ರುವು ಬಿಹಾರದ ಪಾಟಲಿಪುತ್ರ (ಇಂದಿನ ಪಾಟ್ನಾ ನಗರ) ದಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸಿದನು.



**ಹೇಳಿ ನೋಡೋಣ!**

ರಾಜಧಾನಿಯ ಮಹತ್ವವೇನು? ರಾಜಧಾನಿ ಎಲ್ಲಿರಬೇಕು ಎಂಬುದಕ್ಕೆ ಯಾವ ಮಾನದಂಡಗಳಿರಬೇಕು? ಈ ಬಗ್ಗೆ ಶಿಕ್ಷಕರ ಸಹಾಯದಿಂದ ತರಗತಿಯಲ್ಲಿ ಚರ್ಚಿಸಿ.

ಅಜಾತಶತ್ರುವು ಬೌದ್ಧ ಧರ್ಮವನ್ನು ಸ್ವೀಕರಿಸಿದನು. ಅವನು ಗೌತಮ ಬುದ್ಧನ ಅನುಯಾಯಿಯಾದನು. ಗೌತಮ ಬುದ್ಧನ ಮಹಾಪರಿನಿರ್ವಾಣದ ನಂತರ, ಅಜಾತಶತ್ರುವಿನ ಆಳ್ವಿಕೆಯಲ್ಲಿ ರಾಜಗೃಹದಲ್ಲಿ ಬೌದ್ಧ ಧರ್ಮದ ಮೊದಲ ಪರಿಷತ್ತು (ಸಂಗೀತಿ) ನಡೆಯಿತು.

ಅಜಾತಶತ್ರುವಿನ ನಂತರ ಬಂದ ಮಗಧದ ರಾಜರಲ್ಲಿ ಶಿಶುನಾಗ ಒಬ್ಬ ಪ್ರಮುಖ ಆಡಳಿತಗಾರನಾಗಿದ್ದನು. ಅವನು ಅವಂತಿ, ವತ್ಸ ಮತ್ತು ಕೋಸಲ ರಾಜ್ಯಗಳ ಮೇಲೆ ವಿಜಯ ಸಾಧಿಸಿದನು, ಇದರಿಂದಾಗಿ ಮಗಧದ ಸಾಮರ್ಥ್ಯವು ಮತ್ತಷ್ಟು ಹೆಚ್ಚಾಯಿತು.

ಶಿಶುನಾಗನ ನಂತರ ನಂದ ವಂಶದ ಉದಯವಾಯಿತು. ಮಹಾಪದ್ಮನಂದನು ನಂದ ವಂಶದ ಅತ್ಯಂತ ಪ್ರಸಿದ್ಧ ರಾಜನಾಗಿದ್ದನು. ಅವನು ಮಗಧ ಸಾಮ್ರಾಜ್ಯವನ್ನು ಭಾರಿ ಪ್ರಮಾಣದಲ್ಲಿ ವಿಸ್ತರಿಸಿದನು. ಉತ್ತರ ಭಾರತದ ಅನೇಕ ಸಣ್ಣ ರಾಜ್ಯಗಳನ್ನು ಅವನು ತನ್ನ ಅಧಿಪತ್ಯಕ್ಕೆ ತಂದನು. ನಂದ ರಾಜರು ತಮ್ಮ ದೊಡ್ಡ ಸೈನ್ಯಕ್ಕಾಗಿ, ಸಂಪತ್ತಿಗಾಗಿ ಮತ್ತು ತೆರಿಗೆ ವ್ಯವಸ್ಥೆಗಾಗಿ ಹೆಸರುವಾಸಿಯಾಗಿದ್ದರು. ಅವರ ಕಾಲದಲ್ಲಿ ಮಗಧವು ಭಾರತದ ಅತ್ಯಂತ ಪ್ರಬಲ ರಾಜ್ಯವಾಯಿತು, ಆದರೆ ಕೊನೆಯ ರಾಜ ಧನಾನಂದನು ಅತ್ಯಂತ ಅಹಂಕಾರಿಯಾಗಿದ್ದನು. ಅವನು ಅನೇಕ ದಬ್ಬಾಳಿಕೆಯ ತೆರಿಗೆಗಳನ್ನು ಹೇರಿದ್ದರಿಂದ ಜನರಲ್ಲಿ ಅಸಮಾಧಾನ ಹೆಚ್ಚಾಯಿತು. ಆಡಳಿತ ವ್ಯವಸ್ಥೆಯು ಭ್ರಷ್ಟಗೊಂಡಿದ್ದರಿಂದ ಅವನ ಕಾಲದಲ್ಲಿ ಮಗಧ ಸಾಮ್ರಾಜ್ಯವು ದುರ್ಬಲಗೊಳ್ಳಲಾರಂಭಿಸಿತು. ಅಂತಿಮವಾಗಿ ಆಚಾರ್ಯ ಚಾಣಕ್ಯ ಮತ್ತು ಚಂದ್ರಗುಪ್ತ ಮೌರ್ಯರು ನಂದ ಆಳ್ವಿಕೆಯನ್ನು ಕೊನೆಗೊಳಿಸಿ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದರು.

ಜನಪದಗಳಿಂದ ಸಾಮ್ರಾಜ್ಯಗಳವರೆಗಿನ ಪಯಣವು ಪ್ರಾಚೀನ ಭಾರತದ ರಾಜಕೀಯ ಬೆಳವಣಿಗೆಯ ಪ್ರಮುಖ ಹಂತವಾಗಿದೆ. ಹಳ್ಳಿಗಳ ವಸಾಹತುಗಳಿಂದ ಪ್ರಾರಂಭವಾಗಿ ಅವು ದೊಡ್ಡ ರಾಜ್ಯಗಳಾಗಿ ಹೇಗೆ ರೂಪಾಂತರಗೊಂಡವು ಮತ್ತು ಗಣರಾಜ್ಯಗಳು ಹೇಗೆ ಅಭಿವೃದ್ಧಿ ಹೊಂದಿದವು ಎಂಬುದನ್ನು ನಾವು ಇಲ್ಲಿ ನೋಡಬಹುದು.



ಅಜಾತಶತ್ರು ಶಿಲ್ಪ



## ಸ್ವಾಧ್ಯಾಯ

**ಪ್ರ.1 ಅ) ಸರಿಯಾದ ಆಯ್ಕೆಯ ಮುಂದೆ ☑ ಗುರುತು ಮಾಡಿ.**

1. ಹಳ್ಳಿಗಳ ಆಡಳಿತಕ್ಕಾಗಿ ಹಳ್ಳಿಗಳ ಗುಂಪುಗಳು ರೂಪುಗೊಂಡವು, ಆ ಗುಂಪುಗಳನ್ನು ಏನೆಂದು ಕರೆಯುತ್ತಾರೆ?
   - ಅ) ಜನಪದ ☐
   - ಬ) ಮಹಾಜನಪದ ☐
   - ಕ) ರಾಜ್ಯ ☐
2. ಮಗಧ ಸಾಮ್ರಾಜ್ಯದ ಅಡಿಪಾಯ ಹಾಕಿದವರು ಯಾರು?
   - ಅ) ಶಿಶುನಾಗ ☐
   - ಬ) ಅಜಾತಶತ್ರು ☐
   - ಕ) ಬಿಂಬಿಸಾರ ☐
3. ಚಂದ್ರಗುಪ್ತ ಮೌರ್ಯರು ಯಾವ ರಾಜವಂಶವನ್ನು ಕೊನೆಗೊಳಿಸಿದರು?
   - ಅ) ಶಿಶುನಾಗ ☐
   - ಬ) ನಂದ ☐
   - ಕ) ಮೌರ್ಯ ☐

**ಬ) ಜೋಡಿಗಳನ್ನು ಹೊಂದಿಸಿ.**

| **'ಅ' ಗುಂಪು** | **'ಬ' ಗುಂಪು** |
|---|---|
| 1. ಮತದಾನ ಅಧಿಕಾರಿ | ಅ) ಬೌದ್ಧ ಧರ್ಮದ ಸ್ವೀಕಾರ |
| 2. ವೃಜ್ಜಿ | ಬ) ಶಲಾಕಾ ಗ್ರಾಹಕ |
| 3. ಅಜಾತಶತ್ರು | ಕ) ಮಹಾಜನಪದ |
| | ಡ) ಜನಪದ |

**ಪ್ರ.2 ಒಂದೇ ಶಬ್ದದಲ್ಲಿ ಉತ್ತರಿಸಿ.**

1. ನಂದ ವಂಶದ ಕೊನೆಯ ರಾಜ –
2. ದೊಡ್ಡ ಕಲ್ಲುಗಳನ್ನು ಎಸೆಯುವ ಯಂತ್ರ –
3. ಪಾಟಲಿಪುತ್ರದಲ್ಲಿ ರಾಜಧಾನಿಯನ್ನು ಸ್ಥಾಪಿಸಿದವರು –

**ಪ್ರ.3 ಅ) ಸಂಕ್ಷಿಪ್ತವಾಗಿ ಉತ್ತರಿಸಿ.**

1. ಜನಪದ ಎಂದರೆ ಏನು?
2. ಜನಪದಗಳ ನಿರ್ಮಾಣಕ್ಕೆ ಕಾರಣವೇನು?
3. ಮಹಾಜನಪದಗಳ ವಿಕಾಸದ ಹಿಂದಿನ ಕಾರಣಗಳನ್ನು ತಿಳಿಸಿ.

**ಬ) ನಿಮ್ಮ ಶಬ್ದಗಳಲ್ಲಿ ಬರೆಯಿರಿ.**

1. ಮಗಧ ಸಾಮ್ರಾಜ್ಯವನ್ನು ಹೆಚ್ಚು ಸಾಮರ್ಥ್ಯಶಾಲಿಯನ್ನಾಗಿ ಮಾಡಲು ಅಜಾತಶತ್ರು ಮಾಡಿದ ಸುಧಾರಣೆಗಳಾವುವು?
2. ಗಣಪರಿಷತ್ತಿನ ಮತದಾನ ಪದ್ಧತಿ ಮತ್ತು ಇಂದಿನ ಮತದಾನ ಪದ್ಧತಿಗಳ ನಡುವಿನ ಕೆಲವು ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ತಿಳಿಸಿ.

**ಪ್ರ.4 ಪಾಠದಲ್ಲಿನ ನಕ್ಷೆಯನ್ನು ಗಮನಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದ ಪ್ರಸ್ತುತ ಅಂತರಾಷ್ಟ್ರೀಯ ಗಡಿಯ ಹೊರಗಿರುವ ಮಹಾಜನಪದಗಳ ಹೆಸರುಗಳನ್ನು ಬರೆಯಿರಿ.
2. 'ಅಶ್ಮಕ' ಮಹಾಜನಪದವು ಪ್ರಸ್ತುತ ಯಾವ ರಾಜ್ಯದಲ್ಲಿದೆ?
3. ಮಹಾಜನಪದಗಳು ಹೆಚ್ಚಿನ ಪ್ರಮಾಣದಲ್ಲಿ ಯಾವ ನದಿಯ ಕಣಿವೆಯಲ್ಲಿವೆ?

**ಉಪಕ್ರಮ (ಚಟುವಟಿಕೆ)**

ಪಾಠದಲ್ಲಿ ಬಂದಿರುವ ಮಹಾಜನಪದಗಳು ಈಗ ಭಾರತದ ಯಾವ ರಾಜ್ಯಗಳಲ್ಲಿ ಬರುತ್ತವೆ ಎಂಬುದನ್ನು ಅಂತರ್ಜಾಲದ ಸಹಾಯದಿಂದ ಹುಡುಕಿ 'ಮಹಾಜನಪದ ಮತ್ತು ರಾಜ್ಯ'ಗಳ ಪಟ್ಟಿಯನ್ನು ತಯಾರಿಸಿ.

ಉದಾಹರಣೆ: ಅಶ್ಮಕ – ಮಹಾರಾಷ್ಟ್ರ

***



# 7 ಮೌರ್ಯ ಕಾಲದ ಭಾರತ

7.1 ಮೌರ್ಯ ಸಾಮ್ರಾಜ್ಯದ ಸ್ಥಾಪನೆ

7.2 ಸಾಮ್ರಾಟ ಅಶೋಕ

7.3 ಮೌರ್ಯ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ

7.4 ಕಲೆ, ವಾಸ್ತುಶಿಲ್ಪ ಮತ್ತು ಲೋಕಜೀವನ

'ಯುಗಪ್ರವರ್ತನೆ' ಎಂದರೆ ಕಾಲ ಬದಲಾಗುವುದು, ಆಲೋಚನೆಗಳು ಮತ್ತು ಮೌಲ್ಯಗಳ ಹೊಸ ಹರಿವು ಸಮಾಜದಲ್ಲಿ ನಿರ್ಮಾಣವಾಗುವುದು. ಒಬ್ಬ ವ್ಯಕ್ತಿಯ ಕೃತಿ ಅಥವಾ ಆಲೋಚನೆಗಳಿಂದ ಸಮಾಜಕ್ಕೆ ಹೊಸ ದಿಕ್ಕು ಸಿಕ್ಕಾಗ, ಆತನನ್ನು 'ಯುಗಪ್ರವರ್ತಕ' ಎಂದು ಕರೆಯಲಾಗುತ್ತದೆ.

ಅಂತಹ ಒಂದು ಯುಗಪ್ರವರ್ತಕ ಕಾಲವು ಕ್ರಿಸ್ತಪೂರ್ವ ನಾಲ್ಕನೇ ಶತಮಾನದಲ್ಲಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಆರಂಭವಾಯಿತು. ಆ ಸಮಯದಲ್ಲಿ ಭಾರತವು ಅನೇಕ ಸಣ್ಣ ರಾಜ್ಯಗಳಾಗಿ ವಿಭಜನೆಯಾಗಿತ್ತು. ವಿದೇಶಿ ಆಕ್ರಮಣಗಳು ಹೆಚ್ಚಾಗಿದ್ದವು ಮತ್ತು ಮಗಧ ಸಾಮ್ರಾಜ್ಯವು ದುರ್ಬಲಗೊಂಡಿತ್ತು. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಗುರುಗಳು ತಮ್ಮ ಬುದ್ಧಿವಂತಿಕೆ, ರಾಜಕೀಯ ದೂರದೃಷ್ಟಿ ಮತ್ತು ಕಾರ್ಯತಂತ್ರಗಳಿಂದ ಒಬ್ಬ ಸಮರ್ಥ ಶಿಷ್ಯನನ್ನು ರೂಪಿಸಿದರು. ಆ ಗುರುಗಳ ಹೆಸರು ಆಚಾರ್ಯ ಚಾಣಕ್ಯ ಮತ್ತು ಅವರ ಶಿಷ್ಯನ ಹೆಸರು ಚಂದ್ರಗುಪ್ತ ಮೌರ್ಯ. ಇವರಿಬ್ಬರ ಸಂಘಟಿತ ಪ್ರಯತ್ನದಿಂದ ಭಾರತದಲ್ಲಿ ಮೊದಲ ಬಾರಿಗೆ ಒಂದು ಅಖಂಡ ಮತ್ತು ಬಲಿಷ್ಠ ಸಾಮ್ರಾಜ್ಯ ನಿರ್ಮಾಣವಾಯಿತು. ನಂತರ ಸಾಮ್ರಾಟ ಅಶೋಕನು ಮೌರ್ಯ ಸಾಮ್ರಾಜ್ಯದ ಮತ್ತೊಬ್ಬ ಯುಗಪ್ರವರ್ತಕ ರಾಜನಾದನು. ಅಶೋಕನು ಗೌತಮ ಬುದ್ಧನ ಶಾಂತಿ ಸಂದೇಶವನ್ನು ಭಾರತದ ಹೊರಗೂ ಹರಡಿದನು.



**ಯೋಚಿಸಿ.**

- ಭಾರತದ ಮೊದಲ ದೊಡ್ಡ ಮತ್ತು ಸುಸಂಘಟಿತ ಸಾಮ್ರಾಜ್ಯ ಹೇಗೆ ನಿರ್ಮಾಣವಾಯಿತು?
- ಸಾಮ್ರಾಟ್ ಅಶೋಕನು ತನ್ನ ಸಾಮ್ರಾಜ್ಯದಾದ್ಯಂತ ವಿವಿಧೆಡೆಗಳಲ್ಲಿ ಸ್ತಂಭಲೇಖಗಳನ್ನು (ಶಿಲಾಶಾಸನಗಳನ್ನು) ಏಕೆ ಸ್ಥಾಪಿಸಿರಬಹುದು?

ಬನ್ನಿ, ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನೊದಗಿಸೋಣ!

## 7.1 ಮೌರ್ಯ ಸಾಮ್ರಾಜ್ಯದ ಸ್ಥಾಪನೆ

ನಾವು ಹಿಂದಿನ ಪಾಠದಲ್ಲಿ ಮಗಧ ಸಾಮ್ರಾಜ್ಯದಲ್ಲಿ ನಂದ ವಂಶದ ರಾಜನಾದ ಧನಾನಂದನು ರಾಜ್ಯಭಾರ ಮಾಡುತ್ತಿದ್ದನೆಂದು ಕಲಿತಿದ್ದೇವೆ. ಅವನು ಅತ್ಯಂತ ಶ್ರೀಮಂತನಾಗಿದ್ದರೂ, ಪ್ರಜೆಗಳ ಮನಸ್ಸಿನಲ್ಲಿ ಅವನ ಬಗ್ಗೆ ಅಸಮಾಧಾನವಿತ್ತು. ಚಂದ್ರಗುಪ್ತ ಮೌರ್ಯರು ಧನಾನಂದನನ್ನು ಸೋಲಿಸಿ ಮಗಧವನ್ನು ಗೆದ್ದರು. ಒಂದು ಅಖಂಡ ಸಾಮ್ರಾಜ್ಯವನ್ನು ನಿರ್ಮಿಸಿದರು. ಇದು ಸರಿಸುಮಾರು ಕ್ರಿ.ಪೂ. 321 ರಲ್ಲಿ ಚಂದ್ರಗುಪ್ತನು ಮಗಧವನ್ನು ಗೆದ್ದು ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಅವನು ಅವಂತಿ ಮತ್ತು ಸೌರಾಷ್ಟ್ರವನ್ನು ಗೆದ್ದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಪ್ರಾರಂಭಿಸಿದನು.



**ನಿಮಗೆ ಗೊತ್ತೇ?**

ಆಚಾರ್ಯ ಚಾಣಕ್ಯರನ್ನು 'ಕೌಟಿಲ್ಯ' ಅಥವಾ 'ವಿಷ್ಣುಗುಪ್ತ' ಎಂದೂ ಕರೆಯುತ್ತಾರೆ. ಅವರು ಮಹಾನ್ ರಾಜನೀತಿಜ್ಞ ಮತ್ತು ವಿದ್ವಾಂಸರಾಗಿದ್ದರು. ಚಾಣಕ್ಯರು 'ಅರ್ಥಶಾಸ್ತ್ರ' ಎಂಬ ಗ್ರಂಥವನ್ನು ಬರೆದರು. ಈ ಗ್ರಂಥದಲ್ಲಿ ಆಡಳಿತ ವ್ಯವಸ್ಥೆ, ತೆರಿಗೆ ಪದ್ಧತಿ, ರಕ್ಷಣೆ, ನ್ಯಾಯಾಂಗ ಮತ್ತು ರಾಜಕಾರಣದ ಬಗ್ಗೆ ಪ್ರಮುಖ ತತ್ವಗಳನ್ನು ತಿಳಿಸಿದ್ದಾರೆ.

ಚಂದ್ರಗುಪ್ತನು ಚಿಕ್ಕವನಿದ್ದಾಗ ತನ್ನ ಸ್ನೇಹಿತರೊಂದಿಗೆ ಆಟವಾಡುತ್ತಿದ್ದನು. ಆ ಆಟದಲ್ಲಿ ಚಂದ್ರಗುಪ್ತನು ರಾಜನ ಪಾತ್ರವನ್ನು ನಿರ್ವಹಿಸುತ್ತಿದ್ದನು. ಒಂದು ಮರದ ಕೆಳಗೆ ಅಥವಾ ಬಯಲು ಪ್ರದೇಶದಲ್ಲಿ ಅವರು ತಮ್ಮ 'ದರ್ಬಾರ್' ನಡೆಸುತ್ತಿದ್ದರು.



ಒಂದು ದಿನ, ಆಚಾರ್ಯ ಚಾಣಕ್ಯರು ಅಲ್ಲಿಂದ ಹಾದು ಹೋಗುತ್ತಿದ್ದರು. ಅವರು ಚಂದ್ರಗುಪ್ತನು ಈ ಆಟವನ್ನು ಆಡುತ್ತಿರುವುದನ್ನು ನೋಡಿದರು. ಚಂದ್ರಗುಪ್ತನ ನೈಸರ್ಗಿಕ ನಾಯಕತ್ವದ ಗುಣಗಳು ಮತ್ತು ನ್ಯಾಯ ನೀಡುವ

ಪದ್ಧತಿಯನ್ನು ಕಂಡು ಚಾಣಕ್ಯರು ಆತನಲ್ಲಿರುವ ಸಾಮರ್ಥ್ಯವನ್ನು ಗುರುತಿಸಿದರು. ಈ ಹುಡುಗನೇ ನಂದ ಸಾಮ್ರಾಜ್ಯವನ್ನು ನಾಶಮಾಡಿ ಒಂದು ಬೃಹತ್ ಮತ್ತು ಯೋಗ್ಯ ಸಾಮ್ರಾಜ್ಯವನ್ನು ಸ್ಥಾಪಿಸಬಲ್ಲ ಎಂಬ ವಿಶ್ವಾಸ ಅವರಿಗೆ ಆಯಿತು.

ಅದರ ನಂತರ, ಚಾಣಕ್ಯರು ಚಂದ್ರಗುಪ್ತನನ್ನು ತಮ್ಮೊಂದಿಗೆ ಕರೆದೊಯ್ದರು. ಅವನಿಗೆ ಶಿಕ್ಷಣ ನೀಡಿದರು ಮತ್ತು ಯುದ್ಧಕಲೆ ಹಾಗೂ ಆಡಳಿತದಲ್ಲಿ ಪ್ರವೀಣನನ್ನಾಗಿ ಮಾಡಿದರು. ಚಂದ್ರಗುಪ್ತನು ಮುಂದೆ ಹೋಗಿ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ವಿಶಾಖದತ್ತನು ಬರೆದಿರುವ 'ಮುದ್ರಾರಾಕ್ಷಸ' ಎಂಬ ನಾಟಕದಲ್ಲಿ ನಂದ ವಂಶದ ಕೊನೆಯ ರಾಜ ಧನಾನಂದನ ಬದಲಿಗೆ ಚಂದ್ರಗುಪ್ತನು ಅಧಿಕಾರವನ್ನು ಹೇಗೆ ಸ್ಥಾಪಿಸಿದನೆಂದು ವಿವರಿಸಲಾಗಿದೆ. ಈ ಕಥಾನಕದಲ್ಲಿ ಚಾಣಕ್ಯರ ಕೊಡುಗೆಯ ಬಗ್ಗೆ ವಿಶೇಷವಾಗಿ ಉಲ್ಲೇಖಿಸಲಾಗಿದೆ.



**ಮಾಡಿ ನೋಡಿ.**

ಗ್ರಂಥಾಲಯದ ಪುಸ್ತಕಗಳ ಆಧಾರದ ಮೇಲೆ ಅಥವಾ ಅಂತರಜಾಲದಲ್ಲಿನ ಶೈಕ್ಷಣಿಕ ವೆಬ್‌ಸೈಟ್‌ಗಳ ಮೂಲಕ ಚಂದ್ರಗುಪ್ತ ಮೌರ್ಯನ ಜೀವನದ ಬಗ್ಗೆ ಕಥೆಯನ್ನು ಹುಡುಕಿ. ತರಗತಿಯಲ್ಲಿ ಗುಂಪು ಮಾಡಿ ಆ ಕಥೆಯನ್ನು ನಾಟಕ ರೂಪದಲ್ಲಿ ಪ್ರಸ್ತುತಪಡಿಸಿ.

ಗ್ರೀಕ್ ಸಾಮ್ರಾಟ ಅಲೆಕ್ಸಾಂಡರ್ ಅಥವಾ ಸಿಕಂದರ್ ಕ್ರಿಸ್ತ ಪೂರ್ವ 326ರಲ್ಲಿ ಭಾರತದ ವಾಯವ್ಯ ಪ್ರದೇಶದ ಮೇಲೆ ದಾಳಿ ಮಾಡಿದನು. ಅವನು ಭಾರತದ ಪಂಜಾಬ್ ಪ್ರಾಂತ್ಯದವರೆಗೆ ಬಂದನು. ತಮ್ಮ ತಾಯ್ನಾಡಿಗೆ ಮರಳಲು ನಿರ್ಧರಿಸಿದರೂ, ಹಿಂತಿರುಗುವ ಹಾದಿಯಲ್ಲೇ ಅಲೆಕ್ಸಾಂಡರ್ ಸಿಕಂದರ ಮರಣ ಹೊಂದಿದನು. ಭಾರತದಲ್ಲಿ ತಾವು ಗೆದ್ದ ಪ್ರದೇಶಗಳನ್ನು ನಿರ್ವಹಿಸಲು ಅವನು ಅಧಿಕಾರಿಗಳನ್ನು ನೇಮಿಸಿದ್ದನು, ಅವರನ್ನು 'ಸತ್ರಪರು' ಎಂದು ಕರೆಯಲಾಗುತ್ತಿತ್ತು. ಅವನ ಮರಣದ ನಂತರ ಈ ಸತ್ರಪರ ನಡುವೆ ಅಧಿಕಾರಕ್ಕಾಗಿ ಹೋರಾಟಗಳು ಪ್ರಾರಂಭವಾದವು. ಈ ಸಮಯದಲ್ಲಿ ಗ್ರೀಕ್ ಸೇನಾಪತಿ ಸೆಲ್ಯುಕಸ್ ನಿಕೇಟರ್ ಭಾರತದ ಮೇಲೆ ಮತ್ತೆ ಆಕ್ರಮಣ ಮಾಡಲು ಪ್ರಯತ್ನಿಸಿದನು. ಆದರೆ ಚಂದ್ರಗುಪ್ತ ಮೌರ್ಯನು ಅವನನ್ನು ಸೋಲಿಸಿದನು. ಇದರಿಂದ ಮೌರ್ಯ ಸಾಮ್ರಾಜ್ಯದ ಬಲ ಹೆಚ್ಚಾಯಿತು ಮತ್ತು ಅಫ್ಘಾನಿಸ್ತಾನದ ಕಾಬೂಲ್, ಕಂದಹಾರ್ ಹಾಗೂ ಹೇರಾತ್ ಪ್ರಾಂತ್ಯಗಳು ಚಂದ್ರಗುಪ್ತನ ಸಾಮ್ರಾಜ್ಯಕ್ಕೆ ಸೇರಿದವು. ಸೆಲ್ಯುಕಸ್ ನಿಕೇಟರ್ನ ರಾಯಭಾರಿ ಮೆಗಾಸ್ತನೀಸ್ ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿದ್ದನು. ಅವನು ಬರೆದ 'ಇಂಡಿಕಾ' ಪುಸ್ತಕವು ಮೌರ್ಯ ಕಾಲದ ಭಾರತದ ಇತಿಹಾಸವನ್ನು ತಿಳಿಯಲು ಪ್ರಮುಖ ಆಧಾರವಾಗಿದೆ.



**ನಿಮಗೆ ಗೊತ್ತೇ?**

ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಈಗಿನ ಗುಜರಾತ್ ರಾಜ್ಯದ ಜುನಾಗಢದಲ್ಲಿ 'ಸುದರ್ಶನ' ಎಂಬ ಹೆಸರಿನ ಕೆರೆಯನ್ನು ನಿರ್ಮಿಸಲಾಯಿತು. ಕೃಷಿ, ನೀರಾವರಿ ಮತ್ತು ಕುಡಿಯುವ ನೀರಿನ ಪೂರೈಕೆಗಾಗಿ ಈ ಕೆರೆಯನ್ನು ಬಳಸಲಾಗುತ್ತಿತ್ತು. ಜಲವ್ಯವಸ್ಥೆಯನ್ನು ನೋಡಿಕೊಳ್ಳಲು ಆಡಳಿತದಲ್ಲಿ ವಿಶೇಷ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಚಾಣಕ್ಯನು ಬರೆದ 'ಅರ್ಥಶಾಸ್ತ್ರ' ಗ್ರಂಥದಲ್ಲಿ, ಜಲಾಶಯಕ್ಕೆ ಹಾನಿ ಮಾಡಿದ ವ್ಯಕ್ತಿಗೆ ಯಾವ ಶಿಕ್ಷೆಯನ್ನು ನೀಡಬೇಕು ಎಂಬುದನ್ನು ವಿವರವಾಗಿ ತಿಳಿಸಲಾಗಿದೆ. ವ್ಯವಸ್ಥಿತ ಯೋಜನೆ ಮತ್ತು ಕಾಲುವೆಗಳ ನಿರ್ವಹಣೆಯಿಂದಾಗಿ ಮೌರ್ಯರ ಕಾಲದಲ್ಲಿ ಅತ್ಯಂತ ಪರಿಣಾಮಕಾರಿ ಜಲ ನಿರ್ವಹಣೆ ವ್ಯವಸ್ಥೆ ನಿರ್ಮಾಣವಾಯಿತು. ಮುಂದೆ ಅನೇಕ ರಾಜರು ಈ ಕೆರೆಯ ನಿರ್ವಹಣೆ ಮತ್ತು ದುರಸ್ತಿಗೆ ಗಮನ ನೀಡಿದರು. ಸುದರ್ಶನ ಕೆರೆಯ ದುರಸ್ತಿಯನ್ನು ಸಾಮ್ರಾಟ್ ಅಶೋಕ, ಶಕ ರಾಜ ರುದ್ರದಾಮನ್ ಮತ್ತು ನಂತರದ ಕಾಲದಲ್ಲಿ ಇತರ ರಾಜರು ಕೂಡ ಮಾಡಿಸಿದರು. ಇದರ ಉಲ್ಲೇಖವು ಜುನಾಗಢದ ಶಿಲಾಶಾಸನದಲ್ಲಿ ಕಂಡುಬರುತ್ತದೆ.

ಸುದರ್ಶನ ಕೆರೆಯು ಪ್ರಾಚೀನ ಭಾರತೀಯ ಜಲ ನಿರ್ವಹಣೆ ಮತ್ತು ಎಂಜಿನಿಯರಿಂಗ್ ಕೌಶಲ್ಯದ ಸಂಕೇತವೆಂದು ಪರಿಗಣಿಸಲಾಗಿದೆ.

***ನಿಮ್ಮ ಅಭಿಪ್ರಾಯವೇನು?***

ಪ್ರಾಚೀನ ಕಾಲದ ಜಲ ನಿರ್ವಹಣೆಯ ಮಾಹಿತಿಯು ಆಧುನಿಕ ಕಾಲದಲ್ಲೂ ಉಪಯುಕ್ತವಾಗಬಹುದೇ?

ಚಂದ್ರಗುಪ್ತನು ತನ್ನ ಆಳ್ವಿಕೆಯ ಕೊನೆಯಲ್ಲಿ ರಾಜಪದವಿಯನ್ನು ತ್ಯಜಿಸಿ ಜೈನ ಧರ್ಮವನ್ನು ಸ್ವೀಕರಿಸಿದನು. ಅವನು ಕರ್ನಾಟಕದ ಶ್ರವಣಬೆಳಗೊಳದಲ್ಲಿ ನೆಲೆಸಿದನು. ಚಂದ್ರಗುಪ್ತನ ನಂತರ ಅವನ ಮಗ ಬಿಂದುಸಾರ ಅಧಿಕಾರಕ್ಕೆ ಬಂದನು. ಬಿಂದುಸಾರನು ಸಾಮ್ರಾಜ್ಯದ ವಿಸ್ತರಣೆಯನ್ನು ಮುಂದುವರಿಸಿದನು. ಅವನು ಇಂಡೋ-ಗ್ರೀಕ್ ರಾಜರೊಂದಿಗೆ ಮೈತ್ರಿ ಸಂಬಂಧವನ್ನು ಸ್ಥಾಪಿಸಿದನು. ಅವನ ಆಳ್ವಿಕೆಯಲ್ಲಿ ಮೌರ್ಯ ಸಾಮ್ರಾಜ್ಯದ ರಾಜಕೀಯ ಮತ್ತು ಆರ್ಥಿಕ ಅಡಿಪಾಯ ಮತ್ತಷ್ಟು ಗಟ್ಟಿಯಾಯಿತು. ಬಿಂದುಸಾರನ ಮರಣದ ನಂತರ ಅವನ ಮಗ ಅಶೋಕ ಅಧಿಕಾರಕ್ಕೆ ಬಂದನು.


ಮೌರ್ಯಕಾಲೀನ ಭಾರತ
ಉ.
▲ ಅಶೋಕನ ಶಿಲಾಶಾಸನಗಳು
ಅಶೋಕನ ಸ್ತಂಭಶಾಸನಗಳು
ಅಶೋಕನ ಸಾಮ್ರಾಜ್ಯ
ಭಾರತದ ಈಗಿನ ಅಂತರರಾಷ್ಟ್ರೀಯ ಸೀಮೆ
■ ಆಧುನಿಕ ನಗರ
ಹಿಂದುಕುಶ ಪರ್ವತ
ಶಾಹಬಾಜ ಗಢಿ
ಮನಸೇರಾ
ಕಾಬೂಲ ನದಿ
ತಕ್ಷಶಿಲಾ
ಸಿಂಧೂ ನದಿ
ತೋಪ್ರಾ
ಕಾಲಸಿ
ಮೀರತ
ದಿಲ್ಲಿ
(ಇಂದ್ರಪ್ರಸ್ಥ)
ಯಮುನಾ ನದಿ
ಬೈರಾಟ
ಮಥುರಾ
ಗಂಗಾ ನದಿ
ಶ್ರಾವಸ್ತಿ
ನಿಗ್ಲೀವಾ
ಕಪಿಲವಸ್ತು
ರುಮ್ಮಿನದೇಯಿ
ನೇಪಾಳ
ಲಲಿತ ಪಾಟಣ
ರಾಮಪೂರ್ವಾ
ಲೌರಿಯಾ ನಂದನಗಡ
ಲೌರಿಯಾ ಅರರಾಜ
ಪಾಟಲೀಪುತ್ರ
ಚಂಬಲ ನದಿ
ಪ್ರಯಾಗ
ಕಾಶಿ
ಸಹಸ್ರಾಮ
ಮಗಧ
ಚಂಪಾ
ಕಚ್ಛ
ಉಜ್ಜೈನ
ರೂಪನಾಥ
ಸಾಂಚಿ
ಸೌರಾಷ್ಟ್ರ
ನರ್ಮದಾ ನದಿ
ಗಿರನಾರ
ತಾಪೀ ನದಿ
ತಾಮ್ರಲಿಪ್ತಿ
ಮಹಾನದಿ
ತೋಸಾಲಿ
ಜೌಗಡ
ಸೋಪಾರ
ಗೋದಾವರಿ ನದಿ
ಕಲಿಂಗ
ಸನ್ನತಿ
ಆಂಧ್ರ
ಕೃಷ್ಣಾ ನದಿ
ಮಸ್ಕಿ
ಕೊಪಗಲ
ಸುವರ್ಣಗಿರಿ
ಸಿದ್ಧಾಪುರ
ಬ್ರಹ್ಮಗಿರಿ
ಅರಬೀ ಸಮುದ್ರ
ಬಂಗಾಲದ ಉಪಸಾಗರ
ನೆಲ್ಲೋರ
ಕಾವೇರಿ ನದಿ
ಚೋಳ
ಲಕ್ಷದ್ವೀಪ
(ಭಾರತ)
ಅಂದಮಾನ ಮತ್ತು ನಿಕೋಬಾರ ದ್ವೀಪಗಳು
(ಭಾರತ)
ಪಾಂಡ್ಯ
0
500
ಕಿಲೋಮಿಟರ
ಶ್ರೀಲಂಕಾ
ಹಿಂ ದೂ ಮ ಹಾ ಸಾ ಗ ರ

## 7.2 ಸಾಮ್ರಾಟ ಅಶೋಕ



ಸಾಮ್ರಾಟ ಅಶೋಕ

ಬಿಂದುಸಾರನು ತನ್ನ ಆಳ್ವಿಕೆಯ ಅವಧಿಯಲ್ಲಿ ಅಶೋಕನನ್ನು ಉಜ್ಜಯಿನಿ ಮತ್ತು ತಕ್ಷಶಿಲೆಯ ರಾಜ್ಯಪಾಲನನ್ನಾಗಿ ನೇಮಕ ಮಾಡಿದ್ದನು. ಅಲ್ಲಿ ಅವನು ರಾಜ್ಯಭಾರದ ಅನುಭವವನ್ನು ಪಡೆದನು. ಪರಾಕ್ರಮ, ಸಾಹಸ ಮತ್ತು ಬುದ್ಧಿಚಾತುರ್ಯದಂತಹ ಗುಣಗಳಿಂದಾಗಿ ಅವನು ಅಧಿಕಾರಕ್ಕೆ ಬಂದನು. ವಾಯವ್ಯದ ಅಫ್ಘಾನಿಸ್ತಾನ ಮತ್ತು ಉತ್ತರದ ನೇಪಾಳದಿಂದ ಹಿಡಿದು ದಕ್ಷಿಣದ ಕರ್ನಾಟಕ ಮತ್ತು ಆಂಧ್ರಪ್ರದೇಶದವರೆಗೆ, ಹಾಗೆಯೇ ಪೂರ್ವದ ಬಂಗಾಳದಿಂದ ಪಶ್ಚಿಮದ ಸೌರಾಷ್ಟ್ರದವರೆಗೆ ಸಾಮ್ರಾಟ ಅಶೋಕನ ಸಾಮ್ರಾಜ್ಯ ಹರಡಿತ್ತು.

### ಸಮ್ರಾಟ್ ಅಶೋಕನ ಕಲಿಂಗ ಯುದ್ಧ

ಸಮ್ರಾಟ್ ಅಶೋಕನ ಜೀವನದ ಅತ್ಯಂತ ಮಹತ್ವದ ಘಟನೆಯೆಂದರೆ ಕಲಿಂಗ ಯುದ್ಧ. ಪ್ರಾಚೀನ ಕಲಿಂಗ ರಾಜ್ಯವು ಇಂದಿನ ಒಡಿಶಾ ರಾಜ್ಯದಲ್ಲಿದೆ. ಈ ರಾಜ್ಯವು ಮೌರ್ಯ ಸಾಮ್ರಾಜ್ಯದ ಭಾಗವಾಗಿರಲಿಲ್ಲ, ಆದ್ದರಿಂದ ಅಶೋಕನು ಕಲಿಂಗದ ಮೇಲೆ ಯುದ್ಧ ಸಾರಿದನು. ಅವನು ಯುದ್ಧದಲ್ಲಿ ಜಯಶಾಲಿಯಾದನು, ಆದರೆ ಲಕ್ಷಾಂತರ ಸೈನಿಕರು ಕೊಲ್ಲಲ್ಪಟ್ಟರು ಮತ್ತು ಅನೇಕರು ಸೆರೆಯಾದರು. ಈ ಅಪಾರ ಜೀವಹಾನಿಯು ಅಶೋಕನ ಮನಸ್ಸಿನಲ್ಲಿ ತೀವ್ರ ಪಶ್ಚಾತ್ತಾಪವನ್ನುಂಟುಮಾಡಿತು ಮತ್ತು ಈ ಯುದ್ಧವು ಅವನ ಇಡೀ ಜೀವನವನ್ನೇ ಬದಲಿಸಿತು.



**ವಿಚಾರ ಮಾಡಿ.**

ನೀವು ಒಬ್ಬ ಪತ್ರಕರ್ತರು ಎಂದು ಭಾವಿಸಿ. ಕಳಿಂಗ ಯುದ್ಧದ ವರದಿಯನ್ನು ನೀವು ದಿನಪತ್ರಿಕೆಗಾಗಿ ಸಿದ್ಧಪಡಿಸಬೇಕಿದೆ. ನಿಮ್ಮ ವರದಿಯನ್ನು ಬರೆದು ಅದಕ್ಕೊಂದು ಸೂಕ್ತ ಮತ್ತು ಆಕರ್ಷಕ ಶೀರ್ಷಿಕೆಯನ್ನು ನೀಡಿ.

### ಸಮ್ರಾಟ್ ಅಶೋಕನ ಧರ್ಮ ಪ್ರಸಾರ ಕಾರ್ಯ

ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದನು. ದೈನಂದಿನ ಜೀವನದಲ್ಲಿ ಅಹಿಂಸೆ, ಪೋಷಕರ ಸೇವೆ, ಗುರುಹಿರಿಯರ ಬಗ್ಗೆ ಆದರ ಇತ್ಯಾದಿ ತತ್ವಗಳಿಗೆ ಅವನು ಒತ್ತು ನೀಡಿದನು. ಇದರ ಜೊತೆಗೆ ದಾನ ಮಾಡುವುದು, ಇತರರಿಗೆ ತೊಂದರೆ ಕೊಡದಿರುವುದು, ಕೋಪ, ಕಠೋರತೆ, ಗರ್ವ ಮತ್ತು ಈರ್ಷೆಯಂತಹ ದುರ್ಗುಣಗಳಿಂದ ದೂರವಿರುವ ಸದಾಚಾರದ ತತ್ವಗಳನ್ನು ಅವನು ಪ್ರತಿಪಾದಿಸಿದನು.

ಸಮ್ರಾಟ್ ಅಶೋಕನು ತನ್ನ ಸಂದೇಶಗಳನ್ನು ಜನರಿಗೆ ತಲುಪಿಸಲು ವಿವಿಧ ಸ್ಥಳಗಳಲ್ಲಿ ಶಿಲಾಶಾಸನಗಳು ಮತ್ತು ಸ್ತಂಭ ಶಾಸನಗಳನ್ನು ಕೆತ್ತಿಸಿದನು. ಈ ಲೇಖನಗಳು ಬ್ರಾಹ್ಮಿ ಲಿಪಿಯಲ್ಲಿವೆ. ಈ ಶಾಸನಗಳಲ್ಲಿ ಅವನು ತನ್ನನ್ನು 'ದೇವಾನಾಂ ಪ್ರಿಯ ಪ್ರಿಯದರ್ಶಿ' (ದೇವರಿಗೆ ಪ್ರಿಯನಾದವನು ಮತ್ತು ಸುಂದರವಾಗಿ ಕಾಣುವವನು) ಎಂದು ಉಲ್ಲೇಖಿಸಿದ್ದಾನೆ. ಅಶೋಕನ ಕಾಲದ ಇತಿಹಾಸವನ್ನು ತಿಳಿಯಲು ಇಂತಹ ಸುಮಾರು 35 ಶಾಸನಗಳು ಪ್ರಮುಖ ಆಧಾರಗಳಾಗಿವೆ. ಈ ಶಾಸನಗಳ ಮೂಲಕ ಅಹಿಂಸೆ, ಭೂತದಯೆ, ಪರೋಪಕಾರ, ಧರ್ಮ ಸಹಿಷ್ಣುತೆ ಮತ್ತು ಉತ್ತಮ ಚಾರಿತ್ರ್ಯದಂತಹ ಸದ್ಗುಣಗಳನ್ನು ಪ್ರಜೆಗಳು ಅಳವಡಿಸಿಕೊಳ್ಳಬೇಕೆಂದು ಅವನು ಕರೆ ನೀಡಿದನು. ಇದಕ್ಕಾಗಿ ಅವನು ಇಡೀ ಸಾಮ್ರಾಜ್ಯದಾದ್ಯಂತ **ಧರ್ಮ ಅಧಿಕಾರಿಗಳನ್ನು** ನೇಮಿಸಿದನು, ಅವರನ್ನು **'ಧಮ್ಮ ಮಹಾಮತ್ತರು'** ಎಂದು ಕರೆಯಲಾಗುತ್ತಿತ್ತು. ಈ ಅಧಿಕಾರಿ ಜನರಲ್ಲಿ ನೈತಿಕತೆಯ ಸಂದೇಶವನ್ನು ಹರಡುತ್ತಿದ್ದರು. ಈ ತತ್ವಗಳ ಪ್ರಸಾರಕ್ಕಾಗಿ ಅಶೋಕನು ವಿದೇಶಗಳಿಗೂ ಧರ್ಮಪ್ರಚಾರಕರನ್ನು ಕಳುಹಿಸಿದನು. ತನ್ನ ಪುತ್ರ ಮಹೇಂದ್ರ ಮತ್ತು ಪುತ್ರಿ ಸಂಘಮಿತ್ರೆಯರನ್ನು ಶ್ರೀಲಂಕಾಕ್ಕೆ ಧರ್ಮಪ್ರಸಾರಕ್ಕಾಗಿ ಕಳುಹಿಸಿದ ಉಲ್ಲೇಖವಿದೆ. ಇದಲ್ಲದೆ ಪಶ್ಚಿಮಕ್ಕೆ ಸಿರಿಯಾ, ಈಜಿಪ್ತ, ಗ್ರೀಸ್ ಹಾಗೂ ಪೂರ್ವಕ್ಕೆ ಮ್ಯಾನ್ಮಾರ್ ಮುಂತಾದ ಅನೇಕ ದೇಶಗಳಿಗೆ ಅಶೋಕನು ಧರ್ಮಪ್ರಚಾರಕರನ್ನು ಕಳುಹಿಸಿದ್ದನು. ಅಶೋಕನು ಪಾಟಲಿಪುತ್ರದಲ್ಲಿ ಬೌದ್ಧ ಧರ್ಮ ಪರಿಷತ್ತನ್ನು ಆಯೋಜಿಸಿದ್ದನು.

### ಸಮ್ರಾಟ್ ಅಶೋಕನ ಲೋಕಕಲ್ಯಾಣ ಕಾರ್ಯಗಳು:

ಸಮ್ರಾಟ್ ಅಶೋಕನು ಮೌರ್ಯ ಸಾಮ್ರಾಜ್ಯದ ಅತ್ಯಂತ ಪ್ರಸಿದ್ಧ ಮತ್ತು ಜನಾಬಿಮುಖಿ ಆಡಳಿತಗಾರನಾಗಿದ್ದನು. ಅಶೋಕನು ತನ್ನ ಪ್ರಜೆಗಳಿಗಾಗಿ ಅನೇಕ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿದನು. ಅವನು ಆಸ್ಪತ್ರೆಗಳು, ಔಷಧಾಲಯಗಳು ಮತ್ತು ಧರ್ಮಶಾಲೆಗಳನ್ನು ಕಟ್ಟಿಸಿದನು. ನಗರಗಳಲ್ಲಿ ಮತ್ತು ಪ್ರಯಾಣಿಕರ ಹಾದಿಗಳಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಮರಗಳನ್ನು ನೆಡಿಸಿದನು. ಬಾವಿಗಳನ್ನು ತೋಡಿಸಿದನು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದನು. ಅವನು ಪ್ರಾಣಿಗಳಿಗೂ ಚಿಕಿತ್ಸಾ ಲಯಗಳನ್ನು ನಿರ್ಮಿಸಿದನು. ಅಶೋಕನ ಶಿಲಾಶಾಸನಗಳಲ್ಲಿ ಪ್ರಜೆಗಳ ಬಗ್ಗೆ ಅವನಿಗಿದ್ದ ಜವಾಬ್ದಾರಿ, ಪ್ರೇಮ ಮತ್ತು ಸೇವಾಭಾವವು ಸ್ಪಷ್ಟವಾಗಿ ಕಂಡುಬರುತ್ತದೆ.



**ವಿಚಾರ ಮಾಡಿ.**

ಲೋಕಕಲ್ಯಾಣಕಾರಿ ಆಡಳಿತಗಾರನಲ್ಲಿ ಯಾವ ಗುಣಗಳಿರಬೇಕು ಮತ್ತು ಅವರು ಯಾವ ಕೆಲಸಗಳಿಗೆ ಆದ್ಯತೆ ನೀಡಬೇಕು ಎಂಬ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

### 7.3 ಮೌರ್ಯ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ

ಮೌರ್ಯರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ರಾಜನು ಸರ್ವೋಚ್ಚ ಅಧಿಕಾರವನ್ನು ಹೊಂದಿದ್ದನು. ರಾಜನಿಗೆ ಸಹಾಯ ಮಾಡಲು ಒಂದು ದೊಡ್ಡ ಮಂತ್ರಿ ಪರಿಷತ್ತು ಇತ್ತು. ಅದರಲ್ಲಿ ಅವರನ್ನು 'ಅಧ್ಯಕ್ಷ' ಎಂದು ಕರೆಯಲಾಗುತ್ತಿತ್ತು. ಇವರಲ್ಲಿ ಕೆಲವು ಪ್ರಮುಖ ಉದಾಹರಣೆಗಳೆಂದರೆ, 'ಪಣ್ಯಾಧ್ಯಕ್ಷ' (ವ್ಯಾಪಾರ ಇಲಾಖೆಯ ಮುಖ್ಯಸ್ಥ) ಮತ್ತು 'ಸೀತಾಧ್ಯಕ್ಷ' (ಕೃಷಿ ಇಲಾಖೆಯ ಮುಖ್ಯಸ್ಥ).

ಮೌರ್ಯರ ಕಾಲದಲ್ಲಿ 'ಗುಪ್ತಚರ ಇಲಾಖೆ' ಅತ್ಯಂತ ಸಮರ್ಥವಾಗಿತ್ತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಈ ಗೂಢಚಾರಿಕೆ ವ್ಯವಸ್ಥೆಯ ಸವಿಸ್ತಾರ ವರ್ಣನೆ ಇದೆ. ಅರ್ಥವ್ಯವಸ್ಥೆ ಮತ್ತು ತೆರಿಗೆ ವ್ಯವಸ್ಥೆಯ ಸ್ವರೂಪವನ್ನು ನಿಶ್ಚಯಮಾಡಲಾಗಿತ್ತು. ಜಲಕಲ್ಯಾಣ, ಸಂರಕ್ಷಣೆ ಮತ್ತು ಧರ್ಮಕಾರ್ಯ ಇವುಗಳಿಗಾಗಿ ರಾಜಕೋಶದಿಂದ ಖರ್ಚು ಮಾಡಲಾಗುತ್ತಿತ್ತು.

ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ನಾಲ್ಕು ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು:

| ವಿಭಾಗ | ರಾಜಧಾನಿ |
|---|---|
| ಪೂರ್ವ | ತೋಷಾಲಿ |
| ಪಶ್ಚಿಮ | ಉಜ್ಜಯಿನಿ |
| ಉತ್ತರ | ತಕ್ಷಶಿಲೆ |
| ದಕ್ಷಿಣ | ಸುವರ್ಣಗಿರಿ |

**ಆಡಳಿತವು ಮೂರು ಪ್ರಮುಖ ಹಂತಗಳಲ್ಲಿ ವಿಂಗಡಿಸಲ್ಪಟ್ಟಿತ್ತು –**

**ಕೇಂದ್ರ ಆಡಳಿತ –** ಸಾಮ್ರಾಜ್ಯದ ಎಲ್ಲಾ ನಿರ್ಧಾರಗಳನ್ನು ರಾಜಧಾನಿ ಪಾಟಲಿಪುತ್ರದಿಂದ ತೆಗೆದುಕೊಳ್ಳಲಾಗುತ್ತಿತ್ತು. ರಾಜನು ಮಂತ್ರಿಪರಿಷತ್ತು ಮತ್ತು ಇಲಾಖಾ ಅಧಿಕಾರಿಗಳ ಸಹಾಯದಿಂದ ಇಡೀ ಸಾಮ್ರಾಜ್ಯದ ಆಡಳಿತವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದನು.

**ಪ್ರಾಂತೀಯ ಆಡಳಿತ –** ಸಾಮ್ರಾಜ್ಯವನ್ನು ವಿವಿಧ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಪ್ರತಿ ಪ್ರಾಂತ್ಯದ ಮೇಲೆ ಕುಮಾರ (ರಾಜಪುತ್ರ) ಮತ್ತು ಮಹಾಮಾತ್ಯ (ಆಡಳಿತಾಧಿಕಾರಿ)ಗಳ ಸಹಾಯದಿಂದ ನಿಯಂತ್ರಣವನ್ನು ಇಡಲಾಗುತ್ತಿತ್ತು.

**ಸ್ಥಳೀಯ ಆಡಳಿತ –** ಹಳ್ಳಿ ಮತ್ತು ನಗರ ಮಟ್ಟದಲ್ಲಿ ಗ್ರಾಮಣಿ, ನಗರ ಮತ್ತು ಸ್ಥಳೀಯ ಸಮಿತಿಗಳ ಮೂಲಕ ದೈನಂದಿನ ವ್ಯವಹಾರಗಳು, ತೆರಿಗೆ, ನ್ಯಾಯ ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿತ್ತು.

**ನಿಮಗೆ ಗೊತ್ತಿದೆಯೇ?**






ನೀವು ಭಾರತದ ರಾಜಮುದ್ರೆ ಮತ್ತು ರಾಷ್ಟ್ರಧ್ವಜದ ಮೇಲಿರುವ ಅಶೋಕ ಚಕ್ರವನ್ನು ನೋಡಿದ್ದೀರಾ? ಈ ಪ್ರತೀಕಗಳ ಬಗ್ಗೆ ನಿಮಗೆ ಏನು ಮಾಹಿತಿ ಇದೆ? ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಂಡು ಚರ್ಚಿಸಿ.

### 7.4 ಕಲೆ, ವಾಸ್ತುಶಿಲ್ಪ ಮತ್ತು ಜನಜೀವನ

ಮೌರ್ಯ ಕಾಲದ ಶಿಲ್ಪಕಲೆಯು ಅತ್ಯಂತ ವಿಕಸಿತವಾಗಿತ್ತು. ಸಾಮ್ರಾಟ್ ಅಶೋಕನ ಆಜ್ಞೆಯಂತೆ ನಿರ್ಮಿಸಲಾದ ಸ್ತಂಭಗಳು ಮತ್ತು ಸ್ತೂಪಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಮೌರ್ಯ ಕಾಲದ ಶಿಲ್ಪಗಳಲ್ಲಿ ಸಿಂಹ, ಆನೆ, ಎತ್ತುಗಳಂತಹ ಪ್ರಾಣಿಗಳಿದ್ದವು. ಪ್ರಾಣಿಗಳು ಮತ್ತು ಮನುಷ್ಯರ ಸೂಕ್ಷ್ಮ ಮತ್ತು ನೈಸರ್ಗಿಕ ಚಿತ್ರಣವನ್ನು ಮಾಡಲಾಗಿತ್ತು.



ಅಶೋಕ ಸ್ತಂಭ

ಅನೇಕ ವಿದೇಶಿ ಪ್ರವಾಸಿಗರು ಬರೆದ ವೃತ್ತಾಂತಗಳಲ್ಲಿ ರಾಜಧಾನಿ ಪಾಟಲಿಪುತ್ರದ ಭವ್ಯ ಅರಮನೆಗಳ ವರ್ಣನೆ ಕಂಡುಬರುತ್ತದೆ. ಧಾರ್ಮಿಕ ವಾಸ್ತುಶಿಲ್ಪದಲ್ಲಿ ಸ್ತೂಪ ಮತ್ತು ವಿಹಾರಗಳಿಗೆ ಹೆಚ್ಚಿನ ಮಹತ್ವವಿತ್ತು. ಈ ಕಾಲದಲ್ಲಿ ಕೆತ್ತಲಾದ ಬಿಹಾರದ ಬರಾಬರ್ ಗುಹೆಗಳು ಅತ್ಯಂತ ಪ್ರಾಚೀನ ಗುಹೆಗಳಾಗಿವೆ. ಸಾಂಚಿಯ ಸ್ತೂಪವೂ ಈ ಕಾಲದ ಪ್ರಸಿದ್ಧ ವಾಸ್ತುಶಿಲ್ಪವಾಗಿದೆ.



ಬರಾಬರ್ ಗುಹೆಗಳು

ಮೌರ್ಯರ ಕಾಲದಲ್ಲಿ ಕಲ್ಲುಗಳನ್ನು ವಿಶೇಷ ತಂತ್ರಜ್ಞಾನದಿಂದ ಎಷ್ಟು ನಯವಾಗಿ ಮತ್ತು ಹೊಳೆಯುವಂತೆ ಉಜ್ಜಲಾಗುತ್ತಿತ್ತೆಂದರೆ, ಅವುಗಳಲ್ಲಿ ಕನ್ನಡಿಯಂತೆ ಪ್ರತಿಬಿಂಬವು ಕಾಣಿಸುತ್ತಿತ್ತು. ರಥಗಳ ಮತ್ತು ಕುದುರೆಗಳ ಓಟದ ಸ್ಪರ್ಧೆಗಳು, ಮಲ್ಲಯುದ್ಧ ಹಾಗೂ ನೃತ್ಯ-ಸಂಗೀತ ಸ್ಪರ್ಧೆಗಳು ಮನೋರಂಜನೆಯ ಜನಪ್ರಿಯ ಪ್ರಕಾರಗಳಾಗಿದ್ದವು. ಪಗಡೆ ಆಟ ಮತ್ತು ಚದುರಂಗದಂತಹ ಆಟಗಳನ್ನು ಜನರು ಆಸಕ್ತಿಯಿಂದ ಆಡುತ್ತಿದ್ದರು.

**ಮಾಡಿ ನೋಡಿ.**

ಮೌರ್ಯ ಕಾಲದ ಸ್ತಂಭಗಳು, ಶಿಲಾಶಾಸನಗಳು ಮತ್ತು ಶಿಲ್ಪಕಲೆಗಳ ಚಿತ್ರಗಳನ್ನು ಸಂಗ್ರಹಿಸಿ ನಿಮ್ಮ ಪುಸ್ತಕದಲ್ಲಿ ಅಂಟಿಸಿ.

ಮೌರ್ಯ ಕಾಲದಲ್ಲಿ ಜನರ ಜೀವನವು ಸಮೃದ್ಧ ಮತ್ತು ಸುಖಮಯವಾಗಿತ್ತು. ಕೃಷಿ ಉತ್ಪಾದನೆಗೆ ಹೆಚ್ಚಿನ ಮಹತ್ವವಿತ್ತು. ಹಾಲು, ಮೊಸರು, ತುಪ್ಪ, ವಿವಿಧ ಹಣ್ಣುಗಳು, ಅಕ್ಕಿ, ಬಾರ್ಲಿ ಮುಂತಾದವುಗಳು ಆಹಾರದಲ್ಲಿ ಸೇರಿದ್ದವು.



**ನಿಮಗೆ ಗೊತ್ತಿದೆಯೇ?**

ಮೌರ್ಯರ ಕಾಲದ ಜನಜೀವನದ ಬಗ್ಗೆ ಮೆಗಾಸ್ತನೀಸರದ 'ಇಂಡಿಕಾ' ಎಂಬ ಗ್ರಂಥದಿಂದ ಹೆಚ್ಚಿನ ಮಾಹಿತಿ ಸಿಗುತ್ತದೆ. ಮೆಗಾಸ್ತನೀಸ್ ಹೀಗೆ ಹೇಳುತ್ತಾನೆ: 'ಇಲ್ಲಿನ ಜನರು ಶ್ರಮಜೀವಿಗಳು ಮತ್ತು ಮಿತವ್ಯಯಿಗಳು. ಅವರು ಅನೇಕ ಕಲೆಗಳಲ್ಲಿ ನುರಿತವರು. ರೈತರು ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆಯುತ್ತಾರೆ. ಯುದ್ಧ ನಡೆಯುತ್ತಿದ್ದರೂ, ರೈತರಿಗೆ ಯಾರೂ ತೊಂದರೆ ಕೊಡುವುದಿಲ್ಲ. ಶತ್ರುಗಳೂ ಸಹ ಬೆಳೆಗಳನ್ನು ನಾಶಪಡಿಸುವುದಿಲ್ಲ. ಜನರು ಸುಖಿ ಮತ್ತು ಪ್ರಾಮಾಣಿಕರಾಗಿದ್ದಾರೆ. ಕಳ್ಳತನ ಬಹಳ ಅಪರೂಪ. ಜನರು ನ್ಯಾಯಾಲಯಕ್ಕೆ ಹೋಗುವುದು ತೀರಾ ಕಡಿಮೆ. ಯಾರೂ ಯಾರಿಗೂ ಗುಲಾಮರಾಗಿರಲು ಸಾಧ್ಯವಿಲ್ಲ. ಭಾರತೀಯರ ಸಂಪ್ರದಾಯವು ಅಷ್ಟು ಶ್ರೇಷ್ಠವಾಗಿದೆ.'

ಆದರೆ ಸಾಮ್ರಾಟ ಅಶೋಕನ ಮರಣದ ನಂತರ ಮೌರ್ಯ ಸಾಮ್ರಾಜ್ಯದ ಶಕ್ತಿಯು ಕ್ರಮೇಣ ಕ್ಷೀಣಿಸುತ್ತಾ ಹೋಯಿತು. ಸ್ಥಳೀಯ ಆಡಳಿತಗಾರರು ಸ್ವತಂತ್ರರಾಗತೊಡಗಿದರು ಮತ್ತು ಸಾಮ್ರಾಜ್ಯವು ಚೂರುಚೂರಾಯಿತು. ಮೌರ್ಯ ಸಾಮ್ರಾಜ್ಯದ ಕೊನೆಯ ರಾಜ ಬೃಹದ್ರಥನನ್ನು ಕೊನೆಗಾಣಿಸಿ ಪುಷ್ಯಮಿತ್ರ ಶುಂಗನು ಶುಂಗ ವಂಶವನ್ನು ಸ್ಥಾಪಿಸಿದನು.



## ಸ್ವಾಧ್ಯಾಯ

**ಪ್ರ. 1 ಅ) ಸರಿಯಾದ ಪರ್ಯಾಯದ ಮುಂದೆ ☑ ಗುರುತು ಮಾಡಿ.**

1. 'ಮುದ್ರಾರಾಕ್ಷಸ' ನಾಟಕದ ಕಥಾವಸ್ತುವಿನ ವಿಷಯ:
   - ಅ) ಗೂಢಚಾರ ವ್ಯವಸ್ಥೆಯ ವರ್ಣನೆ. ☐
   - ಬ) ನಂದ ವಂಶದ ಅಂತ್ಯ ಮತ್ತು ಚಂದ್ರಗುಪ್ತನ ಕಾರ್ಯ. ☐
   - ಕ) ಮೌರ್ಯ ಕಾಲದ ಲೋಕ ಜೀವನ. ☐
2. ಆಚಾರ್ಯ ಚಾಣಕ್ಯರು ಬರೆದ ಅರ್ಥಶಾಸ್ತ್ರ ಗ್ರಂಥದಲ್ಲಿ ಈ ಕೆಳಗಿನ ವಿಷಯಗಳಿವೆ:
   - ಅ) ದುರ್ಗುಣಗಳಿಂದ ದೂರವಿದ್ದು ಸದಾಚಾರದ ತತ್ವಗಳನ್ನು ಪಾಲಿಸುವುದು. ☐
   - ಬ) ಕಳಿಂಗ ಯುದ್ಧದ ವರ್ಣನೆ. ☐
   - ಕ) ಆಡಳಿತ ವ್ಯವಸ್ಥೆ, ತೆರಿಗೆ ಪದ್ಧತಿ, ರಕ್ಷಣೆ, ಗೂಢಚಾರಿಕೆ ಮತ್ತು ರಾಜಕಾರಣ. ☐
3. ಸಾಮ್ರಾಟ್ ಅಶೋಕನ ಶಿಲಾಶಾಸನಗಳಲ್ಲಿ ಈ ಕೆಳಗಿನ ವಿಷಯಗಳ ವರ್ಣನೆ ಕಂಡುಬರುತ್ತದೆ:
   - ಅ) ಜಲಾಶಯಕ್ಕೆ ಹಾನಿ ಮಾಡಿದ ವ್ಯಕ್ತಿಗೆ ಯಾವ ಶಿಕ್ಷೆ ನೀಡಬೇಕು ಎಂಬ ಮಾರ್ಗದರ್ಶನ. ☐
   - ಬ) ಅಹಿಂಸೆ, ಭೂತದಯೆ, ಪರೋಪಕಾರ, ಧರ್ಮಸಹಿಷ್ಣುತೆ, ಉತ್ತಮ ಚಾರಿತ್ಯ ಇತ್ಯಾದಿ ಸದ್ಗುಣಗಳನ್ನು ಪ್ರಜೆಗಳು ಆಚರಿಸಬೇಕು. ☐
   - ಕ) ಇಲ್ಲಿನ ಜನರು ಶ್ರಮಜೀವಿಗಳು ಮತ್ತು ಮಿತವ್ಯಯಿಗಳು. ಅವರು ಅನೇಕ ಕಲೆಗಳಲ್ಲಿ ಕುಶಲರಾಗಿದ್ದಾರೆ. ಭಾರತೀಯರ ಪರಂಪರೆ ಶ್ರೇಷ್ಠವಾದುದು. ☐

**ಬ) ಹೆಸರುಗಳನ್ನು ಬರೆಯಿರಿ.**

1. ನಂದ ವಂಶದ ಕೊನೆಯ ರಾಜ ....................
2. 'ದೇವಾನಾಂ ಪ್ರಿಯ ಪ್ರಿಯದರ್ಶಿ' ....................
3. ಮೆಗಾಸ್ತನೀಸ್ ಬರೆದ ಗ್ರಂಥ ....................

**ಪ್ರಶ್ನೆ 2. ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**



**ಬ) ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ.**

1. ಸಮ್ರಾಟ್ ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದನು.
2. ಕಳಿಂಗ ಯುದ್ಧದಲ್ಲಿ ಸಮ್ರಾಟ್ ಅಶೋಕನಿಗೆ ವಿಜಯವಾಯಿತು.
3. ಅಶೋಕನನ್ನು ಉಜ್ಜಯಿನಿ ಮತ್ತು ತಕ್ಷಶಿಲೆಗೆ ರಾಜ್ಯಪಾಲನಾಗಿ ನೇಮಿಸಲಾಯಿತು.
4. ಮಗ ಮಹೇಂದ್ರ ಮತ್ತು ಮಗಳು ಸಂಘಮಿತ್ರರನ್ನು ಧರ್ಮ ಪ್ರಚಾರಕ್ಕಾಗಿ ಶ್ರೀಲಂಕಾಕ್ಕೆ ಕಳುಹಿಸಲಾಯಿತು.

**ಪ್ರಶ್ನೆ 3 ಅ) ಸಂಕ್ಷಿಪ್ತವಾಗಿ ಮಾಹಿತಿ ಬರೆಯಿರಿ.**

1. ಸಮ್ರಾಟ್ ಅಶೋಕನ ಧರ್ಮ ಪ್ರಚಾರದ ಕಾರ್ಯ.
2. ಮೌರ್ಯ ಕಾಲದ ಶಿಲ್ಪಕಲೆ.

**ಬ) ಈ ಕೆಳಗಿನ ಘಟನೆಗಳು ಏಕೆ ಸಂಭವಿಸಿದವು? ಕಾರಣಗಳನ್ನು ಕಂಡುಹಿಡಿಯಿರಿ.**

1. ಸಮ್ರಾಟ್ ಅಶೋಕನು ಹಿಂಸೆಯ ಮಾರ್ಗವನ್ನು ಬಿಟ್ಟು ಬೌದ್ಧ ಧರ್ಮವನ್ನು ಸ್ವೀಕರಿಸಿದನು.
3. ಚಂದ್ರಗುಪ್ತ ಮೌರ್ಯನು ಧನನಂದನನ್ನು ಸೋಲಿಸಿದನು.

ಪ್ರಶ್ನೆ 4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರಿಸಿ.

1. ಸಮ್ರಾಟ್ ಅಶೋಕನು ತನ್ನ ಶಾಸನಗಳ ಮೂಲಕ ಜನರಿಗೆ ಯಾವ ಸೂಚನೆಗಳನ್ನು ನೀಡಿದನು?
2. ಸುದರ್ಶನ ಕೆರೆಯನ್ನು ಪ್ರಾಚೀನ ಭಾರತೀಯ ಜಲ ನಿರ್ವಹಣೆ ಮತ್ತು ಎಂಜಿನಿಯರಿಂಗ್ ಕೌಶಲ್ಯದ ಸಂಕೇತವೆಂದು ಏಕೆ ಪರಿಗಣಿಸಲಾಗುತ್ತದೆ?
3. ಬೌದ್ಧ ಧರ್ಮವನ್ನು ಸ್ವೀಕರಿಸಿದ ನಂತರ ಸಮ್ರಾಟ್ ಅಶೋಕನು ತನ್ನಲ್ಲಿ ಯಾವ ಬದಲಾವಣೆಗಳನ್ನು ತಂದುಕೊಂಡನು?

**ಉಪಕ್ರಮ**

1. ''ನಾನು ಚಾಣಕ್ಯ ಮಾತನಾಡುತ್ತಿದ್ದೇನೆ...'' ಈ ಏಕಪಾತ್ರ ಅಭಿನಯದ ಮೂಲಕ ಮೌರ್ಯ ಸಾಮ್ರಾಜ್ಯದ ಮಾಹಿತಿಯನ್ನು ಶಾಲೆಯ ಪ್ರಾರ್ಥನಾ ಸಭೆಯಲ್ಲಿ ಮಂಡಿಸಿ.
2. ನಿಮ್ಮ ಸುತ್ತಮುತ್ತಲಿನ ಪ್ರದೇಶದ ಜಲ ನಿರ್ವಹಣೆ, ಮಳೆನೀರು ಕೊಯ್ಲು (ರೇನ್-ವಾಟರ್ ಹಾರ್ವೆಸ್ಟಿಂಗ್), 'ಹರ್ ಘರ್ ಜಲ್' (ಪ್ರತಿ ಮನೆಗೆ ನೀರು) ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದರ ಮೇಲೆ ಚರ್ಚಾಗೋಷ್ಠಿಯನ್ನು ಆಯೋಜಿಸಿ.

***

# 8 ಪ್ರಾಚೀನ ಭಾರತದ ಮತ್ತು ಮಹಾರಾಷ್ಟ್ರದ ರಾಜ್ಯಗಳು ಮತ್ತು ರಾಜಮನೆತನಗಳು




8.1. ಶುಂಗ ರಾಜಮನೆತನ
8.2. ಕಣ್ವ ರಾಜಮನೆತನ
8.3. ಇಂಡೋ-ಗ್ರೀಕ್ (ಯವನ) ರಾಜರು
8.4. ಶಕ ರಾಜರು
8.5. ಶಾತವಾಹನ ರಾಜಮನೆತನ
8.6. ಕುಶಾಣ ರಾಜಮನೆತನ
8 .7. ಗುಪ್ತ ರಾಜಮನೆತನ
8.8. ವರ್ಧನ ರಾಜಮನೆತನ


**'ಭಾರತದ ನಕ್ಷೆಯು ಮಾತನಾಡಲು ಶುರುಮಾಡಿದರೆ?'**

ಭಾರತದ ನಕ್ಷೆಯು ನಿಮ್ಮೊಂದಿಗೆ ಮಾತನಾಡುತ್ತಿದೆ ಎಂದು ಕಲ್ಪಿಸಿಕೊಳ್ಳಿ!

ನಕ್ಷೆಯು ಹೀಗೆ ಹೇಳುತ್ತಿದೆ:

ಪ್ರಾಚೀನ ಕಾಲದಲ್ಲಿ ನನ್ನ ಗಡಿಗಳ ಒಳಗೆ ಅನೇಕ ಸಾಮ್ರಾಜ್ಯಗಳ ಏರಿಳಿತಗಳನ್ನು ನಾನು ನೋಡಿದ್ದೇನೆ. ಕೆಲವು ರಾಜರು ಏಳು ಸಮುದ್ರದ ಆಚೆಯಿಂದ ಬಂದವರು, ಇನ್ನು ಕೆಲವರು ಇಲ್ಲೇ ಸ್ಥಳೀಯರಾಗಿದ್ದರು.

ಸಾಮ್ರಾಟ ಅಶೋಕನ ನಂತರ ಮೌರ್ಯ ಸಾಮ್ರಾಜ್ಯದ ಅವನತಿ ಆರಂಭವಾಯಿತು ಮತ್ತು ಭಾರತದಲ್ಲಿ ಅನೇಕ ಸಣ್ಣ-ದೊಡ್ಡ ರಾಜ್ಯಗಳು ಉದಯಿಸಿದವು. ಮೌರ್ಯರ ನಂತರ ಶುಂಗ ಮತ್ತು ಕಣ್ವ ಮನೆತನಗಳು ತಮ್ಮ ರಾಜ್ಯಗಳನ್ನು ಸ್ಥಾಪಿಸಿದವು. ಇದೇ ಸಮಯದಲ್ಲಿ ಗ್ರೀಕ್, ಶಕ ಮತ್ತು ಕುಶಾಣರಂತಹ ವಿದೇಶಿ ಆಕ್ರಮಣಗಳೂ ನಡೆದವು. ದಕ್ಷಿಣದಲ್ಲಿ ಶಾತವಾಹನ ರಾಜವಂಶವು ಅಧಿಕಾರಕ್ಕೆ ಬಂದಿತು. ನಂತರ ವಾಕಾಟಕ ಮತ್ತು ಉತ್ತರದಲ್ಲಿ ಗುಪ್ತ ಸಾಮ್ರಾಜ್ಯಗಳು ಸ್ಥಾಪನೆಯಾದವು. ಗುಪ್ತ ಸಾಮ್ರಾಜ್ಯದ ನಂತರ ವರ್ಧನ ರಾಜವಂಶವು ಪ್ರಭಾವಶಾಲಿಯಾಯಿತು.

**ನಕಾಶೆ ನಿಮಗೆ ಕೇಳುತ್ತದೆ:**

- **ನಕಾಶೆಯ ನಿರೀಕ್ಷಣೆ ಮಾಡಿದ ನಂತರ ನಿಮಗೆ ಯಾವ-ಯಾವ ಸಂಗತಿಗಳು ತಿಳಿಯುತ್ತವೆ?**
- **ಇತಿಹಾಸವನ್ನು ತಿಳಿದುಕೊಳ್ಳುವಾಗ ನಿಮಗೆ ನನ್ನ ಸಹಾಯ ಹೇಗೆ ಆಗುತ್ತದೆ.**
- **ಗುಪ್ತ ಸಾಮ್ರಾಜ್ಯ** ಇದೊಂದು ದೊಡ್ಡ ಮಹತ್ವದ ಸಾಮ್ರಾಜ್ಯವಾಗಿತ್ತು. ಮಹಾರಾಷ್ಟ್ರ ಈ ಸಾಮ್ರಾಜ್ಯದ ಭಾಗವಾಗಿತ್ತಾ? ನೀವು ಇದನ್ನು ಹೇಳಿ''

ವಿದ್ಯಾರ್ಥಿಗಳೇ, ಭಾರತದ ನಕ್ಷೆಯೊಂದಿಗೆ ಕೆಲವು ಪ್ರಾಚೀನ ಸಾಮ್ರಾಜ್ಯಗಳ ಇತಿಹಾಸವನ್ನು ತಿಳಿದುಕೊಳ್ಳಲು ನೀವು ಒಂದು ಅದ್ಭುತ ಪ್ರವಾಸಕ್ಕೆ ಹೋಗಲು ಬಯಸುವಿರಾ? ಹಾಗಾದರೆ ಬನ್ನಿ !...

## 8.1. ಶುಂಗ ರಾಜಮನೆತನ

ಸಾಮ್ರಾಟ ಅಶೋಕನ ನಂತರ ಮೌರ್ಯ ಸಾಮ್ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಉಂಟಾಯಿತು. ಇಂತಹ ಅಸ್ಥಿರ ಪರಿಸ್ಥಿತಿಯಲ್ಲಿ ಮೌರ್ಯ ಸೈನ್ಯದ ಸೇನಾಪತಿಯಾಗಿದ್ದ ಪುಷ್ಯಮಿತ್ರ ಶುಂಗನು ಅಧಿಕಾರವನ್ನು ವಶಪಡಿಸಿಕೊಂಡನು. ಇವನು ವೈದಿಕ ಧರ್ಮದ ಸಮರ್ಥಕನಾಗಿದ್ದನು. ಇವನು ವೈದಿಕ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸಲು ಅಶ್ವಮೇಧ ಯಾಗವನ್ನು ಮಾಡಿದನು. ಇದರಿಂದ ಅವನ ರಾಜಕೀಯ ಶಕ್ತಿಯು ಸ್ಥಾಪಿತವಾಯಿತು. ಅವನ ರಾಜ್ಯವು ಪಂಜಾಬದ ಜಲಂಧರ ಮತ್ತು ಸಿಯಾಲಕೋಟ (ಶಾಕಲ) ವರೆಗೆ ವಿಸ್ತರಿಸಿತ್ತು ಎಂದು ತಿಳಿದುಬರುತ್ತದೆ.

## 8.2. ಕಣ್ವ ರಾಜಮನೆತನ

ದೇವಭೂತಿ ಶುಂಗ ವಂಶದ ಕೊನೆಯ ಅರಸ. ಅವನ ನಂತರ ಶುಂಗ ವಂಶವು ಕೊನೆಗೊಂಡು ಕಣ್ವ ಮನೆತನ ಸ್ಥಾಪನೆಯಾಯಿತು. ವಸುದೇವ ಕಣ್ವನು ಈ ಮನೆತನದ ಸ್ಥಾಪಕ. ಅವನು ಕಲೆ, ಸಂಸ್ಕೃತಿ ಮತ್ತು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದನು.

## 8.3. ಇಂಡೋ-ಗ್ರೀಕ್ (ಯವನ) ಅರಸರು

ಸಿಕಂದರನು (ಅಲೆಕ್ಸಾಂಡರ್) ಭಾರತದ ಮೇಲೆ ದಂಡೆತ್ತಿ ಬಂದ ನಂತರ, ಅವನ ಸೈನ್ಯದಲ್ಲಿದ್ದ ಅನೇಕ ಗ್ರೀಕ್ ಸೇನಾಧಿಕಾರಿಗಳು ಮತ್ತು ಆಡಳಿತಗಾರರು ಭಾರತದ ವಾಯುವ್ಯ ಭಾಗದಲ್ಲಿ ನೆಲೆಸಿದರು. ಮುಂದೆ ಅವರು ಸ್ವತಂತ್ರ ರಾಜ್ಯಗಳನ್ನು ನಿರ್ಮಿಸಿದರು. ಅವರನ್ನು 'ಇಂಡೋ-ಗ್ರೀಕ್' ಅಥವಾ 'ಯವನ' ಎಂದು ಕರೆಯಲಾಗುತ್ತದೆ.



### ನಿಮಗೆ ಗೊತ್ತಿದೆಯೇ?

ಪ್ರಾಚೀನ ಭಾರತದಲ್ಲಿ 'ಯವನ' ಎಂಬ ಪದವನ್ನು ಗ್ರೀಕ್ ಜನರಿಗಾಗಿ ಬಳಸಲಾಗುತ್ತಿತ್ತು. ಈ ಪದವು ಮೂಲ ಗ್ರೀಕ್ ಪದವಾದ 'ಅಯೋನಿಯನ್' ನಿಂದ ಬಂದಿದೆ. ಗ್ರೀಸದ ಅಯೋನಿಯಾ ಪ್ರದೇಶದಲ್ಲಿ ವಾಸಿಸುವ ಜನರನ್ನು ಭಾರತದಲ್ಲಿ ಯವನರು ಎಂದು ಕರೆಯಲಾಗುತ್ತಿತ್ತು. ಸಿಕಂದರನ ದಂಡಯಾತ್ರೆಯ ನಂತರ ಭಾರತಕ್ಕೆ ಬಂದ ಮತ್ತು ವಾಯುವ್ಯ ಭಾಗದಲ್ಲಿ ರಾಜ್ಯಗಳನ್ನು ಸ್ಥಾಪಿಸಿದ ಇಂಡೋ-ಗ್ರೀಕರುಗಳನ್ನು ಭಾರತೀಯ ಸಾಹಿತ್ಯ, ಶಿಲಾಶಾಸನ ಮತ್ತು ಗ್ರಂಥಗಳಲ್ಲಿ 'ಯವನ' ಎಂದು ಸಂಬೋಧಿಸಲಾಗಿದೆ. ಮುಂದೆ ವಿದೇಶಗಳಿಂದ ಬರುವವರೆಲ್ಲರಿಗೂ 'ಯವನ' ಎಂದು ಕರೆಯತೊಡಗಿದರು.

ಅಫಘಾನಿಸ್ತಾನ, ಪಂಜಾಬ್ ಮತ್ತು ಗಾಂಧಾರ ಪ್ರದೇಶಗಳಲ್ಲಿ ಇಂಡೋ-ಗ್ರೀಕರು ತಮ್ಮ ಅಧಿಕಾರದ ಭದ್ರ ಬುನಾದಿಯನ್ನು ಹಾಕಿದರು. ಅವರಲ್ಲಿ ಅತ್ಯಂತ ಪ್ರಸಿದ್ಧ ಮತ್ತು ಜನಪ್ರಿಯ ರಾಜನೆಂದರೆ ಮಿನಾಂಡರ್, ಇವನನ್ನು 'ಮಿಲಿಂದ' ಎಂದು ಕರೆಯಲಾಗುತ್ತದೆ. ಮಿನಾಂಡರ್ ಮತ್ತು ಬೌದ್ಧ ಭಿಕ್ಕು ನಾಗಸೇನರ ನಡುವೆ ನಡೆದ ಪ್ರಶ್ನೋತ್ತರಗಳ ಸಂವಾದವು 'ಮಿಲಿಂದಪನ್ಹಾ' ಎಂಬ ಪ್ರಸಿದ್ಧ ಗ್ರಂಥದಲ್ಲಿ ಕಂಡುಬರುತ್ತದೆ. ಇದರಲ್ಲಿ ಬೌದ್ಧ ಧರ್ಮದ ತತ್ವಶಾಸ್ತ್ರದ ವಿವರಣೆಯಿದೆ.

ಇಂಡೋ-ಗ್ರೀಕ್ ರಾಜರ ನಾಣ್ಯಗಳ ಮೇಲೆ ಗ್ರೀಕ್ ಮತ್ತು ಖರೋಷ್ಠಿ ಎಂಬ ಎರಡು ಲಿಪಿಗಳಲ್ಲಿನ ಲೇಖನಗಳು ಕಂಡುಬರುತ್ತವೆ. ನಾಣ್ಯಗಳ ಒಂದು ಬದಿಯಲ್ಲಿ ರಾಜನ ಮುಖ, ಆತನ ಶಿರಸ್ತ್ರಾಣ ಮತ್ತು ಹಿಂಬದಿಯಲ್ಲಿ ಯಾವುದಾದರೂ ದೇವತೆಯ ಪ್ರತಿಮೆಯನ್ನು ಕೆತ್ತಲಾಗುತ್ತಿತ್ತು. ಅವರ ಆಳ್ವಿಕೆಯಲ್ಲಿ ಪಶ್ಚಿಮ ಏಷ್ಯಾದೊಂದಿಗೆ ವ್ಯಾಪಾರವು ದೊಡ್ಡ ಪ್ರಮಾಣದಲ್ಲಿ ವೃದ್ಧಿಸಿತು.



ಇಂಡೋ-ಗ್ರೀಕ್ ನಾಣ: ಮುಂಬದಿ ಮತ್ತು ಹಿಂಬದಿ



### ನಿಮಗೆ ಗೊತ್ತಿದೆಯೇ?

ಗಾಂಧಾರ ಶೈಲಿಯು ಭಾರತದ ಅತ್ಯುತ್ತಮ ಕಲಾಶೈಲಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಈ ಶೈಲಿಯ ಮೇಲೆ ಗ್ರೀಕ್ ಶೈಲಿಯ ಪ್ರಭಾವವು ಕಂಡುಬರುತ್ತದೆ. ಈ ಕಲಾಶೈಲಿಯು ಪ್ರಮುಖವಾಗಿ ಕುಶಾಣರ ಕಾಲದಲ್ಲಿ ವಿಕಸನಗೊಂಡಿತು. ಆಧುನಿಕ ಪಾಕಿಸ್ತಾನ, ಅಫಘಾನಿಸ್ತಾನ ಮತ್ತು ಭಾರತದ ವಾಯುವ್ಯ ಭಾಗಗಳು ಈ ಕಲಾಶೈಲಿಯ ಮುಖ್ಯ ಕೇಂದ್ರಗಳಾಗಿದ್ದವು. ಗಾಂಧಾರ ಶೈಲಿಯಲ್ಲಿ ಮಾನವ



ಆಕೃತಿಗಳು ಬಹಳ ಜೀವಂತವಾಗಿ ಮತ್ತು ಸುಂದರವಾಗಿಯೂ ಕಂಡುಬರುತ್ತವೆ. ಗಾಂಧಾರ ಶೈಲಿಯಲ್ಲಿ ಗೌತಮ ಬುದ್ಧನ ಮೊದಲ ಪ್ರತಿಮೆಗಳು ಕಂಡುಬರುತ್ತವೆ. ಅದಕ್ಕೂ ಮೊದಲು ಬೌದ್ಧ ಧರ್ಮದಲ್ಲಿ ಗೌತಮ ಬುದ್ಧನ ಉಪಸ್ಥಿತಿಯನ್ನು ಪಾದದ ಗುರುತುಗಳು ಮತ್ತು ಧರ್ಮಚಕ್ರದಂತಹ ಸಂಕೇತಗಳ ಮೂಲಕ ಪ್ರತಿನಿಧಿಸಲಾಗುತ್ತಿತ್ತು.

## 8.4. ಶಕ ರಾಜರು

ಮೌರ್ಯರ ನಂತರದ ಕಾಲದಲ್ಲಿ, ಭಾರತದ ವಾಯುವ್ಯ ಗಡಿಯಾದ ಖೈಬರ್ ಕಣಿವೆಯ ಮೂಲಕ ಅನೇಕ ವಿದೇಶಿಯರು ಭಾರತಕ್ಕೆ ಬಂದರು. ಅವರಲ್ಲಿ 'ಶಕರು' ಪ್ರಮುಖರು. ಅವರನ್ನು 'ಸ್ಕಿಥಿಯನ್' ಎಂದೂ ಕರೆಯಲಾಗುತ್ತದೆ. ಶಕಸ್ತಾನ ಅಥವಾ ಸೀಸ್ತಾನ್ ಅವರ ಮೂಲ ಪ್ರದೇಶವಾಗಿತ್ತು. ಈ ಪ್ರದೇಶದಿಂದ ಬಂದ ಜನರನ್ನು ಗ್ರೀಕ್ ಮತ್ತು ರೋಮನ್ ಪರಂಪರೆಯಲ್ಲಿ 'ಸಿಥಿಯನ್' ಎಂದು ಕರೆಯಲಾಗುತ್ತಿತ್ತು. ಮಧ್ಯ ಏಷ್ಯಾದಿಂದ ವಲಸೆ ಬಂದ ಅವರು ಪಶ್ಚಿಮ ಭಾರತದ ಗುಜರಾತ್, ಮಹಾರಾಷ್ಟ್ರ ಮತ್ತು ಮಾಳವ ಪ್ರದೇಶಗಳಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ರುದ್ರದಾಮನ್ ಶಕ ರಾಜವಂಶದ ಅತ್ಯಂತ ಪ್ರಸಿದ್ಧ ಮತ್ತು

ಶಕ್ತಿಯುತ ದೊರೆಯಾಗಿದ್ದನು. ಅವನ ಕಾಲದಲ್ಲಿ ವ್ಯಾಪಾರವು ಅಭಿವೃದ್ಧಿ ಹೊಂದಿತು ಮತ್ತು ಸಾಮಾಜಿಕ ವ್ಯವಸ್ಥೆಯು ಹೆಚ್ಚು ಸ್ಥಿರವಾಯಿತು.



ಜುನಾಗಡ್ ದಲ್ಲಿಯ ಶಿಲಾಲೇಖ

ರುದ್ರದಾಮನ ಜುನಾಗಢ ಶಿಲಾಶಾಸನವು ಬಹಳ ಪ್ರಸಿದ್ಧವಾಗಿದೆ. ಈ ಶಾಸನದ ಬಗ್ಗೆ ನೀವು ಹಿಂದಿನ ಪಾಠದಲ್ಲಿ ಓದಿದ್ದೀರಿ. ಈ ಶಾಸನವು ಅವನ ಆಡಳಿತ ವ್ಯವಸ್ಥೆ, ಪ್ರಜೆಗಳ ಕಲ್ಯಾಣಕ್ಕಾಗಿ ಮಾಡಿದ ಕೆಲಸಗಳು ಮತ್ತು ಯುದ್ಧಗಳಲ್ಲಿನ ಅವನ ಪರಾಕ್ರಮದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ

ಶಕರ ಕಾಲದಲ್ಲಿ ಸಮುದ್ರ ವ್ಯಾಪಾರವು ದೊಡ್ಡ ಪ್ರಮಾಣದಲ್ಲಿ ಬೆಳೆಯಿತು. ಶಕರು ಬಂದರುಗಳನ್ನು ಅಭಿವೃದ್ಧಿಪಡಿಸಿದರು, ವ್ಯಾಪಾರಿಗಳಿಗೆ ರಕ್ಷಣೆ ನೀಡಿದರು ಮತ್ತು ರಾಜಮನೆತನದ ಟಂಕಸಾಲೆಗಳಲ್ಲಿ ತಯಾರಾದ ನಾಣ್ಯ ವ್ಯವಸ್ಥೆಯನ್ನು ಬಳಕೆಗೆ ತಂದರು. ಈ ನಾಣ್ಯಗಳು ಮುಖ್ಯವಾಗಿ ಬೆಳ್ಳಿಯದಾಗಿದ್ದು, ಅವುಗಳ ಮೇಲೆ ಬ್ರಾಹ್ಮಿ ಲಿಪಿಯಲ್ಲಿ ಲೇಖನಗಳು ಕಂಡುಬರುತ್ತವೆ. ಆದ್ದರಿಂದ ಭಾರತೀಯ ನಾಣ್ಯಶಾಸ್ತ್ರವನ್ನು ಅಧ್ಯಯನ ಮಾಡುವಾಗ ಶಕರ ನಾಣ್ಯಗಳನ್ನು ಬಹಳ ಮುಖ್ಯವೆಂದು ಪರಿಗಣಿಸಲಾಗುತ್ತದೆ. ಈ ನಾಣ್ಯಗಳ ಮೇಲೆ 'ಶಕ ಸಂವತ್ಸರ'ದ ಉಲ್ಲೇಖವಿದೆ. ಈ ನಾಣ್ಯಗಳು ಪ್ರಾಚೀನ ಭಾರತದ ಇತಿಹಾಸದ ಪ್ರಮುಖ ಸಾಧನಗಳಾಗಿವೆ.



**ನಿಮಗೆ ತಿಳಿದಿದೆಯೇ?**

ಶಕ ಸಂವತ್ ಎಂಬುದು ಭಾರತೀಯ ಕಾಲಗಣನೆಯ ಒಂದು ಪ್ರಮುಖ ಪದ್ಧತಿಯಾಗಿದೆ. ಇಂದಿಗೂ ಇದನ್ನು ನಮ್ಮ ಪಂಚಾಂಗಗಳಲ್ಲಿ ಬಳಸಲಾಗುತ್ತದೆ. ವರ್ಷವನ್ನು 'ಸಂವತ್ಸರ' ಎಂದು ಕರೆಯಲಾಗುತ್ತದೆ ಮತ್ತು ಪ್ರತಿ ಸಂವತ್ಸರಕ್ಕೂ ಒಂದು ವಿಶೇಷ ಹೆಸರಿರುತ್ತದೆ. ಶಕ ಸಂವತ್ಸರದ ಆರಂಭವು ಕ್ರಿ.ಶ. 78 ರಲ್ಲಿ ಆಯಿತು.

ಇಂದಿನ ಪ್ರಸ್ತುತ ವರ್ಷವು ಶಕ ಕಾಲಗಣನೆಯ ಪ್ರಕಾರ ಎಷ್ಟನೆಯದು ಎಂದು ತಿಳಿಯಲು ಈ ಕೆಳಗಿನಂತೆ ಲೆಕ್ಕಾಚಾರ ಮಾಡಿ:

ಪ್ರಸ್ತುತ ಕ್ರಿಶ್ಚಿಯನ್ ವರ್ಷದಿಂದ 78 ಅನ್ನು ಕಳೆಯಿರಿ, ಆಗ ಪ್ರಸ್ತುತ ಶಕ ವರ್ಷ ಯಾವುದು ಎಂದು ತಿಳಿಯುತ್ತದೆ.

ಉದಾಹರಣೆಗೆ: ಪ್ರಸ್ತುತ ಕ್ರಿ.ಶ. ವರ್ಷ 2026 – 78 = ಪ್ರಸ್ತುತ ಶಕ ವರ್ಷ 1948.

ನಿಮ್ಮ ಪಠ್ಯಪುಸ್ತಕದ ಆರಂಭದಲ್ಲಿಯೂ ನೀವು ಇಂತಹ ಮಾಹಿತಿಯನ್ನು ನೋಡಬಹುದು. ಒಮ್ಮೆ ಗಮನಿಸಿ!



**ಮಾಡಿ ನೋಡಿ.**

ಮೇಲಿನ ಉದಾಹರಣೆಯ ಆಧಾರದ ಮೇಲೆ, ನಿಮ್ಮ ಕುಟುಂಬದ ಸದಸ್ಯರ ಅಥವಾ ನಿಮ್ಮ ಸ್ನೇಹಿತರ ಜನ್ಮ ವರ್ಷದ 'ಶಕ ಸಂವತ್ಸರ'ವನ್ನು ಕಂಡುಹಿಡಿಯಿರಿ.

## 8.5. ಸಾತವಾಹನ ರಾಜಮನೆತನ

ಸಾತವಾಹನ ಮನೆತನವು ಮಹಾರಾಷ್ಟ್ರದ ಇತಿಹಾಸದಲ್ಲಿ ಮೊದಲ ಶಕ್ತಿಯುತ ಸಾಮ್ರಾಜ್ಯ ಎಂದು ಗುರುತಿಸಲ್ಪಟ್ಟಿದೆ. ಮೌರ್ಯರ ನಂತರದ ಕಾಲದಲ್ಲಿ ದೇಶದಾದ್ಯಂತ ಅನೇಕ ರಾಜಕೀಯ ಅಸ್ಥಿರತೆಗಳು ಉಂಟಾದವು, ವ್ಯಾಪಾರವು ಕುಂಠಿತಗೊಂಡಿತು. ಪರಕೀಯ ಆಕ್ರಮಣಗಳು ಹೆಚ್ಚಾದವು. ಇಂತಹ ಪರಿಸ್ಥಿತಿಯಲ್ಲಿ **ಸಿಮುಕ ಎಂಬ ರಾಜನು ಶಾತವಾಹನ ರಾಜವಂಶವನ್ನು ಸ್ಥಾಪಿಸಿದನು.** ಶಾತವಾಹನರು ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಧ್ಯಪ್ರದೇಶದ ಭಾಗಗಳಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಶಾತವಾಹನರಲ್ಲಿ ಅತ್ಯಂತ ಪ್ರಸಿದ್ಧ ಮತ್ತು **ಶಕ್ತಿಯುತ ರಾಜ**ನೆಂದರೆ **ಗೌತಮಿಪುತ್ರ ಶಾತಕರ್ಣಿ**. ಆತನು ಶಕ ಮತ್ತು ಯವನರಂತಹ ಪರಕೀಯ ಶಕ್ತಿಗಳನ್ನು ಸೋಲಿಸಿ, ಭಾರತದ ಮಧ್ಯಪ್ರದೇಶದಿಂದ ಮಹಾರಾಷ್ಟ್ರದವರೆಗೆ ಸ್ಥಿರ ಮತ್ತು ಸುಸಂಘಟಿತ ಸಾಮ್ರಾಜ್ಯವನ್ನು ನಿರ್ಮಿಸಿದನು. ಅವನ ಪರಾಕ್ರಮದ ವಿವರಣೆಯು ಅವನ ತಾಯಿ ಗೌತಮಿ ಬಾಲಶ್ರೀ ಕೆತ್ತಿಸಿದ ನಾಸಿಕದ ತಿರಸ್ಮಿ ಗುಹೆಯ ಶಾಸನದಲ್ಲಿ ಕಂಡುಬರುತ್ತದೆ. ಅದರಲ್ಲಿ ಅವನನ್ನು 'ತ್ರಿಸಮುದ್ರತೋಯಪೀತವಾಹನ' ಎಂದು ಕರೆಯಲಾಗಿದೆ. ಇದರರ್ಥ, ಯಾರ ಕುದುರೆಗಳು ಮೂರು ಸಮುದ್ರಗಳ ನೀರನ್ನು ಕುಡಿದಿವೆಯೋ ಅಂತಹವನು ಎಂದು. ಆ ಮೂರು ಸಮುದ್ರಗಳೆಂದರೆ ಅರಬ್ಬಿ ಸಮುದ್ರ, ಬಂಗಾಳ ಕೊಲ್ಲಿ ಮತ್ತು ಹಿಂದೂ ಮಹಾಸಾಗರ. ಅವನ ಕಾಲದಲ್ಲಿ ಶಾತವಾಹನರ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ತುಂಗಭದ್ರಾ ನದಿಯವರೆಗೆ ಹರಡಿತ್ತು.

ಸಾತವಾಹನರ ಕಾಲದಲ್ಲಿ ವ್ಯಾಪಾರವು ಬಹಳ ವಿಸ್ತಾರವಾಯಿತು. ಅವರ ರಾಜ್ಯದ ಮೂಲಕ ರೇಷ್ಮೆ ಮಾರ್ಗ ಮತ್ತು ಸಮುದ್ರ ಮಾರ್ಗಗಳಿಂದ ವ್ಯಾಪಾರ ನಡೆಯುತ್ತಿತ್ತು. ಇದರಿಂದಾಗಿ ಭಾರತೀಯ ವ್ಯಾಪಾರಿಗಳು ರೋಮ್ ಮತ್ತು ಗ್ರೀಸ್‌ನಂತಹ ದೂರದ ದೇಶಗಳೊಂದಿಗೆ ವ್ಯಾಪಾರ ನಡೆಸಲು ಸಾಧ್ಯವಾಯಿತು.

## ನಿಮಗೆ ಗೊತ್ತಿದೆಯೇ?

ಈ ಚಿತ್ರವು ಕ್ರಿಸ್ತಪೂರ್ವ ಒಂದನೇ ಶತಮಾನದ ಕಾಲದ ರಾಜ ಪುಳುಮಾವಿಯ ನಾಣ್ಯದ ಮೇಲಿರುವ ಹಡಗಿನ ಚಿತ್ರವಾಗಿದೆ. ಈ ನಾಣ್ಯದ ಮೇಲಿರುವ ಹಡಗಿನ ಚಿತ್ರವು ಶಾತವಾಹನರ ಕಾಲದಲ್ಲಿ ಸಮುದ್ರ ಮಾರ್ಗದ ಮೂಲಕ ನಡೆಯುತ್ತಿದ್ದ ವ್ಯಾಪಾರಕ್ಕೆ ಸಾಕ್ಷಿಯಾಗಿದೆ.



ಅವರ ನಾಣ್ಯಗಳ ಮೇಲೆ ಬ್ರಾಹ್ಮಿ ಮತ್ತು ಪ್ರಾಕೃತ ಭಾಷೆಯ ಲೇಖನಗಳು ಕಂಡುಬರುತ್ತವೆ. ಸಾಂಸ್ಕೃತಿಕ ದೃಷ್ಟಿಯಿಂದ ಶಾತವಾಹನರ ಕಾಲವು ಅತ್ಯಂತ ವೈಭವದ ಕಾಲವೆಂದು ಪರಿಗಣಿಸಲ್ಪಟ್ಟಿದೆ. ಈ ಕಾಲದಲ್ಲಿ ಬೌದ್ಧ ಧರ್ಮವು ಪ್ರಾಮುಖ್ಯತೆ ಹೆಚ್ಚಾಯಿತು ಮತ್ತು ಅನೇಕ ಬೌದ್ಧ ಗುಹೆಗಳನ್ನು ಕೊರೆಯಲಾಯಿತು. ನಾಸಿಕ, ಕಾರ್ಲೆ, ಕಾನ್ಹೇರಿ, ಭಾಜೆ, ಪಿತಲ್ ಖೋರಾ ಈ ಪ್ರಸಿದ್ಧ ಗುಹೆಗಳು ಶಾತವಾಹನರ ಕಾಲದವುಗಳಾಗಿವೆ.




## 8.6. ಕುಶಾಣ ರಾಜರು

ಕುಶಾಣ ಮನೆತನವು ಮೂಲತಃ ಮಧ್ಯ ಏಷ್ಯಾದವರು. ಅವರು ಅಫಘಾನಿಸ್ತಾನ, ಪಾಕಿಸ್ತಾನ ಮತ್ತು ನಂತರ ಉತ್ತರ ಭಾರತವನ್ನು ಪ್ರವೇಶಿಸಿ ಭಾರತೀಯ ಉಪಖಂಡದಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದರು. **ಅವರಲ್ಲಿ ಅತ್ಯಂತ ಶ್ರೇಷ್ಠ ಮತ್ತು ಪ್ರಭಾವಶಾಲಿ ರಾಜ ಎಂದರೆ ಸಾಮ್ರಾಟ್ ಕನಿಷ್ಕ.** ಕನಿಷ್ಕನ ಕಾಲದಲ್ಲಿ ಕುಶಾಣ ಸಾಮ್ರಾಜ್ಯವು ಬಹಳ ವಿಸ್ತಾರವಾಗಿತ್ತು. ಮಥುರಾ ಪ್ರದೇಶದಿಂದ ಪಂಜಾಬ, ಅಫಘಾನಿಸ್ತಾನ, ಕಾಶ್ಮೀರದವರೆಗೆ ಅವನ ರಾಜ್ಯ ಹರಡಿತ್ತು.

ಕನಿಷ್ಕನು ತನ್ನ ರಾಜಧಾನಿಯನ್ನು ಪುರುಷಪುರ (ಇಂದಿನ ಪೇಶಾವರ)ದಲ್ಲಿ ಸ್ಥಾಪಿಸಿದನು. ಅವನು ಬೌದ್ಧ ಧರ್ಮದ ಪ್ರಚಾರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದನು. ಅವನ ಕಾಲದಲ್ಲಿ ಬೌದ್ಧ ಧರ್ಮದ ಪರಿಷತ್ತನ್ನು ಕರೆಯಲಾಯಿತು. ಈ ಬೌದ್ಧ ಪರಿಷತ್ತುಗಳನ್ನು 'ಸಂಗೀತಿ' ಎಂದು ಕರೆಯಲಾಗುತ್ತದೆ ಕುಶಾಣರ ಆಳ್ವಿಕೆಯಲ್ಲಿ ವ್ಯಾಪಾರ ಮತ್ತು ಆರ್ಥಿಕತೆಯು ಅಪಾರವಾಗಿ ಬೆಳೆಯಿತು. ಭಾರತ, ಚೀನಾ, ರೋಮ್ ಮತ್ತು ಮಧ್ಯ ಏಷ್ಯಾವನ್ನು ಸಂಪರ್ಕಿಸುವ ಪ್ರಸಿದ್ಧ ರೇಷ್ಮೆ ಮಾರ್ಗ ಅವರ ನಿಯಂತ್ರಣದಲ್ಲಿತ್ತು. ಈ ಮಾರ್ಗದ ಮೂಲಕ ಮಸಾಲೆ ಪದಾರ್ಥಗಳು, ಬಟ್ಟೆ, ಲೋಹಗಳು, ರೇಷ್ಮೆ ಮತ್ತು ಆಭರಣಗಳ ವ್ಯಾಪಾರವು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. ಕುಶಾಣರು ಚಿನ್ನದ ಮತ್ತು ಬೆಳ್ಳಿಯ ಉತ್ಕೃಷ್ಟ ನಾಣ್ಯಗಳನ್ನು ತಯಾಸಿದರು. ಈ ನಾಣ್ಯಗಳ ಮೇಲೆ ವಿವಿಧ ದೇವ-ದೇವತೆಗಳ ಚಿತ್ರಗಳು ಕಂಡುಬರುತ್ತವೆ. ಉದಾಹರಣೆಗೆ: ಹೆರಾಕ್ಲಿಸ್ (ಗ್ರೀಕ್ ದೇವತೆ), ಅರ್ದೋಕ್ಷೊ (ಇರಾನಿ ದೇವತೆ), ಶಿವ (ಭಾರತೀಯ ದೇವತೆ). ಇದರಿಂದ ಕುಶಾಣರ ಮೇಲೆ ವಿವಿಧ ಸಾಂಸ್ಕೃತಿಕ ಪ್ರವಾಹಗಳ ಪ್ರಭಾವವಿರುವುದು ಕಂಡುಬರುತ್ತದೆ.

## ನಿಮಗೆ ತಿಳಿದಿದೆಯೇ?

ಕನಿಷ್ಕನ ಆಳ್ವಿಕೆಯಲ್ಲಿ ನಾಲ್ಕನೇ ಬೌದ್ಧ ಸಮ್ಮೇಳನವು ಕುಂಡಲವನ (ಕಾಶ್ಮೀರ) ದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಬೌದ್ಧಧರ್ಮದ ಬೋಧನೆಗಳನ್ನು ಹೊಸದಾಗಿ ಮಂಡಿಸಲಾಯಿತು ಮತ್ತು ಬೌದ್ಧ ತತ್ವಜ್ಞಾನವನ್ನು ಹೆಚ್ಚು ವ್ಯಾಪಕವಾಗಿ ವಿವರಿಸಲಾಯಿತು. ಈ ಸಮ್ಮೇಳನದಲ್ಲಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಪಂಥಗಳು ಸ್ಥಾಪಿತವಾದವು. ಮಹಾಯಾನ ಪಂಥವು ಮೂರ್ತಿಪೂಜೆಯನ್ನು ಸ್ವೀಕರಿಸಿತು. ಆದ್ದರಿಂದ ಈ ಕಾಲಖಂಡದಲ್ಲಿ ಮಥುರಾ ಮತ್ತು ಗಾಂಧಾರ ಕಲಾ ಶೈಲಿಗಳಲ್ಲಿ ಗೌತಮ ಬುದ್ಧನ ಪ್ರತಿಮೆಗಳನ್ನು ನಿರ್ಮಿಸಲಾಯಿತು.

## .ಸ್ವಲ್ಪ ಯೋಚಿಸಿ

ನಾಣ್ಯಶಾಸ್ತ್ರಜ್ಞರು ನಾಣ್ಯಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುತ್ತಾರೆ ಮತ್ತು ಅದರ ಆಧಾರದ ಮೇಲೆ ಆಯಾ ಕಾಲದ ಇತಿಹಾಸವನ್ನು ಮರುನಿರ್ಮಾಣ ಮಾಡುತ್ತಾರೆ. ನೀವು ಕೂಡ ಇದನ್ನು ಪ್ರಯತ್ನಿಸಿ ನೋಡಿ. ಚಿತ್ರದಲ್ಲಿ ನೀಡಲಾದ ಕನಿಷ್ಕನ

ನಾಣ್ಯವನ್ನು ಸೂಕ್ಷ್ಮವಾಗಿ ಗಮನಿಸಿ. ನಾಣ್ಯದ ಎರಡೂ ಬದಿಗಳಲ್ಲಿರುವ ಚಿತ್ರಗಳು ಮತ್ತು ಬರಹಗಳಿಂದ ನಿಮಗೇನು ತಿಳಿಯುತ್ತದೆ ಎಂಬುದನ್ನು ನಿಮ್ಮ ನೋಟಬುಕನಲ್ಲಿ ಬರೆಯಿರಿ.



## 8.7 ಗುಪ್ತ ರಾಜಮೆತನ

ಗುಪ್ತ ಸಾಮ್ರಾಜ್ಯದ ಕಾಲವನ್ನು ಪ್ರಾಚೀನ ಭಾರತದ 'ಸುವರ್ಣಯುಗ' ಎಂದು ಪರಿಗಣಿಸಲಾಗುತ್ತದೆ. **ಶ್ರೀಗುಪ್ತನು ಗುಪ್ತ ಮನೆತನದ ಸ್ಥಾಪಕನಾಗಿದ್ದನು.** ಗುಪ್ತ ಸಾಮ್ರಾಜ್ಯದ ವಿಸ್ತರಣೆಯು ಮೊದಲನೆಯ ಚಂದ್ರಗುಪ್ತನ ಕಾಲದಲ್ಲಿ ಪ್ರಾರಂಭವಾಯಿತು. ಆತನ ನಂತರ ಅಧಿಕಾರಕ್ಕೆ ಬಂದ ಸಮುದ್ರಗುಪ್ತನ ಪರಾಕ್ರಮದ ವರ್ಣನೆಯು ಅವನ ಆಸ್ಥಾನದ ಕವಿ ಹರಿಷೇಣನು ಬರೆದ ಪ್ರಶಸ್ತಿಯಲ್ಲಿ ದಾಖಲಾಗಿದೆ. ಈ ಪ್ರಶಸ್ತಿಯನ್ನು ಅಲಹಾಬಾದನ ಅಶೋಕ ಸ್ತಂಭದ ಮೇಲೆ ಕೆತ್ತಲಾಗಿದೆ. ಭಾರತದಲ್ಲಿ ಕಾಶ್ಮೀರದಿಂದ ನರ್ಮದೆಯವರೆಗೆ ಮತ್ತು ಒಡಿಶಾದಿಂದ ದಕ್ಷಿಣದ ಕಾಂಚೀಪುರದವರೆಗೆ ಸಮುದ್ರಗುಪ್ತನು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಎರಡನೆಯ ಚಂದ್ರಗುಪ್ತ ಅಲಿಯಾಸ್ ವಿಕ್ರಮಾದಿತ್ಯನ ಕಾಲದಲ್ಲಿ ಗುಪ್ತ ಸಾಮ್ರಾಜ್ಯವು ಉತ್ತುಂಗಕ್ಕೇರಿತು. ಅವನು ಶಕರನ್ನು ಸೋಲಿಸಿದ್ದು ಅವನ ಆಳ್ವಿಕೆಯ ಪ್ರಮುಖ ಘಟನೆಯಾಗಿದೆ. ಅವನ ಕಾಲದಲ್ಲಿ ಫಾಹಿಯಾನ್ ಎಂಬ ಚೀನೀ ಪ್ರವಾಸಿಗ ಭಾರತಕ್ಕೆ ಬಂದಿದ್ದನು. ಅವನು ಗುಪ್ತ ಸಾಮ್ರಾಜ್ಯದ ಶಾಂತಿ ಮತ್ತು ಸಮೃದ್ಧಿಯನ್ನು ಶ್ಲಾಘಿಸಿದ್ದಾನೆ. ಅವನ ಆಸ್ಥಾನದಲ್ಲಿ ಕಾಳಿದಾಸ, ಧನ್ವಂತರಿ, ವರಾಹಮಿಹಿರರಂತಹ ಶ್ರೇಷ್ಠ ವಿದ್ವಾಂಸರಿದ್ದರು. ಇವರೆಲ್ಲರ ಕಾರ್ಯದಿಂದಾಗಿ ಗುಪ್ತ ಕಾಲವು ಪ್ರಾಚೀನ ಭಾರತದ ಅತ್ಯಂತ ಸಮೃದ್ಧ, ಸ್ಥಿರ ಮತ್ತು ಸಾಂಸ್ಕೃತಿಕವಾಗಿ ವೈಶಿಷ್ಟ್ಯಪೂರ್ಣ ಕಾಲವೆಂದು ಸಿದ್ಧವಾಯಿತು.



ಸಮುದ್ರಗುಪ್ತನ ಕಾಲದ ನಾಣ್ಯಗಳು

ಗುಪ್ತ ಅರಸರ ಕಾಲದಲ್ಲಿ ಕಲೆ, ಸಾಹಿತ್ಯ, ಗಣಿತ, ಖಗೋಳಶಾಸ್ತ್ರ, ಲೋಹದ ಕೆಲಸ, ಶಿಕ್ಷಣ ಮತ್ತು ಧರ್ಮಗಳು ಅಭಿವೃದ್ಧಿ ಹೊಂದಿದವು. **ಸ್ಕಂದಗುಪ್ತನು ಗುಪ್ತ ರಾಜಮನೆತನದ ಕೊನೆಯ ಬಲಿಷ್ಠ ರಾಜನಾಗಿದ್ದನು.**

**ನಿಮ್ಮ ಅಭಿಪ್ರಾಯವೇನು?**

ಗುಪ್ತಕಾಲವನ್ನು 'ಸುವರ್ಣಯುಗ' ಎಂದು ಏಕೆ ಕರೆಯುತ್ತಾರೆ?

## 8.8 ವರ್ಧನ ರಾಜಮನೆತನ

ಗುಪ್ತ ಸಾಮ್ರಾಜ್ಯದ ಅವನತಿಯ ನಂತರ ಉತ್ತರ ಭಾರತದಲ್ಲಿ ಮತ್ತೆ ರಾಜಕೀಯ ಅಸ್ಥಿರತೆ ಉಂಟಾಯಿತು. ವಿವಿಧ ಪ್ರಾದೇಶಿಕ ರಾಜರು ಅಧಿಕಾರಕ್ಕಾಗಿ ಪರಸ್ಪರ ಹೋರಾಡುತ್ತಿದ್ದರು. ಇಂತಹ ಅಸ್ಥಿರ ಪರಿಸ್ಥಿತಿಯಲ್ಲಿ ವರ್ಧನ ರಾಜವಂಶದ ಉದಯವಾಯಿತು. ದೆಹಲಿಯ ಸಮೀಪವಿರುವ ಥಾಣೇಸರ್ ಎಂಬಲ್ಲಿ ಪ್ರಭಾಕರವರ್ಧನ ಎಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ಅವನ ಕಾಲದಲ್ಲಿ ವರ್ಧನ ರಾಜವಂಶವು ಪ್ರಬಲವಾಯಿತು. ಆದರೆ ಈ ಮನೆತನಕ್ಕೆ ಐತಿಹಾಸಿಕ ಪ್ರಾಮುಖ್ಯತೆ ಬಂದಿದ್ದು ಅವನ ಮಗ ಸಾಮ್ರಾಟ ಹರ್ಷವರ್ಧನನಿಂದ. ಹರ್ಷವರ್ಧನನು ಇಡೀ ಉತ್ತರ ಭಾರತವನ್ನು ಒಗ್ಗೂಡಿಸಿ ಬಲಿಷ್ಠ ಸಾಮ್ರಾಜ್ಯವನ್ನು ಕಟ್ಟಿದನು. ಅವನು ಕನೌಜ ಅನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅವನ ಸಾಮ್ರಾಜ್ಯವು ಪಂಜಾಬ, ಹರಿಯಾಣ, ಉತ್ತರ ಪ್ರದೇಶ, ಬಿಹಾರ ಮತ್ತು ಬಂಗಾಳದವರೆಗೆ ಹರಡಿತ್ತು. ಹರ್ಷವರ್ಧನನು ಧರ್ಮನಿಷ್ಠ, ದಯಾಳು ಮತ್ತು ಜನಪರ ರಾಜನೆಂದು ಹೆಸರುವಾಸಿಯಾಗಿದ್ದನು. ಅವನು ಧಾರ್ಮಿಕ ಉತ್ಸವಗಳಿಗೆ ಪ್ರೋತ್ಸಾಹ ನೀಡಿದನು. ಬಡವರು ಮತ್ತು ಅಗತ್ಯವಿರುವ ಜನರಿಗಾಗಿ ದಾನಧರ್ಮದ ವ್ಯವಸ್ಥೆಯನ್ನು ಮಾಡಿದ್ದನು.



ಕ್ರಿ.ಶ. ನಾಲ್ಕರಿಂದ ಆರನೆಯ ಶತಮಾನದ
ಭಾರತ
ಉ
ಭಾರತದ ಈಗಿನ ಅಂತರರಾಷ್ಟ್ರೀಯ ಸೀಮೆ
೦
೫೦೦ ಕಿಲೋಮೀಟರ
ಗುಪ್ತರ ಸಾಮ್ರಾಜ್ಯ
ಆಧುನಿಕ ನಗರ
ಹಿಂದು ಕುಶ ಪರ್ವತ
ಪುರುಷಪುರ
ಕಾಶ್ಮೀರ
ಸಿಂಧೂ ನದಿ
ದಿಲ್ಲಿ
(ಇಂದ್ರಪ್ರಸ್ಥ)
ಯಮುನಾ ನದಿ
ಕನೌಜ
ಗಂಗಾ ನದಿ
ನೇಪಾಳ
ವೈಶಾಲಿ
ಪಾಟಲಿಪುತ್ರ
ಚಂಪಾ
ಕಾಶೀ
ಬೋಧಗಯಾ
ಪ್ರಯಾಗ
ಚಂಬಳ ನದಿ
ಮಾಳವಾ
ಬುಂದೇಲಖಂಡ
ಸಾಂಚಿ
ಉಜ್ಜಯಿನಿ
ಕಚ್ಚ
ಸೌರಾಷ್ಟ್ರ
ವಲಭೀ
ಭಡೋಚ
ನರ್ಮದಾ ನದಿ
ತಾಮ್ರಲಿಪ್ತಿ
ಕಾಮರೂಪ
ತಾಪೀ ನದಿ
ಮಹಾ ನದಿ
ವಾಕಾಟಕ
ಸೋಪಾರಾ
ಗೋದಾವರಿ ನದಿ
ಕೃಷ್ಣಾ ನದಿ
ತುಂಗಭದ್ರಾ ನದಿ
ಅರಬೀ ಸಮುದ್ರ
ಬಂಗಾಲದ ಉಪಸಾಗರ
ಪಲ್ಲವ
ಕಾಂಚಿ
ಕಾವೇರಿ ನದಿ
ಚೋಳ
ಪಾಂಡ್ಯ
ಲಕ್ಷದ್ವೀಪ (ಭಾರತ)
ಅಂದಮಾನ ಮತ್ತು ನಿಕೋಬಾರ ದ್ವೀಪಗಳು (ಭಾರತ)
ಶ್ರೀಲಂಕಾ
ಹಿಂದೂ ಮಹಾಸಾಗರ



### ನಿಮಗೆ ಗೊತ್ತಿದೆಯೇ?

ಒಮ್ಮೆ ಹರ್ಷವರ್ಧನನು ತನ್ನ ರಾಜಧಾನಿಯಲ್ಲಿ ಒಂದು ಬಡ ಕುಟುಂಬವು ಆಹಾರ ಮತ್ತು ನೀರಿಲ್ಲದೆ ಕಷ್ಟಪಡುತ್ತಿರುವುದನ್ನು ನೋಡಿದನು. ಇದನ್ನು ಗಮನಿಸಿದ ರಾಜನು ಸ್ವತಃ ಅರಮನೆಯಿಂದ ಹೊರಬಂದು ಆ ಕುಟುಂಬಕ್ಕೆ ದಾನ ಮಾಡಿದನು. ಕೇವಲ ಆಹಾರ ನೀಡುವುದು ಸಾಕಾಗುವುದಿಲ್ಲ, ಬದಲಿಗೆ ಜನರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನೂ ನೀಡಬೇಕು ಎಂದು ಅವನಿಗೆ ಅನಿಸಿತು. ಪ್ರತಿ ಹಳ್ಳಿಯಲ್ಲೂ ವಿದ್ಯಾಲಯಗಳನ್ನು ಸ್ಥಾಪಿಸಬೇಕು ಮತ್ತು ಆಸ್ಪತ್ರೆಗಳನ್ನು ನಿರ್ಮಿಸಬೇಕು ಎಂದು ಅವನು ಆಜ್ಞಾಪಿಸಿದನು. ಅಷ್ಟೇ ಅಲ್ಲದೆ, ಬಡವರಿಗೆ ಮತ್ತು ಭಿಕ್ಷುಕರಿಗೆ ಆಹಾರ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟನು. ಹರ್ಷವರ್ಧನನ ಈ ದಾನಗುಣದಿಂದಾಗಿ ರಾಜ್ಯದ ಎಲ್ಲಾ ಪ್ರಜೆಗಳು ಅವನ ಮೇಲೆ ಅಪಾರ ಗೌರವ ಮತ್ತು ಪ್ರೀತಿಯನ್ನು ಹೊಂದಿದ್ದರು.

ಒಮ್ಮೆ ಹರ್ಷವರ್ಧನನು ತನ್ನ ಆಸ್ಥಾನದಲ್ಲಿ ಸಭೆಯನ್ನು ನಡೆಸಿ ಹೀಗೆ ಹೇಳಿದನು, ''ರಾಜ್ಯದ ನಿಜವಾದ ಸಮೃದ್ಧಿಯು ಜನರ ಸಂತೋಷ ಮತ್ತು ಕಲ್ಯಾಣದಲ್ಲಿದೆ. ಯಾರು ದಾನ ಮಾಡುತ್ತಾರೋ ಅವರೇ ನಿಜವಾದ ಬಲಶಾಲಿ ರಾಜನಾಗಿರುತ್ತಾನೆ.'' ಚೀನೀ ಪ್ರವಾಸಿ ಯುವಾನ್ ಶ್ವಾಂಗ್ ತನ್ನ ಪ್ರವಾಸ ಕಥನದಲ್ಲಿ ಹರ್ಷವರ್ಧನನ ದಾನಶೀಲತೆಯ ಬಗ್ಗೆ ಬರೆದಿದ್ದಾನೆ. ಸಾಮ್ರಾಟ್ ಹರ್ಷವರ್ಧನನು ಪ್ರತಿ ಐದು ವರ್ಷಗಳಿಗೊಮ್ಮೆ ಪ್ರಯಾಗರಾಜನಲ್ಲಿ ಭವ್ಯವಾದ ದಾನೋತ್ಸವವನ್ನು ಆಯೋಜಿಸುತ್ತಿದ್ದನು ಎಂದು ಅವನು ಹೇಳುತ್ತಾನೆ. ಈ ಉತ್ಸವದಲ್ಲಿ ಅವನು ಪ್ರತಿ ಬಾರಿಯೂ ತನ್ನ ಬಳಿಯಿರುವ ಎಲ್ಲಾ ಆಸ್ತಿ ಮತ್ತು ಸಂಪತ್ತನ್ನು ದಾನ ಮಾಡುತ್ತಿದ್ದನು.

ಹರ್ಷವರ್ಧನನ ಈ ದಾನಧರ್ಮವು ಎಷ್ಟು ಪ್ರಸಿದ್ಧವಾಯಿತೆಂದರೆ, ಇಂದು ಕೂಡ ಅವನನ್ನು 'ದಾನಶೂರ' ಸಾಮ್ರಾಟ್ ಎಂದು ಗುರುತಿಸಲಾಗುತ್ತದೆ.

ದಕ್ಷಿಣ ಭಾರತದಲ್ಲಿದ್ದ ಚಾಲುಕ್ಯ ಸಾಮ್ರಾಜ್ಯದೊಂದಿಗೆ ಹರ್ಷವರ್ಧನನ ಸಂಘರ್ಷ ನಡೆಯಿತು. ಚಾಲುಕ್ಯರ ರಾಜ ಎರಡನೇ ಪುಲಕೇಶಿಯು ಅವನ ದಕ್ಷಿಣ ಭಾರತದ ಪ್ರವೇಶವನ್ನು ತಡೆದನು. ಇದರಿಂದಾಗಿ ಹರ್ಷವರ್ಧನನ ಸಾಮ್ರಾಜ್ಯವು ಗಂಗಾ ನದಿಯ ಕಣಿವೆಯ ಪ್ರದೇಶಕ್ಕೆ ಮಾತ್ರ ಸೀಮಿತವಾಯಿತು. ಅವನ ಮರಣದ ನಂತರ ವರ್ಧನ ಸಾಮ್ರಾಜ್ಯದ ಅವನತಿಯಾಯಿತು.



### ಮಾಡಿ ನೋಡಿ.

ಒಂದು ನಕ್ಷೆ ಪುಸ್ತಕವನ್ನು ತಯಾರಿಸಿ. ಪ್ರತಿಯೊಂದು ಮನೆತನವನ್ನು (ವಂಶವನ್ನು) ತೋರಿಸಲು ಸ್ಟೆನ್ಸಿಲ್ ಸಹಾಯದಿಂದ ಭಾರತದ ನಕ್ಷೆಯನ್ನು ಬಿಡಿಸಿ. ಪ್ರತಿ ಮನೆತನದ ಪ್ರದೇಶಕ್ಕೆ ಪ್ರತ್ಯೇಕ ಬಣ್ಣವನ್ನು ನೀಡಿ ಮತ್ತು ಅವುಗಳ ರಾಜಧಾನಿ, ಪ್ರಮುಖ ಸ್ಥಳಗಳು, ವ್ಯಾಪಾರ ಮಾರ್ಗಗಳಿಗಾಗಿ ಕೆಲವು ಚಿಹ್ನೆಗಳನ್ನು ಬಳಸಿ.



## ಸ್ವಾಧ್ಯಾಯ

**ಪ್ರ. 1 ಅ) ಒಂದು ಪದದಲ್ಲಿ ಉತ್ತರಿಸಿ.**

1. ಮೌರ್ಯ ಸೈನ್ಯದ ಸೇನಾಪತಿ.
2. ಕಣ್ವ ವಂಶದ ಸ್ಥಾಪಕ.
3. ಬೌದ್ಧ ಭಿಕ್ಷು ನಾಗಸೇನ ಮತ್ತು ಮಿಲಿಂದ ನಡುವಿನ ಸಂವಾದದ ಗ್ರಂಥ.
4. ಭಾರತೀಯ ಕಾಲಗಣನೆಯ ಒಂದು ಪ್ರಮುಖ ಪದ್ಧತಿ.

**ಬ) ಯಾರು ಎಂದು ಬರೆಯಿರಿ.**

1. ಇವರನ್ನು 'ತ್ರಿಸಮುದ್ರತೋಯಪೀತವಾಹನ' ಎಂದು ಕರೆಯಲಾಗುತ್ತದೆ.
2. ಇವರ ಆಳ್ವಿಕೆಯಲ್ಲಿ ನಾಲ್ಕನೇ ಬೌದ್ಧ ಧರ್ಮ ಸಮ್ಮೇಳನ ನಡೆಯಿತು.
3. ಇವರನ್ನು ಗುಪ್ತ ವಂಶದ ಸ್ಥಾಪಕ ಎಂದು ಪರಿಗಣಿಸಲಾಗುತ್ತದೆ.
4. ಇವರು ಪ್ರತಿ ಐದು ವರ್ಷಗಳಿಗೊಮ್ಮೆ ತಮ್ಮಲ್ಲಿದ್ದ ಎಲ್ಲಾ ಸಂಪತ್ತನ್ನು ದಾನ ಮಾಡುತ್ತಿದ್ದರು.
5. ಇವರು ಹರ್ಷವರ್ಧನನನ್ನು ಸೋಲಿಸಿ ವರ್ಧನ ಸಾಮ್ರಾಜ್ಯದ ದಕ್ಷಿಣದ ವಿಸ್ತರಣೆಯನ್ನು ತಡೆದರು.

**ಪ್ರ.2 ಅ) ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**




**ಬ) ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.**

1. ಸಾಮ್ರಾಟ್ ಅಶೋಕನ ನಂತರ ಮೌರ್ಯ ಸಾಮ್ರಾಜ್ಯದಲ್ಲಿ ಅಸ್ಥಿರತೆ ಹೆಚ್ಚಾಗತೊಡಗಿತು.
2. ವಸುದೇವ ಕಣ್ವನು ಕಣ್ವ ಮನೆತನದ ಸ್ಥಾಪಕನಾಗಿದ್ದನು.
3. ಮೌರ್ಯ ಸೈನ್ಯದ ಸೇನಾಪತಿ ಪುಷ್ಯಮಿತ್ರ ಶುಂಗನು ಅಧಿಕಾರವನ್ನು ವಶಪಡಿಸಿಕೊಂಡನು.
4. ದೇವಭೂತಿಯು ಶುಂಗ ಮನೆತನದ ಕೊನೆಯ ರಾಜನಾಗಿದ್ದನು.

**ಪ್ರ.3 ಅ) ಸಂಕ್ಷಿಪ್ತವಾಗಿ ಮಾಹಿತಿ ಬರೆಯಿರಿ.**

1. ಇಂಡೋ-ಗ್ರೀಕ್ ರಾಜರ ನಾಣ್ಯಗಳು.
2. ಕುಶಾಣ ಅರಸರ ಮೇಲಿನ ವಿವಿಧ ಸಾಂಸ್ಕೃತಿಕ ಪ್ರವಾಹಗಳ ಪ್ರಭಾವ.

**ಬ) ಕಾರಣಗಳನ್ನು ಬರೆಯಿರಿ.**

1. ಪ್ರಾಚೀನ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರಯಾಣಿಕರು ಬರೆದ ಪ್ರವಾಸ ಕಥನಗಳು ಇತಿಹಾಸದ ಪ್ರಮುಖ ಆಧಾರಗಳಾಗಿವೆ.
2. ಗುಪ್ತರ ಕಾಲವನ್ನು ಪ್ರಾಚೀನ ಭಾರತದ 'ಸುವರ್ಣ ಯುಗ' ಎಂದು ಪರಿಗಣಿಸಲಾಗುತ್ತದೆ.

**ಕೃತಿ (ಚಟುವಟಿಕೆ)**

ನೀವು ನಿಮ್ಮ ಪೋಷಕರೊಂದಿಗೆ ಪ್ರವಾಸಕ್ಕೆ ಹೋದಾಗ ಅದರ ಬಗ್ಗೆ ಈ ಕೆಳಗಿನ ಅಂಶಗಳನ್ನು ದಾಖಲಿಸಿ.

ಉದಾಹರಣೆಗೆ:

- ಯಾವ ವಾಹನದ ಮೂಲಕ ಅಲ್ಲಿಗೆ ಹೋಗಿದ್ದೀರಿ?
- ಅಲ್ಲಿ ಏನೇನು ನೋಡಿದಿರಿ?
- ಭೌಗೋಳಿಕ ವೈಶಿಷ್ಟ್ಯಗಳು.
- ಆ ಸ್ಥಳದ ಕಲೆ, ಭಾಷೆ ಮತ್ತು ಆಹಾರ

**ಉಪಕ್ರಮ**

- ಶಾತವಾಹನ ಕಾಲದ ಐತಿಹಾಸಿಕ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿ.
- ಚಲಾವಣೆಯಲ್ಲಿರುವ ನಾಣ್ಯ/ನೋಟುಗಳು ಆ ದೇಶದ ವೈಶಿಷ್ಟ್ಯಗಳು ಮತ್ತು ಧೋರಣೆಗಳನ್ನು ಪ್ರತಿಬಿಂಬಿಸುತ್ತವೆ. ಭಾರತದ ಕರೆನ್ಸಿ ನೋಟುಗಳನ್ನು ಗಮನಿಸಿ ಅವುಗಳ ಮೇಲಿರುವ ವೈಶಿಷ್ಟ್ಯಗಳನ್ನು ಬರೆಯಿರಿ.

***

# 9 ಪ್ರಾಚೀನ ಭಾರತದ ಸಾಂಸ್ಕೃತಿಕ ಪರಂಪರೆ




9.1. ಪ್ರಾಚೀನ ಭಾರತದ ಸಾಂಸ್ಕೃತಿಕ ಜೀವನ.

9.2. ಪ್ರಾಚೀನ ಭಾರತದ ವ್ಯಾಪಾರ, ವ್ಯವಸಾಯ ಮತ್ತು ಆರ್ಥಿಕ ಜೀವನ.

9.3. ಪ್ರಾಚೀನ ಭಾರತದ ವೈದ್ಯಕೀಯ ಶಾಸ್ತ್ರ.

9.4. ಮಹಾರಾಷ್ಟ್ರದ ಮಿಶ್ರ ಸಂಸ್ಕೃತಿ.

9.5. ಪ್ರಾಚೀನ ಭಾರತದ ಶಿಕ್ಷಣ ಪದ್ಧತಿ.


ವಿದ್ಯಾರ್ಥಿಗಳೇ, ಪರಂಪರೆಯಿಂದ ನಮಗೆ ಬಂದಿರುವ ಒಂದು ನಿಧಿಯಿದೆ ಎಂದು ಕಲ್ಪಿಸಿಕೊಳ್ಳಿ. ಅದರಲ್ಲಿ ಚಿನ್ನ, ಮುತ್ತು ಅಥವಾ ನಾಣ್ಯಗಳಿಲ್ಲ, ಆದರೂ ಅದು ಅತ್ಯಂತ ಮೌಲ್ಯಯುತವಾಗಿದೆ! ಇಂದು ನಾವು ಈ ಅಮೂಲ್ಯ ನಿಧಿಯ ರಹಸ್ಯವನ್ನು ಬಿಚ್ಚಿಡಲಿದ್ದೇವೆ. ಈ ನಿಧಿಯೇ 'ಭಾರತದ ಸಾಂಸ್ಕೃತಿಕ ಪರಂಪರೆ!'

ಬನ್ನಿ ಹಾಗಾದರೆ, ಈ ನಿಧಿಯ ಪೆಟ್ಟಿಗೆಯನ್ನು ಮೆಲ್ಲನೆ ತೆರೆದು ನೋಡೋಣ ಮತ್ತು ನಮ್ಮ ದೇಶವು ಕಾಪಾಡಿಕೊಂಡು ಬಂದಿರುವ ಕಲೆ, ಪರಂಪರೆ, ನೃತ್ಯ, ಸಂಗೀತ ಮತ್ತು ಪ್ರಾಚೀನ ವಾಸ್ತುಶಿಲ್ಪಗಳ ವಿಶಿಷ್ಟ ಜಗತ್ತನ್ನು ಶೋಧ ಮಾಡೋಣ!



**ಸ್ವಲ್ಪ ಯೋಚಿಸಿ ನೋಡಿ.**

- ನಮ್ಮ ದೇಶದಲ್ಲಿ ವೈವಿಧ್ಯತೆಯಿದೆ ಮತ್ತು ಆ ವೈವಿಧ್ಯತೆಯಲ್ಲಿ ಏಕತೆಯಿದೆ ಎಂದು ಏಕೆ ಹೇಳಲಾಗುತ್ತದೆ?
- ಭಾರತದಲ್ಲಿ ಬೇರೆ ಬೇರೆ ಭಾಷೆ, ನೃತ್ಯ, ಉಡುಗೆ-ತೊಡುಗೆಗಳು, ರೂಢಿಗಳು ಮತ್ತು ಸಂಪ್ರದಾಯಗಳು ಯಾಕಿವೆ?
- ಅಜಂತಾ ಗುಹೆಗಳ ಸುಂದರ ಚಿತ್ರಗಳನ್ನು ನೋಡಿದಾಗ ನಿಮಗೆ ಏನೆನಿಸುತ್ತದೆ?
- ನಲಂದಾ ವಿಶ್ವವಿದ್ಯಾಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಕಲಿಯುತ್ತಿದ್ದರು ಎಂಬುದು ನಿಮಗೆ ತಿಳಿದಿದೆಯೇ?
- ಮಹಾರಾಷ್ಟ್ರದ ಭೂಮಿಯಲ್ಲಿ ಮಿಶ್ರ ಸಂಸ್ಕೃತಿಯು ಬೆಳೆಯಿತು. ಅದಕ್ಕೆ ಕಾರಣಗಳೇನಿರಬಹುದು ಎಂದು ನಿಮಗನಿಸುತ್ತದೆ?

ಇದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಜ್ಞಾನ, ಕಲೆ ಮತ್ತು ಸಂಪ್ರದಾಯಗಳ ಈ ಪರಂಪರೆಯನ್ನು ಅನುಭವಿಸಲು ಸಿದ್ಧರಾಗಿ!

## 9.1. ಪ್ರಾಚೀನ ಭಾರತದ ಸಾಂಸ್ಕೃತಿಕ ಜೀವನ

ಪ್ರಾಚೀನ ಭಾರತದ ಸಾಂಸ್ಕೃತಿಕ ಜೀವನವು ಅತ್ಯಂತ ಸಮೃದ್ಧ ಮತ್ತು ವೈವಿಧ್ಯಮಯವಾಗಿತ್ತು. ಆ ಸಂಸ್ಕೃತಿಯ ಅನೇಕ ಮುಖಗಳಿದ್ದವು. ಅವುಗಳ ಆಧಾರದ ಮೇಲೆ ನಮಗೆ ಭಾರತದ ಧರ್ಮ, ತತ್ತ್ವಜ್ಞಾನ, ಕಲೆ, ಸಾಹಿತ್ಯ, ಹಬ್ಬ-ಹರಿದಿನಗಳು, ಸಾಮಾಜಿಕ ಜೀವನ ಮತ್ತು ದೈನಂದಿನ ವ್ಯವಹಾರಗಳ ದರ್ಶನವಾಗುತ್ತದೆ. ವಿವಿಧ ಭೌಗೋಳಿಕ ಪ್ರದೇಶಗಳ ಪರಿಸ್ಥಿತಿಗೆ ಅನುಗುಣವಾಗಿ ಭಾಷೆ, ಉಡುಗೆ-ತೊಡುಗೆ, ಆಹಾರ ಪದ್ಧತಿ ಮತ್ತು ವಾಸ್ತುಶಿಲ್ಪದ ವಿವಿಧ ಶೈಲಿಗಳು ನಿರ್ಮಾಣವಾದವು. ಇಷ್ಟೊಂದು ವೈವಿಧ್ಯತೆಯಿದ್ದರೂ 'ವಸುಧೈವ ಕುಟುಂಬಕಮ್' ಮತ್ತು 'ಸರ್ವೇ ಭವಂತು ಸುಖಿನಃ' ಎಂಬ ಮೌಲ್ಯಗಳು ನಮ್ಮ ಸಂಸ್ಕೃತಿಯಲ್ಲಿ ಎಷ್ಟು ಆಳವಾಗಿ ಬೇರೂರಿವೆ ಎಂದರೆ ಭಾರತದಲ್ಲಿ ವೈವಿಧ್ಯತೆಯಲ್ಲಿ ಏಕತೆ ಕಂಡುಬರುತ್ತದೆ.

### ■ ವಾಙ್ಮಯ ಮತ್ತು ಸಾಹಿತ್ಯ

ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಮೌಖಿಕ ಪರಂಪರೆಯ ಮೂಲಕ ಬಂದ ಜ್ಞಾನವೇ 'ವಾಙ್ಮಯ' ಮತ್ತು ಲಿಖಿತ ರೂಪದಲ್ಲಿ ನಮಗೆ ಲಭ್ಯವಿರುವುದನ್ನು 'ಸಾಹಿತ್ಯ' ಎಂದು ಕರೆಯುತ್ತಾರೆ. ಇದರಲ್ಲಿ ವೇದಗಳು, ಉಪನಿಷತ್ತುಗಳು, ಪುರಾಣಗಳು, ರಾಮಾಯಣ, ಮಹಾಭಾರತ ಎಂಬ ಮಹಾಕಾವ್ಯಗಳು, ಬೌದ್ಧ ಗ್ರಂಥಗಳು, ಜೈನ ಗ್ರಂಥಗಳು, ಕಾವ್ಯಗಳು, ನಾಟಕಗಳು, ನೀತಿಶಾಸ್ತ್ರ, ತತ್ತ್ವಜ್ಞಾನ ಮತ್ತು ಶಾಸ್ತ್ರೀಯ ಗ್ರಂಥಗಳು ಇವೆಲ್ಲವೂ ಒಳಗೊಂಡಿವೆ.




ಸಾಹಿತ್ಯವು ಜ್ಞಾನ, ತತ್ವಜ್ಞಾನ, ನೈತಿಕ ಮೌಲ್ಯಗಳು, ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಕಲಿಸುವ ಮಾಧ್ಯಮವಾಗಿತ್ತು. ವ್ಯಾಕರಣಕಾರನಾದ ಪಾಣಿನಿಯು 'ಅಷ್ಟಾಧ್ಯಾಯಿ' ಎಂಬ ವ್ಯಾಕರಣ ಗ್ರಂಥವನ್ನು ಬರೆದನು. ಅದರ ಮೇಲೆ ಭಾಷ್ಯ ಬರೆದ 'ಮಹಾಭಾಷ್ಯ' ಎಂಬ ಗ್ರಂಥವನ್ನು ಪತಂಜಲಿಯು ಬರೆದನು. ಮಹಾಭಾರತ ಮತ್ತು ರಾಮಾಯಣದಂತಹ ಮಹಾಕಾವ್ಯಗಳನ್ನು ಸಾಮಾಜಿಕ ಆದರ್ಶಗಳು, ರಾಜಕೀಯ, ಯುದ್ಧಶಾಸ್ತ್ರ ಮತ್ತು ನೈತಿಕ ಮೌಲ್ಯಗಳನ್ನು ಕಲಿಸಲು ಬಳಸಲಾಗುತ್ತಿತ್ತು.



### ನಿಮಗೆ ಗೊತ್ತಿದೆಯೇ?

'ಪಂಚತಂತ್ರವು ನೈತಿಕ ಮೌಲ್ಯಗಳ ಮೇಲೆ ಆಧಾರಿತವಾದ ಪ್ರಾಚೀನ ಭಾರತದ ಒಂದು ಪ್ರಸಿದ್ಧ ಕಥಾಸಂಕಲನವಾಗಿದೆ. ಇದರ ರಚನೆಯನ್ನು ವಿಷ್ಣುಶರ್ಮಾ ಎಂಬುವವರು ಮಾಡಿದ್ದಾರೆ ಎಂದು ನಂಬಲಾಗಿದೆ. ಪಂಚತಂತ್ರದ ಕಥೆಗಳಲ್ಲಿ ಸಿಂಹ, ಹುಲಿ, ಹಂಸ, ಆಮೆ, ಮೊಲದಂತಹ ಪ್ರಾಣಿಗಳು ಪಾತ್ರಗಳ ರೂಪದಲ್ಲಿವೆ. ಆದರೆ ಆ ಕಥೆಗಳ ಮುಖ್ಯ ತಾತ್ಪರ್ಯವು ಮನುಷ್ಯನ ನೈತಿಕ ವರ್ತನೆಯನ್ನು ಉತ್ತಮಗೊಳಿಸುವ ಬಗ್ಗೆ ಮಾರ್ಗದರ್ಶನ ನೀಡುವುದಾಗಿದೆ.

ಈ ಸಂಕಲನದ ಕಥೆಗಳು ಯಾವ ಕಾರಣಕ್ಕಾಗಿ ಹೇಳಲ್ಪಟ್ಟವು ಎಂಬುದಕ್ಕೆ ಒಂದು ಕಥೆಯಿದೆ –

ಪ್ರಾಚೀನ ಭಾರತದಲ್ಲಿ ಅಮರಶಕ್ತಿ ಎಂಬ ಹೆಸರಿನ ಒಬ್ಬ ರಾಜನಿದ್ದನು. ಅವನಿಗೆ ಮೂವರು ಪುತ್ರರಿದ್ದರು, ಆದರೆ ಅವರಿಗೆ ಓದಿನಲ್ಲಿ ಸ್ವಲ್ಪವೂ ಆಸಕ್ತಿ ಇರಲಿಲ್ಲ, ರಾಜನಿಗೆ ಅವರ ಭವಿಷ್ಯದ ಬಗ್ಗೆ ಚಿಂತೆಯಾಯಿತು. ಆದ್ದರಿಂದ ಅವನು ವಿದ್ವಾಂಸ ಶಿಕ್ಷಕ ವಿಷ್ಣುಶರ್ಮಾ ಅವರನ್ನು ಕರೆಸಿ, ರಾಜಕುಮಾರರಿಗೆ ಬುದ್ಧಿವಂತಿಕೆ, ವ್ಯವಹಾರ ಕೌಶಲ ಮತ್ತು ಜೀವನದ ಪಾಠಗಳನ್ನು ಕಲಿಸಲು ವಿನಂತಿಸಿದನು. ವಿಷ್ಣುಶರ್ಮಾ ಆ ಮಕ್ಕಳನ್ನು ಜಾಣರನ್ನಾಗಿ ಮಾಡಲು ಒಪ್ಪಿಕೊಂಡರು. ಅವರಿಗೆ ಕಲಿಸಲು ವಿಭಿನ್ನ ತಂತ್ರವನ್ನು ಬಳಸಿದರು. ಕೇವಲ ಗ್ರಂಥಗಳ ಮೂಲಕವಲ್ಲದೆ, ಪ್ರಾಣಿಗಳ ಮೇಲೆ ಆಧಾರಿತವಾದ ಸಣ್ಣ ಸಣ್ಣ ಕಥೆಗಳನ್ನು ಸಿದ್ಧಪಡಿಸಿದರು. ಈ ಕಥೆಗಳಲ್ಲಿ ಚಾತುರ್ಯ, ಮೈತ್ರಿ, ಧೈರ್ಯ, ನೀತಿ, ಸಂಕಷ್ಟದಿಂದ ಪಾರಾಗುವ ದಾರಿ, ನಂಬಿಕೆ ಮತ್ತು ವ್ಯವಹಾರ ಕೌಶಲದಂತಹ ಪಾಠಗಳು ಅಡಗಿದ್ದವು. ರಾಜಕುಮಾರರು ಈ ಕಥೆಗಳಲ್ಲಿ ಎಷ್ಟು ಮಗ್ನರಾದರು ಎಂದರೆ, ನಗುನಗುತ್ತಲೇ ಅವರಿಗೆ ಜೀವನದ ಮಹತ್ವದ ಪಾಠಗಳು ಸುಲಭವಾಗಿ ದೊರೆತವು. ಕೆಲವೇ ತಿಂಗಳುಗಳಲ್ಲಿ ಅವರು ಸುಜ್ಞರು, ತಿಳುವಳಿಕೆಯುಳ್ಳವರು ಮತ್ತು ರಾಜ್ಯಭಾರಕ್ಕೆ ಯೋಗ್ಯರಾದರು.

ಈ ಎಲ್ಲಾ ಕಥೆಗಳ ಸಂಗ್ರಹವು 'ಪಂಚತಂತ್ರ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು, ಅನೇಕ ಶತಮಾನಗಳಿಂದ ಮತ್ತು ಅನೇಕ

ಸ್ಥಳಗಳಲ್ಲಿ ಈ ಕಥೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ಆಸಕ್ತಿಯಿಂದ ಓದಲಾಗುತ್ತಿದೆ ಮತ್ತು ಹೇಳಲಾಗುತ್ತಿದೆ. ಪಂಚತಂತ್ರವು ಐವತ್ತಕ್ಕಿಂತ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ, ಹಾಗೆಯೇ ಜಾತಕ ಕಥೆಗಳು ಸರಳ ಭಾಷೆಯಲ್ಲಿ, ಪ್ರಾಣಿಗಳು ಮತ್ತು ಮನುಷ್ಯರ ಪಾತ್ರಗಳ ಮೂಲಕ ಸರಿ-ತಪ್ಪುಗಳ ಅರಿವನ್ನು ಮೂಡಿಸುತ್ತವೆ.



**ಮಾಡಿ ನೋಡಿ.**

ನಿಮಗೆ ಪಂಚತಂತ್ರದ ಅಥವಾ ಜಾತಕ ಕಥೆಗಳ ಯಾವುದಾದರೂ ಕಥೆ ಗೊತ್ತಿದೆಯೇ? ಇಲ್ಲದಿದ್ದರೆ ಗ್ರಂಥಾಲಯದ ಪುಸ್ತಕಗಳಿಂದ ಅವುಗಳನ್ನು ಓದಿ ಮತ್ತು ತರಗತಿಯಲ್ಲಿ ಪ್ರಸ್ತುತಪಡಿಸಿ.

| ಪ್ರಾಚೀನ ಭಾರತದ ನಾಟ್ಯ ಕಲೆ | ಪ್ರಾಚೀನ ಭಾರತದ ಸಂಗೀತ ಕಲೆ | ಪ್ರಾಚೀನ ಭಾರತದ ನೃತ್ಯಕಲೆ |
|---|---|---|
| ✻ ಪ್ರಾಚೀನ ಭಾರತದ ನಾಟಕ ಕಲೆ ಬಹಳ ಮುಂದುವರಿದಿತ್ತು. ಭರತಮುನಿಗಳು 'ನಾಟ್ಯಶಾಸ್ತ್ರ' ಎಂಬ ಗ್ರಂಥವನ್ನು ಬರೆದಿದ್ದಾರೆ. ಈ ಗ್ರಂಥದಲ್ಲಿ ನೃತ್ಯ, ನಾಟಕ, ಅಭಿನಯ, ಸಂಗೀತ, ರಂಗಮಂಚ, ನವರಸಗಳು, ಭಾವಗಳು, ವೇಷಭೂಷಣಗಳು, ಅಲಂಕಾರ ಮತ್ತು ಪ್ರೇಕ್ಷಕರೊಂದಿಗೆ ಸಂವಾದದಂತಹ ನಾಟಕ ಕಲೆಯ ಎಲ್ಲಾ ಅಂಶಗಳನ್ನು ವಿವರವಾಗಿ ಚರ್ಚಿಸಲಾಗಿದೆ.<br><br>✻ ಈ ಕಾಲದ ಕೆಲವು ಪ್ರಸಿದ್ಧ ನಾಟಕಗಳು:<br>– ಮೌರ್ಯ ಕಾಲದ ಭಾಸ ಹದಿಮೂರು ನಾಟಕಗಳನ್ನು ಬರೆದಿದ್ದಾರೆ, ಅವುಗಳಲ್ಲಿ 'ಸ್ವಪ್ನವಾಸವದತ್ತ' ಬಹಳ ಪ್ರಸಿದ್ಧವಾಗಿದೆ.<br>– ಮೌರ್ಯೋತ್ತರ ಕಾಲದಲ್ಲಿ ಅಶ್ವಘೋಷ ಎಂಬುವವರು 'ಶಾರಿಪುತ್ರ ಪ್ರಕರಣ' ಎಂಬ ನಾಟಕ ಬರೆದಿದ್ದಾರೆ.<br>– ಗುಪ್ತರ ಕಾಲದ ಸಾಹಿತಿ ಕಾಳಿದಾಸ ಒಬ್ಬ ಶ್ರೇಷ್ಠ ಕವಿ ಮತ್ತು ನಾಟಕಕಾರರಾಗಿದ್ದರು. ಅವರು 'ಶಾಕುಂತಲ', 'ಮಾಳವಿಕಾಗ್ನಿಮಿತ್ರ' ಮತ್ತು 'ವಿಕ್ರಮೋರ್ವಶೀಯ' ಎಂಬ ಮೂರು ವಿಶ್ವಪ್ರಸಿದ್ಧ ನಾಟಕಗಳನ್ನು ಬರೆದಿದ್ದಾರೆ.<br>– ಶೂದ್ರಕನು 'ಮೃಚ್ಛಕಟಿಕ' ಮತ್ತು ವಿಶಾಖದತ್ತನು 'ಮುದ್ರಾರಾಕ್ಷಸ' ಎಂಬ ನಾಟಕಗಳನ್ನು ರಚಿಸಿದ್ದಾರೆ.<br>– ಹರ್ಷವರ್ಧನನು ಸ್ವತಃ 'ರತ್ನಾವಳಿ', 'ಪ್ರಿಯದರ್ಶಿಕಾ' ಮತ್ತು 'ನಾಗಾನಂದ' ಎಂಬ ಮೂರು ನಾಟಕಗಳನ್ನು ರಚಿಸಿದ್ದಾನೆ ಎಂದು ನಂಬಲಾಗಿದೆ. | ✻ ಭಾರತೀಯ ಸಂಗೀತ ಪರಂಪರೆಯ ಉಗಮವು ಸಾಮವೇದದಲ್ಲಿ.<br><br>✻ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರ – ಇವುಗಳನ್ನು ನಾಲ್ಕು ಉಪವೇದಗಳೆಂದು ಪರಿಗಣಿಸಲಾಗುತ್ತದೆ. ಅವುಗಳಲ್ಲಿ ಗಾಂಧರ್ವವೇದವು ಭಾರತೀಯ ಸಂಗೀತ, ನೃತ್ಯ ಮತ್ತು ವಾದ್ಯಗಳ ಮೂಲವೆಂದು ನಂಬಲಾಗಿದೆ.<br><br>✻ ಶಾರಂಗದೇವ ಎಂಬ ಸಂಗೀತಜ್ಞರು ಬರೆದ 'ಸಂಗೀತ ರತ್ನಾಕರ' ಸಂಗೀತ ವಿಷಯದ ಮೇಲಿನ ಅತ್ಯಂತ ಪ್ರಸಿದ್ಧ ಗ್ರಂಥವಾಗಿದೆ. | ✻ ವೈದಿಕ ಸಾಹಿತ್ಯದ ಕಾಲದಿಂದಲೂ ಭಾರತೀಯ ಸಾಹಿತ್ಯದಲ್ಲಿ ನೃತ್ಯಕ್ಕೆ ಸಂಬಂಧಿಸಿದ ಉಲ್ಲೇಖಗಳು ಕಂಡುಬರುತ್ತವೆ.<br><br>✻ ಭಾರತದ ಅನೇಕ ಪ್ರದೇಶಗಳಲ್ಲಿ ವಿವಿಧ ನೃತ್ಯ ಪ್ರಕಾರಗಳು ಸ್ವತಂತ್ರವಾಗಿ ಬೆಳೆದು ಬಂದಿವೆ.<br><br>✻ ಭಾರತೀಯ ನೃತ್ಯಕಲೆಯಲ್ಲಿ ಕಥಕ್, ಕಥಕ್ಕಳಿ, ಭರತನಾಟ್ಯಂ, ಮಣಿಪುರಿ, ಒಡಿಸ್ಸಿ , ಕುಚಿಪುಡಿ ಮತ್ತು ಮೋಹಿನಿಯಾಟ್ಟಂ ಎಂಬ ಒಟ್ಟು ಏಳು ಶಾಸ್ತ್ರೀಯ ನೃತ್ಯ ಪರಂಪರೆಗಳಿವೆ ಎಂದು ಪರಿಗಣಿಸಲಾಗಿದೆ.<br><br>✻ ಹಾಗೆಯೇ, ಪ್ರಾಚೀನ ಭಾರತದಲ್ಲಿ ವಿವಿಧ ಪ್ರದೇಶಗಳಲ್ಲಿ ಜಾನಪದ ನೃತ್ಯಗಳನ್ನುಪ್ರದರ್ಶಿಸಲಾಗುತ್ತಿತ್ತು. ಹಬ್ಬ, ಉತ್ಸವ ಮತ್ತು ಶುಭ ಸಂದರ್ಭಗಳಲ್ಲಿ ಸಂತೋಷ ವ್ಯಕ್ತಪಡಿಸಲು ನೃತ್ಯ ಮಾಡಲಾಗುತ್ತಿತ್ತು. ಜಾನಪದ ನೃತ್ಯಗಳು ಸ್ವಾಭಾವಿಕವಾಗಿರುತ್ತವೆ ಮತ್ತು ಕಾಲಾನಂತರದಲ್ಲಿ ಅವುಗಳಿಂದಲೇ ಲೋಕಪರಂಪರೆಗಳು ಸಿದ್ಧವಾಗುತ್ತವೆ. |

## ■ ಕಲೆ ಮತ್ತು ವಾಸ್ತುಶಿಲ್ಪ

ಪ್ರಾಚೀನ ಭಾರತದ ಶಿಲ್ಪಕಲೆ ಮತ್ತು ಚಿತ್ರಕಲೆಯಲ್ಲಿ ಕಲಾವಿದರ ಕೌಶಲ್ಯ ಹಾಗೂ ಸೃಜನಶೀಲತೆ ಕಂಡುಬರುತ್ತದೆ. ಅಜಂತಾ ಗುಹೆಗಳಲ್ಲಿಯ ಭಿತ್ತಿಚಿತ್ರಗಳು ಜಗತ್ಪ್ರಸಿದ್ಧವಾಗಿವೆ. ಈ ಚಿತ್ರಗಳಿಗಾಗಿ ವಿವಿಧ ಸಸ್ಯಗಳು, ಮಣ್ಣು ಮತ್ತು ಕಲ್ಲುಗಳಿಂದ ತಯಾರಿಸಿದ ನೈಸರ್ಗಿಕ ಬಣ್ಣಗಳನ್ನು ಬಳಸಲಾಗಿದೆ. ಚಿತ್ರಗಳಲ್ಲಿನ ವ್ಯಕ್ತಿಗಳ ಆಭರಣಗಳು, ಬಟ್ಟೆಗಳು ಮತ್ತು ಕೇಶವಿನ್ಯಾಸದಲ್ಲಿ ಅತ್ಯಂತ ಸೂಕ್ಷ್ಮ ಮತ್ತು ಸುಂದರವಾದ ವಿವರಗಳನ್ನು ತೋರಿಸಲಾಗಿದೆ. ಅವುಗಳ ಮೂಲಕ ಅಂದಿನ ಜೀವನಶೈಲಿ, ನೃತ್ಯ-ವಾದ್ಯಗಳು, ಮರ-ಗಿಡಗಳು ಮತ್ತು ಪಕ್ಷಿಗಳ ಸುಂದರ ಚಿತ್ರಣವು ಕಂಡುಬರುತ್ತದೆ. ವೆರೂಳ ಗುಹೆಗಳಲ್ಲಿ ಹಿಂದೂ, ಬೌದ್ಧ ಮತ್ತು ಜೈನ ಗುಹೆಗಳನ್ನು ನೋಡಬಹುದು. ವೆರುಳನಲ್ಲಿರುವ ಕೈಲಾಸ ದೇವಾಲಯವು ವಿಶ್ವದ ಅದ್ಭುತಗಳಲ್ಲಿ ಒಂದಾಗಿದೆ. ಒಂದೇ ಬೃಹತ್ ಬಂಡೆಯನ್ನು ಕೆತ್ತಿ ನಿರ್ಮಿಸಲಾದ ಈ ದೇವಾಲಯದ ಕೆಲಸವು ಮೇಲಿನಿಂದ (ಕಳಸದಿಂದ) ಪ್ರಾರಂಭವಾಗಿ ತಳಭಾಗದವರೆಗೆ ಸಾಗಿದೆ. ಇದನ್ನು ನೋಡುವ ಪ್ರೇಕ್ಷಕರು ಆಶ್ಚರ್ಯಚಕಿತರಾಗುತ್ತಾರೆ. ದೇವಾಲಯದಲ್ಲಿ ಸುಂದರವಾದ ಶಿಲ್ಪಗಳು, ಎತ್ತರದ ಕಂಬಗಳು, ನಂದಿ ಮಂಟಪ ಇತ್ಯಾದಿ ಅತ್ಯುತ್ತಮ ಕೆತ್ತನೆ ಕೆಲಸಗಳನ್ನು ಕಾಣಬಹುದು. ಹಾಗೆಯೇ ಈ ಶಿಲ್ಪಗಳಲ್ಲಿ ವಿವಿಧ ದೇವತೆಗಳ ಮತ್ತು ಪೌರಾಣಿಕ ಕಥೆಗಳ ದೃಶ್ಯಗಳನ್ನು ಕೆತ್ತಲಾಗಿದೆ.



ವೆರೂಳ ಕೈಲಾಸ ಮಂದಿರ

ಬೌದ್ಧ ಗುಹೆಗಳಲ್ಲಿ ಸ್ತೂಪ, ಚೈತ್ಯಗೃಹ ಮತ್ತು ವಿಹಾರ ಇವುಗಳು ಅಂದಿನ ಕಾಲದ ವಾಸ್ತುಶಿಲ್ಪದ ಪ್ರಮುಖ ಅಂಶಗಳಾಗಿವೆ. ಸ್ವತಂತ್ರವಾಗಿ ನಿರ್ಮಿಸಲಾದ ಸ್ತೂಪಗಳು ಭಾರತೀಯ ವಾಸ್ತುಕಲೆಯ ಮತ್ತೊಂದು ವೈಶಿಷ್ಟ್ಯವಾಗಿದೆ. ಸಾಮ್ರಾಟ್ ಅಶೋಕನ ಕಾಲದಲ್ಲಿ ಸಾಂಚಿಯಲ್ಲಿ ಸ್ತೂಪವನ್ನು ನಿರ್ಮಿಸಲಾಯಿತು. ಅಶೋಕನ ನಂತರದ ಶುಂಗ ಕಾಲದಲ್ಲಿ ಸಾಂಚಿ ಸ್ತೂಪವನ್ನು ಮತ್ತಷ್ಟು ವಿಸ್ತರಿಸಲಾಯಿತು. ಆ ಕಾಲದಲ್ಲಿ ಸ್ತೂಪದ ಸುತ್ತಲೂ ಭವ್ಯವಾದ ತೋರಣಗಳನ್ನು (ದ್ವಾರಗಳನ್ನು)



ಸಾಂಚಿ ಸ್ತೂಪ

ನಿರ್ಮಿಸಲಾಯಿತು. ಅವುಗಳ ಮೇಲೆ ಸಿಂಹ, ಆನೆ ಮುಂತಾದ ಆಕೃತಿಗಳನ್ನು ಕೆತ್ತಲಾಗಿದೆ. ಹಾಗೆಯೇ ಗೌತಮ ಬುದ್ಧನ ಜೀವನದ ಪ್ರಸಂಗಗಳನ್ನು ಕೆತ್ತಲಾಗಿದೆ.

ಚೈತ್ಯಗೃಹದ ಸಮೀಪದಲ್ಲೇ ಬೌದ್ಧ ಭಿಕ್ಷುಗಳ ವಾಸಕ್ಕಾಗಿ ಗುಹೆಗಳನ್ನು ಕೊರೆಯಲಾಗುತ್ತಿತ್ತು. ಅವುಗಳನ್ನು 'ವಿಹಾರ' ಎಂದು ಕರೆಯಲಾಗುತ್ತದೆ. ಮಹಾರಾಷ್ಟ್ರದ 'ಭಾಜೆ' ಇಲ್ಲಿನ ವಿಹಾರವು ಅತ್ಯಂತ ಪ್ರಾಚೀನವೆಂದು ಪರಿಗಣಿಸಲಾಗಿದೆ. ನಾಸಿಕ, ಬೆಡಸೆ, ಅಜಂತಾ ಮುಂತಾದ ಸ್ಥಳಗಳ ವಿಹಾರಗಳೂ ಪ್ರಸಿದ್ಧವಾಗಿವೆ. ಒಡಿಶಾದ ಖಂಡಗಿರಿ ಮತ್ತು ಉದಯಗಿರಿಯಲ್ಲಿರುವ ಜೈನ ಗುಹೆಗಳು ಸಹ ಪ್ರಸಿದ್ಧವಾಗಿವೆ.



### ನಿಮಗೆ ತಿಳಿದಿದೆಯೇ?

ದೆಹಲಿಯ ಮೆಹರೌಲಿ ಯಲ್ಲಿರುವ ಲೋಹಸ್ತಂಭವು ಪ್ರಾಚೀನ ಭಾರತದ ಲೋಹಶಾಸ್ತ್ರದ ಜ್ಞಾನವು ಎಷ್ಟು ಪ್ರಗತಿ ಹೊಂದಿತ್ತು ಎಂಬುದಕ್ಕೆ ಒಂದು ವಿಶಿಷ್ಟ ಉದಾಹರಣೆಯಾಗಿದೆ. ಈ ಸ್ತಂಭವನ್ನು ಗುಪ್ತ ಸಾಮ್ರಾಟ ಎರಡನೇ ಚಂದ್ರಗುಪ್ತ (ವಿಕ್ರಮಾದಿತ್ಯ)ನ ಕಾಲದಲ್ಲಿ ಸ್ಥಾಪಿಸಲಾಯಿತು. ಈ ಸ್ತಂಭದ ವಿಶೇಷತೆಯೆಂದರೆ ಇದು 1,600 ವರ್ಷಗಳಿಗಿಂತಲೂ ಹಳೆಯದಾಗಿದ್ದರೂ, ಇಂದಿಗೂ ಇದಕ್ಕೆ ತುಕ್ಕು ಹಿಡಿದಿಲ್ಲ, ಇದು ಇಂದಿಗೂ ವಿಜ್ಞಾನಿಗಳಿಗೆ ಒಂದು ರಹಸ್ಯವಾಗಿಯೇ ಉಳಿದಿದೆ.



ಲೋಹಸ್ತಂಭ

## 9.2. ಪ್ರಾಚೀನ ಭಾರತದ ವ್ಯಾಪಾರ, ವ್ಯವಸಾಯ ಮತ್ತು ಆರ್ಥಿಕ ಜೀವನ

ಆ ಕಾಲದಲ್ಲಿ ಕೃಷಿಯು ಮುಖ್ಯ ವೃತ್ತಿಯಾಗಿತ್ತು. ಜನರ ಆಹಾರ, ಬಟ್ಟೆ ಮತ್ತು ದಿನನಿತ್ಯದ ಅಗತ್ಯಗಳನ್ನು ಪೂರೈಸಲು ಕೃಷಿಯು ಪ್ರಮುಖವಾಗಿತ್ತು. ಗಂಗಾ, ಯಮುನಾ, ಗೋದಾವರಿ ಮತ್ತು ಕೃಷ್ಣಾ ನದಿಗಳ ಬಯಲು ಪ್ರದೇಶಗಳು ಕೃಷಿಗೆ ಪೂರಕವಾಗಿದ್ದವು. ದೇಶದ ಒಳಗಿನ ಮತ್ತು ಅಂತರಾಷ್ಟ್ರೀಯ ವ್ಯಾಪಾರವು ಸಮುದ್ರ ಮತ್ತು ಭೂಮಾರ್ಗಗಳ ಮೂಲಕ ಅಭಿವೃದ್ಧಿ ಹೊಂದಿತು. ಪ್ರಾಚೀನ ಭಾರತದಲ್ಲಿ ಧಾನ್ಯಗಳ ಜೊತೆಗೆ ಬಟ್ಟೆ, ಮಸಾಲೆ ಪದಾರ್ಥಗಳು, ಲೋಹಗಳು, ಆಭರಣಗಳು, ಆನೆದಂತ ಮತ್ತು ಅಮೂಲ್ಯ ರತ್ನಗಳ ದೊಡ್ಡ ಪ್ರಮಾಣದ ವ್ಯಾಪಾರ ನಡೆಯುತ್ತಿತ್ತು. ವಿಶೇಷವಾಗಿ ಮಹಾರಾಷ್ಟ್ರದ ಶಾತವಾಹನರ ಕಾಲದಲ್ಲಿ ರೋಮನ್ ಸಾಮ್ರಾಜ್ಯದೊಂದಿಗೆ ವ್ಯಾಪಾರ ಸಂಬಂಧಗಳಿದ್ದವು. ಮಸಾಲೆ ಪದಾರ್ಥಗಳು, ರೇಷ್ಮೆ ಬಟ್ಟೆ, ಮಣಿಗಳು ಮತ್ತು ಆಭರಣಗಳಂತಹ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿತ್ತು. ಹೊಸ ಮಾರುಕಟ್ಟೆಗಳು ನಿರ್ಮಾಣವಾದವು ಮತ್ತು ನಾಣ್ಯ ವ್ಯವಸ್ಥೆಯನ್ನು ಯೋಜಿಸಲಾಗಿತ್ತು. ಅಂತೆಯೇ, ಸರಿಯಾದ ತೆರಿಗೆ ನೀತಿಯನ್ನು ಜಾರಿಗೆ ತರಲಾಗಿತ್ತು. ಇದರಿಂದ ರಾಜ್ಯದ ಆರ್ಥಿಕತೆಯು ಬಲವಾಯಿತು ಮತ್ತು ಸ್ಥಿರವಾಯಿತು. ಕೃಷಿಯ ಹೊರತಾಗಿ ಬಟ್ಟೆ ಉದ್ಯಮ, ಕಬ್ಬಿಣ ಮತ್ತು ತಾಮ್ರದಂತಹ ಲೋಹದ ವಸ್ತುಗಳ ಉತ್ಪಾದನೆಯಂತಹ ಉದ್ಯಮಗಳು ಆರ್ಥಿಕ ಜೀವನದಲ್ಲಿ ಮುಖ್ಯವಾಗಿದ್ದವು. ವ್ಯಾಪಾರ ಮಾರ್ಗಗಳಲ್ಲಿ ಬಂದರುಗಳು, ಮಾರುಕಟ್ಟೆಗಳು ಮತ್ತು ನಗರಗಳು ಅಭಿವೃದ್ಧಿ ಹೊಂದಿದವು. ಈ ಎಲ್ಲಾ ಅಂಶಗಳಿಂದಾಗಿ ಪ್ರಾಚೀನ ಭಾರತದ ಆರ್ಥಿಕತೆಯು ಸದೃಢವಾಗಿತ್ತು. ಅದರ ಪ್ರಭಾವವು ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದ ಮೇಲೆ ಕಂಡುಬರುತ್ತಿತ್ತು.



**ನಿಮಗೆ ಗೊತ್ತಿದೆಯೇ?**

ಶಾತವಾಹನರ ಕಾಲದಿಂದ ದಕ್ಷಿಣದಲ್ಲಿ ವ್ಯಾಪಾರ ಮತ್ತು ಉದ್ಯಮಗಳ ಅಭಿವೃದ್ಧಿ ಆರಂಭವಾಯಿತು. ಕೃಷಿಯಲ್ಲಿನ ಸಮೃದ್ಧಿ, ಬೆಳೆಯುತ್ತಿರುವ ಉದ್ಯಮಗಳು ಮತ್ತು ಮನೆಗಳ ನಿರ್ಮಾಣದ ಕಾರಣದಿಂದ ದಕ್ಷಿಣದಲ್ಲಿ ಕ್ರಿಸ್ತಪೂರ್ವ ಒಂದನೇ ಶತಮಾನದಲ್ಲಿ ಶಾತವಾಹನರ ಆಳ್ವಿಕೆಯಲ್ಲಿ ಅನೇಕ ನಗರಗಳು ಉದಯಿಸಿದವು. ಉದಾಹರಣೆಗೆ: ಪ್ರತಿಷ್ಠಾನ (ಪೈಠಣ), ತಗರ (ತೇರ), ನಾಸಿಕ (ನಾಸಿಕ), ಕರಹಾಟಕ (ಕರಾಡ) ಇತ್ಯಾದಿ. ಇಂತಹ ಕೋಟೆಗಳಿಂದ ಆವೃತವಾದ ನಗರಗಳು ಅಸ್ತಿತ್ವಕ್ಕೆ ಬಂದವು. ಈ ನಗರಗಳ ಉತ್ಖನನದಲ್ಲಿ ಸಿಕ್ಕ ರೋಮನ್ ನಾಣ್ಯಗಳಿಂದ ಆ ಕಾಲದ ಸುಧಾರಿತ ವ್ಯಾಪಾರದ ಬಗ್ಗೆ ತಿಳಿದುಬರುತ್ತದೆ. ಸೋಪಾರಾ, ಕಲ್ಯಾಣ ಮತ್ತು ಭಡೋಚ ಅಂದಿನ ಪ್ರಮುಖ ಬಂದರುಗಳಾಗಿದ್ದವು. ಜುನ್ನರ್ ಮತ್ತು ನಾಸಿಕನಂತಹ ಸ್ಥಳಗಳ ಶಿಲಾಶಾಸನಗಳಲ್ಲಿ ಕುಲಾರಿಕ (ಮಣ್ಣಿನ ಪಾತ್ರೆ ಮಾಡುವವರು), ತಿಲಪಿಷಕ (ತೈಲದ ಗಾಣದವರು), ಕೋಲಿಕ (ನೇಯುವವರು) ಅಂತಹ ಅನೇಕ ವೃತ್ತಿಪರರ ಬಗ್ಗೆ ಉಲ್ಲೇಖವಿದೆ. ಈ ವೃತ್ತಿಪರರು ನಗರಗಳಲ್ಲಿ ಒಟ್ಟಾಗಿ ವಾಸಿಸುತ್ತಿದ್ದರು ಎಂದು ಕಂಡುಬರುತ್ತದೆ.



**ನೀವೇನು ಮಾಡುವಿರಿ?**

ಒಂದು ವೇಳೆ ನೀವು ಆ ಕಾಲದಲ್ಲಿ ವ್ಯಾಪಾರಿಯಾಗಿದ್ದರೆ, ಯಾವ ರೀತಿಯ ವ್ಯಾಪಾರ ಮಾಡಲು ಇಷ್ಟಪಡುತ್ತಿದ್ದಿರಿ? ಯಾಕೆ?

## 9.3. ಪ್ರಾಚೀನ ಭಾರತದ ವೈದ್ಯಕೀಯ ಶಾಸ್ತ್ರ

ಭಾರತೀಯ ವೈದ್ಯಕೀಯಶಾಸ್ತ್ರದ ಉಗಮವು ಅಥರ್ವವೇದದ ಒಂದು ಭಾಗವಾಗಿರುವ 'ಆಯುರ್ವೇದ'ದಿಂದ ಆಗಿದೆ. ರೋಗನಿವಾರಣೆಗೆ ಜೀವಕ, ಸುಶ್ರುತ, ಚರಕರಂತಹ ಪ್ರಮುಖ ವೈದ್ಯರು ಶರೀರರಚನೆ, ಶಸ್ತ್ರಚಿಕಿತ್ಸೆ, ಔಷಧೋಪಚಾರ, ರೋಗದ ಲಕ್ಷಣಗಳು ಮತ್ತು ಆಹಾರದ ನಿಯಮಗಳ ಬಗ್ಗೆ ಅಮೂಲ್ಯ ಗ್ರಂಥಗಳನ್ನು ರಚಿಸಿದ್ದಾರೆ.

ಈ ಗ್ರಂಥಗಳು ಪ್ರಾಚೀನ ಭಾರತೀಯ ವೈದ್ಯಶಾಸ್ತ್ರದ ಅಡಿಪಾಯ ಹಾಕಿದವು.

- ಜೀವಕನು ಪ್ರಾಚೀನ ಭಾರತದ ಪ್ರಖ್ಯಾತ ವೈದ್ಯನಾಗಿದ್ದನು. ಅವನು ಭಗವಾನ್ ಬುದ್ಧನ ವೈದ್ಯನಾಗಿದ್ದನು ಎಂದು ಬೌದ್ಧ ಗ್ರಂಥಗಳಿಂದ ತಿಳಿದುಬರುತ್ತದೆ. ಅವನು ತಕ್ಷಶಿಲೆಯಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆದಿದ್ದನು. ಶಸ್ತ್ರಚಿಕಿತ್ಸೆ, ಔಷಧೋಪಚಾರ ಮತ್ತು ರೋಗದ ಪತ್ತೆ ಹಚ್ಚುವ ಕ್ಷೇತ್ರದಲ್ಲಿ ಅವರು ಮಹತ್ವದ ಕೆಲಸ ಮಾಡಿದ್ದಾರೆ.
- ಸುಶ್ರುತನು 'ಸುಶ್ರುತ ಸಂಹಿತೆ' ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ವೈದ್ಯಕೀಯ ಶಿಕ್ಷಣ, ಔಷಧೋಪಚಾರ, ಶಸ್ತ್ರಚಿಕಿತ್ಸೆ, ಆರೋಗ್ಯ ವಿಜ್ಞಾನ ಮುಂತಾದವುಗಳ ಬಗ್ಗೆ ಶಾಸ್ತ್ರೀಯ ವಿವರಣೆ ನೀಡಲಾಗಿದೆ.
- ಚರಕನು 'ಚರಕ ಸಂಹಿತೆ' ಎಂಬ ಗ್ರಂಥದಲ್ಲಿ ರೋಗನಿರೋಧಕ ಶಕ್ತಿ, ಔಷಧಗಳ ಸರಿಯಾದ ಬಳಕೆ, ಆಹಾರ-ವಿಹಾರಗಳ ಮತ್ತು ಜೀವನಶೈಲಿಯ ನಿಯಮಗಳ ಬಗ್ಗೆ ಸವಿಸ್ತಾರವಾಗಿ ಉಲ್ಲೇಖಿಸಿದ್ದಾರೆ. ಈ ಗ್ರಂಥವು ಅರಬ್ ರಾಷ್ಟ್ರಗಳು, ಟಿಬೆಟ್ ಮತ್ತು ಚೀನಾದಂತಹ ದೇಶಗಳಲ್ಲೂ ಪ್ರಸಿದ್ಧವಾಗಿತ್ತು.



**ನಿಮಗೆ ಗೊತ್ತೇ?**

'ಸುಶ್ರುತ ಸಂಹಿತೆ' ಎಂಬ ಗ್ರಂಥದಲ್ಲಿ ಸುಶ್ರುತನು ಅನೇಕ ಶಸ್ತ್ರಚಿಕಿತ್ಸೆಗಳ ಮತ್ತು ಅದಕ್ಕೆ ಬೇಕಾದ ಅನೇಕ ಉಪಕರಣಗಳ ಬಗ್ಗೆ ಚಿತ್ರಸಹಿತ ಮಾಹಿತಿಯನ್ನು ನೀಡಿದ್ದಾನೆ. ಹೊಟ್ಟೆಯ ಶಸ್ತ್ರಚಿಕಿತ್ಸೆ, ಕೃತಕ ಮೂಗು ಜೋಡಣೆ, ಚರ್ಮ ಕಸಿ ಮುಂತಾದ ಶಸ್ತ್ರಚಿಕಿತ್ಸೆಗಳನ್ನು ಸಹ ಸುಶ್ರುತ ಸಂಹಿತೆಯಲ್ಲಿ ವಿವರಿಸಲಾಗಿದೆ; ಹಾಗೆಯೇ ಒಟ್ಟು 1120 ರೋಗಗಳ ಲಕ್ಷಣಗಳ ಪಟ್ಟಿಯನ್ನು ನೀಡಲಾಗಿದೆ. ಸುಶ್ರುತನನ್ನು ಶಸ್ತ್ರಚಿಕಿತ್ಸೆಯ 'ಪಿತಾಮಹ' ಎಂದು ಪರಿಗಣಿಸಲಾಗುತ್ತದೆ. ಮೂಗಿನ ಶಸ್ತ್ರಚಿಕಿತ್ಸೆಗಾಗಿ ಅವರು ಕಂಡುಹಿಡಿದ ಪದ್ಧತಿಯು ನವೀನವಾಗಿತ್ತು. ಮೂಗು ಕತ್ತರಿಸಿದಾಗ ಉಂಟಾಗುವ ವೈಕಲ್ಯವನ್ನು ನಿವಾರಿಸಲು ಮೂಗಿನ ಶಸ್ತ್ರಚಿಕಿತ್ಸೆಯಲ್ಲಿ ಸುಶ್ರುತರು ಮೊದಲು ಕೆನ್ನೆಯ ಚರ್ಮವನ್ನು ಬಳಸಿದರು. ಸುಶ್ರುತರು ಅಭಿವೃದ್ಧಿಪಡಿಸಿದ ತಂತ್ರಗಳನ್ನು ಮುಂದೆ 18ನೇ ಶತಮಾನದಲ್ಲಿ ಯುರೋಪಿಯನ್ನರು ಅಧ್ಯಯನ ಮಾಡಿದರು. ಈ ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಚರ್ಮದ ಭಾಗಕ್ಕೆ ಇಂದಿಗೂ 'ಇಂಡಿಯನ್ ಫ್ಲಾಪ್' ಎಂಬ ಸಂಜ್ಞೆಯನ್ನು ಬಳಸಲಾಗುತ್ತದೆ. ಇದರಿಂದ ಸುಶ್ರುತರ ಹಿರಿಮೆ ಎದ್ದುಕಾಣುತ್ತದೆ.





ಸುಶ್ರುತನ ಗ್ರಂಥದಲ್ಲಿ ನೀಡಲಾದ ಶಸ್ತ್ರಚಿಕಿತ್ಸಾ ಉಪಕರಣಗಳು

## 9.4. ಮಹಾರಾಷ್ಟ್ರದ ಸಮ್ಮಿಶ್ರ ಸಂಸ್ಕೃತಿ

ಮಹಾರಾಷ್ಟ್ರವು ಭಾರತದ ಸಾಂಸ್ಕೃತಿಕ ವೈವಿಧ್ಯತೆಯ ಅತ್ಯುತ್ತಮ ಮಾದರಿಯಾಗಿದೆ. ಪ್ರಾಚೀನ ಕಾಲದಿಂದಲೂ ಸಾತವಾಹನ, ವಾಕಾಟಕ ರಾಜಮನೆತನಗಳು ಮಹಾರಾಷ್ಟ್ರವನ್ನು ಆಳಿದವು, ಇದರಿಂದಾಗಿ ಇಲ್ಲಿ ಧರ್ಮ, ಕಲೆ, ಭಾಷೆ, ಶಿಕ್ಷಣ ಮತ್ತು ಸಂಪ್ರದಾಯಗಳ ವಿಶಿಷ್ಟ ಸಂಗಮವಾಯಿತು. ಮಹಾರಾಷ್ಟ್ರ ಪ್ರದೇಶವನ್ನು ಇಂಗ್ಲಿಷ್‌ನಲ್ಲಿ ಪ್ರಾಚೀನ ಭಾರತದ 'ಮೆಲ್ಟಿಂಗ್ ಪಾಟ್' ಎಂದು ಕರೆಯಲಾಗುತ್ತದೆ. ಈ ಪ್ರದೇಶದ ಭೌಗೋಳಿಕ ಸ್ಥಾನ ಅಂದರೆ ಸಹ್ಯಾದ್ರಿ ಪರ್ವತ ಶ್ರೇಣಿಗಳು, ಗೋದಾವರಿ ಮತ್ತು ಕೃಷ್ಣಾ ನದಿಗಳ ಕಣಿವೆಗಳು ಮತ್ತು ಅರಬ್ಬೀ ಸಮುದ್ರ ತೀರ – ಈ ಎಲ್ಲಾ ಅಂಶಗಳಿಂದಾಗಿ ಈ ಪ್ರದೇಶದಲ್ಲಿ ವ್ಯಾಪಾರ, ಬಾಹ್ಯ ಸಂಪರ್ಕ ಮತ್ತು ವಿವಿಧ ಸಂಸ್ಕೃತಿಗಳ ವಿನಿಮಯ ಸುಲಭವಾಯಿತು. ಸಾತವಾಹನ ಕಾಲದಲ್ಲಿ ರೋಮನ್ ಸಾಮ್ರಾಜ್ಯದೊಂದಿಗೆ ವ್ಯಾಪಾರ, ಮಸಾಲೆ ಪದಾರ್ಥಗಳು, ರೇಷ್ಮೆ ಬಟ್ಟೆ, ಲೋಹಗಳು ಮತ್ತು ಮಣಿಗಳು ಪ್ರಸಾರವಾದವು. ಅಜಂತಾ, ಎಲ್ಲೋರಾ, ಕನ್ಹೇರಿ ಗುಹೆಗಳಲ್ಲಿ ಬೌದ್ಧ ಮತ್ತು ಜೈನ ಕಲೆಗಳು ಕಂಡುಬರುತ್ತವೆ, ಹಾಗೆಯೇ ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಶಾಸನಗಳ ಮೂಲಕ ಇತಿಹಾಸ ಮತ್ತು ಅಂದಿನ ಸಮಾಜದ ಬಗ್ಗೆ ತಿಳಿದುಕೊಳ್ಳಬಹುದು.

ಮಹಾರಾಷ್ಟ್ರದಲ್ಲಿ ಪ್ರಾಚೀನ ಕಾಲದಿಂದಲೂ ಹಿಂದೂ, ಜೈನ, ಬೌದ್ಧ ಧರ್ಮಗಳ ಪ್ರಭಾವ ಕಂಡುಬರುತ್ತದೆ. ಭಾಷೆ ಮತ್ತು ಸಾಹಿತ್ಯದಲ್ಲಿಯೂ ವೈವಿಧ್ಯತೆ ಕಂಡುಬರುತ್ತದೆ. ಮರಾಠಿ, ಪ್ರಾಕೃತ, ಸಂಸ್ಕೃತಗಳ ಸಂಗಮವು ಮಹಾರಾಷ್ಟ್ರದ ಪ್ರಾಚೀನ ಮತ್ತು ಮಧ್ಯಕಾಲೀನ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಹಾಗೆಯೇ ಕಲೆ, ಸಂಗೀತ, ನಾಟಕ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳು ಅಭಿವೃದ್ಧಿ ಹೊಂದಿದವು.



**ನಿಮಗೆ ಗೊತ್ತೇ?**



ವಿದ್ಯಾರ್ಥಿಗಳೇ, ನೀಡಲಾದ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ. ಇವು ಯಾವುದರ ಚಿತ್ರಗಳೆಂದು ನಿಮಗೆ ತಿಳಿದಿದೆಯೇ?

ಬಂಡೆಗಳ ಬಯಲಿನಲ್ಲಿ ಈ ಶಿಲ್ಪಗಳನ್ನು ಸಾವಿರಾರು ವರ್ಷಗಳ ಹಿಂದೆ ಕೆತ್ತಲಾಗಿದೆ. ಸೂರ್ಯ, ಪ್ರಾಣಿಗಳು, ನೃತ್ಯ ಮಾಡುವ ಮನುಷ್ಯರು, ಬೇಟೆಗಾರರು ಮತ್ತು ವಿವಿಧ ಚಿಹ್ನೆಗಳನ್ನು ಹೊಂದಿರುವ ಚಿತ್ರಗಳು ಇವುಗಳಲ್ಲಿವೆ. ಇವುಗಳನ್ನು 'ಕಾತಳಶಿಲ್ಪಗಳು' ಎಂದು ಕರೆಯುತ್ತಾರೆ. ಮಹಾರಾಷ್ಟ್ರದ ಕೊಂಕಣ ಪ್ರಾಂತ್ಯದಲ್ಲಿ, ವಿಶೇಷವಾಗಿ ರತ್ನಗಿರಿ ಮತ್ತು ರಾಜಾಪುರ ಮುಂತಾದ ಹಲವು ಸ್ಥಳಗಳಲ್ಲಿ ಈ ನಿಗೂಢ ಕೆತ್ತನೆಗಳು ಇಂದಿಗೂ ಅಸ್ತಿತ್ವದಲ್ಲಿವೆ.

ಈ ಕಾತಳಶಿಲ್ಪಗಳು ಮಹಾರಾಷ್ಟ್ರದ ವಿಶಿಷ್ಟ ಮತ್ತು ಪ್ರಾಚೀನ ಸಾಂಸ್ಕೃತಿಕ ಪರಂಪರೆಯಾಗಿವೆ.

## 9.5 ಪ್ರಾಚೀನ ಭಾರತದ ಶಿಕ್ಷಣ ಪದ್ಧತಿ

ವಿದ್ಯಾರ್ಥಿಗಳಿಗೆ ಗುರುಕುಲ ಪದ್ಧತಿಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಶಿಕ್ಷಣದ ಆರಂಭವು ಮನೆಯಲ್ಲಿಯೇ ಆಗುತ್ತಿತ್ತು. ಮುಂದೆ ವಿದ್ಯಾರ್ಥಿಯ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಗುರುಕುಲದಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ನಂತರ ನಳಂದಾ, ತಕ್ಷಶಿಲೆ ಮತ್ತು ವಿಕ್ರಮಶಿಲೆಯಂತಹ ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ವಿಷಯಗಳ ಬಗ್ಗೆ ಅಧ್ಯಯನ ಮಾಡಲಾಗುತ್ತಿತ್ತು. ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಗಳಿಗೆ ಶಾಸ್ತ್ರ, ಗಣಿತ, ಜ್ಯೋತಿಷ್ಯ, ತತ್ವಜ್ಞಾನ, ಭಾಷೆ, ಸಂಗೀತ, ಶಿಲ್ಪಕಲೆ, ಶಸ್ತ್ರವಿದ್ಯೆ, ಆಯುರ್ವೇದ ಮತ್ತು ವಾಸ್ತುಕಲೆ ಮುಂತಾದ ವಿಷಯಗಳ ಬಗ್ಗೆ ಆಳವಾದ ಶಿಕ್ಷಣ ನೀಡಲಾಗುತ್ತಿತ್ತು. ಗುರುಕುಲ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಟಾಚಾರ, ಸಂಸ್ಕಾರ, ನೈತಿಕ ಮೌಲ್ಯಗಳು ಮತ್ತು ಜೀವನಶೈಲಿಯ ನಿಯಮಗಳನ್ನು ಕಲಿಸಲಾಗುತ್ತಿತ್ತು. ಪ್ರಾಚೀನ ಭಾರತದಲ್ಲಿ ಸ್ತ್ರೀಯರಿಗೂ ಶಿಕ್ಷಣದ ಹಕ್ಕಿತ್ತು. ಲೋಪಾಮುದ್ರಾ, ಗಾರ್ಗಿ ಮತ್ತು ಮೈತ್ರೇಯಿಯಂತಹ ಮಹಿಳಾ ವಿದ್ವಾಂಸರ ಉಲ್ಲೇಖಗಳು ಕೆಲವು ಗ್ರಂಥಗಳಲ್ಲಿ ಕಂಡುಬರುತ್ತವೆ.

### ■ ತಕ್ಷಶಿಲಾ ವಿದ್ಯಾಪೀಠ

ತಕ್ಷಶಿಲೆಯು ಪ್ರಾಚೀನ ಭಾರತದ ಅತ್ಯಂತ ಪ್ರತಿಷ್ಠಿತ ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿತ್ತು. ಇದು ಇಂದಿನ ಪಾಕಿಸ್ತಾನದ ರಾವಲ್ಪಿಂಡಿಯ ಸಮೀಪದಲ್ಲಿದೆ. ಇಲ್ಲಿ ರಾಜಕೀಯ, ಅರ್ಥಶಾಸ್ತ್ರ, ಶಸ್ತ್ರವಿದ್ಯೆ, ಆಯುರ್ವೇದ, ತತ್ವಜ್ಞಾನ, ಗಣಿತ ಮತ್ತು ಜ್ಯೋತಿಷ್ಯದಂತಹ ವಿವಿಧ ವಿಷಯಗಳ ಶಿಕ್ಷಣವನ್ನು ನೀಡಲಾಗುತ್ತಿತ್ತು. ದೂರದ ಊರುಗಳಿಂದಲೂ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯನು ಇಲ್ಲಿಯೇ ಶಿಕ್ಷಣ ಪಡೆದಿದ್ದನು. ಸಂಸ್ಕೃತ ವ್ಯಾಕರಣಕಾರ ಪಾಣಿನಿ, ಆಯುರ್ವೇದ ತಜ್ಞ ಚರಕ ಮತ್ತು ವೈದ್ಯ ಜೀವಕ ಕೂಡ ಇದೇ ವಿದ್ಯಾಪೀಠದ ವಿದ್ಯಾರ್ಥಿಗಳಾಗಿದ್ದರು.

### ■ ನಾಲಂದಾ ವಿದ್ಯಾಪೀಠ

ನಾಳಂದಾ ಪ್ರಾಚೀನ ಭಾರತದ ಮತ್ತೊಂದು ಪ್ರಮುಖ ವಿದ್ಯಾಪೀಠವಾಗಿತ್ತು. ಇದರ ಅವಶೇಷಗಳು ಇಂದಿಗೂ ಬಿಹಾರ ರಾಜ್ಯದ ರಾಜಗೀರ್ ಸಮೀಪದಲ್ಲಿವೆ. ಯುನೆಸ್ಕೋ ನಾಲಂದಾ ವಿದ್ಯಾಪೀಠದ ಅವಶೇಷಗಳನ್ನು ವಿಶ್ವ ಪರಂಪರೆಯ ತಾಣವೆಂದು ಘೋಷಿಸಿದೆ. ಕ್ರಿ.ಸ. 5ನೆಯ ಶತಕದಲ್ಲಿ ಗುಪ್ತ ರಾಜರ ಕಾಲದಲ್ಲಿ ನಲಂದಾ ವಿದ್ಯಾಪೀಠ ಸ್ಥಾಪನೆಯಾಯಿತು. ನಾಲಂದಾ ವಿಶ್ವವಿದ್ಯಾಲಯದಲ್ಲಿ ಬೌದ್ಧ ತತ್ವಜ್ಞಾನ, ವೇದ, ಗಣಿತ, ಜ್ಯೋತಿಷ್ಯ, ಸಾಹಿತ್ಯ, ಸಂಗೀತ ಮತ್ತು ಕಲೆ ಈ ವಿಷಯಗಳನ್ನು ಕಲಿಸಲಾಗುತ್ತಿತ್ತು. ಇಲ್ಲಿ 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಳಿದುಕೊಳ್ಳುವ ವ್ಯವಸ್ಥೆಯಿತ್ತು. ಇಲ್ಲಿ ವಿವಿಧ ಸ್ಥಳಗಳಿಂದ ಅಧ್ಯಾಪಕರು ಬರುತ್ತಿದ್ದರು. ನಾಲಂದಾ ವಿಶ್ವವಿದ್ಯಾಲಯದಲ್ಲಿ ಭವ್ಯ ಗ್ರಂಥಾಲಯವಿತ್ತು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ವಿವಿಧ ಶಾಸ್ತ್ರಗಳ ಅಧ್ಯಯನ ಮಾಡುತ್ತಿದ್ದರು. ನಾಲಂದಾ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ಅತ್ಯಂತ ಕಠಿಣವಾದ ಪ್ರವೇಶ ಪರೀಕ್ಷೆಯನ್ನು ಎದುರಿಸಬೇಕಾಗುತ್ತಿತ್ತು. ಅದರಲ್ಲಿ ಉತ್ತೀರ್ಣರಾಗುವುದು ಬಹಳ ಕಷ್ಟಕರವಾಗಿತ್ತು.



ನಾಲಂದಾ ವಿದ್ಯಾಪೀಠ

### ■ ವಿಕ್ರಮಶಿಲಾ ವಿಶ್ವವಿದ್ಯಾಲಯ

ಕ್ರಿ.ಶ. 8ನೇ ಶತಮಾನದಲ್ಲಿ ವಿಕ್ರಮಶಿಲಾ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಈ ವಿಶ್ವವಿದ್ಯಾಲಯವು ಇಂದಿನ ಬಿಹಾರದ ಭಾಗಲಪುರ ಸಮೀಪವಿತ್ತು. ಈ ವಿಶ್ವವಿದ್ಯಾಲಯಕ್ಕೂ ಪ್ರವೇಶ ಪರೀಕ್ಷೆಗಳ ಮೂಲಕವೇ ಪ್ರವೇಶ ನೀಡಲಾಗುತ್ತಿತ್ತು. ಇಲ್ಲಿ ಮುಖ್ಯವಾಗಿ ಬೌದ್ಧ ತತ್ವಜ್ಞಾನ, ಧರ್ಮಶಾಸ್ತ್ರ, ತಂತ್ರ, ಆಯುರ್ವೇದ ಮತ್ತು ಸಾಹಿತ್ಯದ ಅಭ್ಯಾಸ ಮಾಡಲಾಗುತ್ತಿತ್ತು.

### ■ ಇತರ ಪ್ರಮುಖ ಶಿಕ್ಷಣ ಕೇಂದ್ರಗಳು

ಪ್ರಾಚೀನ ಭಾರತದಲ್ಲಿ ನಾಲಂದಾ, ತಕ್ಷಶಿಲಾ ಮತ್ತು ವಿಕ್ರಮಶಿಲಾ ಈ ವಿಶ್ವವಿದ್ಯಾಲಯಗಳಲ್ಲದೆ ವಾರಾಣಸಿ. ವಲಭಿ ಮತ್ತು ಕೌಶಾಂಬಿ ಪ್ರಮುಖ ಶಿಕ್ಷಣ ಕೇಂದ್ರಗಳಾಗಿದ್ದವು.

ಇಲ್ಲಿ ಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನ ನಡೆಯುತ್ತಿತ್ತು. ಮಹಾರಾಷ್ಟ್ರದ ಪ್ರತಿಷ್ಠಾನ, ಅಂದರೆ ಇಂದಿನ ಪೈಠಣವು ಶಾತವಾಹನ ಕಾಲದ ಪ್ರಮುಖ ಶಿಕ್ಷಣ ಕೇಂದ್ರವಾಗಿತ್ತು. ಈ ಶಿಕ್ಷಣ ಕೇಂದ್ರಗಳಿಂದಾಗಿ ಭಾರತೀಯ ಜ್ಞಾನ ಮತ್ತು ಸಂಸ್ಕೃತಿಯು ದೂರದವರೆಗೆ ಹರಡಿತು ನೋಡಿದಿರಲ್ಲವೇ! ಭಾರತದ ಪ್ರಾಚೀನ ಸಾಂಸ್ಕೃತಿಕ ಪರಂಪರೆ ಎಷ್ಟು ಅದ್ಭುತವಾಗಿದೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾಚೀನ ಭಾರತವು ಮುಂದುವರಿದಿತ್ತು. ನಿಜವಾಗಿಯೂ, ಇದು ಒಂದು ಅಮೂಲ್ಯವಾದ ಸಾಂಸ್ಕೃತಿಕ ನಿಧಿಯಾಗಿದೆ!



**ಮಾಡಿ ನೋಡಿ.**

ನೀವು ಪ್ರಾಚೀನ ಸಾಂಸ್ಕೃತಿಕ ಸಂಗತಿಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಹುಡುಕಿರಿ. ಆ ಚಿತ್ರಗಳ ಬಣ್ಣದ ತಕ್ತೆಯನ್ನು ತಯಾರಿಸಿರಿ. ನಿಮ್ಮ ಶಾಲೆಯಲ್ಲಿ ಅದರ ಒಂದು ಪ್ರದರ್ಶನ ಏರ್ಪಡಿಸಿರಿ.



## ಸ್ವಾಧ್ಯಾಯ

**ಪ್ರ. 1 ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಪತಂಜಲಿಯ .................. ಇದು ಪ್ರಾಚೀನ ಕಾಲದ ವ್ಯಾಕರಣ ಗ್ರಂಥವಾಗಿದೆ.
2. ಭರತಮುನಿಯು ................ ಎಂಬ ಗ್ರಂಥವನ್ನು ಬರೆದನು.

**ಬ) ಒಂದು ವಾಕ್ಯದಲ್ಲಿ ಉತ್ತರಿಸಿ.**

1. ವಿಷ್ಣುಶರ್ಮ ಅವರು ನೈತಿಕ ಮೌಲ್ಯಗಳನ್ನಾಧರಿಸಿ ಯಾವ ಕಥಾ ಸಂಕಲನವನ್ನು ಬರೆದರು?
2. ಗೌತಮ ಬುದ್ಧರ ಜೀವನ ಚರಿತ್ರೆಯನ್ನಾಧರಿಸಿದ ಕಥೆಗಳನ್ನು ಏನೆಂದು ಕರೆಯುತ್ತಾರೆ?
3. ಕಾಶ್ಮೀರದ ಇತಿಹಾಸವನ್ನು ತಿಳಿಸುವ ಕವಿ ಕಲ್ಹಣನ ಕಾವ್ಯ ಸಂಕಲನದ ಹೆಸರೇನು?
4. ಶಾತವಾಹನರ ಕಾಲದಲ್ಲಿ ಶಿಕ್ಷಣದ ಪ್ರಮುಖ ಕೇಂದ್ರ ಯಾವುದಾಗಿತ್ತು ?

**ಪ್ರ. 2 ಅ) ಜೋಡಿಗಳನ್ನು ಹೊಂದಿಸಿ.**

| 'ಅ' ಗುಂಪು | 'ಬ' ಗುಂಪು |
|---|---|
| 1) ಶಾರಂಗದೇವ | ಅ) ಶಾಕುಂತಲ |
| 2) ಭಾಸ | ಬ) ಸಂಗೀತ ರತ್ನಾಕರ |
| 3) ಕಾಲಿದಾಸ | ಕ) ಮುದ್ರಾರಾಕ್ಷಸ |
| 4) ವಿಶಾಖದತ್ತ | ಡ) ಸ್ವಪ್ನವಾಸವದತ್ತ |

**ಬ) ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ.**

| ಪ್ರಾಚೀನ ವಿಶ್ವವಿದ್ಯಾಲಯ | ಪ್ರಸ್ತುತ ಸ್ಥಳ |
|---|---|
| ........................... | ಪೇಶಾವರ |
| ನಳಂದಾ | ........................... |
| ........................... | ಭಾಗಲಪೂರ |

**ಪ್ರ. 3 ಅ) ಟಿಪ್ಪಣಿ ಬರೆಯಿರಿ.**

1. ನಲಂದಾ ವಿಶ್ವವಿದ್ಯಾಲಯ
2. ಸುಶ್ರುತ ಸಂಹಿತಾ

**ಬ) ಸಂಕ್ಷಿಪ್ತವಾಗಿ ಉತ್ತರಿಸಿ.**

1. ಭಾರತದ ಏಳು ಶಾಸ್ತ್ರೀಯ ನೃತ್ಯ ಪ್ರಕಾರಗಳು ಪ್ರಮುಖವಾಗಿ ಯಾವ ರಾಜ್ಯಗಳಲ್ಲಿವೆ? ಅವುಗಳ ಹೆಸರನ್ನು ಬರೆಯಿರಿ.
2. ದೆಹಲಿಯ ಮಹರೌಲಿಯಲ್ಲಿರುವ ಕಬ್ಬಿಣದ ಸ್ತಂಭದ (ಲೋಹಸ್ತಂಭ) ಬಗ್ಗೆ ಮಾಹಿತಿ ಬರೆಯಿರಿ.

**ಪ್ರ. 4 ಸವಿಸ್ತಾರವಾಗಿ ಉತ್ತರಿಸಿ.**

1. ಸಾಮ್ರಾಟ್ ಅಶೋಕನ ಸಾಂಚಿ ಸ್ತೂಪದ ಚಿತ್ರವನ್ನು ನೋಡಿ ಅದರ ಬಗ್ಗೆ ವರ್ಣಿಸಿ.
2. ಪ್ರಾಚೀನ ಕಾಲದ ವೈದ್ಯಕೀಯ ಶಾಸ್ತ್ರ ಮತ್ತು ಆಧುನಿಕ ಕಾಲದ ವೈದ್ಯಕೀಯ ಶಾಸ್ತ್ರದ ನಡುವಿನ ವ್ಯತ್ಯಾಸವನ್ನು ಬರೆಯಿರಿ.

**ಪ್ರ. 5 ಪ್ರಾಚೀನ ಕಾಲದ ಶಿಕ್ಷಣ ಮತ್ತು ಆಧುನಿಕ ಕಾಲದ ಶಿಕ್ಷಣವನ್ನು ಹೋಲಿಕೆ ಮಾಡಿ.**

**ಪದಬಂಧ ಪೂರ್ಣಗೊಳಿಸಿ.**




**ಲಂಬವಾಗಿ:**

1) ಒಂದು ಪ್ರಾಚೀನ ಮಹಾಕಾವ್ಯ.
2) ಒಂದು ಪ್ರಾಚೀನ ವಿಶ್ವವಿದ್ಯಾಲಯ.

**ಅಡ್ಡವಾಗಿ:**

3) ಒಂದು ಪ್ರಾಚೀನ ವಿಶ್ವವಿದ್ಯಾಲಯ.

**ಉಪಕ್ರಮ (ಚಟುವಟಿಕೆಗಳು):**

- ನಿಮ್ಮ ಪರಿಸರದ ಆಯುರ್ವೇದ ವೈದ್ಯರನ್ನು ಭೇಟಿ ಮಾಡಿ ಆಯುರ್ವೇದ ಚಿಕಿತ್ಸಾ ಪದ್ಧತಿಯ ಮಾಹಿತಿ ಪಡೆದುಕೊಳ್ಳಿ.
- ಅಂತರ್ಜಾಲದ ಸಹಾಯದಿಂದ 'ಕಾತಳಶಿಲ್ಪ'ಗಳ ಚಿತ್ರಗಳನ್ನು ಹುಡುಕಿ.
- ಪಂಚತಂತ್ರ ಮತ್ತು ಜಾತಕ ಕಥೆಗಳನ್ನು ಓದಿ, ಅವುಗಳಲ್ಲಿನ ಒಂದು ಕಥೆಯನ್ನು ನಾಟಕ ರೂಪದಲ್ಲಿ ಪ್ರಸ್ತುತಪಡಿ.

***

# 10 ಪ್ರಾಚೀನ ಭಾರತ ಮತ್ತು ಜಗತ್ತು



10.1. ಪರ್ಷಿಯನ್ ಸಂಸ್ಕೃತಿಯೊಂದಿಗೆ ಸಂಪರ್ಕ

10.2. ಗ್ರೀಕ್ – ರೋಮನ್ ಸಂಸ್ಕೃತಿಗಳ ಭಾರತದ ಮೇಲಿನ ಪರಿಣಾಮ

10.3. ಭಾರತ ಮತ್ತು ನೆರೆಯ ದೇಶಗಳು

**ಯೋಚನೆ ಮಾಡಿ.**



ಇದು ಭಾರತದಲ್ಲಿ ದೊರೆತ ಒಂದು ರೋಮನ್ ನಾಣ್ಯ. ಈ ನಾಣ್ಯವು ಭಾರತಕ್ಕೆ ಹೇಗೆ ಬಂದಿರಬಹುದು?



ಎಡಭಾಗದ ಚಿತ್ರದಲ್ಲಿ ಇರಾನಿ ಸಾಮ್ರಾಜ್ಯದ ರಾಜಧಾನಿ ಪರ್ಸಿಪೋಲಿಸನಲ್ಲಿರುವ ಸ್ತಂಭವು ಕಾಣಿಸುತ್ತಿದೆ ಮತ್ತು ಬಲಭಾಗದ ಚಿತ್ರದಲ್ಲಿ ಒಂದು ಅಶೋಕ ಸ್ತಂಭವು ಕಾಣಿಸುತ್ತಿದೆ. ಈ ಎರಡರ ನಡುವೆ ನಿಮಗೆ ಏನಾದರೂ ಸಾಮ್ಯತೆ ಕಾಣಿಸುತ್ತಿದೆಯೇ?



ಈ ಚಿತ್ರವನ್ನು ನೀವು ಎಂಟನೇ ಪಾಠದಲ್ಲಿ ನೋಡಿದ್ದೀರಿ. ಗೌತಮ ಬುದ್ಧನ ಈ ಪ್ರತಿಮೆಯ ಮೇಲೆ ಗ್ರೀಕ್ ಕಲೆಯ ಪ್ರಭಾವ ಕಾಣಿಸುತ್ತದೆ. ಇದು ಹೇಗೆ ಇರಬಹುದು?



ಈ ಎರಡು ಚಿತ್ರಗಳಲ್ಲಿ ಒಂದು ಶ್ರೀಲಂಕಾದ್ದು ಮತ್ತು ಇನ್ನೊಂದು ಭಾರತದ್ದು. ಈ ಎರಡರ ನಡುವೆ ನಿಮಗೆ ಏನಾದರೂ ಸಾಮ್ಯತೆ ಕಾಣಿಸುತ್ತಿದೆಯೇ?




**ಈ ಭೂಪಟವು ಭಾರತ ಮತ್ತು ಏಷ್ಯಾ ನಡುವಿನ ವ್ಯಾಪಾರ ಮಾರ್ಗಗಳಿಗೆ ಸಂಬಂಧಿಸಿದ್ದಾಗಿದೆ. ಈ ಮಾರ್ಗಗಳ ಮೂಲಕ ಯಾವ ವಸ್ತುಗಳ ವ್ಯಾಪಾರ ನಡೆದಿರಬಹುದು?**

ಈ ಎಲ್ಲಾ ಚಿತ್ರಗಳಿಂದ ಪ್ರಾಚೀನ ಭಾರತವು ಹೊರಗಿನ ದೇಶಗಳೊಂದಿಗೆ ಸಂಬಂಧವನ್ನು ಹೊಂದಿತ್ತು ಎಂಬುದು ನಿಮಗೆ ಗಮನಕ್ಕೆ ಬರುತ್ತದೆ. ಅವರಲ್ಲಿ ಸಾಂಸ್ಕೃತಿಕ ವಿನಿಮಯವಿತ್ತು. ಪ್ರಾಚೀನ ಕಾಲದಲ್ಲಿ ಭಾರತವು ಅನೇಕ ದೇಶಗಳೊಂದಿಗೆ ಸಾಂಸ್ಕೃತಿಕ, ಧಾರ್ಮಿಕ ಮತ್ತು ವ್ಯಾಪಾರ ಸಂಬಂಧಗಳಿಂದ ಕೂಡಿದ ಒಂದು ಪ್ರಮುಖ ಕೇಂದ್ರಬಿಂದುವಾಗಿತ್ತು. ಹಿಮಾಲಯದ ಆಚೆಗಿನ ಚೀನಾ ಮತ್ತು ಟಿಬೆಟ್, ದಕ್ಷಿಣಕ್ಕೆ ಶ್ರೀಲಂಕಾ, ಪೂರ್ವಕ್ಕೆ ಮ್ಯಾನಮಾರ ಮತ್ತು ಆಗ್ನೇಯ ಏಷ್ಯಾ, ಹಾಗೆಯೇ ಪಶ್ಚಿಮಕ್ಕೆ ಇರಾನ್ (ಪರ್ಷಿಯಾ) ಮತ್ತು ಮಧ್ಯ ಏಷ್ಯಾದ ಪ್ರದೇಶಗಳೊಂದಿಗೆ ಭಾರತವು ನಿಕಟ ಸಂಬಂಧಗಳನ್ನು ಹೊಂದಿತ್ತು. ಈ ದೇಶಗಳೊಂದಿಗೆ ನಡೆದ ನಿರಂತರ ವಿನಿಮಯದ ಮೂಲಕ ಭಾರತೀಯ ಧರ್ಮವು ಪ್ರಸಾರವಾಯಿತು, ವ್ಯಾಪಾರ ಮಾರ್ಗಗಳು ಬೆಳೆದವು, ವಿವಿಧ ಕಲೆಗಳ ಮಿಶ್ರಣವು ಸಂಭವಿಸಿತು ಮತ್ತು ಇದರಿಂದ ಭಾರತದ ಸಮೃದ್ಧ ಸಂಸ್ಕೃತಿಯು ರೂಪುಗೊಳ್ಳುತ್ತಾ ಹೋಯಿತು.

**ಮಾಡಿ ನೋಡಿ**

ನಿಮ್ಮ ಕುಟುಂಬದ ಸದಸ್ಯರು, ನಿಮ್ಮ ನೆರೆಹೊರೆಯವರು ಅಥವಾ ಇತರ ಸಂಬಂಧಿಕರಲ್ಲಿ ಯಾರಾದರೂ ವಿದೇಶಕ್ಕೆ ಭೇಟಿ ನೀಡಿದ್ದಾರೆಯೇ? ಅವರ ಒಂದು ಸಣ್ಣ ಸಂದರ್ಶನವನ್ನು ತೆಗೆದುಕೊಳ್ಳಿ. ಅವರ ಅಲ್ಲಿನ ಅನುಭವಗಳನ್ನು ತಿಳಿದುಕೊಳ್ಳಿ. ಅವರಿಗೆ ಭಾರತದಲ್ಲಿ ಮತ್ತು ಆ ದೇಶದಲ್ಲಿ ಯಾವ ಯಾವ ಸಾಮ್ಯತೆಗಳು ಕಂಡುಬಂದವು ಎಂಬುದನ್ನು ಸಹ ಖಂಡಿತವಾಗಿಯೂ ತಿಳಿದುಕೊಳ್ಳಿ.

### 10.1 ಪರ್ಷಿಯನ್ ಸಂಸ್ಕೃತಿಯೊಂದಿಗೆ ಸಂಪರ್ಕ

ಪ್ರಾಚೀನ ಭಾರತ ಮತ್ತು ಪರ್ಷಿಯಾ (ಇಂದಿನ ಇರಾನ್) ನಡುವೆ ಸಾವಿರಾರು ವರ್ಷಗಳ ಹಿಂದಿನಿಂದಲೂ ಸಾಂಸ್ಕೃತಿಕ, ವ್ಯಾಪಾರ ಮತ್ತು ರಾಜಕೀಯ ಸಂಬಂಧಗಳಿದ್ದವು. ಇರಾನಿ ಸಂಸ್ಕೃತಿಯು ವಿಶ್ವದ ಅಭಿವೃದ್ಧಿ ಹೊಂದಿದ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಇರಾನಿ ಸಾಮ್ರಾಜ್ಯವು ರೋಮವರೆಗೆ ಹರಡಿತ್ತು. ಆ ಸಾಮ್ರಾಜ್ಯದ ಆಡಳಿತವು ಶಿಸ್ತುಬದ್ಧವಾಗಿತ್ತು. ಅಲ್ಲಿನ ಶಿಲ್ಪಕಲೆಯು ಉನ್ನತ ಮಟ್ಟದ್ದಾಗಿತ್ತು. ಭಾರತದ ವಾಯುವ್ಯ ಪ್ರದೇಶವು ಪರ್ಷಿಯನ್ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಇರಾನಿ ಸಾಮ್ರಾಜ್ಯವನ್ನು ಅಕೆಮೆನಿಡ್ ಸಾಮ್ರಾಜ್ಯ ಎಂದು ಗುರುತಿಸಲಾಗುತ್ತದೆ. ಅಕೆಮೆನಿಡ್ ಸಾಮ್ರಾಟ ಡೇರಿಯಸ್ ಕಾಲದಲ್ಲಿ ಗಾಂಧಾರ ಮತ್ತು ಸಿಂಧ್ ಪ್ರಾಂತ್ಯಗಳು ಈ ಸಾಮ್ರಾಜ್ಯದಲ್ಲಿ ಸೇರ್ಪಡೆಯಾಗಿದ್ದವು. ಪ್ರಾಚೀನ ಭಾರತದ ರಾಜ್ಯಭಾರ ಪದ್ಧತಿಯ ಮೇಲೆ ಇರಾನಿ ಆಡಳಿತ ವ್ಯವಸ್ಥೆಯ ಪ್ರಭಾವ ಬೀರಿದ್ದನ್ನು ಕಾಣಬಹುದು. ಪರ್ಷಿಯನ್ ಜನರು ಆಡಳಿತ ವ್ಯವಸ್ಥೆಯನ್ನು ಪ್ರಾಂತ್ಯಗಳಾಗಿ ವಿಂಗಡಿಸುವುದು, ತೆರಿಗೆ ಪದ್ಧತಿ, ಗುಪ್ತಚರ ವ್ಯವಸ್ಥೆ ಮತ್ತು ಅಧಿಕಾರಿಗಳ ಶ್ರೇಣಿ ಮುಂತಾದ ವಿಷಯಗಳ ವ್ಯವಸ್ಥಿತ ರಚನೆಯನ್ನು ಮಾಡಿದ್ದರು. ಮುಂದೆ ಮೌರ್ಯ ಸಾಮ್ರಾಜ್ಯದ ರಾಜ್ಯ ವ್ಯವಸ್ಥೆಯ ಮೇಲೂ ಇವುಗಳ ಪ್ರಭಾವ ಬೀರಿದ್ದನ್ನು ಕಾಣಬಹುದು.

ಸಮ್ರಾಟ ಅಶೋಕನ ಲೇಖನಗಳಲ್ಲಿ ಕಂಡುಬರುವ

ಲಿಪಿಗಳಲ್ಲಿ ಖರೋಷ್ಠಿ ಮತ್ತು ಅರಾಮಿಕ್ ಲಿಪಿಗಳ ಉಗಮವು ಪರ್ಷಿಯನ್ ಲಿಪಿಯಿಂದಲೇ ಆಯಿತು. ಈ ಲಿಪಿಗಳನ್ನು ಬಲದಿಂದ ಎಡಕ್ಕೆ ಕೆತ್ತಲಾಗುತ್ತಿತ್ತು. ಈ ಲಿಪಿಯು ಮುಖ್ಯವಾಗಿ ಶಿಲಾಶಾಸನಗಳು ಮತ್ತು ನಾಣ್ಯಗಳ ಮೇಲೆ ಕಂಡುಬರುತ್ತದೆ.

ಭಾರತವು ಪರ್ಷಿಯಾಕ್ಕೆ ಬಟ್ಟೆ, ಮುತ್ತು, ಆನೆದಂತ, ಸಾಂಬಾರ ಪದಾರ್ಥಗಳನ್ನು ರಫ್ತು ಮಾಡುತ್ತಿತ್ತು; ಪರ್ಷಿಯಾದಿಂದ ಅಮೂಲ್ಯ ಲೋಹ ಮತ್ತು ಬೆಲೆಬಾಳುವ ವಸ್ತುಗಳು ಬರುತ್ತಿದ್ದವು.

ಮೌರ್ಯ ಸಾಮ್ರಾಜ್ಯದ ಶಿಲ್ಪಕಲೆ ಮತ್ತು ವಾಸ್ತು ಶಿಲ್ಪದ ಮೇಲೆ ಪರ್ಷಿಯನ್ ಕಲೆಯ ಮತ್ತು ವಾಸ್ತುಶಿಲ್ಪದ ಪ್ರಭಾವ ಕಂಡುಬರುತ್ತದೆ. ಅಶೋಕ ಸ್ತಂಭದ ಮೇಲೆ ಸಿಂಹ, ಕುದುರೆ, ಗೂಳಿಗಳ ಶಿಲ್ಪಗಳಿವೆ. ಅವುಗಳ ಮೇಲೆ ಪರ್ಷಿಯನ್ ಶಿಲ್ಪಶೈಲಿಯ ಪ್ರಭಾವ ಕಂಡುಬರುತ್ತದೆ.

### 10.2. ಭಾರತದ ಮೇಲೆ ಗ್ರೀಕ್-ರೋಮನ್ ಸಂಸ್ಕೃತಿಯ ಪರಿಣಾಮ


ಸಾಮ್ರಾಟ್ ಸಿಕಂದರ್

ಕ್ರಿಸ್ತಪೂರ್ವ 326ರಲ್ಲಿ ಮ್ಯಾಸಿಡೋನಿಯಾದ ರಾಜಾ ಸಿಕಂದರ್ (ಅಲೆಕ್ಸಾಂಡರ್) ಪರ್ಷಿಯಾವನ್ನು ಗೆದ್ದು ಭಾರತದ ವಾಯುವ್ಯ ಭಾಗದತ್ತ ಪ್ರಯಾಣ ಬೆಳೆಸಿದನು. ಸಿಕಂದರನ ದಂಡಯಾತ್ರೆಯಿಂದಾಗಿ ಭಾರತೀಯ ಉಪಖಂಡದ ಜನರಿಗೆ ಗ್ರೀಕ್ ಸಂಸ್ಕೃತಿಯ ಪರಿಚಯವಾಯಿತು. ಅವನು ಸಿಂಧೂ ಪ್ರಾಂತ್ಯದ ಅನೇಕ ಸಣ್ಣ ರಾಜ್ಯಗಳನ್ನು ತನ್ನ ಆಧಿಪತ್ಯಕ್ಕೆ ಒಳಪಡಿಸಿದನು. ಸಿಕಂದರನ ಮರಣದ ನಂತರ ಅವನ ಸಾಮ್ರಾಜ್ಯವು ಚೂರುಚೂರಾಯಿತು ಮತ್ತು ಅಲ್ಲಿ ಯವನ ಅಥವಾ ಇಂಡೋ-ಗ್ರೀಕ್ ರಾಜಮನೆತನಗಳು ಉದಯಿಸಿದವು. ಅವರ ಕಾಲದಲ್ಲಿ ಸಾಂಸ್ಕೃತಿಕ ವಿನಿಮಯ ಹೆಚ್ಚಾಯಿತು, ಇದರಿಂದಾಗಿ ಕಲೆ, ಶಿಲ್ಪಕಲೆ, ಮುದ್ರೆ (ನಾಣ್ಯಗಳು), ಆಡಳಿತ ವ್ಯವಸ್ಥೆಗಳಲ್ಲಿ ಮಹತ್ವದ ಬದಲಾವಣೆಗಳಾದವು. ಮೌರ್ಯ ಸಾಮ್ರಾಟರಾದ ಚಂದ್ರಗುಪ್ತ, ಬಿಂದುಸಾರ ಮತ್ತು ಸಾಮ್ರಾಟ್ ಅಶೋಕ ಇವರು ಗ್ರೀಕ್ ರಾಜರೊಂದಿಗೆ ರಾಜಕೀಯ ಸಂಬಂಧವನ್ನು ಹೊಂದಿದ್ದರು. ಮೆಗಾಸ್ತನೀಸ್ ಮತ್ತು ಡಿಮ್ಯಾಕಸ್ ಇವರು ಸೆಲ್ಯೂಕಸನ ರಾಯಭಾರಿಗಳಾಗಿ ಚಂದ್ರಗುಪ್ತನ ಆಸ್ಥಾನದಲ್ಲಿದ್ದರು. ಮೆಗಾಸ್ತನೀಸ್ ಬರೆದ 'ಇಂಡಿಕಾ' ಗ್ರಂಥದಿಂದ ಮೌರ್ಯ ಕಾಲದ ಸಮಾಜ ರಚನೆ, ಆಡಳಿತ, ಕೃಷಿ ಮತ್ತು ವ್ಯಾಪಾರ ಇತ್ಯಾದಿಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಗ್ರೀಕ್ ಶಿಲ್ಪಕಲೆಯ ಪ್ರಭಾವದಿಂದ ಕುಶಾಣರ ಕಾಲದಲ್ಲಿ ಭಾರತದಲ್ಲಿ ಒಂದು ಹೊಸ ಕಲಾಶೈಲಿ ಉದಯಿಸಿತು. ಇದನ್ನು 'ಗಾಂಧಾರ ಕಲೆ' ಎಂದು ಕರೆಯಲಾಗುತ್ತದೆ. ಗಾಂಧಾರ ಕಲಾಶೈಲಿಯಲ್ಲಿ ಪ್ರಮುಖವಾಗಿ ಗೌತಮ ಬುದ್ಧನ ಮೂರ್ತಿಗಳನ್ನು ಕೆತ್ತಲಾಯಿತು. ಈ ಮೂರ್ತಿಗಳು ಅಫ್ಘಾನಿಸ್ತಾನದ ಗಾಂಧಾರ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದ್ದರಿಂದ ಈ ಶೈಲಿಗೆ 'ಗಾಂಧಾರ ಶೈಲಿ' ಎಂದು ಹೆಸರು ಬಂದಿತು. ಈ ಶೈಲಿಯ ಮೂರ್ತಿಗಳ ಮುಖಲಕ್ಷಣಗಳು ಗ್ರೀಕ್ ಮುಖಲಕ್ಷಣಗಳನ್ನು ಹೋಲುತ್ತವೆ. ಬ್ಯಾಕ್ಟ್ರಿಯಾದ ಗ್ರೀಕ್ ರಾಜರ ನಾಣ್ಯಗಳು ಈ ಕಲೆಗೆ ಉತ್ತಮ ನಿದರ್ಶನಗಳಾಗಿವೆ. ಆ ನಾಣ್ಯಗಳನ್ನು 'ಇಂಡೋ-ಗ್ರೀಕ್ ನಾಣ್ಯಗಳು' ಎಂದು ಕರೆಯಲಾಗುತ್ತದೆ ಮತ್ತು ಅವುಗಳ ಮೇಲೆ ಗ್ರೀಕ್ ಪ್ರಭಾವವು ಸ್ಪಷ್ಟವಾಗಿ ಕಂಡುಬರುತ್ತದೆ.



**ಹೇಳಿ ನೋಡೋಣ!**

"ನಾನು ಚಕ್ರವರ್ತಿಯಲ್ಲ, ಸೈನಿಕನಲ್ಲ,
ಆದರೆ ರಾಜದರ್ಬಾರಿನಲ್ಲಿ ನನಗೊಂದು ಸ್ಥಾನವಿದೆ.
ಪರಕೀಯರ ಕಣ್ಣಿನಿಂದ ಭಾರತವನ್ನು ನೋಡಿದೆ,
ನೋಡಿದ್ದನ್ನು ತಿಳಿಸಲು 'ಇಂಡಿಕಾ' ಎಂಬ ಗ್ರಂಥವನ್ನು ಬರೆದೆ.
ನಾನು ಯಾರು?"

ಕ್ರಿ.ಶ. ಒಂದು ಮತ್ತು ಎರಡನೇ ಶತಮಾನಗಳ ಕಾಲದಲ್ಲಿ ಭಾರತ ಮತ್ತು ರೋಮ್ ನಡುವಿನ ವ್ಯಾಪಾರವು ಬಹಳವಾಗಿ ವೃದ್ಧಿಸಿತು. ಈ ವ್ಯಾಪಾರದಲ್ಲಿ ದಕ್ಷಿಣ ಭಾರತದ ಬಂದರುಗಳು

ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡವು. ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ನಡೆದ ಉತ್ಖನನದಲ್ಲಿ ಕೆಲವು ಕಂಚಿನ ವಸ್ತುಗಳು ದೊರೆತಿವೆ, ಅವು ರೋಮನ್ ನಿರ್ಮಿತವಾಗಿವೆ. ಅದೇ ರೀತಿ ತಮಿಳುನಾಡಿನ ಅರಿಕಮೇಡು ಎಂಬಲ್ಲಿನಡೆದ ಉತ್ಖನನದಲ್ಲಿಯೂ ರೋಮನ್ ನಿರ್ಮಿತವಾದ ಹಲವಾರು ವಸ್ತುಗಳು ಪತ್ತೆಯಾಗಿವೆ.

### ನಿಮಗೆ ಗೊತ್ತಿದೆಯೇ?

ತೆರ ಮಹಾರಾಷ್ಟ್ರದ ಧಾರಾಶಿವ ಜಿಲ್ಲೆಯ ಶಾತವಾಹನ ಕಾಲದ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿ ನಡೆಸಿದ ಉತ್ಖನನದಲ್ಲಿ (ಅಗೆಯುವಿಕೆ) ರೋಮನ್ ನಾಣ್ಯಗಳು, ಆಂಫೊರಾ ಪಾತ್ರೆಗಳು, ಗಾಜಿನ ಮಣಿಗಳು ಮತ್ತು ದಂತದ ನುಣ್ಣನೆಯ ಕೆತ್ತನೆಯ ಶಿಲ್ಪಗಳು ಪತ್ತೆಯಾಗಿವೆ. ತೆರದ ಬಟ್ಟೆಗಳು, ಮುತ್ತುಗಳು, ಆಭರಣಗಳು ಮತ್ತು ಕರಕುಶಲ ವಸ್ತುಗಳು ರೋಮನ್ ಮಾರುಕಟ್ಟೆಯಲ್ಲಿ ಬಹಳ ಜನಪ್ರಿಯವಾಗಿದ್ದವು. ಇವುಗಳಲ್ಲಿ 12 ಸೆಂ.ಮೀ. ಎತ್ತರದ ದಂತದ ಸ್ತ್ರೀ ಮೂರ್ತಿಯ ಕೆತ್ತನೆಯು ವಿಶೇಷವಾಗಿ ಗಮನ ಸೆಳೆಯುತ್ತದೆ. ಇಂತಹದೇ ದಂತದ ಸ್ತ್ರೀ ಮೂರ್ತಿಗಳು ಕ್ರಿ.ಶ. 79ರಲ್ಲಿ ಜ್ವಾಲಾಮುಖಿಯಿಂದ ನಾಶವಾದ ಇಟಲಿಯ ಪ್ರಾಚೀನ ನಗರವಾದ ಪಾಂಪೈನಲ್ಲಿ ನಡೆಸಿದ ಉತ್ಖನನದಲ್ಲಿಯೂ ದೊರೆತಿವೆ. ಇದರಿಂದ ತೆರ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು ಮತ್ತು ಅದು ರೋಮನ್ ನಗರದೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿತ್ತು ಎಂಬುದು ಸಾಬೀತಾಗಿದೆ.

ಅಂದಿನ ಸಾಹಿತ್ಯದಲ್ಲಿ ಇಂತಹ ಅನೇಕ ವ್ಯಾಪಾರ ಕೇಂದ್ರಗಳ ಉಲ್ಲೇಖವಿದೆ. ಈ ವ್ಯಾಪಾರದಲ್ಲಿ ಈಜಿಪ್ಟ್‌ನ ಅಲೆಕ್ಸಾಂಡ್ರಿಯಾ ಎಂಬ ಬಂದರು ಬಹಳ ಮುಖ್ಯವಾಗಿತ್ತು. ಭಾರತೀಯ ಸರಕುಗಳನ್ನು ಅರಬ್ ವ್ಯಾಪಾರಿಗಳು ಅಲೆಕ್ಸಾಂಡ್ರಿಯಾದ ವರೆಗೆ ಕೊಂಡೊಯ್ಯುತ್ತಿದ್ದರು. ಅಲ್ಲಿಂದ ಅದನ್ನು ಯುರೋಪಿನ ದೇಶಗಳಿಗೆ ಕಳುಹಿಸಲಾಗುತ್ತಿತ್ತು. ದಕ್ಷಿಣ ಭಾರತದ ಬಂದರುಗಳ ಮೂಲಕ ರೋಮನ್ ವ್ಯಾಪಾರಿಗಳು ನೇರವಾಗಿ ಭಾರತಕ್ಕೆ ಬರುತ್ತಿದ್ದರು ಮತ್ತು ಬಟ್ಟೆ, ಮಸಾಲೆ ಪದಾರ್ಥಗಳು, ಅಮೂಲ್ಯ ರತ್ನಗಳು ಹಾಗೂ ಔಷಧೀಯ ಸಸ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿದ್ದರು. ಭಾರತದ ಕರಾವಳಿ ಪ್ರದೇಶಗಳಲ್ಲಿ ಇಂದಿಗೂ ಸಾವಿರಾರು ರೋಮನ್ ನಾಣ್ಯಗಳು ದೊರೆಯುತ್ತಿವೆ. ಇದು ಅಂದಿನ ವ್ಯಾಪಾರದ ಪ್ರಮಾಣ ಮತ್ತು ವೈಭವವನ್ನು ತೋರಿಸುತ್ತದೆ.

### ನಿಮಗೆ ತಿಳಿದಿದೆಯೇ?

ಪ್ರಾಚೀನ ಕಾಲದಲ್ಲಿ ಭಾರತದಿಂದ ರಫ್ತಾಗುತ್ತಿದ್ದ ಕರಿಮೆಣಸನ್ನು ಯುರೋಪಿನಲ್ಲಿ ಅತ್ಯಂತ ಬೆಲೆಬಾಳುವ ವಸ್ತು ಎಂದು ಪರಿಗಣಿಸಲಾಗುತ್ತಿತ್ತು. ರೋಮ್ನಲ್ಲಿ ಅದು ಎಷ್ಟು ದುಬಾರಿಯಾಗಿತ್ತೆಂದರೆ ಅದನ್ನು 'ಕಪ್ಪು ಚಿನ್ನ' ಎಂದು ಕರೆಯಲಾಗುತ್ತಿತ್ತು. ರೋಮನ್ನರ ಆಹಾರ ಪದಾರ್ಥಗಳಲ್ಲಿ ಸಾಂಬಾರ ಪದಾರ್ಥಗಳ ಕೊರತೆಯಿತ್ತು. ಮೆಣಸು ಅವರಿಗೆ ರುಚಿ ಮತ್ತು ಆರೋಗ್ಯ ಎರಡೂ ದೃಷ್ಟಿಯಿಂದ ಬಹಳ ಮುಖ್ಯವಾಗಿತ್ತು. ಭಾರತದ ಬಂದರುಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಕರಿಮೆಣಸನ್ನು ರೋಮನ್ ಸಾಮ್ರಾಜ್ಯಕ್ಕೆ ರಫ್ತು ಮಾಡಲಾಗುತ್ತಿತ್ತು. ರೋಮನ್ ವ್ಯಾಪಾರಿಗಳು ಭಾರತೀಯ ವ್ಯಾಪಾರಿಗಳಿಗೆ ಬಂಗಾರದ ನಾಣ್ಯಗಳನ್ನು ನೀಡಿ ಮೆಣಸನ್ನು ಖರೀದಿಸುತ್ತಿದ್ದರು. ರೋಮನ್ ಲೇಖಕ ಪ್ಲಿನಿ ತನ್ನ ಗ್ರಂಥದಲ್ಲಿ ಹೀಗೆ ಬರೆಯುತ್ತಾನೆ: ರೋಮನಿಂದ ಭಾರತಕ್ಕೆ ಮಸಾಲೆ ಪದಾರ್ಥಗಳನ್ನು ತರಲು ಪ್ರತಿವರ್ಷ ಅಪಾರ ಪ್ರಮಾಣದ ಚಿನ್ನವು ರೋಮನಿಂದ ಹೊರಹೋಗುತ್ತಿದೆ. ಈ ವ್ಯಾಪಾರವು ಎಷ್ಟು ಹೆಚ್ಚಾಯಿತೆಂದರೆ ರೋಮನ್ ಚಿನ್ನವು ಭಾರತಕ್ಕೆ ಹರಿದು ಬಂದು ಇಲ್ಲೇ ಉಳಿಯಿತು ಎನ್ನಲಾಗುತ್ತದೆ."



ಬೋರೋಬುದುರ್ ಸ್ತೂಪ

## 10.3 ಭಾರತ ಮತ್ತು ನೆರೆಯ ದೇಶಗಳು

ಪ್ರಾಚೀನ ಭಾರತಕ್ಕೆ ನೆರೆಯ ದೇಶಗಳೊಂದಿಗೆ, ವಿಶೇಷವಾಗಿ ಆಗ್ನೇಯ ಏಷ್ಯಾದ ದೇಶಗಳೊಂದಿಗೆ ಅತ್ಯಂತ ನಿಕಟ ಮತ್ತು ಪ್ರಭಾವಶಾಲಿ ಸಂಬಂಧಗಳಿದ್ದವು. ಸಮುದ್ರ ವ್ಯಾಪಾರ, ಬೌದ್ಧ ಮತ್ತು ಹಿಂದೂ ಧರ್ಮದ ಪ್ರಸಾರ, ಭಾಷೆ ಮತ್ತು ಕಲೆಗಳ ವಿನಿಮಯದ ಮೂಲಕ ಭಾರತದ ಪ್ರಭಾವವು ಶ್ರೀಲಂಕಾ, ಮ್ಯಾನಮಾರ, ಥೈಲ್ಯಾಂಡ್, ಕಾಂಬೋಡಿಯಾ, ವಿಯೆತನಾಮ, ಇಂಡೋನೇಶಿಯಾ ಮತ್ತು ಮಲೇಶಿಯಾ ಪ್ರದೇಶಗಳವರೆಗೆ ತಲುಪಿತು. ಭಾರತೀಯ ವ್ಯಾಪಾರಿಗಳು ಮಸಾಲೆ ಪದಾರ್ಥಗಳು, ಬಟ್ಟೆ, ಅಮೂಲ್ಯ ರತ್ನಗಳು ಮತ್ತು ಧಾತುಗಳನ್ನು ತೆಗೆದುಕೊಂಡು ಸಮುದ್ರ ಮಾರ್ಗವಾಗಿ ಈ ದೇಶಗಳಿಗೆ ಹೋದರು. ಅವರಲ್ಲಿ ಕೆಲವರು ಅಲ್ಲಿಯೇ ನೆಲೆಸಿದರು ಮತ್ತು ಕೆಲವರು ಅಲ್ಲಿ ರಾಜ್ಯಗಳನ್ನು ಸ್ಥಾಪಿಸಿದರು. ಬೌದ್ಧ ಭಿಕ್ಷುಗಳು ಬೌದ್ಧ ತತ್ವಜ್ಞಾನವನ್ನು ಪ್ರಚಾರ ಮಾಡಿದರು, ಆ ದೇಶಗಳ ಜನರು ಶಿಕ್ಷಣಕ್ಕಾಗಿ ಭಾರತಕ್ಕೆ ಬಂದರು ಮತ್ತು ಇಲ್ಲಿನ ಸಂಸ್ಕೃತಿಯ ಪರಿಚಯ ಮಾಡಿಕೊಂಡರು. ಆಗ್ನೇಯ ಏಷ್ಯಾದಲ್ಲಿನ ದೇವಾಲಯಗಳು, ನೃತ್ಯ ಕಲೆಗಳು, ಕಲೆ, ವಾಸ್ತುಶಿಲ್ಪ ಮತ್ತು ರಾಜಕೀಯ ಸಂಪ್ರದಾಯಗಳಲ್ಲಿ ಭಾರತೀಯ ಸಂಸ್ಕೃತಿಯ ಮುದ್ರೆ ಸ್ಪಷ್ಟವಾಗಿ ಕಂಡುಬರುತ್ತದೆ. ಅಂಕೋರ್ ವಾಟನಂತಹ ಭವ್ಯ ದೇವಾಲಯ, ಬೋರೋಬುದೂರ್ ಸ್ತೂಪ, ರಾಮಾಯಣ ಮಹಾಕಾವ್ಯದಿಂದ ಪ್ರೇರಿತವಾದ ಕಲೆ ಇದಕ್ಕೆ ಪ್ರಮುಖ ಉದಾಹರಣೆಗಳಾಗಿವೆ. ಪ್ರಾಚೀನ ಭಾರತ ಮತ್ತು ಆಗ್ನೇಯ ಏಷ್ಯಾ ನಡುವಿನ ಸಂಬಂಧವು ಕೇವಲ ವ್ಯಾಪಾರಕ್ಕೆ ಸೀಮಿತವಾಗಿರಲಿಲ್ಲ; ಅವು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿನಿಮಯದ ಸಂಕೇತವಾಗಿದ್ದವು



ಸಿಗಿರಿಯಾ ಗುಹೆಯಲ್ಲಿಯ ಭಿತ್ತಿ ಚಿತ್ರ

- **ಶ್ರೀಲಂಕಾ**

ಬೌದ್ಧ ಧರ್ಮದ ಪ್ರಸಾರಕ್ಕಾಗಿ ಸಮ್ರಾಟ ಅಶೋಕನು ತನ್ನ ಮಗ ಮಹೇಂದ್ರ ಮತ್ತು ಮಗಳು ಸಂಘಮಿತ್ರಾಳನ್ನು ಶ್ರೀಲಂಕಾಗೆ ಕಳಿಸಿದ್ದನು. ಅವರಿಬ್ಬರ ಹೆಸರಿನ ಉಲ್ಲೇಖವು 'ಮಹಾವಂಶ' ಎಂಬ ಶ್ರೀಲಂಕಾದ ಬೌದ್ಧ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಸಂಘಮಿತ್ರಳು ತನ್ನೊಂದಿಗೆ ಬೋಧಿವೃಕ್ಷದ ಶಾಖೆಯನ್ನು ಕೊಂಡೊಯ್ದಿದ್ದಳು. ಶ್ರೀಲಂಕಾದ ಅನುರಾಧಪುರದಲ್ಲಿರುವ ಬೋಧಿವೃಕ್ಷವು ಇದೇ ಶಾಖೆಯಿಂದ ಬೆಳೆದಿದೆ ಎಂದು ಅಲ್ಲಿನ ಪರಂಪರೆಯ ಪ್ರಕಾರ ನಂಬಲಾಗಿದೆ.

ಶ್ರೀಲಂಕಾದ ಮುತ್ತುಗಳು ಮತ್ತು ಇತರ ಅಮೂಲ್ಯ ವಸ್ತುಗಳಿಗೆ ಭಾರತದಲ್ಲಿ ಹೆಚ್ಚಿನ ಬೇಡಿಕೆಯಿತ್ತು. ಅಲ್ಲಿನ ಸೀಗಿರಿಯಾ ಎಂಬ ಸ್ಥಳದಲ್ಲಿ ಕ್ರಿಸ್ತಶಕ ಐದನೇ ಶತಮಾನದಲ್ಲಿ ಕಶ್ಯಪ ಎಂಬ ರಾಜನು ಗುಹೆಗಳನ್ನು ಕೊರೆಸಿದನು. ಆ ಗುಹೆಗಳಲ್ಲಿನ ಭಿತ್ತಿಚಿತ್ರಗಳ ಶೈಲಿಯು ಅಜಂತಾದ ಚಿತ್ರಕಲೆಗೆ ಹೋಲಿಕೆಯಾಗುತ್ತದೆ. ಶ್ರೀಲಂಕಾದ 'ಮಹಾವಂಶ' ಮತ್ತು 'ದೀಪವಂಶ' ಎಂಬ ಪಾಲಿ ಭಾಷೆಯ ಗ್ರಂಥಗಳು ಭಾರತ ಮತ್ತು ಶ್ರೀಲಂಕಾ ನಡುವಿನ ಪರಸ್ಪರ ಸಂಬಂಧಗಳ ಬಗ್ಗೆ ಮಾಹಿತಿ ನೀಡುತ್ತವೆ.

- **ಚೀನಾ**

ಪ್ರಾಚೀನ ಕಾಲದಿಂದಲೂ ಭಾರತ ಮತ್ತು ಚೀನಾ ನಡುವೆ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳು ಸ್ಥಾಪಿತವಾಗಿದ್ದವು. ಸಾಮ್ರಾಟ್ ಹರ್ಷವರ್ಧನನು ಚೀನಾದ ಅರಮನೆಗೆ ರಾಯಭಾರಿಯನ್ನು ಕಳುಹಿಸಿದ್ದನು. ಚೀನಾದಲ್ಲಿ ತಯಾರಾಗುವ ರೇಷ್ಮೆ ಬಟ್ಟೆಗೆ ಭಾರತದಲ್ಲಿ 'ಚೀನಾಂಶುಕ' ಎಂಬ ಹೆಸರಿತ್ತು. ಚೀನಾದ ರೇಷ್ಮೆಗೆ ಭಾರತದಲ್ಲಿ ಹೆಚ್ಚಿನ ಬೇಡಿಕೆಯಿತ್ತು. ಪ್ರಾಚೀನ ಕಾಲದಲ್ಲಿ ಭಾರತೀಯ ವ್ಯಾಪಾರಿಗಳು ಚೀನಾದಿಂದ ರೇಷ್ಮೆಯನ್ನು ತರಿಸಿ ಪಶ್ಚಿಮ ದೇಶಗಳಿಗೆ ಕಳುಹಿಸುತ್ತಿದ್ದರು. ಈ ವ್ಯಾಪಾರವು ಭೂಮಾರ್ಗದ ಮೂಲಕ ನಡೆಯುತ್ತಿತ್ತು. ಭಾರತ ಮತ್ತು ಮಧ್ಯ ಏಷ್ಯಾದ ಮೂಲಕ ಹಾದುಹೋಗುವ ಈ ಮಾರ್ಗವನ್ನು 'ರೇಷ್ಮೆ ಮಾರ್ಗ' ಎಂದು ಕರೆಯಲಾಗುತ್ತದೆ. ಭಾರತದ ಕೆಲವು ಪ್ರಾಚೀನ ಸ್ಥಳಗಳು ಈ ರೇಷ್ಮೆ ಮಾರ್ಗಕ್ಕೆ ಸಂಪರ್ಕ ಹೊಂದಿದ್ದವು. ಅದರಲ್ಲಿ ಮಹಾರಾಷ್ಟ್ರದ ಮುಂಬೈ ಹತ್ತಿರದ ಪಾಲಘರ ಜಿಲ್ಲೆಯ ನಾಲಾಸೋಪಾರ ಕೂಡ ಒಂದಾಗಿತ್ತು. ಭಾರತಕ್ಕೆ ಭೇಟಿ ನೀಡಿದ ಫಾಹಿಯಾನ್ ಮತ್ತು ಯುವಾನ್ ಶ್ವಾಂಗ್ ಎಂಬ ಬೌದ್ಧ

ಭಿಕ್ಷುಗಳು ರೇಷ್ಮೆ ಮಾರ್ಗದ ಮೂಲಕವೇ ಭಾರತಕ್ಕೆ ಬಂದಿದ್ದರು. ಯುವಾನ್ ಶ್ವಾಂಗ್ ಅವರನ್ನು 'ಹ್ಯುಯೆನ್ ಸಾಂಗ್' ಎಂದೂ ಕರೆಯಲಾಗುತ್ತದೆ.

ಕ್ರಿಸ್ತಶಕ ಒಂದನೇ ಶತಮಾನದಲ್ಲಿ ಚೀನಾದ ಚಕ್ರವರ್ತಿ 'ಮಿಂಗ್' ಅವರ ಆಹ್ವಾನದ ಮೇರೆಗೆ ಧರ್ಮರಕ್ಷ ಮತ್ತು ಕಶ್ಯಪ ಮಾತಂಗ ಎಂಬ ಬೌದ್ಧ ಭಿಕ್ಷುಗಳು ಚೀನಾಕ್ಕೆ ಹೋದರು. ಅವರು ಅನೇಕ ಭಾರತೀಯ ಬೌದ್ಧ ಗ್ರಂಥಗಳನ್ನು ಚೀನೀ ಭಾಷೆಗೆ ಅನುವಾದಿಸಿದರು. ಇದರ ನಂತರ ಚೀನಾದಲ್ಲಿ ಬೌದ್ಧ ಧರ್ಮದ ಪ್ರಸಾರಕ್ಕೆ ವೇಗ ಸಿಕ್ಕಿತು. ಬೌದ್ಧ ಧರ್ಮವು ಜಪಾನ್, ಕೊರಿಯಾ ಮತ್ತು ವಿಯೆಟ್ನಾಂ ದೇಶಗಳಿಗೂ ತಲುಪಿತು.



### ನಿಮಗೆ ಗೊತ್ತಿದೆಯೇ?

ಕ್ರಿ.ಶ. ಏಳನೇ ಶತಮಾನದಲ್ಲಿ ಚೀನಾದ ವಿದ್ವಾಂಸ ಭಿಕ್ಷು ಯುವಾನ್ ಶ್ವಾಂಗ್ ಬೌದ್ಧ ಧರ್ಮದ ಶಿಕ್ಷಣ ಪಡೆಯಲು ಭಾರತಕ್ಕೆ ಬಂದನು. ಅವನು ನಾಲಂದಾ ವಿಶ್ವವಿದ್ಯಾಲಯದಲ್ಲಿ ಅನೇಕ ವರ್ಷಗಳ ಕಾಲ ಜ್ಞಾನಾರ್ಜನೆ ಮಾಡಿದನು. ಅಲ್ಲಿನ ವಿದ್ವಾಂಸ ಭಿಕ್ಷುಗಳು ಅವನಿಗೆ ಬೌದ್ಧ ತತ್ವಜ್ಞಾನ, ವ್ಯಾಕರಣ, ವೈದ್ಯಕೀಯ ಶಾಸ್ತ್ರ, ಧ್ಯಾನವಿದ್ಯೆಯಂತಹ ಅನೇಕ ವಿಷಯಗಳ ಬಗ್ಗೆ ಅಮೂಲ್ಯವಾದ ಗ್ರಂಥಗಳನ್ನು ನೀಡಿದರು. ಭಾರತದಿಂದ ಹಿಂದಿರುಗುವಾಗ ಅವನು ತನ್ನ ಜೊತೆಗೆ ಸುಮಾರು 600ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ ಕೊಂಡೊಯ್ದನು. ಈ ಗ್ರಂಥಗಳು ಚೀನಾದಲ್ಲಿ ಅಲ್ಲಿನ ಜನರಿಗೆ ಬೌದ್ಧ ಧರ್ಮದ ಬಗ್ಗೆ ಮಾಹಿತಿ ನೀಡುತ್ತವೆ ಎಂಬುದು ಅವನ ದೃಢ ನಿಶ್ಚಯವಾಗಿತ್ತು. ಯುವಾನ್ ಶ್ವಾಂಗ್ ಭಾರತದಿಂದ ಮಧ್ಯ ಏಷ್ಯಾದ ಮೂಲಕ ಹಾದುಹೋಗುವ ಮರುಭೂಮಿಯ ಹಾದಿಯನ್ನು ಆರಿಸಿಕೊಂಡನು. ಹಗಲಿನಲ್ಲಿ ಸುಡುವ ಬಿಸಿಲು ಮತ್ತು ರಾತ್ರಿಯಲ್ಲಿ ಮೈಕೊರೆಯುವ ಚಳಿ ಇರುವ ಕಠಿಣ ಪರಿಸ್ಥಿತಿಯಲ್ಲಿ ಅವನು ಪ್ರಯಾಣಿಸಿದನು. ಮರುಭೂಮಿಯು ಅವನ ಧೈರ್ಯವನ್ನು ಪರೀಕ್ಷಿಸುತ್ತಿತ್ತು. ಆದರೂ ಅವನು ಎದೆಗುಂದಲಿಲ್ಲ, ಏಕೆಂದರೆ ಅವನ ಬಳಿ ಇದ್ದ ಗ್ರಂಥಗಳು ಜ್ಞಾನದ ಭಂಡಾರವಾಗಿದ್ದವು. ಒಂದು ದಿನ ತಕ್ಲಮಕಾನ್ ಮರುಭೂಮಿಯ ಮೂಲಕ ಹಾದುಹೋಗುವಾಗ ಹಠಾತ್ತನೆ ಆಕಾಶವು ಕಪ್ಪಾಯಿತು. ಕ್ಷಣಾರ್ಧದಲ್ಲಿ ಅವನ ಸುತ್ತಲೂ ಮರಳಿನ ದೊಡ್ಡ ಚಂಡಮಾರುತ ಎದ್ದಿತು. ಒಂಟೆಗಳ ಮೇಲಿನ ನಿಯಂತ್ರಣ ತಪ್ಪತೊಡಗಿತು ಮತ್ತು ಗ್ರಂಥಗಳು ಹಾಳಾಗಬಹುದು ಎಂಬ ಭಯ ಅವನನ್ನು ಕಾಡಿತು. ಯುವಾನ್ ಶ್ವಾಂಗ್ ಪ್ರಾಣದ ಹಂಗು ತೊರೆದು ಆ ಗ್ರಂಥಗಳನ್ನು ಚಂಡಮಾರುತದಿಂದ ರಕ್ಷಿಸಿದನು. ಕ್ರಮೇಣ ಚಂಡಮಾರುತವು ಶಾಂತವಾಯಿತು. ಆಕಾಶದಲ್ಲಿ ಮತ್ತೆ ಸೂರ್ಯ ಕಾಣಿಸಿಕೊಂಡನು. ಸುಸ್ತಾಗಿದ್ದ, ಧೂಳಿನಿಂದ ಕೂಡಿದ್ದ ಯುವಾನ್ ಶ್ವಾಂಗ್ ಎದ್ದು ನಿಂತು ಮೊದಲು ಗ್ರಂಥಗಳ ಚೀಲವನ್ನು ತೆರೆದು ನೋಡಿದನು. ಅದೃಷ್ಟವಶಾತ್ ಎಲ್ಲಾ ಗ್ರಂಥಗಳೂ ಸುರಕ್ಷಿತವಾಗಿದ್ದವು!.



ಹಲವು ತಿಂಗಳ ಪ್ರಯಾಣದ ನಂತರ ಕೊನೆಗೂ ಅವರು ಚೀನಾ ತಲುಪಿದರು. ಅಲ್ಲಿ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ಅಲ್ಲಿನ ಕೆಲವು ವಿದ್ವಾಂಸರು ಅವರು ತಂದಿದ್ದ ಗ್ರಂಥಗಳ ಅಧ್ಯಯನ ಆರಂಭಿಸಿದರು, ಅವುಗಳನ್ನು ಭಾಷಾಂತರಿಸಿದರು ಮತ್ತು ಇದರಿಂದಾಗಿ ಪೂರ್ವ ಏಷ್ಯಾದಲ್ಲಿ ಬೌದ್ಧ ಧರ್ಮವು ದೊಡ್ಡ ಪ್ರಮಾಣದಲ್ಲಿ ಹರಡಿತು. ಚೀನಾದ ಚಕ್ರವರ್ತಿಯೂ ಅವರನ್ನು ಸ್ವಾಗತಿಸಿದರು ಮತ್ತು ಅವರ ಸಂಗ್ರಹದಲ್ಲಿದ್ದ ಗ್ರಂಥಗಳನ್ನು ಭಾಷಾಂತರಿಸಲು ವಿಶೇಷ ಕೇಂದ್ರವನ್ನು ಸ್ಥಾಪಿಸಿದರು. ಯುವಾನ್ ಶ್ವಾಂಗ್ ಅವರು ಮುಂದಿನ ಕೆಲವು ವರ್ಷಗಳಲ್ಲಿ 75 ಕ್ಕೂ ಹೆಚ್ಚು ಬೌದ್ಧ ಗ್ರಂಥಗಳನ್ನು ಚೀನೀ ಭಾಷೆಗೆ ಭಾಷಾಂತರಿಸಿದರು.



**ಅಂಕೋರವಟ ದೇವಾಲಯ**

## ಆಗ್ನೇಯ ಏಷ್ಯಾ

ಕಾಂಬೋಡಿಯಾದಲ್ಲಿ 'ಫುನನ್' ಎಂಬ ಪ್ರಾಚೀನ ರಾಜ್ಯವು ಕ್ರಿಸ್ತಶಕ ಮೊದಲ ಶತಮಾನದಲ್ಲಿ ಸ್ಥಾಪನೆಯಾಯಿತು. ಚೀನೀ ಸಂಪ್ರದಾಯದ ಆಧಾರದ ಮೇಲೆ ಕೌಂಡಿನ್ಯ ಎಂಬ ಹೆಸರಿನ ಭಾರತೀಯನು ಇದನ್ನು ಸ್ಥಾಪಿಸಿದನು ಎಂಬ ಮಾಹಿತಿ ಇದೆ. ಫುನನ್ ಜನರಿಗೆ ಸಂಸ್ಕೃತ ಭಾಷೆಯ ಜ್ಞಾನವಿತ್ತು. ಆ ಕಾಲದ ಒಂದು ಕೆತ್ತಿದ ಶಾಸನ ಲಭ್ಯವಿದ್ದು, ಅದು ಸಂಸ್ಕೃತದಲ್ಲಿದೆ.



### ನಿಮಗೆ ಗೊತ್ತೇ?

ಚೀನೀ ಪ್ರವಾಸಿಗರ ದಾಖಲೆಗಳ ಪ್ರಕಾರ, ಇಂಡೋನೇಷ್ಯಾದ 'ಶ್ರೀವಿಜಯ' ಸಾಮ್ರಾಜ್ಯವು ಬೌದ್ಧ ಧರ್ಮಗ್ರಂಥಗಳ ಅಧ್ಯಯನಕ್ಕೆ ಮತ್ತು ಸಂಸ್ಕೃತ ಕಲಿಕೆಗೆ ಪ್ರಮುಖ ಕೇಂದ್ರವಾಗಿತ್ತು. ಈ ಬಗ್ಗೆ ಒಂದು ಗಮನಾರ್ಹ ದಾಖಲೆಯಿದೆ. ಅದೇನೆಂದರೆ, ಕ್ರಿ.ಶ. 671 ರಲ್ಲಿ ಇತ್ಸಿ ಒಗ್ ಎಂಬ ಹೆಸರಿನ ಚೀನೀ ಬೌದ್ಧ ಪ್ರವಾಸಿ ಚೀನಾದಿಂದ ಹಿಂದಿರುಗುವಾಗ ಇರಾನ್ ವ್ಯಾಪಾರಿ ಹಡಗಿನ ಮೂಲಕ ಇಂಡೋನೇಶಿಯಾ ಬಂದಿದ್ದನು. ಆ ಸಮಯದಲ್ಲಿ ಅವನು ಶ್ರೀವಿಜಯ ರಾಜ್ಯದಲ್ಲಿ ಆರು ತಿಂಗಳುಗಳ ಕಾಲ ಸಂಸ್ಕೃತ ಭಾಷೆಯನ್ನು ಕಲಿಯಲು ತಂಗಿದ್ದನು. ನಂತರ ಅವನು ಸಮುದ್ರ ಮಾರ್ಗದ ಮೂಲಕ ಭಾರತವನ್ನು ತಲುಪಿದನು. ಶ್ರೀವಿಜಯ ರಾಜ್ಯದಲ್ಲಿ ಸಂಸ್ಕೃತ ಕಲಿಯಲು ಒಂದು ಅಥವಾ ಎರಡು ವರ್ಷ ತಂಗಿ, ನಂತರವೇ ಭಾರತಕ್ಕೆ ಹೋಗಬೇಕೆಂದು ಇತ್ಸಿಂಗ್ ತನ್ನ ಬರಹದ ಮೂಲಕ ಚೀನೀ ಭಿಕ್ಷುಗಳಿಗೆ ಸಲಹೆ ನೀಡಿದ್ದಾನೆ. ಅವನ ದಾಖಲೆಗಳ ಪ್ರಕಾರ, ಆ ಕಾಲದಲ್ಲಿ ಶ್ರೀವಿಜಯ ರಾಜ್ಯದ ವಿಹಾರಗಳಲ್ಲಿ ಒಂದು ಸಾವಿರ ಭಿಕ್ಷುಗಳು ವಾಸಿಸುತ್ತಿದ್ದರು. ಅದರಂತೆ ಚೀನಾದಿಂದ ಭಾರತಕ್ಕೆ ಬರುವ ಚೀನೀ ಬೌದ್ಧ ಭಿಕ್ಷುಗಳು ಇಂಡೋನೇಶಿಯಾದಲ್ಲಿ ಕೆಲವು ತಿಂಗಳುಗಳ ಕಾಲ ಸಂಸ್ಕೃತ ಕಲಿಯಲು ತಂಗಿದ್ದು, ನಂತರವೇ ಭಾರತಕ್ಕೆ ಬರುತ್ತಿದ್ದರು. ಇದರಿಂದ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆಯ ಪ್ರಭಾವ ಇಂಡೋನೇಶಿಯಾದ ಮೇಲೆ ಎಷ್ಟು ದೊಡ್ಡ ಪ್ರಮಾಣದಲ್ಲಿತ್ತು ಎಂಬುದು ತಿಳಿಯುತ್ತದೆ..

ಆಗ್ನೇಯ ಏಷ್ಯಾದ ಇತರ ದೇಶಗಳಲ್ಲೂ ಭಾರತದಿಂದ ಹೋದ ಕೆಲವರು ರಾಜ್ಯಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಕೆಲವು ರಾಜ್ಯಗಳು ಸಾಮ್ರಾಜ್ಯಗಳಾಗಿ ರೂಪಾಂತರಗೊಂಡವು. ಈ ರಾಜ್ಯಗಳಿಂದಾಗಿ ಭಾರತೀಯ ಸಂಸ್ಕೃತಿಯ ಪ್ರಸಾರ ಆಗ್ನೇಯ ಏಷಿಯಾದಲ್ಲಿ ಮುಂದುವರಿಯಿತು. ಆಗ್ನೇಯ ಏಷಿಯಾದ ಕಲೆ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಭಾರತೀಯ ಸಂಸ್ಕೃತಿಯ ಛಾಪು ಮೂಡಿದೆ. ಇಂಡೋನೇಷ್ಯಾದಲ್ಲಿ ಇಂದಿಗೂ ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಆಧರಿಸಿದ ನೃತ್ಯ-ನಾಟಕಗಳು ಜನಪ್ರಿಯವಾಗಿವೆ. ಆಗ್ನೇಯ ಏಷ್ಯಾದ ರಾಜ್ಯಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವವು ಕಾಲಾನಂತರದಲ್ಲಿ ಬೆಳೆಯುತ್ತಲೇ ಹೋಯಿತು. ಪ್ರಾಚೀನ ಕಾಲದಲ್ಲಿ ಬೌದ್ಧ ಧರ್ಮವು ಮ್ಯಾನಮಾರ

ಥೈಲ್ಯಾಂಡ್, ಇಂಡೋನೇಶಿಯಾ ಮುಂತಾದ ದೇಶಗಳನ್ನು ತಲುಪಿತು. ನಂತರದ ಕಾಲದಲ್ಲಿ ಶಿವ ಮತ್ತು ವಿಷ್ಣುವಿನ ದೇವಾಲಯಗಳೂ ನಿರ್ಮಾಣವಾದವು.



**ಶೋಧಿಸೋಣ...**

ಕಾಂಬೋಡಿಯಾ, ಇಂಡೋನೇಶಿಯಾ, ವಿಯೆತನಾಮ, ಥೈಲ್ಯಾಂಡ್, ಮ್ಯಾನಮಾರ ಈ ದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವವಿರುವ ಕೆಲವು ವಾಸ್ತುಶಿಲ್ಪಗಳಿಗೆ ಯುನೆಸ್ಕೋ (UNESCO) ವತಿಯಿಂದ ಜಾಗತಿಕ ಪರಂಪರೆಯ ಸ್ಥಾನಮಾನ ಲಭಿಸಿದೆ. ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮತ್ತು ಅವುಗಳ ಒಂದು ಪಟ್ಟಿಯನ್ನು ತಯಾರಿಸಿ.

ಇಂದಿಗೂ ಭಾರತ ಮತ್ತು ಏಷ್ಯಾದ ಇತರ ದೇಶಗಳ ನಡುವೆ ಪರಸ್ಪರ ಸಂಬಂಧಗಳಿವೆ. ಇದರಿಂದಾಗಿ ಪ್ರಾಚೀನ ಕಾಲದ ಇತಿಹಾಸವನ್ನು ಅರಿಯುವುದು ಕೇವಲ ಭೂತಕಾಲವನ್ನು ಅರ್ಥಮಾಡಿಕೊಳ್ಳಲು ಮಾತ್ರ ಸಹಾಯ ಮಾಡದೆ, ಇಂದಿನ ಪ್ರಪಂಚದೊಂದಿಗಿನ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸಲು ಸಹಾಯ ಮಾಡುತ್ತದೆ.



## ಸ್ವಾಧ್ಯಾಯ

**ಪ್ರಶ್ನೆ 1. ಅ) ಸರಿಯಾದ ಪರ್ಯಾಯದ ಮುಂದೆ ☑ ಗುರುತು ಮಾಡಿ.**

1. ಗಾಂಧಾರ ಶೈಲಿಯ ಯಾವ ಮೂರ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿವೆ?
   - ಅ) ಶಿವ ☐
   - ಬ) ವಿಷ್ಣು ☐
   - ಕ) ಗೌತಮ್ ಬುದ್ಧ ☐
2. ಚೀನಾದ ವಿದ್ವಾಂಸ ಭಿಕ್ಕು ಯುವಾನ ಸ್ಯಾಂಗ್ ಭಾರತದ ಯಾವ ವಿಶ್ವವಿದ್ಯಾಲಯದಲ್ಲಿ ಅನೇಕ ವರ್ಷಗಳ ಕಾಲ ಜ್ಞಾನಾರ್ಜನೆ ಮಾಡಿದರು?
   - ಅ) ತಕ್ಷಶಿಲೆ ☐
   - ಬ) ವಿಕ್ರಮಶಿಲೆ ☐
   - ಕ) ನಾಲಂದಾ ☐
3. ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನಾಧರಿಸಿದ ನೃತ್ಯ-ನಾಟಕಗಳು ಯಾವ ದೇಶದಲ್ಲಿಜನಪ್ರಿಯವಾಗಿವೆ??
   - ಅ) ಇಂಡೋನೇಷಿಯಾ ☐
   - ಬ) ಥೈಲ್ಯಾಂಡ್ ☐
   - ಕ) ಕಾಂಬೋಡಿಯಾ ☐
4. 'ರೇಷ್ಮೆ ಮಾರ್ಗ'ವು ಕೆಳಗಿನ ಯಾವ ದೇಶಗಳ ಮೂಲಕ ಹಾದುಹೋಗುತ್ತದೆ?
   - ಅ) ಭಾರತ-ಶ್ರೀಲಂಕಾ-ಕಾಂಬೋಡಿಯಾ ☐
   - ಬ) ಭಾರತ-ಅಫ್ಘಾನಿಸ್ತಾನ-ಮಧ್ಯ ಏಷ್ಯಾ ☐
   - ಕ) ಭಾರತ-ಇಂಡೋನೇಷಿಯಾ-ಚೀನಾ ☐

**ಪ್ರಶ್ನೆ 2. ಅ) ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಮೌರ್ಯ ಸಾಮ್ರಾಜ್ಯದ ಶಿಲ್ಪಕಲೆ ಮತ್ತು ವಾಸ್ತುಶಿಲ್ಪದ ಮೇಲೆ ಪರ್ಷಿಯನ್ ಕಲೆ-ವಾಸ್ತುಶಿಲ್ಪದ ಪ್ರಭಾವವು ಹೇಗೆ ಕಂಡುಬರುತ್ತದೆ?
2. ಭಾರತೀಯ ಸಂಸ್ಕೃತಿಯ ಪ್ರಸಾರವು ಭಾರತದ ಹೊರಗೂ ದೊಡ್ಡ ಪ್ರಮಾಣದಲ್ಲಿ ನಡೆದಿದೆ ಎಂಬುದಕ್ಕೆ ಉದಾಹರಣೆಗಳನ್ನು ಬರೆಯಿರಿ.
3. ಆಗ್ನೇಯ ಏಷ್ಯಾದ ದೇಶಗಳೊಂದಿಗೆ ಭಾರತವು ಅತ್ಯಂತ ನಿಕಟ ಮತ್ತು ಪ್ರಭಾವಶಾಲಿ ಸಂಬಂಧಗಳನ್ನು ಹೊಂದಿತ್ತು ಎಂಬುದಕ್ಕೆ ಪುರಾವೆಗಳನ್ನು ಬರೆಯಿರಿ.

**ಬ) ಟಿಪ್ಪಣಿ ಬರೆಯಿರಿ.**

1. ರೇಷ್ಮೆ ಮಾರ್ಗ
2. ಜಗತ್ತಿನ ಮೇಲೆ ಪ್ರಾಚೀನ ಭಾರತೀಯ ಸಂಸ್ಕೃತಿಯ ಪ್ರಭಾವ
3. ಗಾಂಧಾರ ಶಿಲ್ಪಕಲೆ

**ಪ್ರಶ್ನೆ 3. ಈ ಕೆಳಗಿನ ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**




**ಕೃತಿ**

- ವಿಶ್ವದ ನಕ್ಷೆಯಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವವು ಎಲ್ಲಿಯವರೆಗೆ ತಲುಪಿದೆಯೋ ಅಂತಹ ಸ್ಥಳಗಳನ್ನು ತೋರಿಸಿ. ಉದಾಹರಣೆಗೆ: ಶ್ರೀಲಂಕಾ, ಇಂಡೋನೇಷ್ಯಾ, ಕಾಂಬೋಡಿಯಾ.
- ಅಂತರಜಾಲದ (Internet) ಸಹಾಯದಿಂದ ಶ್ರೀಲಂಕಾದ ಅನುರಾಧಾಪುರದಲ್ಲಿರುವ ಬೋಧಿ ವೃಕ್ಷದ ಚಿತ್ರವನ್ನು ಪಡೆಯಿರಿ ಮತ್ತು ಅದರ ಬಗ್ಗೆ ಸೂಕ್ತ ಪದಗಳಲ್ಲಿ ನಿಮ್ಮ ಟಿಪ್ಪಣಿಯನ್ನು ಬರೆಯಿರಿ

**ಉಪಕ್ರಮ**

- ಭಾರತ ಮತ್ತು ಇತರ ದೇಶಗಳ ನಡುವೆ ಯಾವ ವಿಷಯಗಳ ವಿನಿಮಯ ನಡೆಯುತ್ತಿತ್ತು ಎಂಬುದನ್ನು ತೋರಿಸುವ ಕೋಷ್ಟಕವನ್ನು ತಯಾರಿಸಿ.

ಉದಾಹರಣೆ:

| ದೇಶ | ಭಾರತದಿಂದ ಏನನ್ನು ಕೊಂಡೊಯ್ಯಲಾಯಿತು | ಭಾರತದ ಮೇಲೆ ಆದ ಪರಿಣಾಮವೇನು |
|---|---|---|
| ರೋಮ್ | ಕರಿಮೆಣಸು | ವ್ಯಾಪಾರದಿಂದಾಗಿ ಭಾರತಕ್ಕೆ ಚಿನ್ನ ಬಂದಿತು |
| ........ ........ | .............. .............. | .................. ................ |

- ಯುವಾನ್ ಸ್ವಾಂಗನು ಅನೇಕ ಭಾರತೀಯ ಗ್ರಂಥಗಳನ್ನು ತನ್ನ ತಾಯ್ನಾಡಿಗೆ ಏಕೆ ತೆಗೆದುಕೊಂಡು ಹೋಗಿರಬಹುದು? ಎಂಬುದರ ಕುರಿತು ವರ್ಗದಲ್ಲಿ ಚರ್ಚಿಸಿರಿ.



ಶಿಲ್ಪಪಟ್ಟಿ ಗಾಂಧರ್ ಶೈಲಿ

***

# ನಾಗರಿಕಶಾಸ್ತ್ರ

## ಪಾಠಕ್ಕೆ ಅನುಸಾರ ಅಧ್ಯಯನ ನಿಷ್ಪತ್ತಿ

| ಅ. ಕ್ರ. | ಪಠ್ಯಕ್ರಮದ ಸಾಮರ್ಥ್ಯ | ಅಧ್ಯಯನ ನಿಷ್ಪತ್ತಿ | ಪುಟ ಸಂಖ್ಯೆ |
|---|---|---|---|
| ಪಠ್ಯಕ್ರಮದ ಗುರಿ: CG-5 ಕುಟುಂಬದಲ್ಲಿ ಪ್ರಚಲಿತದಲ್ಲಿರುವ ವಿಷಯಗಳಿಂದ ಸಮುದಾಯ/ಪ್ರಾದೇಶಿಕ/ರಾಷ್ಟ್ರ ಮಟ್ಟದಲ್ಲಿ ಸಮಾಜದಲ್ಲಿ ಕಂಡುಬರುವ ವಿವಿಧ ರೀತಿಯ ಅಸಮಾನತೆ, ಪೂರ್ವಾಗ್ರಹ ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಪರಿಹರಿಸಲು ಮುಂದಾಳತ್ವ ವಹಿಸುವುದು. | | | |
| 1 | **ನಮ್ಮ ಸಾಮಾಜಿಕ ಜೀವನ**<br>C-5.2: ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಂಸ್ಥೆಗಳು ವಿವಿಧ ಹಂತಗಳಲ್ಲಿ ಮಾಡಿದ ಪ್ರಯತ್ನಗಳನ್ನು ಗುರುತಿಸುವುದು, ವಿವರಿಸುವುದು ಮತ್ತು ಅದರ ಆಧಾರದ ಮೇಲೆ ಸಮಾನತೆ, ಒಳಗೊಳ್ಳುವಿಕೆ ಮತ್ತು ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ವ್ಯಕ್ತಿಗಳು ಏನು ಮಾಡಬಹುದು ಎಂಬ ಬಗ್ಗೆ ಅಧ್ಯಯನ ಮಾಡುವುದು | 1. ಸಮಾಜದ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವುದು.<br>2. ಕುಟುಂಬದ ಮಹತ್ವವನ್ನು ತಿಳಿಸುವುದು.<br>ಅ) ಸಂಬಂಧಗಳ ಮಹತ್ವವನ್ನು ತಿಳಿಸುವುದು.<br>ಬ) ಸಾಮಾಜಿಕ ರೀತಿನೀತಿಗಳನ್ನು ವಿವರಿಸುವುದು. | 87, 93<br>88, 93<br>88<br>90, 91 |
| | | 3. ಮಾನವ ಜೀವನದಲ್ಲಿ ಸಾಮಾಜಿಕ ಸಂಸ್ಥೆಗಳ ಕೊಡುಗೆಯನ್ನು ಸ್ಪಷ್ಟಪಡಿಸುವುದು.<br>4. ಸಾಮಾಜಿಕ ಸಂಸ್ಥೆಗಳ ಕಾರ್ಯಗಳನ್ನು ತಿಳಿಸುವುದು.<br>5. ಶಾಲೆ ಒಂದು ಸಾಮಾಜಿಕ ಸಂಸ್ಥೆ ಎಂಬುದನ್ನು ತಿಳಿಸುವುದು. | 89, 93<br><br>89<br>89 |
| | | 6. ಸಾಮಾಜಿಕ ವೈವಿಧ್ಯತೆಯ ಬಗ್ಗೆ ಮಾಹಿತಿ ನೀಡುವುದು.<br>ಅ) ಧಾರ್ಮಿಕ ವೈವಿಧ್ಯತೆಯ ಬಗ್ಗೆ ಮಾಹಿತಿ ನೀಡುವುದು.<br>ಬ) ಭಾಷಾ ವೈವಿಧ್ಯತೆಯ ಬಗ್ಗೆ ಮಾಹಿತಿ ನೀಡುವುದು | 90, 92, 93<br>90, 92<br>90, 92, 93 |
| | | 7. ಸಾಂಸ್ಕೃತಿಕ ವೈವಿಧ್ಯತೆಯನ್ನು ತಿಳಿಸುವುದು. | 91, 92 |
| ಪಠ್ಯಕ್ರಮದ ಗುರಿ: CG-8 ಭಾರತೀಯ ಸಂವಿಧಾನದ ಬೆಳವಣಿಗೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಭಾರತೀಯ ಸಮಾಜದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಲು ಸಂವಿಧಾನದ ಮಹತ್ವವನ್ನು ತಿಳಿಯುವುದು. | | | |
| 2 | **ಭಾರತೀಯ ಸಂವಿಧಾನ**<br>C-8.1 ಕಳೆದ ಕೆಲವು ದಶಕಗಳಲ್ಲಿ ಯಾವುದೇ ದೇಶಕ್ಕೆ, ವಿಶೇಷವಾಗಿ ಭಾರತಕ್ಕೆ ಸಂವಿಧಾನದ ಅವಶ್ಯಕತೆ ಏಕೆ ಇದೆ ಮತ್ತು ಸಂವಿಧಾನದ ಆಳವಾದ ಉದ್ದೇಶಗಳು ಯಾವುವು ಎಂಬುದನ್ನು ತಿಳಿಯುವನು.<br>ಇ-8.2 ಭಾರತೀಯ ಸಂವಿಧಾನದ ರಚನೆಯ ಪ್ರಕ್ರಿಯೆಯನ್ನು ಸ್ಪಷ್ಟಪಡಿಸುವನು. ಅದರಲ್ಲಿ ಅಡಕವಾಗಿರುವ ಭಾರತೀಯ ರಾಷ್ಟ್ರೀಯ ಚಳುವಳಿಯ ಆದರ್ಶ ಕಲ್ಪನೆಗಳು ಹಾಗೂ ಸಾಂಪ್ರದಾಯಿಕ ನಾಗರಿಕತೆಯನ್ನು ಅರ್ಥಮಾಡಿಕೊಳ್ಳುವನು. | 1. ಸಂವಿಧಾನದ ಅರ್ಥವನ್ನು ತಿಳಿಸುವನು<br>2. ಸಂವಿಧಾನದ ಪ್ರಕಾರಗಳನ್ನು ತಿಳಿಸುವನು<br>3. ಭಾರತೀಯ ಸಂವಿಧಾನದ ಅಗತ್ಯ ಮತ್ತು ಮಹತ್ವವನ್ನು ವಿವರಿಸುವನು | 95, 99<br>95<br>95, 99 |
| | | 4. ಭಾರತೀಯ ಸಂವಿಧಾನ ರಚನೆಯ ಹಿನ್ನೆಲೆಯನ್ನು ತಿಳಿಸುವನು. | 95, 96, 99 |
| | | 5. ಸಂವಿಧಾನ ಸಭೆಯ ಬಗ್ಗೆ ಮಾಹಿತಿ ನೀಡುವನು.<br>6. ಕರಡು ಸಮಿತಿಯ ಬಗ್ಗೆ ಮಾಹಿತಿ ನೀಡುವನು. | 96, 97, 98, 99<br>97, 98, 99 |
| 3 | **ಭಾರತೀಯ ಸಂವಿಧಾನದ ಪ್ರಸ್ತಾವನೆ ಮತ್ತು ವೈಶಿಷ್ಟ್ಯಗಳು**<br>C-8.1 ಕಳೆದ ಕೆಲವು ದಶಕಗಳಲ್ಲಿ ಯಾವುದೇ ದೇಶಕ್ಕೆ, ವಿಶೇಷವಾಗಿ ಭಾರತಕ್ಕೆ ಸಂವಿಧಾನದ ಅವಶ್ಯಕತೆ ಏಕೆ ಇದೆ ಮತ್ತು ಸಂವಿಧಾನದ ಆಳವಾದ ಉದ್ದೇಶಗಳು ಯಾವುವು ಎಂಬುದನ್ನು ತಿಳಿಯುವನು.<br>ಇ-8.2 ಭಾರತೀಯ ಸಂವಿಧಾನದ ರಚನೆಯ ಪ್ರಕ್ರಿಯೆಯನ್ನು ಸ್ಪಷ್ಟಪಡಿಸುವನು. ಅದರಲ್ಲಿ ಅಡಕವಾಗಿರುವ ಭಾರತೀಯ ರಾಷ್ಟ್ರೀಯ ಚಳುವಳಿಯ ಆದರ್ಶ ಕಲ್ಪನೆಗಳು ಹಾಗೂ ಸಾಂಪ್ರದಾಯಿಕ ನಾಗರಿಕತೆಯನ್ನು ಅರ್ಥಮಾಡಿಕೊಳ್ಳುವನು. | 7. ಭಾರತೀಯ ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ವಿವರಿಸುವನು.<br>ಅ) ಭಾರತೀಯ ಸಂವಿಧಾನದ ಉದ್ದೇಶಗಳನ್ನು ತಿಳಿಸುವನು.<br>8) ಭಾರತೀಯ ಸಂವಿಧಾನದ ವೈಶಿಷ್ಟಗಳನ್ನು ತಿಳಿಸುವನು. | 100, 102<br><br>101, 102, 103<br>101, 103 |
| ಪಠ್ಯಕ್ರಮದ ಗುರಿ: CG-8 ಭಾರತೀಯ ಸಂವಿಧಾನದ ಬೆಳವಣಿಗೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಭಾರತೀಯ ಸಮಾಜದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಲು ಸಂವಿಧಾನದ ಮಹತ್ವವನ್ನು ತಿಳಿಯುವುದು. | | | |
| 4 | ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು<br>C-8.3 ಸ್ಥಳೀಯ ಸ್ವಯಂ ಸರ್ಕಾರಿ ಸಂಸ್ಥೆಗಳ ಮೂರು ಹಂತದ ಕಾರ್ಯಗಳನ್ನು ವಿವರಿಸುವನು ಮತ್ತು ತಳಮಟ್ಟದವರೆಗೆ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವಲ್ಲಿ ಅವುಗಳ ಮಹತ್ವವನ್ನು ಹೊಗಳುವನು ಮತ್ತು ಪ್ರೋತ್ಸಾ ಹಿಸುವನು. | 1. ಸ್ಥಳೀಯ ಸ್ವಯಂ ಸರ್ಕಾರಿ ಸಂಸ್ಥೆಗಳ ಮೂರು ಹಂತದ ರಚನೆಯನ್ನು ತಿಳಿಸುವನು<br>2. ಗ್ರಾಮ ಪಂಚಾಯಿತಿಯ ಬಗ್ಗೆ ಮಾಹಿತಿ ನೀಡುವನು.<br>ಅ) ಗ್ರಾಮ ಪಂಚಾಯಿತಿಯ ರಚನೆಯನ್ನು ತಿಳಿಸುವನು.<br>ಬ) ಗ್ರಾಮ ಪಂಚಾಯಿತಿಯ ಕಾರ್ಯಗಳನ್ನು ತಿಳಿಸುವನು.<br>ಕ) ಗ್ರಾಮ ಪಂಚಾಯಿತಿ ಆಡಳಿತದ ಬಗ್ಗೆ ಮಾಹಿತಿ ನೀಡುವನು<br>ಡ) ಗ್ರಾಮ ಸಭೆಯ ಬಗ್ಗೆ ಮಾಹಿತಿ ನೀಡುವನು | 104, 111<br>104, 105<br>104, 105, 111<br>105, 111<br>106, 110, 111<br>106, 107 |

| | | | |
|---|---|---|---|
| | | 1. ಪಂಚಾಯತ್ ಸಮಿತಿಯ ರಚನೆಯನ್ನು ಸ್ಪಷ್ಟಪಡಿಸುವನು.<br>ಅ) ಪಂಚಾಯತ್ ಸಮಿತಿಯ ಕಾರ್ಯಗಳನ್ನು ಸ್ಪಷ್ಟಪಡಿಸುವನು.<br>ಬ) ಪಂಚಾಯತ್ ಸಮಿತಿ ಆಡಳಿತದ ಬಗ್ಗೆ ಮಾಹಿತಿ ನೀಡುವನು. | 108<br>108<br>108, 110, 111 |
| | | 4. ಜಿಲ್ಲಾ ಪಂಚಾಯಿತಿಯ ರಚನೆಯನ್ನು ಸ್ಪಷ್ಟಪಡಿಸುವನು.<br>ಅ) ಜಿಲ್ಲಾ ಪಂಚಾಯಿತಿಯ ಕಾರ್ಯಗಳನ್ನು ತಿಳಿಸುವನು.<br>ಬ) ಜಿಲ್ಲಾ ಪಂಚಾಯಿತಿ ಆಡಳಿತದ ಬಗ್ಗೆ ಮಾಹಿತಿ ನೀಡುವನು | 109<br>109<br>109, 110, 111 |
| ಪಠ್ಯಕ್ರಮದ ಗುರಿ: CG-8 ಭಾರತೀಯ ಸಂವಿಧಾನದ ಬೆಳವಣಿಗೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಂಡು ಭಾರತೀಯ ಸಮಾಜದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ಸಂವಿಧಾನದ ಮಹತ್ವವನ್ನು ತಿಳಿಯುವುದು | | | |
| 5 | **ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು**<br>C-8.3: ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಮೂರು ಹಂತದ ಕಾರ್ಯವೈಖರಿಯನ್ನು ವಿವರಿಸುವುದು ಮತ್ತು ತಳಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಅವುಗಳ ಮಹತ್ವವನ್ನು ಹೇಳುತ್ತಾ ಪ್ರಶಂಸಿಸುವುದು ಹಾಗೂ ಪ್ರೋತ್ಸಾಹಿಸುವುದು. | 1. ನಗರ ಪಂಚಾಯತ್‌ನ ರಚನೆಯನ್ನು ತಿಳಿಸುವುದು.<br>2. ನಗರ ಪಂಚಾಯತ್‌ನ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ತಿಳಿಸುವುದು. | 112, 119, 120<br>113 |
| | | 3. ನಗರ ಪರಿಷದ್ ರಚನೆಯನ್ನು ತಿಳಿಸುವುದು.<br>ಅ) ನಗರಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯನ್ನು ತಿಳಿಸುವುದು.<br>4. ನಗರಸಭೆಯ ಕಾರ್ಯಗಳನ್ನು ತಿಳಿಸುವುದು.<br>ಅ) ನಗರ ಸಭೆಯ ಕಡ್ಡಾಯ ಕಾರ್ಯಗಳನ್ನು ತಿಳಿಸುವುದು.<br>ಬ) ನಗರ ಸಭೆಯ ಐಚ್ಛಿಕ ಕಾರ್ಯಗಳನ್ನು ತಿಳಿಸುವುದು.<br>5. ನಗರ ಸಭೆಯ ಆದಾಯದ ಮೂಲಗಳನ್ನು ತಿಳಿಸುವುದು | 112, 113, 114, 119<br>114<br>113, 114, 119<br>113, 114<br>114<br>115 |
| | | 6. ಮಹಾನಗರ ಪಾಲಿಕೆಯ ರಚನೆಯನ್ನು ತಿಳಿಸುವುದು.<br>ಅ) ಮಹಾನಗರ ಪಾಲಿಕೆಯ ಕಾರ್ಯಗಳನ್ನು ತಿಳಿಸುವುದು.<br>ಬ) ಮಹಾನಗರ ಪಾಲಿಕೆಯ ವಿವಿಧ ವಿಷಯ ಸಮಿತಿಗಳ ಬಗ್ಗೆ ಮಾಹಿತಿ ನೀಡುವುದು.<br>ಕ) ಮಹಾನಗರ ಪಾಲಿಕೆಯ ಆಡಳಿತ ವ್ಯವಸ್ಥೆಯನ್ನು ತಿಳಿಸುವುದು.<br>ಡ) ಮಹಾನಗರ ಪಾಲಿಕೆಯ ಆದಾಯದ ಮೂಲಗಳನ್ನು ತಿಳಿಸುವುದು. | 115, 116, 119,<br>116, 119, 120<br>116, 117<br>116, 120<br>117 |
| | | 7. ಕಟಕ್ ಮಂಡಳಿ ಅರ್ಥ ತಿಳಿಸುವುದು.<br>ಅ) ಕಟಕ್ ಮಂಡಳಿನ ರಚನೆಯನ್ನು ತಿಳಿಸುವುದು.<br>ಬ) ಕಟಕ್ ಮಂಡಳಿನ ವೈಶಿಷ್ಟಗಳನ್ನು ತಿಳಿಸುವುದು.<br>ಕ) ಕಟಕ್ ಮಂಡಳಿ ಕಾರ್ಯಗಳನ್ನು ತಿಳಿಸುವುದು. | 117<br>118<br>118<br>118, 119 |
| ಪಠ್ಯಕ್ರಮದ ಗುರಿ: CG–8 ಭಾರತೀಯ ಸಂವಿಧಾನದ ಬೆಳವಣಿಗೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಂಡು, ಭಾರತೀಯ ಸಮಾಜದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಿತ್ತಲು ಸಂವಿಧಾನದ ಮಹತ್ವವನ್ನು ತಿಳಿಸುವುದು | | | |
| 6 | **ಜಿಲ್ಲಾ ಆಡಳಿತ**<br>C-8.3 ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ತ್ರಿ-ಹಂತದ ಕಾರ್ಯಗಳನ್ನು ವಿವರಿಸುವುದು ಮತ್ತು ತಳಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವಲ್ಲಿ ಅವುಗಳ ಮಹತ್ವವನ್ನು ತಿಳಿಸಿ ಪ್ರಶಂಸಿಸುವುದು ಹಾಗೂ ಪ್ರೋತ್ಸಾಹಿಸುವುದು. | 1. ಜಿಲ್ಲಾ ಆಡಳಿತದ ವಿವಿಧ ವಿಭಾಗಗಳ ಹೆಸರುಗಳನ್ನು ತಿಳಿಸುವುದು | 121 |
| | | 2. ಜಿಲ್ಲಾ ಕಂದಾಯ ಆಡಳಿತದ ರಚನೆಯನ್ನು ಸ್ಪಷ್ಟಪಡಿಸುವುದು.<br>ಅ) ಜಿಲ್ಲಾ ಕಂದಾಯ ಆಡಳಿತದ ಕಾರ್ಯಗಳನ್ನು ವಿವರಿಸುವುದು.<br>ಬ) ಜಿಲ್ಲಾ ಕಂದಾಯ ಆಡಳಿತದ ಅಧಿಕಾರಿಗಳ ಬಗ್ಗೆ ಮಾಹಿತಿ ನೀಡುವುದು. | 121, 122<br>122, 126, 127<br>121, 122, 123, 126 |
| | | 3. ಜಿಲ್ಲಾ ಪೊಲೀಸ್ ಆಡಳಿತದ ರಚನೆಯನ್ನು ಸ್ಪಷ್ಟಪಡಿಸುವುದು.<br>ಅ) ಜಿಲ್ಲಾ ಪೊಲೀಸ್ ಆಡಳಿತದ ಕಾರ್ಯಗಳನ್ನು ವಿವರಿಸುವುದು. | 124<br>124, 127 |
| | | 4. ಜಿಲ್ಲಾ ನ್ಯಾಯಾಂಗ ಆಡಳಿತದ ರಚನೆಯನ್ನು ಸ್ಪಷ್ಟಪಡಿಸುವುದು.<br>ಅ) ಜಿಲ್ಲಾ ನ್ಯಾಯಾಂಗ ಆಡಳಿತದ ಕಾರ್ಯಗಳನ್ನು ತಿಳಿಸುವುದು | 125, 126<br>125, 126, 127 |

**ಟಿಪ್ಪಣಿ:** ಪಠ್ಯಪುಸ್ತಕದಲ್ಲಿ ಉಪಯೋಗಿಸಿದ ನಕಾಶೆಗಳನ್ನು ಶೈಕ್ಷಣಿಕ ಉದ್ದೇಶದಿಂದ ತಯಾರಿಸಲ್ಪಟ್ಟಿವೆ. ಇದನ್ನು ರಾಜಕೀಯ ಮತ್ತು ಭೌಗೋಲಿಕ ಪ್ರಮಾಣಕ್ಕಾಗಿ ಉಪಯೋಗಕ್ಕಾಗಿ ಬಳಸಾರದು. ನಕಾಶೆಗಳನ್ನು ತಯಾರಿಸುವಾಗ ಆದಷ್ಟು ಚೊಕ್ಕವಾಗಿ, ಸ್ಪಷ್ಟವಾಗಿ ಮಾಡಲು ಪ್ರಯತ್ನಿಸಲಾಗಿದೆ. ಏನಾದರೂ ತಪ್ಪಿದ್ದರೆ ಅದು ತಾಂತ್ರಿಕ ದೋಷದಿಂದ ಆಗಿರಬಹುದು.

# ಅನುಕ್ರಮಣಿಕೆ



| ಕ್ರಮ ಸಂಖ್ಯೆ | ಪಾಠದ ಹೆಸರು | ಪುಟ ಸಂಖ್ಯೆ |
|---|---|---|
| 1 | ನಮ್ಮ ಸಾಮಾಜಿಕ ಜೀವನ | 87 |
| 2 | ಭಾರತದ ಸಂವಿಧಾನ | 94 |
| 3 | ಭಾರತೀಯ ಸಂವಿಧಾನದ ಪ್ರಸ್ತಾವನೆ ಮತ್ತು ವೈಶಿಷ್ಟ್ಯಗಳು | 100 |
| 4 | ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆ | 104 |
| 5 | ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆ | 112 |
| 6 | ಜಿಲ್ಲಾ ಆಡಳಿತ | 121 |

# 1 ನಮ್ಮ ಸಾಮಾಜಿಕ ಜೀವನ




| | | | |
|---|---|---|---|
| 1.1 | ಸಮಾಜ: ಅರ್ಥ ಮತ್ತು ಅವಶ್ಯಕತೆ | 1.3 | ಸಾಮಾಜಿಕ ವೈವಿಧ್ಯತೆ |
| 1.2 | ಸಾಮಾಜಿಕ ಸಂಸ್ಥೆಗಳು ಮತ್ತು ಕಾರ್ಯಗಳು | 1.4 | ಸಾಂಸ್ಕೃತಿಕ ವೈವಿಧ್ಯತೆ |


ಮಾನವನ ವಿಕಾಸ ಹೇಗೆ ಆಯಿತು ಎಂಬುದನ್ನು ನೀವು ಈಗಾಗಲೇ ಕಲಿತಿದ್ದೀರಿ. ಇಂದಿನ ನಮ್ಮ ಸಾಮಾಜಿಕ ಜೀವನವು ಸಾವಿರಾರು ವರ್ಷಗಳ ವಿಕಾಸದ ಫಲವಾಗಿ ರೂಪುಗೊಂಡಿದೆ. ಮಾನವನು ಅಲೆಮಾರಿ ಸ್ಥಿತಿಯಿಂದ ಸ್ಥಿರ ಸಾಮಾಜಿಕ ಜೀವನದತ್ತ ಸಾಗಿದ್ದಾನೆ.

## 1.1 ಸಮಾಜ: ಅರ್ಥ ಮತ್ತು ಅವಶ್ಯಕತೆ

ಕೇವಲ ಜನರ ಗುಂಪು ಎಂದರೆ ಸಮಾಜವಲ್ಲ, ಬದಲಾಗಿ ಗುಂಪಿನಲ್ಲಿ ವಾಸಿಸುವ ವ್ಯಕ್ತಿಗಳ ನಡುವಿನ ಸಂಬಂಧಗಳ ವ್ಯವಸ್ಥೆಯೇ ಸಮಾಜವಾಗಿದೆ. ಸಮಾಜದಲ್ಲಿ ವೃದ್ಧರು, ಪ್ರೌಢರು, ಯುವಕರು ಮತ್ತು ಸಣ್ಣ ಮಕ್ಕಳು ಹೀಗೆ ಪ್ರತಿಯೊಬ್ಬ ವ್ಯಕ್ತಿಯೂ ಒಳಗೊಂಡಿರುತ್ತಾರೆ.

### 1.1.1 ಮಾನವನಿಗೆ ಸಮಾಜದ ಅಗತ್ಯವೇಕೆ ಎನಿಸಿತು?

ಅಲೆಮಾರಿ ಸ್ಥಿತಿಯಲ್ಲಿದ್ದ ಮಾನವನಿಗೆ ಸ್ಥಿರತೆ ಮತ್ತು ಸುರಕ್ಷತೆ ಇರಲಿಲ್ಲ, ತನ್ನ ದೈಹಿಕ ಮತ್ತು ಭಾವನಾತ್ಮಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಅವನು ಒಂದಾದನು. ಒಗ್ಗಟ್ಟಾಗಿ ಕೆಲಸ ಮಾಡುವುದರಿಂದ ನೈಸರ್ಗಿಕ ಪರಿಸ್ಥಿತಿಯನ್ನು ಹೆಚ್ಚು ಸಮರ್ಥವಾಗಿ ಎದುರಿಸಲು ಸಾಧ್ಯವಾಯಿತು. ಆಹಾರ ಮತ್ತು ವಸತಿ ಪಡೆಯಲು ಮಾನವನು ಶ್ರಮಿಸತೊಡಗಿದನು. ಸಮೂಹದ ಎಲ್ಲರೂ ಶ್ರಮಿಸಿದರೆ ಪ್ರತಿಯೊಬ್ಬರ ಜೀವನವೂ ಸುಖಮಯವಾಗುತ್ತದೆ ಎಂಬುದು ಮಾನವನಿಗೆ ಅರ್ಥವಾಯಿತು. ಇದರಿಂದಲೇ ಮಾನವ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಬಿತ್ತು.

### 1.1.2 ಮಾನವನಲ್ಲಿನ ಸಾಮಾಜಿಕತೆ

ಮಾನವನು ಸಮಾಜದ ಭಾಗವಾಗಿರುವುದರಲ್ಲಿ ಆನಂದ ಪಡುವ ಸಾಮಾಜಿಕ ಪ್ರಾಣಿ. ನಮಗೆಲ್ಲರಿಗೂ ಒಬ್ಬರಿಗೊಬ್ಬರು ಜೊತೆಯಾಗಿ ಇರುವುದು ಇಷ್ಟ. ಮಾನವನು ಕೇವಲ ಸುರಕ್ಷತೆಗಾಗಿ ಅಥವಾ ತನ್ನ ದೈಹಿಕ ಮತ್ತು ಭೌತಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಮಾಜದಲ್ಲಿ ವಾಸಿಸುವುದಿಲ್ಲ, ಬದಲಾಗಿ ತನ್ನ ಸರ್ವಾಂಗೀಣ ವಿಕಾಸಕ್ಕಾಗಿ ಸಮಾಜದಲ್ಲಿ ಇರುತ್ತಾನೆ. ನಮಗೆ ಸಂತೋಷವಾದರೆ ಅದನ್ನು ಯಾರಿಗಾದರೂ ಹೇಳಬೇಕೆಂದು ಅನಿಸುತ್ತದೆ; ದುಃಖವಾದರೆ ಯಾರಾದರೂ ನಮ್ಮನ್ನು ಅರ್ಥಮಾಡಿಕೊಳ್ಳಲಿ ಎಂದು ಬಯಸುತ್ತೇವೆ. ನಮಗೆ ಹೊಸ ಕಲ್ಪನೆಗಳು ಹೊಳೆದಾಗ ಅವುಗಳನ್ನು ಪ್ರಿಯಜನರೊಂದಿಗೆ ಹಂಚಿಕೊಳ್ಳಬೇಕೆಂದು ಅನಿಸುತ್ತದೆ. ಇಂತಹ ಭಾವನಾತ್ಮಕ ಮತ್ತು ಬೌದ್ಧಿಕ ವಿನಿಮಯದಿಂದಲೇ ನಮ್ಮ ಸಾಮಾಜಿಕತೆ ಎದ್ದು ಕಾಣುತ್ತದೆ.

**ಕೆಳಗಿನ ಮೊದಲಿನ ಮೂರೂ ಚಿತ್ರಗಳನ್ನು ಗಮನಿಸಿ ಕೊನೆಯ ಚಿತ್ರದಲ್ಲಿ ಕೊಟ್ಟಿರುವ ಪ್ರಶ್ನೆಗಳ ಉತ್ತರ ಹುಡುಕಿ**




**ಸಾಮಾಜಿಕತೆ:** ಸಾಮಾಜಿಕತೆ ಎಂದರೆ ವ್ಯಕ್ತಿಗಳು ಇತರ ಜನರೊಂದಿಗೆ ಸುಲಭವಾಗಿ ಸಂವಹನ ನಡೆಸುವ ಮತ್ತು ಸಹಕಾರದಿಂದ ವರ್ತಿಸುವ ಸಾಮರ್ಥ್ಯ.




ಸಮಾಜಶೀಲತೆಯಿಂದ ಮಕ್ಕಳ ವಿಕಾಸ

### 1.1.3 ಕುಟುಂಬ ಸಂಸ್ಥೆಯ ವಿಕಾಸ

| ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|
|  |  |
| ಅಜ್ಜ ಅಜ್ಜಿ → ಅಪ್ಪ-ಅಮ್ಮ → ಮಕ್ಕಳು; ಅಜ್ಜ ಅಜ್ಜಿ → ಚಿಕ್ಕಪ್ಪ ಚಿಕ್ಕಮ್ಮ → ಮಕ್ಕಳು | ಅಪ್ಪ-ಅಮ್ಮ → ಮಕ್ಕಳು |

ಮಾನವನ ಆರಂಭದ ಕಾಲದಲ್ಲಿ 'ಕುಟುಂಬ' ಎಂಬ ಪರಿಕಲ್ಪನೆಯು ಇಂದಿನಂತೆ ಸ್ಪಷ್ಟವಾಗಿರಲಿಲ್ಲ, ಮಾನವರು ಅಲೆಮಾರಿ ಗುಂಪುಗಳಲ್ಲಿ ವಾಸಿಸುತ್ತಿದ್ದರು. ನೈಸರ್ಗಿಕ ಸಂಕಷ್ಟಗಳಿಂದ ರಕ್ಷಣೆ ಪಡೆಯಲು ಜನರು ಒಟ್ಟಾಗಿ ವಾಸಿಸಲು ಪ್ರಾರಂಭಿಸಿದ ಕಾರಣ, ಅವರಲ್ಲಿ ಸುರಕ್ಷತೆಯ ಭಾವನೆ ಮೂಡಿತು.

ಆಹಾರದ ಅಗತ್ಯವನ್ನು ಪೂರೈಸಲು ಮಾನವನು ಕೃಷಿ ಮಾಡಲು ಪ್ರಾರಂಭಿಸಿದನು, ಇದರಿಂದ ಅವನ ಜೀವನವು ಸ್ಥಿರವಾಯಿತು. ಕೃಷಿಗೆ ಹೆಚ್ಚಿನ ಮಾನವಶಕ್ತಿಯ ಅವಶ್ಯಕತೆ ಇದ್ದುದರಿಂದ 'ಕುಟುಂಬ ಪದ್ಧತಿ' ಅಸ್ತಿತ್ವಕ್ಕೆ ಬಂದಿತು.



**ಮಾಡೋಣ ಬನ್ನಿ**

ನಿಮ್ಮ ಕುಟುಂಬದ ಚಾರ್ಟ್ ತಯಾರಿಸಿ ಮತ್ತು ಕುಟುಂಬದಲ್ಲಿನ ಕೆಲಸದ ಹಂಚಿಕೆಯನ್ನು ತೋರಿಸಿ. ನೀವು ಮನೆಯಲ್ಲಿ ಯಾವೆಲ್ಲ ಕೆಲಸಗಳನ್ನು ಮಾಡುತ್ತೀರಿ ಎಂಬುದರ ಪಟ್ಟಿಯನ್ನು ಸಿದ್ಧಪಡಿಸಿ




### 1.1.4 ಸಮಾಜದಲ್ಲಿ ಕೆಲಸದ ವಿಭಜನೆ

ಸಮಾಜದ ವಿವಿಧ ವರ್ಗಗಳ ನಿರ್ದಿಷ್ಟ ಪದ್ಧತಿಗಳು ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿ ನಿಯಮಗಳು ಮತ್ತು ಕಾನೂನುಗಳು ಅಸ್ತಿತ್ವದಲ್ಲಿವೆ. ಗುಂಪಿನ ಪ್ರತಿಯೊಬ್ಬರಿಗೂ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿರಲಿಲ್ಲ, ಆದ್ದರಿಂದ, ಗುಂಪಿನಲ್ಲಿ ಕೆಲಸದ ವಿಭಜನೆಯು ಪ್ರಾರಂಭವಾಯಿತು ಮತ್ತು ಅದರ ಮೂಲಕ ಸಮಾಜವು ನಿರ್ಮಾಣವಾಯಿತು. ನಂತರ, ಸಮಾಜದ ವ್ಯವಹಾರಗಳು ಸುಗಮವಾಗಿ ನಡೆಯಲು ನಿಯಮಗಳನ್ನು ರೂಪಿಸಲಾಯಿತು.

**ಕುಟುಂಬ** : ರಕ್ತಸಂಬಂಧ, ವಿವಾಹ ಅಥವಾ ದತ್ತು ಸ್ವೀಕಾರದ ಮೂಲಕ ಒಂದೇ ಗುಂಪಿನಲ್ಲಿ ಒಟ್ಟಿಗೆ ವಾಸಿಸುವ ಮತ್ತು ಪರಸ್ಪರ ಕಾಳಜಿ ವಹಿಸುವ ಜನರ ಸಮೂಹವನ್ನು ಕುಟುಂಬ ಎಂದು ಕರೆಯಲಾಗುತ್ತದೆ.

**ಚಿಕ್ಕ ಕುಟುಂಬ** : ಕುಟುಂಬದ ಸದಸ್ಯರ ಸಂಖ್ಯೆ 4 ಕ್ಕಿಂತ ಕಡಿಮೆ ಇದ್ದರೆ, ಅದನ್ನು ಚಿಕ್ಕ ಕುಟುಂಬ ಎನ್ನುತ್ತಾರೆ. (ಉದಾಹರಣೆಗೆ: ತಾಯಿ, ತಂದೆ, ಸಹೋದರ, ಸಹೋದರಿ)

**ದೊಡ್ಡ ಕುಟುಂಬ** : ತಾಯಿ-ತಂದೆ ಮತ್ತು ಮಕ್ಕಳೊಂದಿಗೆ ಅಜ್ಜಿ-ತಾತ, ಚಿಕ್ಕಪ್ಪ-ಚಿಕ್ಕಮ್ಮ ಮತ್ತು ಅವರ ಮಕ್ಕಳು ಒಟ್ಟಿಗೆ ವಾಸಿಸುವ ಕುಟುಂಬವನ್ನು ದೊಡ್ಡ ಅಥವಾ ಜಂಟಿ ಕುಟುಂಬ ಎಂದು ಕರೆಯಲಾಗುತ್ತದೆ

## 1.2 ಸಾಮಾಜಿಕ ಸಂಸ್ಥೆಗಳು ಮತ್ತು ಕಾರ್ಯಗಳು




ಕುಟುಂಬ, ಶಾಲೆ, ಕಾಲೇಜು, ಧಾರ್ಮಿಕ ಸಂಸ್ಥೆಗಳು ಇತ್ಯಾದಿಗಳನ್ನು ಸಾಮಾಜಿಕ ಸಂಸ್ಥೆಗಳು ಎಂದು ಗುರುತಿಸಲಾಗುತ್ತದೆ. ಮೂಲಭೂತ ಸಾಮಾಜಿಕ ಅಗತ್ಯಗಳನ್ನು ಪೂರೈಸುವುದು ಇವುಗಳ ಮುಖ್ಯ ಕಾರ್ಯವಾಗಿದೆ. ಸಮಾಜಕ್ಕೆ ಉತ್ತಮ ಮೌಲ್ಯಗಳನ್ನು ಕಲಿಸುವುದರ ಜೊತೆಗೆ ಭಾವನಾತ್ಮಕ ಬೆಂಬಲ ಮತ್ತು ಶಿಸ್ತನ್ನು ಕಾಪಾಡುವುದು ಸಾಮಾಜಿಕ ಸಂಸ್ಥೆಗಳ ಪ್ರಮುಖ ಕಾರ್ಯವಾಗಿದೆ.

ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರವಾಗಿ ಯೋಚಿಸುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಈ ಆಲೋಚನಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಕುಟುಂಬದ ಸದಸ್ಯರು, ನೆರೆಹೊರೆಯವರು, ಸಂಬಂಧಿಕರು, ಸ್ನೇಹಿತರು ಮತ್ತು ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ. ಅದೇ ರೀತಿ ರೇಡಿಯೋ, ದಿನಪತ್ರಿಕೆಗಳು, ದೂರದರ್ಶನ (ಟಿ.ವಿ.), ಚಲನಚಿತ್ರಗಳು, ನಾಟಕಗಳು, ಇಂಟರ್ನೆಟ್, ಸಾಮಾಜಿಕ ಸಂಘಟನೆಗಳು ಮತ್ತು ಧಾರ್ಮಿಕ ಸಂಸ್ಥೆಗಳ ಮೂಲಕ ಪ್ರತಿಯೊಬ್ಬರ ವ್ಯಕ್ತಿತ್ವ ಮತ್ತು ಆಲೋಚನೆಗಳು ವಿಕಸನಗೊಳ್ಳುತ್ತವೆ. ಸ್ವತಂತ್ರವಾಗಿ ಯೋಚಿಸುವ ಸಾಮರ್ಥ್ಯದಿಂದಾಗಿ ವ್ಯಕ್ತಿಗಳಲ್ಲಿ ವಿಭಿನ್ನ ಆಸಕ್ತಿಗಳು ಮತ್ತು ಇಷ್ಟಕಷ್ಟಗಳು ನಿರ್ಮಾಣವಾಗುತ್ತವೆ. ಒಂದೇ ಗ್ರಾಮದ ಅಥವಾ ನಗರದ ಒಂದು ಭಾಗದ ಸಮಾಜದಲ್ಲಿ ವಾಸಿಸುವ ವಿದ್ಯಾರ್ಥಿಗಳಲ್ಲಿ ವಿಭಿನ್ನ ಕಲೆಗಳು ಮತ್ತು ಕೌಶಲ್ಯಗಳು ಅಭಿವೃದ್ಧಿಗೊಳ್ಳುತ್ತವೆ. ಈ ಕಲೆ ಮತ್ತು ಕೌಶಲ್ಯಗಳ ಆಧಾರದ ಮೇಲೆ, ಒಂದೇ ಶಾಲೆಯ ವಿದ್ಯಾರ್ಥಿಗಳು ಭವಿಷ್ಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಾರೆ.

**ಶಾಲೆ: ಒಂದು ಪ್ರಮುಖ ಸಾಮಾಜಿಕ ಸಂಸ್ಥೆ ಸಮಾಜವು ನಿರ್ಮಿಸಿದ ಮೂಲಭೂತ ಸಾಮಾಜಿಕ ಸಂಸ್ಥೆಯೇ ಶಾಲೆ.**

ಶಿಸ್ತು, ಸಹಕಾರ, ವಿವಿಧ ಘಟಕಗಳ ಮತ್ತು ವಿಷಯಗಳ ಪರಿಚಯ, ಕಲೆ ಮತ್ತು ಕೌಶಲ್ಯಗಳ ಪೋಷಣೆ, ಸಾಂಘಿಕ ಭಾವನೆ ಇತ್ಯಾದಿಗಳನ್ನು ನಾವು ಶಾಲೆಯ ಮೂಲಕ ಕಲಿಯುತ್ತೇವೆ. ವೈಯಕ್ತಿಕ ಜೀವನ ಮತ್ತು ಸಾಮಾಜಿಕ ಅಗತ್ಯಗಳ ನಡುವಿನ ಪ್ರಮುಖ ಕೊಂಡಿಯೇ ಶಾಲೆ.



**ಮಾಡಿ ನೋಡೋಣ:**

1) ನಿಮ್ಮ ಗೆಳೆಯ-ಗೆಳತಿಯರಿಗೆ ಯಾವ ಯಾವ ಕಲೆಗಳಲ್ಲಿ ಆಸಕ್ತಿ ಇದೆ ಎಂಬುದರ ಪಟ್ಟಿಯನ್ನು ತಯಾರಿಸಿ.

2) ನಿಮ್ಮ ಗೆಳೆಯ-ಗೆಳತಿಯರು ದೊಡ್ಡವರಾದ ಮೇಲೆ ಏನಾಗಲು ಬಯಸುತ್ತಾರೆ ಎಂಬುದರ ಬಗ್ಗೆ ಅವರೊಂದಿಗೆ ಚರ್ಚಿಸಿ ಪಟ್ಟಿಯನ್ನು ತಯಾರಿಸಿ.

### 1.2.1 ಸಮಾಜದಲ್ಲಿನ ಪರಸ್ಪರ ಅವಲಂಬನೆ

ಆಹಾರ ಮತ್ತು ವಸತಿ ಮನುಷ್ಯನ ಮೂಲಭೂತ ಅಗತ್ಯಗಳಾಗಿದ್ದವು. ಕುಟುಂಬದಲ್ಲಿ ವಾಸಿಸುವ ಮನುಷ್ಯನಿಗೆ ಬಟ್ಟೆಯ ಅಗತ್ಯವೂ ಕಂಡುಬಂದಿತು. ಆಹಾರ-ವಸತಿ-ಬಟ್ಟೆ ಇವು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಅಗತ್ಯಗಳಾಗಿವೆ. ಇವುಗಳನ್ನು ಪೂರೈಸಲು ಶಾಶ್ವತ ವ್ಯವಸ್ಥೆಯನ್ನು ನಿರ್ಮಿಸುವ ಜವಾಬ್ದಾರಿ ಸಮಾಜದ ಮೇಲಿದೆ. ಉದಾಹರಣೆಗೆ,

1) ಆಹಾರದ ಪೂರೈಕೆಗಾಗಿ ಕೃಷಿ ಮಾಡುವುದು.

2) ಕೃಷಿ ಮಾಡಲು ಉಪಕರಣಗಳು ಮತ್ತು ಪ್ರಾಣಿಗಳನ್ನು ಲಭ್ಯವಾಗುವಂತೆ ಮಾಡುವುದು.

3) ಬಿತ್ತನೆ ಬೀಜಗಳನ್ನು ಲಭ್ಯವಾಗಿಸುವುದು.

**ಸಮಾಜ** : ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ, ತನ್ನದೇ ಆದ ಆಚಾರ-ವಿಚಾರಗಳನ್ನು ಹೊಂದಿರುವ ಮತ್ತು ಜೀವನದ ಬಗ್ಗೆ ಒಂದು ನಿರ್ದಿಷ್ಟ ದೃಷ್ಟಿಕೋನವನ್ನು ಹೊಂದಿರುವ ಮಾನವ ಸಮೂಹವನ್ನು 'ಸಮಾಜ' ಎನ್ನಲಾಗುತ್ತದೆ.

**ಸಾಮಾಜಿಕ ಸಂಸ್ಥೆ** : ✻ ಮೂಲಭೂತ ಸಾಮಾಜಿಕ ಕಾರ್ಯಗಳನ್ನು ಪೂರೈಸಲು ಮಾನವನ ನಡವಳಿಕೆಯನ್ನು ಸಂಘಟಿತ ರೂಪದಲ್ಲಿ ರೂಪಿಸುವುದೇ 'ಸಾಮಾಜಿಕ ಸಂಸ್ಥೆ'ಗಳಾಗಿವೆ. ✻ ವಿವಾಹ ಸಂಸ್ಥೆ, ಜಾತಿ ವ್ಯವಸ್ಥೆ, ಕುಟುಂಬ ವ್ಯವಸ್ಥೆ, ಶಿಕ್ಷಣ ಸಂಸ್ಥೆ ಇತ್ಯಾದಿಗಳು ಸಾಮಾಜಿಕ ಸಂಸ್ಥೆಗಳಿಗೆ ಕೆಲವು ಉದಾಹರಣೆಗಳಾಗಿವೆ.

**ಸಮಾಜದ ಘಟಕಗಳು** : ವ್ಯಕ್ತಿ, ಕುಟುಂಬ, ಗುಂಪು, ಸಂಸ್ಕೃತಿ, ಸಾಮಾಜಿಕ ನಿಯಮಗಳು ಮತ್ತು ಮೌಲ್ಯಗಳು, ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ಸಂಸ್ಥೆಗಳು- ಇವೆಲ್ಲವೂ ಸಮಾಜದ ಪ್ರಮುಖ ಘಟಕಗಳಾಗಿವೆ. ವ್ಯಕ್ತಿ, ಕುಟುಂಬ ಮತ್ತು ಸಮೂಹ ಇವು ಸಮಾಜದ ಮೂಲ ಘಟಕಗಳಾಗಿವೆ.

4) ಕೃಷಿ ಉತ್ಪನ್ನಗಳ ಸಂಸ್ಕರಣಾ ಉದ್ಯಮಗಳನ್ನು ಸ್ಥಾಪಿಸುವುದು.

5) ಈ ಎಲ್ಲಾ ಅಗತ್ಯಗಳನ್ನು ಪೂರೈಸಲು ಆರ್ಥಿಕ ಸೌಲಭ್ಯಗಳನ್ನು (ಉದಾಹರಣೆಗೆ ಪತ್ತಿನ ಸಂಘಗಳು ಅಥವಾ ಬ್ಯಾಂಕುಗಳಿಂದ ಸಾಲ) ಒದಗಿಸುವುದು.

ಸಮಾಜದಲ್ಲಿ ಇಂತಹ ಒಂದು ಸಂಪೂರ್ಣ ವ್ಯವಸ್ಥೆಯನ್ನು ನಿರ್ಮಿಸಬೇಕಾಗುತ್ತದೆ. ಸಮಾಜದ ವ್ಯಕ್ತಿಗಳ ಬೌದ್ಧಿಕತೆಯಿಂದ ಶಿಕ್ಷಣ, ಆರೋಗ್ಯದಂತಹ ಸೇವಾ-ಸೌಲಭ್ಯಗಳು ನಿರ್ಮಾಣವಾಗುತ್ತವೆ. ಸಮಾಜದ ವ್ಯಕ್ತಿಗಳ ಕಲೆ ಮತ್ತು ಗುಣಗಳಿಂದ ಸಾಂಸ್ಕೃತಿಕ ಶ್ರೀಮಂತಿಕೆ ಬರುತ್ತದೆ ಮತ್ತು ಮನೋರಂಜನೆಯ ಸಾಧನಗಳು ತಯಾರಾಗುತ್ತವೆ. ಸಮಾಜದ ವ್ಯಕ್ತಿಗಳ ವ್ಯಾಪಾರ ಕೌಶಲ ಮತ್ತು ಉದ್ಯಮಶೀಲತೆಯಿಂದ ಉದ್ಯೋಗ-ಧಂದೆಗಳು ಬೆಳೆಯುತ್ತವೆ. ಭೌತಿಕ ಅಗತ್ಯಗಳ ಪೂರೈಕೆಗಾಗಿ ಹಾಗೂ ಮಾನಸಿಕ ಮತ್ತು ಭಾವನಾತ್ಮಕ ಅಗತ್ಯಗಳ ಪೂರೈಕೆಗಾಗಿ ಸಮಾಜದ ಎಲ್ಲಾ ಮನುಷ್ಯರು ಪರಸ್ಪರರ ಮೇಲೆ ಅವಲಂಬಿತರಾಗಿರುತ್ತಾರೆ. ಇದನ್ನೇ ಸಮಾಜದ ವ್ಯಕ್ತಿಗಳ ಪರಸ್ಪರಾವಲಂಬನೆ ಎನ್ನಲಾಗುತ್ತದೆ.




## 1.3 ಸಾಮಾಜಿಕ ವೈವಿಧ್ಯತೆ

ಭಾರತೀಯ ಸಮಾಜದಲ್ಲಿ ಅನೇಕ ಭಾಷೆಗಳು, ಸಂಸ್ಕೃತಿಗಳು, ಆಹಾರ ಪದ್ಧತಿಗಳು, ಧರ್ಮಗಳು, ಆಚಾರ-ವಿಚಾರಗಳು ಮತ್ತು ಸಂಪ್ರದಾಯಗಳಿವೆ. ಭಾರತದ ಭೌಗೋಳಿಕ ವೈವಿಧ್ಯತೆಯೂ ಗಮನಾರ್ಹವಾಗಿದೆ. ಭೌಗೋಳಿಕ ವೈವಿಧ್ಯತೆಯ ಪರಿಣಾಮವಾಗಿ ಸಾಂಸ್ಕೃತಿಕ ವೈವಿಧ್ಯತೆಯು ನಿರ್ಮಾಣವಾಗುತ್ತದೆ. ಈ ವೈವಿಧ್ಯತೆಯೇ ಭಾರತದ ಪ್ರಮುಖ ವೈಶಿಷ್ಟ್ಯ ಮತ್ತು ಭಾರತದ ನಿಜವಾದ ಶಕ್ತಿಯಾಗಿದೆ.

### 1.3.1 ಧಾರ್ಮಿಕ ವೈವಿಧ್ಯತೆ

ಭಾರತದಲ್ಲಿ ಹಿಂದೂ, ಮುಸ್ಲಿಂ, ಬೌದ್ಧ, ಜೈನ, ಕ್ರಿಶ್ಚಿಯನ್, ಸಿಖ್ ಮತ್ತು ಪಾರ್ಸಿ ಹೀಗೆ ವಿವಿಧ ಧರ್ಮಗಳ ಜನರು ಸೌಹಾರ್ದತೆಯಿಂದ ಬಾಳುತ್ತಿದ್ದಾರೆ. ಪ್ರತಿಯೊಬ್ಬರಿಗೂ ತಮ್ಮ ಧರ್ಮದಂತೆ ಹಬ್ಬ ಹರಿದಿನಗಳನ್ನು ಆಚರಿಸುವ ಸ್ವಾತಂತ್ರ್ಯವಿದೆ. ಇದರಿಂದ ಸಮಾಜದಲ್ಲಿ ಏಕತೆ ಮೂಡುತ್ತದೆ.

### 1.3.2 ಭಾಷಾ ವೈವಿಧ್ಯತೆ

ಸಮಾಜದ ಕಾರಣದಿಂದಾಗಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ವಿಶಿಷ್ಟ ಗುಣಗಳು ಮತ್ತು ಸಾಮರ್ಥ್ಯಗಳು ವಿಕಸನಗೊಳ್ಳುತ್ತವೆ. ಪರಸ್ಪರರ ಜೊತೆ ಮಾತನಾಡಲು ನಾವು ಭಾಷೆಯನ್ನು ಕಲಿಯುತ್ತೇವೆ. ಆ ಭಾಷೆಯು ನಮಗೆ ಜನ್ಮತಃ ಬಂದಿರುವುದಿಲ್ಲ, ನಾವು ಅದನ್ನು ನಮ್ಮ ಮನೆಯಲ್ಲಿ, ನೆರೆಹೊರೆಯಲ್ಲಿ ಮತ್ತು ಶಾಲೆಯಲ್ಲಿ ಕಲಿಯುತ್ತೇವೆ. ಶಾಲೆಯಲ್ಲಂತೂ ನಮಗೆ ವಿವಿಧ ಭಾಷೆಗಳನ್ನು ಕಲಿಯುವ ಅವಕಾಶ ಸಿಗುತ್ತದೆ.

ನಮ್ಮ ಸುತ್ತಮುತ್ತ ಮರಾಠಿ, ಹಿಂದಿ, ಉರ್ದು, ಗುಜರಾತಿ, ಕನ್ನಡ, ತೆಲುಗು, ತಮಿಳು, ಬಂಗಾಳಿ, ಸಿಂಧಿ ಹೀಗೆ ಅನೇಕ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಹಾಗೆಯೇ ಅಹಿರಾಣಿ, ಕೊಂಕಣಿ, ವರ್ಹಾಡಿ ಅಂತಹ ಉಪಭಾಷೆಗಳು ಮತ್ತು ಗೊಂಡಿ, ಭಿಲ್, ಸಂತಾಲಿ ಅಂತಹ ಆದಿವಾಸಿ ಭಾಷೆಗಳಿಂದಾಗಿ ನಮ್ಮ ಭಾಷಾ ಪರಂಪರೆಯು ಶ್ರೀಮಂತವಾಗಿದೆ.

**ಸಮಾಜದಲ್ಲಿನ ಪರಸ್ಪರ ಅವಲಂಬನೆ :** ಸಮಾಜದ ವ್ಯಕ್ತಿಗಳು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಒಬ್ಬರನ್ನೊಬ್ಬರು ಅವಲಂಬಿಸಿರುತ್ತಾರೆ. ಈ ಸ್ಥಿತಿಯನ್ನು ಸಮಾಜದಲ್ಲಿನ ಪರಸ್ಪರ ಅವಲಂಬನೆ ಎನ್ನಲಾಗುತ್ತದೆ.

**ಸಾಮಾಜಿಕ ವೈವಿಧ್ಯತೆ :** ಸಾಮಾಜಿಕ ವೈವಿಧ್ಯತೆ ಎಂದರೆ ಸಮಾಜದಲ್ಲಿ ಕಂಡುಬರುವ ಭಾಷೆ, ಧರ್ಮ, ಜಾತಿ, ಸಂಸ್ಕೃತಿ, ಸಂಪ್ರದಾಯ, ಉಡುಗೆ-ತೊಡುಗೆ ಮತ್ತು ವಿಚಾರಧಾರೆ ಇತ್ಯಾದಿಗಳಲ್ಲಿನ ಭಿನ್ನತೆ.

**ಧಾರ್ಮಿಕ ವೈವಿಧ್ಯತೆ :** ಒಂದು ಸಮಾಜದಲ್ಲಿ ಅಥವಾ ದೇಶದಲ್ಲಿ ವಿವಿಧ ಧರ್ಮಗಳ ಜನರು ಒಟ್ಟಾಗಿ ಸಾಮರಸ್ಯದಿಂದ ಬಾಳುವುದೇ ಧಾರ್ಮಿಕ ವೈವಿಧ್ಯತೆ.



**ನೋಡೋಣ ಬನ್ನಿ!**

ನಿಮ್ಮ ಪರಿಸರದಲ್ಲಿ ಯಾವ ಯಾವ ಭಾಷೆಗಳನ್ನು ಮಾತನಾಡುತ್ತಾರೆ?

### 1.4 ಸಾಂಸ್ಕೃತಿಕ ವೈವಿಧ್ಯತೆ

ಮಾನವ ಸಮಾಜದ ಜೀವನದ ವಿಕಾಸವು ಕಲೆ, ಭಾಷೆ, ವೇಷಭೂಷಣ, ಆಹಾರ, ಸಂಪ್ರದಾಯ, ಕ್ರೀಡೆ ಮುಂತಾದ ಘಟಕಗಳ ಪರಸ್ಪರ ಕ್ರಿಯೆಯಿಂದಾಗಿದೆ. ಭಾರತವು ಸಾಂಸ್ಕೃತಿಕ ವೈವಿಧ್ಯತೆಯಿಂದ ಶ್ರೀಮಂತವಾಗಿರುವ ದೇಶವಾಗಿದೆ. ಪ್ರತಿಯೊಂದು ಪ್ರದೇಶದ ಹಬ್ಬಗಳು, ಉತ್ಸವಗಳು, ಹಾಡುಗಳು ಮತ್ತು ಆಚರಣೆಗಳು ವಿಭಿನ್ನವಾಗಿವೆ. ಆದರೆ, ಈ ವೈವಿಧ್ಯತೆಯ ಹಿಂದಿನ ಪ್ರೇರಣೆ ಮತ್ತು ನಂಬಿಕೆಗಳು ಒಂದೇ ಆಗಿರುವುದರಿಂದ ಇಡೀ ದೇಶವು ಏಕತೆಯ ಸೂತ್ರದಲ್ಲಿ ಬಂಧಿಸಲ್ಪಟ್ಟಿದೆ.



**ಶೋಧಿಸಿ ನೋಡಿ!**

ಮಹಾರಾಷ್ಟ್ರದಲ್ಲಿ ಜನವರಿ ತಿಂಗಳಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ಅದೇ ರೀತಿ, ವಿವಿಧ ಪ್ರದೇಶಗಳಲ್ಲಿ ಜನವರಿ ತಿಂಗಳಲ್ಲಿ ಸೂರ್ಯನ ಸಂಕ್ರಮಣವನ್ನು ಆಚರಿಸುವ ಹಬ್ಬಗಳನ್ನು ಯಾವ ಹೆಸರುಗಳಿಂದ ಕರೆಯುತ್ತಾರೆ?

### 1.4.1 ಆಹಾರ ವೈವಿಧ್ಯತೆ

ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಕೃಷಿ ಉತ್ಪನ್ನಗಳು ಬದಲಾಗುತ್ತವೆ ಮತ್ತು ಅದರಂತೆ ದೈನಂದಿನ ಆಹಾರವೂ ಪ್ರದೇಶಕ್ಕೆ ಅನುಗುಣವಾಗಿ ಬದಲಾಗುತ್ತದೆ. ಮಹಾರಾಷ್ಟ್ರದಲ್ಲಿ ಇಷ್ಟಪಟ್ಟು ಸೇವಿಸುವ 'ಪಿಠಲ-ಭಾಕ್ರಿ' ಇತರ ರಾಜ್ಯಗಳಲ್ಲಿ ಅಪರೂಪವಾಗಿ ಕಂಡುಬರುತ್ತದೆ.

- **ಎಣ್ಣೆ:** ಭಾರತದ ದಕ್ಷಿಣದಲ್ಲಿ ತೆಂಗಿನ ಎಣ್ಣೆ, ಉತ್ತರದಲ್ಲಿ ಸಾಸಿವೆ ಎಣ್ಣೆ ಮತ್ತು ಪಶ್ಚಿಮದಲ್ಲಿ ಶೇಂಗಾ ಎಣ್ಣೆಯನ್ನು ಬಳಸಲಾಗುತ್ತದೆ.
- **ಮುಖ್ಯ ಆಹಾರ:** ಭಾರತದ ದಕ್ಷಿಣ ಮತ್ತು ಕರಾವಳಿ ಭಾಗಗಳಲ್ಲಿ 'ಅಕ್ಕಿ' (ಅನ್ನ) ಮುಖ್ಯವಾದರೆ, ಉತ್ತರ ಮತ್ತು ಮಧ್ಯ ಭಾರತದಲ್ಲಿ 'ಗೋದಿ, ಸಜ್ಜೆ, ಜೋಳ ಮತ್ತು ಮೆಕ್ಕೆಜೋಳ' ಮುಖ್ಯ ಆಹಾರವಾಗಿದೆ.
- **ಏಕತೆ:** ಇಡ್ಲಿ-ದೋಸೆ ಮತ್ತು ಸಮೋಸಾ-ಪರಾಠದಂತಹ ಪದಾರ್ಥಗಳು ಇಂದು ದೇಶಾದ್ಯಂತ ಜನಪ್ರಿಯವಾಗಿವೆ, ಇದು 'ವೈವಿಧ್ಯತೆಯಲ್ಲಿ ಏಕತೆ'ಯನ್ನು ತೋರಿಸುತ್ತದೆ.



**ಹುಡುಕಿ ನೋಡೋಣ**

ದೇಶದ ವಿವಿಧ ಪ್ರದೇಶಗಳಲ್ಲಿಯ ಜನಪ್ರಿಯ ರುಚಿಕರ ಸಿಹಿ ಪದಾರ್ಥಗಳ ಪಟ್ಟಿಯನ್ನು ತಯಾರಿಸಿ. (ಉದಾಹರಣೆಗೆ- ಮಹಾರಾಷ್ಟ್ರ -ಹೋಳಿಗೆ/ಒಬ್ಬಟ್ಟು)



ಭಾರತದಲ್ಲಿಯ ಆಹಾರ ವೈವಿಧ್ಯತೆ

| | |
|---|---|
| **ಭಾಷಾ ವೈವಿಧ್ಯತೆ** | : ಭಾಷಾ ವೈವಿಧ್ಯತೆ ಎಂದರೆ ಒಂದು ದೇಶ, ರಾಜ್ಯ ಅಥವಾ ಸಮಾಜದಲ್ಲಿ ಬೇರೆ ಬೇರೆ ಭಾಷೆಗಳು, ಉಪಭಾಷೆಗಳು ಮತ್ತು ಲಿಪಿಗಳು ಅಸ್ತಿತ್ವದಲ್ಲಿರುವುದು. |
| **ಸಾಂಸ್ಕೃತಿಕ ವೈವಿಧ್ಯತೆ** | : ಬೇರೆ ಬೇರೆ ಭಾಷೆಗಳು, ಧರ್ಮಗಳು, ಸಂಪ್ರದಾಯಗಳು, ಆಚರಣೆಗಳು, ಹಬ್ಬ-ಹರಿದಿನಗಳು ಮತ್ತು ಜೀವನಶೈಲಿ ಇರುವುದೇ ಸಾಂಸ್ಕೃತಿಕ ವೈವಿಧ್ಯತೆ. |






**ಶೋಧಿಸೋಣ ಬನ್ನಿ!**

| ರಾಜ್ಯ | ಭಾಷೆ | ನೃತ್ಯ ಪ್ರಕಾರ | ಕ್ರೀಡೆ |
|---|---|---|---|
| ಮಹಾರಾಷ್ಟ್ರ | ಮರಾಠಿ | ಲಾವಣಿ | ಕಬಡ್ಡಿ |
| ಗುಜರಾತ್ | | | |
| ರಾಜಸ್ಥಾನ | | | |
| ಪಂಜಾಬ್ | | | |
| ಹರಿಯಾಣ | | | |
| ಉತ್ತರ ಪ್ರದೇಶ | | | |
| ಪಶ್ಚಿಮ ಬಂಗಾಳ | | | |
| ಒಡಿಶಾ | | | |
| ಅಸ್ಸಾಂ | | | |
| ಕರ್ನಾಟಕ | | | |
| ಮಧ್ಯಪ್ರದೇಶ | | | |
| ಕೇರಳ | | | |
| ತಮಿಳುನಾಡು | | | |
| ಛತ್ತೀಗಢ | | | |

### 1.4.2 ವೈವಿಧ್ಯತೆಯೇ ಭಾರತದ ಪರಿಚಯ ಮತ್ತು ಶಕ್ತಿ

ಭಾರತೀಯ ಸಮಾಜದಲ್ಲಿ ಭಾಷೆ, ಸಂಸ್ಕೃತಿ, ಆಹಾರ ಪದ್ಧತಿಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಈ ವೈವಿಧ್ಯತೆಯೇ ಭಾರತದ ನಿಜವಾದ 'ಶಕ್ತಿ' ಮತ್ತು 'ವೈಶಿಷ್ಟ್ಯ'ವಾಗಿದೆ. ವಿವಿಧ ಸಮುದಾಯಗಳ ನಡುವಿನ ಸಾಮರಸ್ಯ ಮತ್ತು ಪರಸ್ಪರರ ಸಂಪ್ರದಾಯಗಳು ಹಾಗೂ ಆಚಾರ-ವಿಚಾರಗಳನ್ನು ಗೌರವಿಸುವುದರಿಂದ, ವಿಶಾಲವಾದ ಭೌಗೋಳಿಕತೆ ಮತ್ತು ಬೃಹತ್ ಜನಸಂಖ್ಯೆಯ ಹೊರತಾಗಿಯೂ ನಾವು ಎಲ್ಲೆಡೆ ಭಾರತೀಯತೆಯ ಅನುಭೂತಿಯನ್ನು ಪಡೆಯುತ್ತೇವೆ. ಪರಸ್ಪರರ ಜೀವನಶೈಲಿ ಮತ್ತು ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಎಲ್ಲಾ ಜೀವನಶೈಲಿಗಳು ಮತ್ತು ಸಂಸ್ಕೃತಿಗಳು ಹೆಚ್ಚು ಸಮೃದ್ಧವಾಗಿವೆ. ವಿವಿಧ ಭಾಷೆಗಳು ಪರಸ್ಪರ ಸಂಪರ್ಕದಿಂದ ಹೆಚ್ಚು ಶ್ರೀಮಂತವಾಗಿವೆ. ಪರಸ್ಪರ ಸಹಿಷ್ಣುತೆಯ ಭಾವನೆಯಿಂದ ಸಾಮಾಜಿಕ ಏಕತೆ ಮೂಡುತ್ತದೆ. ಕಾಲಕಾಲಕ್ಕೆ ಸಮಾಜದ ಮೇಲೆ ಬರುವ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ, ಈ ಸಾಮಾಜಿಕ ಏಕತೆಯ ಭಾವನೆಯಿಂದ ಪರಸ್ಪರ ಸಹಾಯದ ಹಸ್ತ ನೀಡಲಾಗುತ್ತದೆ. ಭಾರತದ ವೈವಿಧ್ಯತೆಯನ್ನು ಅಳವಡಿಸಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಎಲ್ಲರೂ ಸ್ವೀಕರಿಸಿರುವುದು ಭಾರತದ ಸಾಂಸ್ಕೃತಿಕ ವೈವಿಧ್ಯತೆಯನ್ನು ಎತ್ತಿ ತೋರಿಸುತ್ತದೆ.



# ಸ್ವಾಧ್ಯಾಯ

**ಪ್ರ. 1 ಗುರುತಿಸಿ ಮತ್ತು ಬರೆಯಿರಿ.**

1. ಆಹಾರದ ಅಗತ್ಯವನ್ನು ಪೂರೈಸಲು ಮಾನವನು ಪ್ರಾರಂಭಿಸಿದ ವ್ಯವಸಾಯ ....................
2. ವ್ಯಕ್ತಿಗಳು ರಕ್ತಸಂಬಂಧ, ವಿವಾಹ ಅಥವಾ ದತ್ತು ಸಂಬಂಧಗಳಿಂದ ಒಟ್ಟಿಗೆ ವಾಸಿಸುವ ಮತ್ತು ಪರಸ್ಪರ ಕಾಳಜಿ ವಹಿಸುವ ಸಾಮಾಜಿಕ ಸಂಸ್ಥೆ ....................
3. ಭಾರತದ ದಕ್ಷಿಣ ಕರಾವಳಿಯ ಮುಖ್ಯ ಆಹಾರ ....................

**ಪ್ರ. 2 ಪಟ್ಟಿ ಮಾಡಿ.**

ನಿಮಗೆ ತಿಳಿದಿರುವ ಕನಿಷ್ಠ 5 ಭಾಷೆಗಳ ಪಟ್ಟಿಯನ್ನು ತಯಾರಿಸಿ.

**ಪ್ರ.3 ಕೆಳಗಿನ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿ.**

1. ಸಮಾಜ
2. ಕುಟುಂಬ ಸಂಸ್ಥೆ

**ಪ್ರ. 4 ಸಮಾಜಕ್ಕೆ ನೀತಿನಿಯಮಗಳು ಮತ್ತು ಕಾಯಿದೆಗಳ ಅವಶ್ಯಕತೆ ಏಕೆ ಇರುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಪ್ರ. 5 ಪರಿಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**




**ಪ್ರ. 6 ಬನ್ನಿ, ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳೋಣ.**

ನೀವು 'ಆದರ್ಶ ನಾಗರಿಕರೇ'? ಕೆಳಗಿನ ಪ್ರಶ್ನೆಗಳಿಗೆ (✓) ಅಥವಾ (✗) ಗುರುತು ಮಾಡಿ.

1. ನಾನು ಕಸವನ್ನು ಕಸದ ಬುಟ್ಟಿಗೇ ಹಾಕುತ್ತೇನೆ. [ ]
2. ನಾನು ಸಾಲಿನಲ್ಲಿ ನಿಲ್ಲುತ್ತೇನೆ, ತಳ್ಳಾಟ ಮಾಡುವುದಿಲ್ಲ. [ ]
3. ನಾನು ನೀರನ್ನು ಪೋಲು ಮಾಡುವುದಿಲ್ಲ. [ ]
4. ನಾನು ನೆರೆಹೊರೆಯವರಿಗೆ ಮತ್ತು ಹಿರಿಯ ನಾಗರಿಕರಿಗೆ ಸಹಾಯ ಮಾಡುತ್ತೇನೆ. [ ]
5. ನಾನು ಸಾರ್ವಜನಿಕ ಉದ್ಯಾನವನದಲ್ಲಿ ಹೂವುಗಳನ್ನು ಕೀಳುವುದಿಲ್ಲ. [ ]

**ಉಪಕ್ರಮ :**

- ಭಾರತದ ರಾಜ್ಯವಾರು ಆಹಾರ ಪದಾರ್ಥಗಳು, ಹಬ್ಬ-ಹರಿದಿನಗಳು ಮತ್ತು ನೃತ್ಯಗಳ ವೈವಿಧ್ಯತೆಯನ್ನು ತೋರಿಸುವ ಪಟ್ಟಿಯನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿ.
- ಭಾರತದ ನಕ್ಷೆಯಲ್ಲಿ ಎಲ್ಲಾ ರಾಜ್ಯಗಳನ್ನು ಬೇರೆ ಬೇರೆ ಬಣ್ಣಗಳಿಂದ ಗುರುತಿಸಿ ಮತ್ತು ಅಲ್ಲಿನ ಪ್ರಸಿದ್ಧವಾದ ಒಂದು ವಿಷಯದ ಹೆಸರನ್ನು ಬರೆಯಿರಿ.
- 'ಶಾಲೆ'ಯು ಎಲ್ಲರಿಗೂ ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ ಎಂಬುದನ್ನು ವಿವರಿಸುವ ಚಿತ್ರಪಟವನ್ನು ಶಿಕ್ಷಕರ ಸಹಾಯದಿಂದ ತಯಾರಿಸಿ.

***



# 2 ಭಾರತೀಯ ಸಂವಿಧಾನ

2.1 ಸಂವಿಧಾನದ ಅರ್ಥ, ಅಗತ್ಯ ಮತ್ತು ಪ್ರಾಮುಖ್ಯತೆ
2.2 ಭಾರತೀಯ ಸಂವಿಧಾನ ನಿರ್ಮಿತಿಯ ಪ್ರಕ್ರಿಯೆ
2.3 ಸಂವಿಧಾನ ಸಭೆಯ ಕಾರ್ಯಕಲಾಪಗಳು

**ಸಮತಾ :** ನಿನಗೆ ಗೊತ್ತಿದೆಯೇ? ಸ್ವಾತಂತ್ರ್ಯ ದಿನ ಮತ್ತು ಗಣರಾಜ್ಯೋತ್ಸವ ನಮ್ಮ ರಾಷ್ಟ್ರೀಯ ಹಬ್ಬಗಳು.

**ಅಮನ್ :** ಹೌದು, ಸ್ವಾತಂತ್ರ್ಯ ದಿನ ಅಂದರೆ ಆಗಸ್ಟ್ 15 ರಂದು ಮತ್ತು ಗಣರಾಜ್ಯೋತ್ಸವ ಎಂದರೆ ಜನವರಿ 26 ರಂದು ನಮ್ಮ ಶಾಲೆಯಲ್ಲಿ ಧ್ವಜಾರೋಹಣ ಮಾಡಲಾಗುತ್ತದೆ ಮತ್ತು ವಿವಿಧ ಕಾರ್ಯಕ್ರಮಗಳೂ ನಡೆಯುತ್ತವೆ. ಈ ಎರಡೂ ದಿನಗಳಲ್ಲಿ ಎಷ್ಟು ಉತ್ಸಾಹ ಮತ್ತು ಆನಂದದ ವಾತಾವರಣವಿರುತ್ತದೆ!

**ಮೇರಿ :** 15 ಆಗಸ್ಟ್ 1947 ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ನಾವು ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತರಾದೆವು. ಆದ್ದರಿಂದ ಪ್ರತಿ ವರ್ಷ ನಾವು ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನವನ್ನು ಆಚರಿಸುತ್ತೇವೆ.

**ಸಮತಾ :** ಆದರೆ ಗಣರಾಜ್ಯೋತ್ಸವ ಎಂದರೆ ನಿಖರವಾಗಿ ಏನು?

**ಅಮನ್ :** 26 ಜನವರಿ 1950 ರಂದು ಭಾರತವು ತನ್ನ ದೇಶದ ವ್ಯವಹಾರವನ್ನು ನಡೆಸಲು ಸಿದ್ಧಪಡಿಸಿದ ಸಂವಿಧಾನ ಜಾರಿಗೆ ಬಂದಿತು. ಆದ್ದರಿಂದ ಪ್ರತಿ ವರ್ಷ ನಾವು ಜನವರಿ 26 ರಂದು ಗಣರಾಜ್ಯೋತ್ಸವವನ್ನು ಆಚರಿಸುತ್ತೇವೆ.

**ಮೇರಿ:** ಆದರೆ ಈ ದಿನವನ್ನು ಗಣರಾಜ್ಯ ದಿನ ಎಂದು ಏಕೆ ಕರೆಯುತ್ತಾರೆ? ಸಂವಿಧಾನ ಎಂದರೆ ಏನು? ಅದನ್ನು ಯಾರು ಮಾಡಿದರು ಮತ್ತು ಸಂವಿಧಾನದ ಅಗತ್ಯವೇನು? 26 ಜನವರಿ 1950 ರಂದೇ ಸಂವಿಧಾನ ಏಕೆ ಜಾರಿಗೆ ಬಂದಿತು?

ಭಾರತೀಯ ಸಂವಿಧಾನದ ಬಗ್ಗೆ ಮೇರಿಗಿದ್ದ ಪ್ರಶ್ನೆಗಳು ಮತ್ತು ಕುತೂಹಲಗಳು ನಮ್ಮ ಮನಸ್ಸಿನಲ್ಲೂ ಇರಬಹುದು. ಬನ್ನಿ, ಈ ಘಟಕದ ಮೂಲಕ ಅವುಗಳ ಬಗ್ಗೆ ತಿಳಿದುಕೊಳ್ಳೋಣ.

ಕಳೆದ ಘಟಕದಲ್ಲಿ ನಾವು ಸಮಾಜದ ಬಗ್ಗೆ ಅಧ್ಯಯನ ಮಾಡಿದ್ದೇವೆ. ಸಮಾಜದ ವಿವಿಧ ವರ್ಗಗಳು ಸೌಹಾರ್ದತೆಯಿಂದ ಒಟ್ಟಾಗಿ ಬಾಳಲು ಮತ್ತು ಪ್ರತಿಯೊಬ್ಬರಿಗೂ ಪ್ರಗತಿಯ ಸಮಾನ ಅವಕಾಶಗಳು ಲಭ್ಯವಾಗಲು ಕಾನೂನುಗಳು ಮತ್ತು ನಿಯಮಗಳ ಅಗತ್ಯವಿರುತ್ತದೆ. ಸಮಾಜದ ಸುಗಮ ನಿರ್ವಹಣೆಗಾಗಿ ಹೆಚ್ಚಿನ ಎಲ್ಲಾ ದೇಶಗಳು ತಮ್ಮದೇ ಆದ 'ಸಂವಿಧಾನ'ವನ್ನು ರಚಿಸಿಕೊಂಡಿವೆ. ನಮ್ಮ ಭಾರತ ದೇಶದ ಆಡಳಿತವು ನಮ್ಮ ಸಂವಿಧಾನದ ಪ್ರಕಾರ ನಡೆಯುತ್ತದೆ.



**ಹೇಳಿ ನೋಡೋಣ!**

ಮೈದಾನದಲ್ಲಿ ಆಡುವ ಕ್ರಿಕೆಟ್ ಪಂದ್ಯ ಮತ್ತು ರಸ್ತೆಯಲ್ಲಿ ಆಡುವ ಕ್ರಿಕೆಟ್ ಪಂದ್ಯದ ನಡುವಿನ ವ್ಯತ್ಯಾಸವೇನು? ಕೆಳಗೆ ನೀಡಿರುವ ಅಂಶಗಳ ಆಧಾರದ ಮೇಲೆ ನಿಯಮಗಳ ಮಹತ್ವವೇನು ಎಂಬುದನ್ನು ತಿಳಿಸಿ.

(1) ನಿಯಮಗಳು (2) ಗಡಿರೇಖೆ
(3) ಸುರಕ್ಷತೆ (4) ಅಂಪೈರ್

ಕ್ರಿಕೆಟ್ ಮೈದಾನದಲ್ಲಿ ಆಡುವ ಪಂದ್ಯಗಳಲ್ಲಿ ಸಂಘಟನೆ, ಔಪಚಾರಿಕತೆ ಮತ್ತು ಲಿಖಿತ ನಿಯಮಗಳನ್ನು ಪಾಲಿಸಲಾಗುತ್ತದೆ. ಆದರೆ ರಸ್ತೆಯಲ್ಲಿ ಆಡುವ ಪಂದ್ಯಗಳಲ್ಲಿ ನಿಯಮಗಳಿರುವುದಿಲ್ಲ, ಸಂಘಟಿತವಾಗಿರುವುದಿಲ್ಲ ಅಥವಾ ಅವುಗಳನ್ನು ಪಾಲಿಸಲಾಗುವುದಿಲ್ಲ ಮತ್ತು ಅಧಿಕೃತ ಅಂಪೈರಗಳೂ ಇರುವುದಿಲ್ಲ. ಅದೇ ರೀತಿ ದೇಶವನ್ನು ವ್ಯವಸ್ಥಿತವಾಗಿ ನಡೆಸಬೇಕಾದರೆ ಸಂವಿಧಾನದ ಅಗತ್ಯವಿದೆ. ಸಂವಿಧಾನವಿಲ್ಲದಿದ್ದರೆ ದೇಶದ ಆಡಳಿತವು ಸುಗಮವಾಗಿ ನಡೆಯುವುದಿಲ್ಲ.



## 2.1 ಸಂವಿಧಾನದ ಅರ್ಥ, ಅಗತ್ಯ ಮತ್ತು ಪ್ರಾಮುಖ್ಯತೆ

ಯಾವುದೇ ದೇಶದ ಸುಗಮ ಆಡಳಿತಕ್ಕಾಗಿ ಮತ್ತು ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನವು ಅತ್ಯಂತ ಅವಶ್ಯಕವಾಗಿದೆ. ದೇಶದ ಆಡಳಿತಕ್ಕಾಗಿ ರೂಪಿಸಲಾದ ಮೂಲಭೂತ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳನ್ನು ಒಟ್ಟಾಗಿ 'ಸಂವಿಧಾನ' ಎಂದು ಕರೆಯಲಾಗುತ್ತದೆ. ಸಂವಿಧಾನವನ್ನು 'ರಾಜ್ಯಘಟನೆ' ಎಂದೂ ಕರೆಯುತ್ತಾರೆ.

**ಸಂವಿಧಾನದ ಅಗತ್ಯ ಏಕೆ ಇರುತ್ತದೆ ಎಂಬುದಕ್ಕೆ ಪ್ರಮುಖ ಕಾರಣಗಳು ಈ ಕೆಳಗಿನಂತಿವೆ:**

**1. ನಿಯಮಗಳ ಚೌಕಟ್ಟು ಮತ್ತು ಸುಸ್ಥಿತಿ:** ಸಂವಿಧಾನವು ದೇಶದ ಕಾನೂನುಗಳ ಅತ್ಯುನ್ನತ ಮೂಲವಾಗಿದೆ. ಸಮಾಜದಲ್ಲಿ ವಿವಿಧ ಜಾತಿ, ಧರ್ಮ ಮತ್ತು ವಿಚಾರಗಳ ಜನರು ಒಟ್ಟಾಗಿ ವಾಸಿಸುತ್ತಾರೆ. ಅವರ ನಡುವೆ ಸಮನ್ವಯ ಕಾಪಾಡಲು ಮತ್ತು ದೇಶವನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಕೆಲವು ಮೂಲಭೂತ ನಿಯಮಗಳ ಅಗತ್ಯವಿರುತ್ತದೆ; ಸಂವಿಧಾನವು ಈ ನಿಯಮಾವಳಿಯನ್ನು ಒದಗಿಸುತ್ತದೆ.

**2. ಸರ್ಕಾರದ ಅಧಿಕಾರಗಳ ಮೇಲೆ ಮಿತಿ:** ಸಂವಿಧಾನವಿಲ್ಲದಿದ್ದರೆ ಸರ್ಕಾರವು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಬಹುದು. ಸಂವಿಧಾನವು ಸರ್ಕಾರದ ಅಧಿಕಾರಗಳನ್ನು ಸ್ಪಷ್ಟಪಡಿಸುತ್ತದೆ ಮತ್ತು ಅವುಗಳ ಮೇಲೆ ಮಿತಿಗಳನ್ನು ಹೇರುತ್ತದೆ.

**3. ನಾಗರಿಕರ ಹಕ್ಕುಗಳ ರಕ್ಷಣೆ:** ಸಂವಿಧಾನವು ನಾಗರಿಕರಿಗೆ ಕೆಲವು ಮೂಲಭೂತ ಹಕ್ಕುಗಳನ್ನು ನೀಡುತ್ತದೆ ಮತ್ತು ಅವುಗಳನ್ನು ರಕ್ಷಿಸುತ್ತದೆ (ಉದಾಹರಣೆಗೆ: ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ).

**4. ಅಧಿಕಾರ ವಿಭಜನೆ:** ಸಂವಿಧಾನವು ಆಡಳಿತವನ್ನು ಮೂರು ಪ್ರಮುಖ ಅಂಗಗಳಾಗಿ ವಿಭಜಿಸುತ್ತದೆ:

- **ಶಾಸಕಾಂಗ:** ಕಾನೂನುಗಳನ್ನು ರೂಪಿಸುವ ಅಂಗ.
- **ಕಾರ್ಯಾಂಗ:** ಕಾನೂನುಗಳನ್ನು ಜಾರಿಗೆ ತರುವ ಅಂಗ.
- **ನ್ಯಾಯಾಂಗ:** ಕಾನೂನಿನ ಅರ್ಥ ವಿವರಣೆ ನೀಡುವ ಮತ್ತು ನ್ಯಾಯ ಒದಗಿಸುವ ಅಂಗ.

**5. ಅಲ್ಪಸಂಖ್ಯಾತರ ಹಿತರಕ್ಷಣೆ:** ಪ್ರಜಾಪ್ರಭುತ್ವದಲ್ಲಿ ಬಹುಮತದ ಗೌರವವನ್ನು ನೀಡಲಾಗುತ್ತದೆ, ಆದರೆ ಸಂವಿಧಾನದ ಕಾರಣದಿಂದಾಗಿ ಬಹುಸಂಖ್ಯಾತ ಗುಂಪು ಅಲ್ಪಸಂಖ್ಯಾತರ ಮೇಲೆ ಅನ್ಯಾಯ ಮಾಡಲು ಸಾಧ್ಯವಿಲ್ಲ, ಅವರ ಭಾಷೆ, ಸಂಸ್ಕೃತಿ ಮತ್ತು ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸುವ ಜವಾಬ್ದಾರಿಯು ಸಂವಿಧಾನದ ಮೇಲೆ ಇರುತ್ತದೆ.

**6. ದೇಶದ ಉದ್ದೇಶಗಳು ಮತ್ತು ಮೌಲ್ಯಗಳನ್ನು ಸ್ಪಷ್ಟಪಡಿಸುವುದು:** ದೇಶವು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದು ಸಂವಿಧಾನದ 'ಪೀಠಿಕೆ'ಯಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಭಾರತವು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಎಂಬ ಉದ್ದೇಶಗಳನ್ನು ಅಂಗೀಕರಿಸಿದೆ.

ಸಂವಿಧಾನವು ದೇಶದ 'ಆತ್ಮ'ವಾಗಿದೆ, ಇದು ಭಾರತದಂತಹ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಜೀವಂತವಾಗಿಡುವ ಕೆಲಸವನ್ನು ಮಾಡುತ್ತದೆ.



**ಮಾಡಿ ನೋಡಿ**

ನಿಮ್ಮ ತರಗತಿಯಲ್ಲಿ ಶಾಂತಿ ಮತ್ತು ಶಿಸ್ತು ಕಾಪಾಡಲು ನಿಯಮಾವಳಿಯನ್ನು ಸಿದ್ಧಪಡಿಸಿ.

### 2.1.1 ಸಂವಿಧಾನದ ಪ್ರಕಾರಗಳು

ಸಾಮಾನ್ಯವಾಗಿ ಸಂವಿಧಾನದಲ್ಲಿ ಲಿಖಿತ ಮತ್ತು ಅಲಿಖಿತ ಎಂದು ಎರಡು ವಿಧಗಳಿವೆ.

**ಲಿಖಿತ:** ದೇಶದ ಆಡಳಿತವನ್ನು ನಡೆಸಲು ಅಗತ್ಯವಿರುವ ಎಲ್ಲಾ ಮೂಲಭೂತ ನಿಯಮಗಳು, ಕಾನೂನುಗಳು ಮತ್ತು ತತ್ವಗಳನ್ನು ಒಂದೇ ಅಥವಾ ಕೆಲವು ನಿರ್ದಿಷ್ಟ ಲಿಖಿತ ದಾಖಲೆಗಳಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಿಟ್ಟಿದ್ದರೆ ಅದನ್ನು 'ಲಿಖಿತ ಸಂವಿಧಾನ' ಎಂದು ಕರೆಯಲಾಗುತ್ತದೆ. ಉದಾಹರಣೆಗೆ: ಭಾರತ, ಅಮೆರಿಕ.

**ಅಲಿಖಿತ:** ದೇಶದ ಆಡಳಿತಕ್ಕೆ ಬೇಕಾದ ನಿಯಮಗಳನ್ನು ಯಾವುದೇ ಒಂದು ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ಘಟನಾ ಸಮಿತಿಯು ಒಟ್ಟಾಗಿ ಕುಳಿತು ಬರೆದಿರುವುದಿಲ್ಲ, ಇದನ್ನು 'ಅಲಿಖಿತ ಸಂವಿಧಾನ' ಎಂದು ಕರೆಯಲಾಗುತ್ತದೆ. ಉದಾಹರಣೆಗೆ: ಬ್ರಿಟನ್ (ಯುನೈಟೆಡ್ ಕಿಂಗ್ಡಮ್).



**ಹುಡುಕೋಣ ಮತ್ತು ಚರ್ಚಿಸೋಣ:**

ತರಗತಿಯ ವಿದ್ಯಾರ್ಥಿಗಳ ಎರಡು ಗುಂಪುಗಳನ್ನು ಮಾಡಿ. ಲಿಖಿತ ಸಂವಿಧಾನ ಮತ್ತು ಅಲಿಖಿತ ಸಂವಿಧಾನದ ಅನುಕೂಲಗಳು ಮತ್ತು ಅನಾನುಕೂಲಗಳ ಬಗ್ಗೆ ಗುಂಪು ಚರ್ಚೆ ನಡೆಸಿ.

## 2.2 ಭಾರತೀಯ ಸಂವಿಧಾನ ನಿರ್ಮಿತಿಯ ಪ್ರಕ್ರಿಯೆ

ಭಾರತದ ಭೌಗೋಳಿಕ ವಿಸ್ತಾರ, ಬೃಹತ್ ಜನಸಂಖ್ಯೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಗಮನಿಸಿದರೆ, ಸಂವಿಧಾನವಿಲ್ಲದೆ ದೇಶದ ಆಡಳಿತವನ್ನು ನಡೆಸುವುದು ಕಷ್ಟಕರವಾದ ವಿಷಯವಾಗಿದೆ. ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು

ನೆಲೆಗೊಳಿಸಲು ಸಂವಿಧಾನವು ಅತ್ಯಗತ್ಯವಾಗಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುವುದು ಖಚಿತವಾದ ನಂತರ, 1946 ರಲ್ಲಿ ಸಂವಿಧಾನ ನಿರ್ಮಾಣದ ಪ್ರಕ್ರಿಯೆಯು ಪ್ರಾರಂಭವಾಯಿತು. ಇದಕ್ಕಾಗಿ 'ಸಂವಿಧಾನ ಸಭೆ'ಯನ್ನು ಸ್ಥಾಪಿಸಲಾಯಿತು.

'ಸ್ವತಂತ್ರ ಭಾರತದ ರಾಜ್ಯಭಾರವು ಬ್ರಿಟಿಷರು ಸಿದ್ಧಪಡಿಸಿದ ಕಾನೂನುಗಳ ಪ್ರಕಾರ ನಡೆಯಬಾರದು, ಬದಲಾಗಿ ಭಾರತೀಯರೇ ಸ್ವತಃ ಸಿದ್ಧಪಡಿಸಿದ ಕಾನೂನುಗಳ ಪ್ರಕಾರ ನಡೆಯಬೇಕು' ಎಂಬುದು ಸ್ವಾತಂತ್ರ್ಯ ಚಳುವಳಿಯ ನಾಯಕರ ಒತ್ತಾಯವಾಗಿತ್ತು.






ನಿಮಗೆ ತಿಳಿದಿದೆಯೇ?

ದೇಶದ ವಿವಿಧ ಪ್ರಾಂತ್ಯಗಳ (ಆ ಸಮಯದಲ್ಲಿ ಮುಂಬೈ ಪ್ರಾಂತ್ಯ, ಬಂಗಾಳ ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ ಎಂಬ ವಿಭಾಗಗಳಿದ್ದವು) ಆಡಳಿತವನ್ನು ನಡೆಸಲು 1946 ರಲ್ಲಿ ಜನಪ್ರತಿನಿಧಿಗಳ ಆಯ್ಕೆ ನಡೆಯಿತು. ಪ್ರತಿ ಪ್ರಾಂತ್ಯದ ಜನಪ್ರತಿನಿಧಿಗಳು ತಮ್ಮಲ್ಲಿರುವ ಕೆಲವು ಪ್ರತಿನಿಧಿಗಳನ್ನು ಸಂವಿಧಾನ ಸಭೆಯ ಕಾರ್ಯದಲ್ಲಿ ಭಾಗವಹಿಸಲು ಆಯ್ಕೆ ಮಾಡಿದರು. ಇದಲ್ಲದೆ, ಆ ಸಮಯದಲ್ಲಿ ದೇಶದಲ್ಲಿ ವಿವಿಧ ರಾಜ ಸಂಸ್ಥಾನಗಳಿದ್ದವು. ಆ ಸಂಸ್ಥಾನಗಳು ಸಂವಿಧಾನ ಸಭೆಯ ಕಾರ್ಯದಲ್ಲಿ ಭಾಗವಹಿಸಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟವು. ಈ ರೀತಿ ಪ್ರಾಂತ್ಯಗಳು ಮತ್ತು ಸಂಸ್ಥಾನಗಳ ಒಟ್ಟು 299 ಸದಸ್ಯರು ಸಂವಿಧಾನ ಸಭೆಯಲ್ಲಿದ್ದರು. ಅದರಲ್ಲಿ ಕೆಲವು ಮಹಿಳಾ ಸದಸ್ಯರೂ ಇದ್ದರು.



ತಿಳಿದುಕೊಳ್ಳೋಣ

ಸಂವಿಧಾನ ಸಭೆಯ ಸದಸ್ಯರು ಎರಡು ವಿಧದವರಾಗಿದ್ದರು:

1. ಪ್ರಾಂತ್ಯಗಳ ಶಾಸನಸಭೆಗಳಿಂದ ಚುನಾಯಿತರಾದ ಸದಸ್ಯರ ಸಂಖ್ಯೆ – 229
2. ಸಂಸ್ಥಾನಿಕರಿಂದ ನೇಮಕಗೊಂಡ ಸದಸ್ಯರ ಸಂಖ್ಯೆ – 70



ಹುಡುಕಿ ನೋಡಿ!

1928 ರಲ್ಲಿ ಆಮಸ್ಟರಡಮ್‌ನಲ್ಲಿ ನಡೆದ ಒಲಿಂಪಿಕ್ ಕ್ರೀಡಾಕೂಟದಲ್ಲಿ ಭಾರತದ ಹಾಕಿ ತಂಡವು ಭಾರತಕ್ಕೆ ಮೊದಲ ಒಲಿಂಪಿಕ್ ಚಿನ್ನದ ಪದಕವನ್ನು ಗೆದ್ದುಕೊಟ್ಟಿತು. ಈ ಹಾಕಿ ತಂಡದ ನಾಯಕರು ಮುಂದೆ ಭಾರತದ ಸಂವಿಧಾನ ಸಭೆಯ ಸದಸ್ಯರಾದರು. ಅವರ ಹೆಸರೇನು ಎಂದು ಹುಡುಕಿ.

### 2.3 ಸಂವಿಧಾನ ಸಭೆಯ ಕಾರ್ಯಕಲಾಪಗಳು

ಸ್ವತಂತ್ರ ಭಾರತದ ಸಂವಿಧಾನವನ್ನು ಸಿದ್ಧಪಡಿಸಲು ಸಂವಿಧಾನ ಸಭೆಯನ್ನು ಸ್ಥಾಪಿಸಲಾಯಿತು. ಸಂವಿಧಾನ ಸಭೆಯ ಮೊದಲ ಸಭೆಯು 9 ಡಿಸೆಂಬರ್ 1946 ರಂದು ನಡೆಯಿತು. ಡಾ. ಸಚ್ಚಿದಾನಂದ ಸಿನ್ಹಾ ಅವರು ಸಭೆಯ ಹಂಗಾಮಿ ಅಧ್ಯಕ್ಷರಾಗಿ ಆಯ್ಕೆಯಾದರು. 11 ಡಿಸೆಂಬರ್ 1946 ರಂದು ಡಾ. ರಾಜೇಂದ್ರ ಪ್ರಸಾದ್ ಅವರು ಸಂವಿಧಾನ ಸಭೆಯ ಖಾಯಂ ಅಧ್ಯಕ್ಷರಾಗಿ ಆಯ್ಕೆಯಾದರು.



ಡಾ. ಸಚ್ಚಿದಾನಂದ ಸಿನ್ಹಾ



ಡಾ. ರಾಜೇಂದ್ರ ಪ್ರಸಾದ್

ಬಿ.ಎನ್. ರಾವ್ ಅವರನ್ನು ಸಂವಿಧಾನ ಸಭೆಯ ಕಾನೂನು ಸಲಹೆಗಾರರನ್ನಾಗಿ ನೇಮಿಸಲಾಯಿತು.

ಸಂವಿಧಾನಸಭೆಯಕಾರ್ಯಕಲಾಪಗಳಲ್ಲಿಸುಸೂತ್ರತೆಯನ್ನು ತರಲು ಒಟ್ಟು 22 ಸಮಿತಿಗಳನ್ನು ರಚಿಸಲಾಗಿತ್ತು.

### ಸಂವಿಧಾನ ಸಭೆಯ ಪ್ರಮುಖ ಸಮಿತಿಗಳು

| ಸಮಿತಿಯ ಹೆಸರು | ಸಮಿತಿಯ ಮುಖ್ಯಸ್ಥರು |
|---|---|
| ಕಾರ್ಯಕಲಾಪಗಳ ಸಮಿತಿ (ಸ್ಟೀರಿಂಗ್ ಕಮಿಟಿ) | ಡಾ. ರಾಜೇಂದ್ರ ಪ್ರಸಾದ್ |
| ಕರಡು ಸಮಿತಿ | ಡಾ. ಬಾಬಾಸಾಹೇಬ್ ಅಂಬೇಡ್ಕರ್ |
| ಕೇಂದ್ರ ಸಂವಿಧಾನ ಸಮಿತಿ | ಪಂ. ಜವಾಹರಲಾಲ್ ನೆಹರು |
| ಮೂಲಭೂತ ಹಕ್ಕುಗಳು ಮತ್ತು ಅಲ್ಪಸಂಖ್ಯಾತರ ಸಮಿತಿ | ಸರ್ದಾರ್ ವಲ್ಲಭಭಾಯಿ ಪಟೇಲ್ |

ಇವು ಮತ್ತು ಇತರ ಎಲ್ಲಾ ಸಮಿತಿಗಳು ಸಲ್ಲಿಸಿದ ವರದಿಗಳನ್ನು ಒಟ್ಟುಗೂಡಿಸಿ ಪರಿಗಣಿಸಿ, ಸಂವಿಧಾನದ ಕರಡನ್ನು ಸಿದ್ಧಪಡಿಸಲು ಕರಡು ಸಮಿತಿಯನ್ನು ಸ್ಥಾಪಿಸಲಾಯಿತು.

### 2.3.1 ಕರಡು ಸಮಿತಿ

ಭಾರತದ ಸಂವಿಧಾನ ರಚನೆಯಲ್ಲಿ ಕರಡು ಸಮಿತಿಯು ಅತ್ಯಂತ ಪ್ರಮುಖ ಸಮಿತಿಯಾಗಿತ್ತು. ಈ ಸಮಿತಿಯು 29 ಆಗಸ್ಟ್ 1947 ರಂದು ಸ್ಥಾಪನೆಯಾಯಿತು. ಕರಡು ಸಮಿತಿಯು ವಿವಿಧ ಸಮಿತಿಗಳಿಂದ ಬಂದ ವರದಿಗಳನ್ನು ಪರಿಶೀಲಿಸಿ, ಸಂವಿಧಾನಕ್ಕೆ ಅಂತಿಮ ರೂಪ ನೀಡುವ ವಾಸ್ತವಿಕ ಕರಡನ್ನು ಸಿದ್ಧಪಡಿಸಿತು. ಈ ಸಮಿತಿಯು ಸಿದ್ಧಪಡಿಸಿದ ಅಂತಿಮ ಕರಡನ್ನು 26 ನವೆಂಬರ್ 1949 ರಂದು ಸಂವಿಧಾನ ಸಭೆಯು ಅಂಗೀಕರಿಸಿತು.

**ಕರಡು ಸಮಿತಿಯ ಸದಸ್ಯರು:**

**ಕರಡು ಸಮಿತಿಯಲ್ಲಿ ಅಧ್ಯಕ್ಷರನ್ನೂ ಒಳಗೊಂಡಂತೆ ಒಟ್ಟು ಏಳು ಸದಸ್ಯರಿದ್ದರು:**

1. ಡಾ. ಬಿ.ಆರ್. ಅಂಬೇಡ್ಕರ್ (ಅಧ್ಯಕ್ಷರು)
2. ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್
3. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್
4. ಡಾ. ಕೆ.ಎಂ. ಮುನ್ಶಿ
5. ಶ್ರೀ ಮೊಹಮ್ಮದ್ ಸಾದುಲ್ಲಾ.
6. 6. ಶ್ರೀ ಬಿ.ಎಲ್. ಮಿತ್ತರ್ (ಇವರ ರಾಜೀನಾಮೆಯ ನಂತರ ಕೆ. ಎನ್. ಮಾಧವರಾವ್ ಅವರನ್ನು ನೇಮಿಸಲಾಯಿತು.)
7. ಶ್ರೀ ಡಿ.ಪಿ. ಖೇತಾನ್ (ಇವರ ಮರಣದ ನಂತರ ಟಿ.ಟಿ. ಕೃಷ್ಣಮಾಚಾರಿ ಅವರನ್ನು ನೇಮಿಸಲಾಯಿತು.)



### ನಿಮಗೆ ಗೊತ್ತಿದೆಯೇ?

ಡಿಸೆಂಬರ್ 1929ರ ಲಾಹೋರ್ ಅಧಿವೇಶನದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರಿಂದ 'ಸಂಪೂರ್ಣ ಸ್ವರಾಜ್ಯ'ಕ್ಕಾಗಿ ಬೇಡಿಕೆ ಇಟ್ಟಿತ್ತು. ಈ ನಿರ್ಣಯದ ಪ್ರಕಾರ, 26 ಜನವರಿ 1930 ರಂದು ಇಡೀ ದೇಶದಲ್ಲಿ ಮೊದಲ ಬಾರಿಗೆ 'ಸ್ವಾತಂತ್ರ್ಯ ದಿನ'ವನ್ನು ಆಚರಿಸಲಾಯಿತು. ಭಾರತೀಯರ ಸ್ವಾತಂತ್ರ್ಯ ಹೋರಾಟದ ಈ ಐತಿಹಾಸಿಕ ದಿನದ ಮಹತ್ವ ಮತ್ತು ನೆನಪನ್ನು ಶಾಶ್ವತವಾಗಿ ಉಳಿಸಲು, '26 ಜನವರಿ 1950' ರಂದು ಸಂವಿಧಾನವನ್ನು ಜಾರಿಗೆ ತರಲಾಯಿತು. ಆದ್ದರಿಂದಲೇ ಈ ದಿನವನ್ನು 'ಗಣರಾಜ್ಯೋತ್ಸವ' ಎಂದು ಆಚರಿಸಲಾಗುತ್ತದೆ.

**ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಸೂದೆ ಸಮಿತಿಯ ಕೊಡುಗೆ**



**ಭಾರತೀಯ ಸಂವಿಧಾನದ ಕರಡನ್ನು ಸಂವಿಧಾನ ಸಭೆಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್ ಅವರಿಗೆ ಸಲ್ಲಿಸುತ್ತಿರುವ ಡಾ. ಬಾಬಾಸಾಹೇಬ್ ಅಂಬೇಡ್ಕರ್**

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ವಿವಿಧ ದೇಶಗಳ ಸಂವಿಧಾನದ ತುಲನಾತ್ಮಕ ಅಧ್ಯಯನ ಮಾಡಿದರು. ಅಂತೆಯೇ ಸಂವಿಧಾನ ಸಭೆಯ ಎಲ್ಲಾ ಸಮಿತಿಗಳ ವರದಿಗಳನ್ನು ಆಳವಾಗಿ ಅಧ್ಯಯನ ಮಾಡಿ ಕರಡನ್ನು ಸಿದ್ಧಪಡಿಸಿ ಸಂವಿಧಾನ ಸಭೆಯಲ್ಲಿ ಮಂಡಿಸಿದರು.

ಈ ಕರಡಿನ ಪ್ರತಿಯೊಂದು ನಿಬಂಧನೆಯ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಚರ್ಚೆಯ ಸಂದರ್ಭದಲ್ಲಿ ಸಂವಿಧಾನ ಸಭೆಯ ಸದಸ್ಯರ ಪ್ರಶ್ನೆಗಳಿಗೆ ಮತ್ತು ಶಂಕೆಗಳಿಗೆ ಉತ್ತರಿಸುವ

ಜವಾಬ್ದಾರಿಯನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಮರ್ಥವಾಗಿ ನಿಭಾಯಿಸಿದರು. ಸಂವಿಧಾನ ಸಭೆಯ ಸೂಚನೆಗಳಂತೆ ಸಂವಿಧಾನದ ಕರಡಿನಲ್ಲಿ ಬದಲಾವಣೆ ಮಾಡುವ ಮಹತ್ವದ ಕೆಲಸವನ್ನು ಅವರು ಪೂರ್ಣಗೊಳಿಸಿದರು ಮತ್ತು ಸಂವಿಧಾನದ ಅಂತಿಮ ಕರಡನ್ನು ಸಿದ್ಧಪಡಿಸಿದರು. ಅವರ ಈ ಅತುಲ್ಯ ಕೊಡುಗೆಯಿಂದಾಗಿ ಅವರನ್ನು 'ಭಾರತ ಸಂವಿಧಾನದ ಶಿಲ್ಪಿ' ಎಂದು ಕರೆಯಲಾಗುತ್ತದೆ.

| | | |
|---|---|---|
|  ವಿಜಯಲಕ್ಷ್ಮಿ ಪಂಡಿತ್ |  ಸರೋಜಿನಿ ನಾಯ್ಡು |  ಅಮ್ಮು ಸ್ವಾಮಿನಾಥನ್ |
|  ರೇಣುಕಾ ರೇ |  ಅನ್ನಿ ಮಸ್ಕರೀನ್ |  ಸುಚೇತಾ ಕೃಪಲಾನಿ |
|  ದಾಕ್ಷಾಯಣಿ ವೇಲಾಯುಧನ್ |  ಹಂಸಾ ಮೆಹ್ತಾ |  ಬೇಗಂ ಐಜಾಜ್ ರಸೂಲ್ |
|  ಮಾಲತಿ ಚೌಧರಿ |  ಲೀಲಾ ರಾಯ್ |  ರಾಜಕುಮಾರಿ ಅಮೃತ್ ಕೌರ್ |
|  ದುರ್ಗಾಬಾಯಿ ದೇಶಮುಖ |  ಪೂರ್ಣಿಯಾ ಬ್ಯಾನರ್ಜಿ |  ಕಮಲಾ ಚೌಧರಿ |

ಸಂವಿಧಾನ ಸಭೆಯ ಎಲ್ಲಾ ಮಹಿಳಾ ಸದಸ್ಯರು



## ನಿಮಗೆ ಗೊತ್ತಿದೆಯೇ?

1) ಕರಡು ಸಮಿತಿಯು ತಯಾರಿಸಿದ ಸಂವಿಧಾನದ ಮೊದಲ ಕರಡು ಪ್ರತಿ ಫೆಬ್ರುವರಿ 1948 ರಲ್ಲಿ ಪ್ರಕಾಶಿತಗೊಳಿಸಿ ಅದರ ಮೇಲೆ ಚರ್ಚೆ ಮಾಡಲಾಯಿತು.

2) ಸಂವಿಧಾನ ಸಭೆಯಲ್ಲಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಹೆಚ್ಚಿನ ನಿಬಂಧನೆಗಳ ಬಗ್ಗೆ ಸರ್ವಾನುಮತದಿಂದ ನಿರ್ಧಾರ ತೆಗೆದುಕೊಳ್ಳಲಾಯಿತು.

3) ಸಂವಿಧಾನ ಸಭೆಯ ಕೆಲಸವು 2 ವರ್ಷ, 11 ತಿಂಗಳು ಮತ್ತು 18 ದಿನಗಳ ಕಾಲ ನಡೆಯಿತು. (9 ಡಿಸೆಂಬರ್ 1946 ರಿಂದ 25 ನವೆಂಬರ್ 1949 ರವರೆಗೆ).

4) ಸಂವಿಧಾನ ಸಭೆಯ ಕಾರ್ಯಕಲಾಪಗಳ ಅವಧಿಯಲ್ಲಿ 53,000 ಜನರು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಸಂವಿಧಾನ ಸಭೆಯ ಕಲಾಪಗಳನ್ನು ಪ್ರತ್ಯಕ್ಷವಾಗಿ ವೀಕ್ಷಿಸಿದರು.

5) ಸಂವಿಧಾನ ಸಭೆಯ ಸದಸ್ಯರು 24 ನವೆಂಬರ್ 1949 ರಂದು ಸಂವಿಧಾನದ ಪ್ರತಿಯ ಮೇಲೆ ಸಹಿ ಹಾಕಿದರು.

6) ಮೂಲ ಸಂವಿಧಾನವು ಪ್ರಸ್ತಾವನೆ, 22 ಭಾಗಗಳು, 395 ವಿಧಿಗಳು ಮತ್ತು 8 ಅನುಸೂಚಿಗಳನ್ನು ಹೊಂದಿತ್ತು.

7) 26 ನವೆಂಬರ್ 1949 ರಂದು ಸಂವಿಧಾನ ಸಭೆಯು ಸಂಪೂರ್ಣ ಸಂವಿಧಾನವನ್ನು ಅಂಗೀಕರಿಸಿತು. ಆದ್ದರಿಂದ, 26 ನವೆಂಬರ್ ಅನ್ನು 'ಸಂವಿಧಾನ ದಿನ' ಎಂದು ಆಚರಿಸಲಾಗುತ್ತದೆ.

8) ಸಂವಿಧಾನದ ಜಾರಿಗೆ ತರುವ ಕಾರ್ಯಕ್ಕಾಗಿ ಜನವರಿ 26, 1950 ರಂದು ನಿಶ್ಚಯಿಸಲಾಯಿತು. ಆದ್ದರಿಂದ ನಾವು ಈ ದಿನವನ್ನು 'ಗಣರಾಜ್ಯೋತ್ಸವ ದಿನ' ಎಂದು ಆಚರಿಸುತ್ತೇವೆ.

9) ಸಂವಿಧಾನದ ನಿರ್ಮಾಣವಾದ ನಂತರ 26 ಜನೇವರಿ 1950 ರಿಂದ 1925 ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ಆಗುವ ವರೆಗೆ ಸಂವಿಧಾನ ಸಭೆಯು ಭಾರತದ 'ಹಂಗಾಮಿ ಸಂಸದ' ಎಂದು ಕೆಲಸ ಮಾಡಿತು.



### ತಿಳಿದುಕೊಳ್ಳೋಣ

- ಸಂವಿಧಾನದ ಮೂಲ ಇಂಗ್ಲಿಷ್ ಪ್ರತಿಯನ್ನು ಬರೆದವರು – **ಪ್ರೇಮ್ ಬಿಹಾರಿ ನಾರಾಯಣ್ ರೈಜಾದಾ.**
- ಸಂವಿಧಾನದ ಮೂಲ ಹಿಂದಿ ಪ್ರತಿಯನ್ನು ಬರೆದವರು – **ವಸಂತ್ ಕೃಷ್ಣವೈದ್ಯ**
- ಎರಡೂ ಪ್ರತಿಗಳನ್ನು ಅಲಂಕರಿಸಿದವರು – **ಆಚಾರ್ಯ ನಂದಲಾಲ ಬೋಸ್**



## ಸ್ವಾಧ್ಯಾಯ

**ಪ್ರ. 1 ಹೇಳಿ ನೋಡೋಣ:**

1. ಕಾಯ್ದೆಗಳನ್ನು ತಯಾರಿಸುವ ಮಂಡಳಿ.

   ------------------------------------

2. ಸಂವಿಧಾನ ಸಭೆಯ ಖಾಯಂ ಅಧ್ಯಕ್ಷರು.

   ------------------------------------

3. ಭಾರತೀಯ ಸಂವಿಧಾನದ ಶಿಲ್ಪಿ.

   ------------------------------------

**ಪ್ರ. 2 ಈ ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ:**

| ಸಮಿತಿಯ ಮುಖ್ಯಸ್ಥರು | ಸಮಿತಿಯ ಹೆಸರು |
|---|---|
| ---------------------<br>--------------------- | ಸಂವಿಧಾನ ಸಭೆಯ ನಿಯಮಗಳ ಸಮಿತಿ |
| ಡಾ. ಬಾಬಾಸಾಹೇಬ್ ಅಂಬೇಡ್ಕರ್ | ---------------------<br>--------------------- |
| ---------------------<br>--------------------- | ಸಂಘರಾಜ್ಯ ಸಮಿತಿ |
| ಸರ್ದಾರ್ ವಲ್ಲಭಭಾಯಿ ಪಟೇಲ್ | ---------------------<br>--------------------- |

**ಪ್ರ. 3 ಈ ಕೆಳಗಿನ ಸಂಕಲ್ಪನೆಗಳನ್ನು ಸ್ಪಷ್ಟಪಡಿಸಿ:**

1. ಸಂವಿಧಾನ
2. ಕರಡು ಸಮಿತಿ

**ಪ್ರ. 4 ಪ್ರತಿಯೊಂದು ದೇಶಕ್ಕೂ ಸಂವಿಧಾನದ ಅವಶ್ಯಕತೆ ಏಕೆ ಇರುತ್ತದೆ? ಈ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.**

**ಪ್ರ. 5 ನೀವು ಏನು ಮಾಡುವಿರಿ?**

'ಸಾಮಾನ್ಯವಾಗಿ ಹುಡುಗರು ಮಾಡಬೇಕಾದ ಕೆಲಸಗಳು ಮತ್ತು ಹುಡುಗಿಯರು ಮಾಡಬೇಕಾದ ಕೆಲಸಗಳು ಎಂದು ಭೇದಭಾವ ಮಾಡಲಾಗುತ್ತದೆ.' ಸಂವಿಧಾನದಲ್ಲಿನ 'ಸಮಾನತೆ'ಯ ಮೌಲ್ಯವನ್ನು ತಿಳಿಹೇಳಲು ನೀವು ಏನು ಮಾಡುವಿರಿ?

**ನಿಮ್ಮ ಕೃತಿ**

------------------------------------

------------------------------------

------------------------------------

------------------------------------

------------------------------------

**ಉಪಕ್ರಮ**

1. ತರಗತಿಯ ನಾಯಕನನ್ನು (ಮಾನಿಟರ್) ಆಯ್ಕೆ ಮಾಡಲು ಪ್ರತ್ಯಕ್ಷ ಚುನಾವಣಾ ಪ್ರಕ್ರಿಯೆಯನ್ನು ನಡೆಸಿ.
2. ವಹಿಯಲ್ಲಿ (ನೋಟ್‌ಬುಕ್) ಮೂಲಭೂತ ಹಕ್ಕುಗಳು ಮತ್ತು ಅದಕ್ಕೆ ಸಂಬಂಧಿಸಿದ ನಿಮ್ಮ ಕರ್ತವ್ಯಗಳ ಪಟ್ಟಿಯನ್ನು ತಯಾರಿಸಿ

***

# 3 ಭಾರತದ ಸಂವಿಧಾನದ ಪೀಠಿಕೆ ಮತ್ತು ವೈಶಿಷ್ಯಗಳು



3.1 ಪೀಠಿಕೆ
3.2 ಭಾರತೀಯ ಸಂವಿಧಾನದ ಪ್ರಕಾರ ರಾಜ್ಯದ ಸ್ವರೂಪ
3.3 ಭಾರತೀಯ ಸಂವಿಧಾನದ ಉದ್ದೇಶಗಳು
3.4 ಭಾರತೀಯ ಸಂವಿಧಾನದ ವೈಶಿಷ್ಟ್ಯಗಳು



ಸಂವಿಧಾನ ಸಭೆಯಲ್ಲಿ ಉದ್ದೇಶಗಳ ನಿರ್ಣಯವನ್ನು ಮಂಡಿಸುತ್ತಿರುವ ಪಂಡಿತ ಜವಾಹರಲಾಲ್ ನೆಹರು

13 ಡಿಸೆಂಬರ್ 1946 ರಂದು ಪಂಡಿತ ಜವಾಹರಲಾಲ್ ನೆಹರು ಅವರು ಸಂವಿಧಾನ ಸಭೆಯ ಮುಂದೆ 'ಉದ್ದೇಶಗಳ ನಿರ್ಣಯ'ವನ್ನು ಮಂಡಿಸಿದರು, ಮುಂದೆ ಇದೇ ಭಾರತದ ಸಂವಿಧಾನದ ಪೀಠಿಕೆಯಾಗಿ ವಿಕಸನಗೊಂಡಿತು.

## 3.1 ಪೀಠಿಕೆ

ಭಾರತದ ಸಂವಿಧಾನದ ಆರಂಭದ ಭಾಗವನ್ನು 'ಪೀಠಿಕೆ', 'ಮುನ್ನುಡಿ' ಅಥವಾ 'ಪ್ರಸ್ತಾವನೆ' ಎಂದು ಕರೆಯಲಾಗುತ್ತದೆ. ಸಂವಿಧಾನದ ಪೀಠಿಕೆಯಿಂದ ಸಂವಿಧಾನದ ಮೌಲ್ಯಗಳು ಮತ್ತು ಉದ್ದೇಶಗಳು ಸ್ಪಷ್ಟವಾಗುತ್ತವೆ. ಆದ್ದರಿಂದ, ಪೀಠಿಕೆಯನ್ನು ಸಂವಿಧಾನವನ್ನು ಅರ್ಥಮಾಡಿಕೊಳ್ಳುವ 'ಕೈಪಿಡಿ' ಎಂದು ಪರಿಗಣಿಸಲಾಗುತ್ತದೆ.

**ಮಾಡಿ ನೋಡಿ**

ಭಾರತದ ಸಂವಿಧಾನದ ಪೀಠಿಕೆಯನ್ನು ನಿಮ್ಮ ಕೈಬರಹದಲ್ಲಿ ಬರೆಯಿರಿ.

ಭಾರತದ ಸಂವಿಧಾನವನ್ನು ಭಾರತದ ಜನರೇ ಸಿದ್ಧಪಡಿಸಿದ್ದಾರೆ ಮತ್ತು ಸ್ವಯಂಪ್ರೇರಿತವಾಗಿ ಸ್ವೀಕರಿಸಿದ್ದಾರೆ. ಸಂವಿಧಾನದ ಪೀಠಿಕೆಯಲ್ಲಿ ಭಾರತವನ್ನು 'ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣರಾಜ್ಯ' ಎಂದು ಘೋಷಿಸಲಾಗಿದೆ.

## 3.2 ಭಾರತೀಯ ಸಂವಿಧಾನದ ಪ್ರಕಾರ ರಾಜ್ಯದ ಸ್ವರೂಪ




**ಸಾರ್ವಭೌಮ:** ಯಾವ ದೇಶವು ಯಾವುದೇ ಬಾಹ್ಯ ಶಕ್ತಿಯ ನಿಯಂತ್ರಣಕ್ಕೆ ಒಳಪಟ್ಟಿಲ್ಲವೋ ಮತ್ತು ತನ್ನ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಂಪೂರ್ಣವಾಗಿ ಸ್ವತಂತ್ರವಾಗಿದೆಯೋ, ಆ ದೇಶವನ್ನು 'ಸಾರ್ವಭೌಮ' ಎನ್ನಲಾಗುತ್ತದೆ. ಭಾರತವು ತನ್ನದೇ ಆದ ಕಾನೂನುಗಳನ್ನು ರೂಪಿಸಲು ಮತ್ತು ವಿದೇಶಾಂಗ ನೀತಿಯನ್ನು ನಿರ್ಧರಿಸಲು ಸರ್ವೋಚ್ಚ ಅಧಿಕಾರವನ್ನು ಹೊಂದಿದೆ.

**ಸಮಾಜವಾದಿ:** ದೇಶದ ಸಂಪತ್ತು ಇಡೀ ಸಮಾಜದಿಂದ ಸೃಷ್ಟಿಸಲ್ಪಟ್ಟಿದೆ ಮತ್ತು ಅದರ ಮೇಲೆ ರಾಜ್ಯದ (ಸರ್ಕಾರದ) ಮಾಲೀಕತ್ವವಿರುತ್ತದೆ. ಇದನ್ನು 'ಸಮಾಜವಾದಿ' ವ್ಯವಸ್ಥೆ ಎಂದು ಕರೆಯುತ್ತಾರೆ. ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗದಂತೆ ತಡೆಯುವುದು ಮತ್ತು ಸಮಾಜದಲ್ಲಿನ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ.

**ಧರ್ಮನಿರಪೇಕ್ಷ:** 'ಧರ್ಮನಿರಪೇಕ್ಷ' ಎಂದರೆ ರಾಜ್ಯಕ್ಕೆ (ದೇಶಕ್ಕೆ) ತನ್ನದೇ ಆದ ಯಾವುದೇ ಅಧಿಕೃತ ಧರ್ಮವಿಲ್ಲ ಎಂದರ್ಥ. ಸಂವಿಧಾನದ ಪ್ರಕಾರ ಎಲ್ಲಾ ಧರ್ಮಗಳನ್ನು ಸಮಾನವಾಗಿ ಪರಿಗಣಿಸಲಾಗುತ್ತದೆ. ಪ್ರತಿಯೊಬ್ಬ

ನಾಗರಿಕನಿಗೂ ತನ್ನ ನಂಬಿಕೆ ಮತ್ತು ಶ್ರದ್ಧೆಗೆ ಅನುಗುಣವಾಗಿ ಧರ್ಮವನ್ನು ಅನುಸರಿಸುವ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ.

**ಪ್ರಜಾಪ್ರಭುತ್ವ:** ಪ್ರಜಾಪ್ರಭುತ್ವ ಎಂದರೆ ಅಧಿಕಾರದ ಉಗಮಸ್ಥಾನ ಪ್ರಜೆಗಳೇ ಆಗಿರುತ್ತಾರೆ ಮತ್ತು ಅವರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. 'ಜನರಿಂದ, ಜನರಿಗಾಗಿ ನಡೆಸಲ್ಪಡುವ ಆಡಳಿತ' ಎಂಬುದು ಈ ವ್ಯವಸ್ಥೆಯ ಗುರುತಾಗಿದೆ.

**ಗಣರಾಜ್ಯ:** ಗಣರಾಜ್ಯ ಎಂದರೆ ದೇಶದ ಎಲ್ಲಾ ಸಾರ್ವಜನಿಕ ಹುದ್ದೆಗಳು (ಉದಾಹರಣೆಗೆ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ) ವಂಶಪಾರಂಪರ್ಯವಾಗಿ ಯಾರಿಗೂ ಹೋಗುವುದಿಲ್ಲ. ಈ ಹುದ್ದೆಗಳು ಜನರಿಂದ ನೇರವಾಗಿ ಅಥವಾ ಪರೋಕ್ಷವಾಗಿ ನಿರ್ದಿಷ್ಟ ಅವಧಿಗೆ ಆಯ್ಕೆಯಾದ ಪ್ರತಿನಿಧಿಗಳ ಬಳಿ ಇರುತ್ತವೆ.

## 3.3 ಭಾರತೀಯ ಸಂವಿಧಾನದ ಉದ್ದೇಶಗಳು

ಭಾರತದ ಸ್ವಾತಂತ್ರ್ಯ ಹೋರಾಟದಿಂದ ಮೂಡಿಬಂದ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳ ಆಧಾರದ ಮೇಲೆ ಭಾರತದ ನಿರ್ಮಾಣ ಮಾಡುವ ಉದ್ದೇಶವನ್ನು ಸಂವಿಧಾನವು ಅಂಗೀಕರಿಸಿದೆ.

**1. ನ್ಯಾಯ:** ಯಾರಿಗೂ ಜಾತಿ, ಧರ್ಮ, ವಂಶ, ಲಿಂಗ, ಭಾಷೆಯ ಆಧಾರದ ಮೇಲೆ ತಾರತಮ್ಯ ಮಾಡದೆ ಎಲ್ಲರಿಗೂ ಪ್ರಗತಿಯ ಸಮಾನ ಅವಕಾಶವನ್ನು ಒದಗಿಸಿಕೊಡುವುದೇ ನ್ಯಾಯ. ಇದರಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಗಳು ಸೇರಿವೆ.

**2. ಸ್ವಾತಂತ್ರ್ಯ:** ನಾಗರಿಕರ ಮೇಲೆ ಯಾವುದೇ ಅನ್ಯಾಯದ ನಿರ್ಬಂಧಗಳಿಲ್ಲದಿರುವುದು ಮತ್ತು ಅವರ ವ್ಯಕ್ತಿತ್ವದ ವಿಕಸನಕ್ಕೆ ಪೂರಕ ವಾತಾವರಣ ಇರುವುದು ಎಂದರೆ ಸ್ವಾತಂತ್ರ್ಯ. ಇದರಲ್ಲಿ ವಿಚಾರ, ಅಭಿವ್ಯಕ್ತಿ, ಸಂವಹನ, ಸಂಘಟನೆ, ವ್ಯವಹಾರ, ಶ್ರದ್ಧೆ ಮತ್ತು ಉಪಾಸನೆ ಇವುಗಳ ಸ್ವಾತಂತ್ರ್ಯ ಅಂತರ್ಗತವಾಗಿರುತ್ತದೆ.

**3. ಸಮತೆ:** ಜಾತಿ, ಧರ್ಮ, ವಂಶ, ಲಿಂಗ, ಭಾಷೆ ಅಥವಾ ಜನ್ಮಸ್ಥಳ ಇವುಗಳ ಆಧಾರದ ಮೇಲೆ ಯಾರನ್ನೂ ಶ್ರೇಷ್ಠ ಅಥವಾ ಕನಿಷ್ಠ ಎಂದು ಪರಿಗಣಿಸದೆ ಎಲ್ಲರಿಗೂ ಸಮಾನ ಸ್ಥಾನಮಾನ ನೀಡುವುದು ಎಂದರೆ ಸಮತೆ.

**4. ಬಂಧುತ್ವ:** ದೇಶದ ಎಲ್ಲಾ ನಾಗರಿಕರಲ್ಲಿ ನಾವು ಒಂದೇ ರಾಷ್ಟ್ರದ ಮಕ್ಕಳು ಎಂಬ ನಮ್ಮತನದ ಭಾವನೆಯನ್ನು ಮೂಡಿಸುವುದು ಎಂದರೆ ಬಂಧುತ್ವ. ಈ ಭಾವನೆಯು ವ್ಯಕ್ತಿಯ ಪ್ರತಿಷ್ಠೆಯನ್ನು ರಕ್ಷಿಸುತ್ತದೆ ಮತ್ತು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಬಲಪಡಿಸುತ್ತದೆ.

## 3.4 ಭಾರತೀಯ ಸಂವಿಧಾನದ ವೈಶಿಷ್ಟ್ಯಗಳು

ಭಾರತದ ಸಂವಿಧಾನದ ಕೆಲವು ಪ್ರಮುಖ ವೈಶಿಷ್ಟ್ಯಗಳು ಕೆಳಗಿನಂತಿವೆ. ಈ ವೈಶಿಷ್ಟ್ಯಗಳಿಂದ ಸಂವಿಧಾನದ ಪ್ರಾಮುಖ್ಯತೆಯು ಒತ್ತಿಹೇಳಲ್ಪಡುತ್ತದೆ.

### 1. ವಿಶ್ವದ ಅತಿ ದೊಡ್ಡ ಲಿಖಿತ ಸಂವಿಧಾನ:

ಭಾರತದ ಸಂವಿಧಾನವು ಅತ್ಯಂತ ವ್ಯಾಪಕ, ಆಳವಾದ ಮತ್ತು ವಿಸ್ತಾರವಾಗಿದೆ. ಜಗತ್ತಿನ ಎಲ್ಲಾ ಲಿಖಿತ ಸಂವಿಧಾನಗಳಲ್ಲಿ ಭಾರತದ ಸಂವಿಧಾನವು ಅತ್ಯಂತ ದೊಡ್ಡದಾಗಿದೆ.

### 2. ಜಗತ್ತಿನ ವಿವಿಧ ಸಂವಿಧಾನಗಳಿಂದ ಆಯ್ದ ಅಂಶಗಳ ಸೇರ್ಪಡೆ:

ಸಂವಿಧಾನ ಸಭೆಯು ಜಗತ್ತಿನ ವಿವಿಧ ಸಂವಿಧಾನಗಳನ್ನು ಅಭ್ಯಾಸ ಮಾಡಿ, ಭಾರತಕ್ಕೆ ಸೂಕ್ತವಾದ ಅಂಶಗಳನ್ನು ಅವುಗಳಿಂದ ಅಳವಡಿಸಿಕೊಂಡಿದೆ.

### 3. ನಮ್ಯತೆ ಮತ್ತು ಅನಮ್ಯತೆಯ ಮಿಶ್ರಣ:

ಸಂವಿಧಾನದ ನಿಬಂಧನೆಗಳನ್ನು ಸುಲಭವಾಗಿ ಬದಲಾಯಿಸಬಹುದಾದರೆ ಅದನ್ನು ನಮ್ಯ ಸಂವಿಧಾನ ಎನ್ನಲಾಗುತ್ತದೆ. ಸಂವಿಧಾನದ ನಿಬಂಧನೆಗಳನ್ನು ಬದಲಾಯಿಸುವುದು ತುಂಬಾ ಕಷ್ಟವಾಗಿದ್ದರೆ ಅದನ್ನು ಅನಮ್ಯ ಸಂವಿಧಾನ ಎನ್ನಲಾಗುತ್ತದೆ. ಭಾರತದ ಸಂವಿಧಾನವು ನಮ್ಯತೆ ಮತ್ತು ಅನಮ್ಯತೆಗಳ ಸಂಗಮವಾಗಿದೆ.

### 4. ನಾಗರಿಕರ ಮೂಲಭೂತ ಹಕ್ಕುಗಳು:

ಭಾರತದ ಸಂವಿಧಾನವು ಭಾರತದ ಎಲ್ಲಾ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನೀಡಿದೆ. ಅವುಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ಸಂವಿಧಾನವು ನ್ಯಾಯಾಂಗಕ್ಕೆ ವಹಿಸಿದೆ.

### 5. ನಾಗರಿಕರ ಮೂಲಭೂತ ಕರ್ತವ್ಯಗಳು:

ಭಾರತದ ಸಂವಿಧಾನವು ಮೂಲಭೂತ ಹಕ್ಕುಗಳ ಜೊತೆಗೆ ಕೆಲವು ಮೂಲಭೂತ ಕರ್ತವ್ಯಗಳನ್ನು ನೀಡಿದೆ. ಪ್ರತಿಯೊಬ್ಬ ಭಾರತೀಯನೂ ಮೂಲಭೂತ ಕರ್ತವ್ಯಗಳನ್ನು ಪಾಲಿಸುವುದು ಅಗತ್ಯವಾಗಿದೆ.

### 6. ರಾಜ್ಯ ನಿರ್ದೇಶಕ ತತ್ವಗಳು:

ಭಾರತದ ಸಂವಿಧಾನದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ನೀಡಲಾಗಿದೆ. ಈ ತತ್ವಗಳ ಪ್ರಕಾರ ರಾಜ್ಯದ ಆಡಳಿತವನ್ನು ನಡೆಸುವುದು ಅಗತ್ಯವಾಗಿದೆ.

### 7. ಒಕ್ಕೂಟ ವ್ಯವಸ್ಥೆ:

ಭಾರತವು ರಾಜ್ಯಗಳ ಒಂದು ಸಂಘವಾಗಿದೆ. ಸಂವಿಧಾನವು ದೇಶದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅಧಿಕಾರ ವಿಭಜನೆಯನ್ನು ಮಾಡಿದೆ. ಕೇಂದ್ರವು ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಕಾಯ್ದೆಗಳನ್ನು ಮಾಡಬಹುದು, ಹಾಗೆಯೇ ರಾಜ್ಯವು ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಶಾಸನಸಭೆಯಲ್ಲಿ ಕಾಯ್ದೆಗಳನ್ನು ಮಾಡಬಹುದು.

### 8. ಸಂಸದೀಯ ಪ್ರಜಾಪ್ರಭುತ್ವ:

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಮತದಾರರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಆಯ್ಕೆಯಾದ ಪ್ರತಿನಿಧಿಗಳಿಂದ ದೇಶದ ಪ್ರಧಾನ ಮಂತ್ರಿಯನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಪ್ರಧಾನ ಮಂತ್ರಿಗಳು ತಮ್ಮ ಮಂತ್ರಿಮಂಡಲವನ್ನು ಆಯ್ಕೆ ಮಾಡುತ್ತಾರೆ.

### 9. ಸಾರ್ವತ್ರಿಕ ವಯಸ್ಕ ಮತದಾನ:

18 ವರ್ಷ ಪೂರೈಸಿದ ಪ್ರತಿಯೊಬ್ಬ ಭಾರತೀಯ ನಾಗರಿಕನಿಗೆ ಮತದಾನದ ಹಕ್ಕಿದೆ, ಇದನ್ನು 'ಪ್ರೌಢ ಮತದಾನ' ಎಂದು ಕರೆಯಲಾಗುತ್ತದೆ.



## ನಿಮಗೆ ಗೊತ್ತಿದೆಯೇ?

**ಸಂವಿಧಾನ ಸಭೆಯಲ್ಲಿದ್ದ ಮಹಾರಾಷ್ಟ್ರದ ಕೆಲವು ಪ್ರಮುಖ ಸದಸ್ಯರು**

| | | | | |
|---|---|---|---|---|
| <br>ಡಾ. ಬಾಬಾಸಾಹೇಬ್ ಅಂಬೇಡ್ಕರ್ | <br>ಡಾ. ಪಂಜಾಬರಾವ ದೇಶ್‌ಮುಖ | <br>ಶ್ರೀ ಕೇಶವರಾವ ಜೇಧೆ | <br>ಡಾ. ದುರ್ಗಾಬಾಯಿ ದೇಶ್‌ಮುಖ | <br>ಶ್ರೀ ಶಂಕರರಾವ ದೇವ |
| <br>ಶ್ರೀ ನರಹರ್ ಗಾಡಗೀಳ | <br>ಶ್ರೀ ಬಾಳಾಸಾಹೇಬ್ ಖೇರ್ | <br>ಶ್ರೀ ದಾದಾ ಧರ್ಮಾಧಿಕಾರಿ | <br>ಶ್ರೀ ಬ್ರಜಲಾಲ್ ಬಿಯಾನಿ | <br>ಶ್ರೀ ಮಾಧವ (ಬಾಪೂಜಿ) ಅಣೆ |



## ಸ್ವಾಧ್ಯಾಯ

**ಪ್ರ. 1 ನೆನಪಿಸಿಕೊಂಡು ಬರೆಯಿರಿ.**

1. ನಾನು ಸಂವಿಧಾನದ ಆರಂಭವಾಗಿದ್ದೇನೆ, ನನ್ನನ್ನು ಸಂವಿಧಾನದ ಆತ್ಮ ಎಂದು ಕರೆಯುತ್ತಾರೆ, ನಾನು ಯಾರು?

   ----------------------------------------

2. ನಾನು ಒಂದು ಗ್ರಂಥವಾಗಿದ್ದೇನೆ, ಇದರಲ್ಲಿ ದೇಶವನ್ನು ನಡೆಸುವ ನಿಯಮಗಳು ಮತ್ತು ಕಾನೂನುಗಳಿವೆ, ನಾನು ಯಾರು?

   ----------------------------------------

**ಪ್ರ. 2 ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| 1. ಸ್ವಾತಂತ್ರ್ಯ | (ಅ) 'ನನ್ನ' ಮತ್ತು 'ಇತರರ' ನಡುವೆ ಭೇದಭಾವ ಮಾಡದಿರುವುದು. |
| 2. ಸಮಾನತೆ | (ಬ) ನಾವೆಲ್ಲಾ ಭಾರತೀಯರು ಒಂದೇ ಎಂಬ ಭಾವನೆ. |
| 3. ಭ್ರಾತೃತ್ವ | (ಕ) ಸ್ವಯಂ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಪಡೆಯುವುದು. |
| | (ಡ) ಯಾವುದೇ ಕೃತ್ಯವನ್ನು ಯಾವುದೇ ನಿರ್ಬಂಧವಿಲ್ಲದೆ ಮಾಡುವುದು. |

**ಪ್ರ. 3 'ತಕ್ಕಡಿಯ ಸಮತೋಲನವನ್ನು ಕಾಪಾಡಿ'**

ಸಂಕಲ್ಪನೆ: ಸಂವಿಧಾನವು ಒಂದು ತಟ್ಟೆಯಲ್ಲಿ 'ಹಕ್ಕು'ಗಳನ್ನು ಮತ್ತು ಇನ್ನೊಂದು ತಟ್ಟೆಯಲ್ಲಿ 'ಕರ್ತವ್ಯ'ಗಳನ್ನು ನೀಡಿದೆ.

ಪ್ರಶ್ನೆ: ಕೆಳಗಿನ ಸಂದರ್ಭಗಳಲ್ಲಿ ನೀವು 'ಸಮತೋಲನ'ವನ್ನು ಹೇಗೆ ಕಾಯ್ದುಕೊಳ್ಳುತ್ತೀರಿ?

1. ಹಕ್ಕು: ನನಗೆ ಸಾರ್ವಜನಿಕ ಉದ್ಯಾನವನದಲ್ಲಿ ಆಟವಾಡುವ ಹಕ್ಕಿದೆ.
   ಆದರೆ ನನ್ನ ಕರ್ತವ್ಯವೇನು?

--------------------------------------------

--------------------------------------------

2. ಹಕ್ಕು: ನನಗೆ ಸಾರ್ವಜನಿಕ ವಸ್ತುಗಳನ್ನು (ಉದಾಹರಣೆಗೆ, ಸಾರಿಗೆ ಸಂಸ್ಥೆಯ ಬಸ್) ಬಳಸುವ ಹಕ್ಕಿದೆ.
   ಆದರೆ ನನ್ನ ಕರ್ತವ್ಯವೇನು?

--------------------------------------------

--------------------------------------------

**ಪ್ರ. 4 ಪರಿಕಲ್ಪನೆಯನ್ನು ಸ್ಪಷ್ಟಪಡಿಸಿ.**

1. ಧರ್ಮನಿರಪೇಕ್ಷತೆ
2. ಪ್ರಜಾಪ್ರಭುತ್ವ

**ಪ್ರ. 5 ಮುಂದಿನ 10 ವರ್ಷಗಳಲ್ಲಿ ನಿಮ್ಮ ಕನಸಿನ ಭಾರತ ಹೇಗಿರಲಿದೆ ಎಂಬ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

**ಉಪಕ್ರಮ :**

- ಶಾಲೆಯ ಗ್ರಂಥಾಲಯದಿಂದ ಸಂವಿಧಾನದ ಪ್ರತಿಯನ್ನು ಪಡೆದುಕೊಳ್ಳಿ ಮತ್ತು ಅದರಲ್ಲಿರುವ ನಾಗರಿಕರ ಮೂಲಭೂತ ಕರ್ತವ್ಯಗಳನ್ನು ಹುಡುಕಿ ಬರೆಯಿರಿ.
- 'ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣರಾಜ್ಯ' ಈ ಪದಗಳನ್ನು ಬಳಸಿ ಭಾರತೀಯ ಸಂವಿಧಾನದ ಘೋಷವಾಕ್ಯಗಳನ್ನು ತಯಾರಿಸಿ ಮತ್ತು ಅವುಗಳ ಭಿತ್ತಿಚಿತ್ರಗಳನ್ನು ತರಗತಿಯಲ್ಲಿ ಪ್ರದರ್ಶಿಸಿ.

***

# 4 ಗ್ರಾಮೀಣ ಸ್ಥಾನಿಕ ಸ್ವರಾಜ್ಯ ಸಂಸ್ಥೆ



4.1 ಗ್ರಾಮೀಣ ಸ್ಥಳೀಯ ಆಡಳಿತ ಸಂಸ್ಥೆಯ ರಚನೆ
4.2 ಗ್ರಾಮ ಪಂಚಾಯತ್
4.3 ಪಂಚಾಯತ್ ಸಮಿತಿ
4.4 ಜಿಲ್ಲಾ ಪರಿಷತ್

**'ನಿಜವಾದ ಭಾರತವು ಹಳ್ಳಿಗಳಲ್ಲಿ ನೆಲೆಸಿದೆ' - ಮಹಾತ್ಮಾ ಗಾಂಧಿ**




ಗ್ರಾಮೀಣ ಮತ್ತು ನಗರ ಪ್ರದೇಶಗಳ ಸ್ಥಳೀಯ ಆಡಳಿತ ಸಂಸ್ಥೆಗಳನ್ನು 'ಪಂಚಾಯತ್ ರಾಜ್' ಎಂದು ಕರೆಯಲಾಗುತ್ತದೆ. ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟದ ಆಡಳಿತ ಸಂಸ್ಥೆಗಳು ಸ್ಥಳೀಯ ಪ್ರತಿನಿಧಿಗಳ ಕೈಯಲ್ಲಿ ಇರಲಿ ಎಂಬ ಉದ್ದೇಶದಿಂದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರೂಪಿಸಲಾಯಿತು. ಇದರ ಪ್ರಕಾರ ಗ್ರಾಮ ಪಂಚಾಯತ್, ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್ (ಜಿಲ್ಲಾ ಪಂಚಾಯತ್) ಎಂಬ ಮೂರು ಹಂತದ ರಚನೆಯನ್ನು ಮಾಡಲಾಗಿದೆ. ಇದರಿಂದಾಗಿ ಪ್ರಜಾಪ್ರಭುತ್ವದ ವಿಕೇಂದ್ರೀಕರಣವಾಯಿತು ಮತ್ತು ಸ್ಥಳೀಯ ಮಟ್ಟದ ಪ್ರತಿನಿಧಿಗಳ ಕೈಗೆ ಹೆಚ್ಚಿನ ಅಧಿಕಾರ ನೀಡಲಾಯಿತು.



**ನಿಮಗೆ ತಿಳಿದಿದೆಯೇ?**

22 ಡಿಸೆಂಬರ್ 1992 ರಂದು ನಡೆದ 73 ಮತ್ತು 74 ನೇ ಸಂವಿಧಾನ ತಿದ್ದುಪಡಿಗಳ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನಮಾನ ಲಭಿಸಿತು.

## 4.1 ಗ್ರಾಮೀಣ ಸ್ಥಳೀಯ ಆಡಳಿತ ಸಂಸ್ಥೆಯ ರಚನೆ




## 4.2 ಗ್ರಾಮ ಪಂಚಾಯತ್

ಹಳ್ಳಿಯ ಆಡಳಿತವನ್ನು ನೋಡಿಕೊಳ್ಳುವ ಮತ್ತು ಗ್ರಾಮದ ಅಭಿವೃದ್ಧಿ ಕೆಲಸಗಳನ್ನು ಮಾಡುವ ಸ್ಥಳೀಯ ಆಡಳಿತ ಸಂಸ್ಥೆಯೇ 'ಗ್ರಾಮ ಪಂಚಾಯತ್'. ಹೌದು, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಯು ಅತ್ಯಂತ

ಮೂಲಭೂತ ಸಂಸ್ಥೆಯಾಗಿದೆ. ಗ್ರಾಮ ಪಂಚಾಯಿತಿಯ ಸದಸ್ಯರ ಸಂಖ್ಯೆಯನ್ನು ಆಯಾ ಗ್ರಾಮದ ಜನಸಂಖ್ಯೆಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. ಮಹಾರಾಷ್ಟ್ರ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಯ ಸದಸ್ಯರ ಸಂಖ್ಯೆಯು ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ 7 (ಏಳು) ಮತ್ತು ಗರಿಷ್ಠ 17 (ಹದಿನೇಳು) ಇರುತ್ತದೆ. ಗ್ರಾಮ ಪಂಚಾಯಿತಿಯ ಅಧಿಕಾರಾವಧಿಯು ಐದು ವರ್ಷಗಳು. ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರನ್ನು ಪ್ರೌಢ ಮತದಾನ ಮತ್ತು ಗುಪ್ತ ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಯ ಕನಿಷ್ಠ ವಯಸ್ಸು 21 ವರ್ಷಗಳಾಗಿರಬೇಕು.

ಗ್ರಾಮ ಪಂಚಾಯಿತಿ ಸದಸ್ಯರ ಆಯ್ಕೆಗಾಗಿ ವಾರ್ಡ್‌ಗಳನ್ನು ರಚಿಸಲಾಗುತ್ತದೆ. ಪ್ರತಿ ವಾರ್ಡಿನಿಂದ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಕೆಲವು ಸ್ಥಾನಗಳನ್ನು ಮೀಸಲಿಡಲಾಗಿದೆ. ಮಹಾರಾಷ್ಟ್ರದ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಪ್ರತಿನಿಧಿಗಳಿಗೆ ಶೇಕಡಾ 50 ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ.

**ಹುಡುಕಿ ನೋಡೋಣ**

ನಿಮ್ಮ ನೆರೆಯ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇಕಡಾ ಎಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ?

ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರನ್ನು 'ಪಂಚ್' ಅಥವಾ 'ಸದಸ್ಯರು' ಎಂದು ಕರೆಯಲಾಗುತ್ತದೆ. ಆಯ್ಕೆಯಾದ ಸದಸ್ಯರು ತಮ್ಮಲ್ಲಿ ಒಬ್ಬರನ್ನು 'ಸರಪಂಚ್' (ಅಧ್ಯಕ್ಷರು) ಮತ್ತು ಒಬ್ಬರನ್ನು 'ಉಪ-ಸರಪಂಚ್' (ಉಪಾಧ್ಯಕ್ಷರು) ಎಂದು ಆಯ್ಕೆ ಮಾಡುತ್ತಾರೆ. ಪ್ರಸ್ತುತ ಮಹಾರಾಷ್ಟ್ರದಲ್ಲಿ ಸರಪಂಚರನ್ನು ಜನರಿಂದ ನೇರವಾಗಿ ಆಯ್ಕೆ ಮಾಡಲಾಗುತ್ತದೆ.

**ಗ್ರಾಮ ಪಂಚಾಯಿತಿಯ ಸದಸ್ಯರ ಸಂಖ್ಯೆ ಜನಸಂಖೆಗೆ ಅನುಸಾರ ನಿರ್ಧಾರ**




### ಗಟ್ ಪಂಚಾಯತ್ (ಗುಂಪು ಪಂಚಾಯತಿ)

600 ಕ್ಕಿಂತ ಕಡಿಮೆ ಜನಸಂಖ್ಯೆ ಇರರುವ ಎರಡು ಅಥವಾ ಅದಕ್ಕಿಂತ ಹೆಚ್ಚು ಗ್ರಾಮಗಳಿಗೆ ಸೇರಿ ಒಂದು ಪಂಚಾಯತ್ ಇರುತ್ತದೆ. ಇದನ್ನು 'ಗಟ್ ಪಂಚಾಯತ್' ಎನ್ನಲಾಗುತ್ತದೆ.

### 4.2.1 ಗ್ರಾಮ ಪಂಚಾಯತಿಯ ಕಾರ್ಯಗಳು

ಗ್ರಾಮದ ಅಭಿವೃದ್ಧಿಗಾಗಿ ಪಂಚಾಯತ್ ಈ ಕೆಳಗಿನ ಕೆಲಸಗಳನ್ನು ಮಾಡುತ್ತದೆ:




- ಗ್ರಾಮದ ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ.
- ಬೀದಿ ದೀಪ ಮತ್ತು ಕುಡಿಯುವ ನೀರಿನ ವ್ಯವಸ್ಥೆ.
- ಜನನ, ಮರಣ ಮತ್ತು ವಿವಾಹಗಳ ನೋಂದಣಿ.
- ಗ್ರಾಮದ ನೈರ್ಮಲ್ಯ ಮತ್ತು ಸ್ವಚ್ಛತೆಯನ್ನು ಕಾಪಾಡುವುದು.
- ಪ್ರಾಥಮಿಕ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು.
- ಮನೆ ತೆರಿಗೆ ಮತ್ತು ನೀರು ತೆರಿಗೆಯನ್ನು ಸಂಗ್ರಹಿಸುವುದು.
- ಸರ್ಕಾರಿ ಯೋಜನೆಗಳ ಮಾಹಿತಿಯನ್ನು ಜನರಿಗೆ ತಲುಪಿಸುವುದು.

**ತಿಳಿದುಕೊಳ್ಳೋಣ ಬಾ.**

**ಮಹಾರಾಷ್ಟ್ರದಲ್ಲಿನ ಆದರ್ಶ ಗ್ರಾಮಪಂಚಾಯತ್**

ಹಿವರೆ ಬಾಜಾರ್ ಇದು ಅಹಿಲ್ಯಾನಗರ ಜಿಲ್ಲೆಯ ಒಂದು ಚಿಕ್ಕ ಹಳ್ಳಿ. ನಿರಂತರ ಬರಗಾಲ ಮತ್ತು ಕಡಿಮೆ ಇಳುವರಿ ಇದು ಹಿವರ ಬಾಜಾರಿನ ನಿತ್ಯಸಮಸ್ಯೆ. ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಊರಿನಲ್ಲಿ ಮಳೆನೀರಿನ ಸಂಗ್ರಹ ಮತ್ತು ಜಲಾನಯನ ಪ್ರದೇಶಗಳ ಸಂರಕ್ಷಣೆಯ ಕಾರ್ಯ ಕೈಕೊಳ್ಳಲಾಯಿತು. ಊರಲ್ಲಿ ಸಾಕಷ್ಟು ಗಿಡಗಳನ್ನು ಹಚ್ಚುವುದರಿಂದ ಅಂತರ್ಜಲದ ಮಟ್ಟ ಏರಿಕೆಯಾಯಿತು. ಗ್ರಾಮಸ್ಥರ ಸಹಕಾರದಿಂದ ಕೆಲವೇ

ವರ್ಷಗಳಲ್ಲಿ ಹಿವರೆ ಬಜಾರ್ ಇದು ಹಸಿರಿನಿಂದ ಕೂಡಿದ ಸಮೃದ್ಧ ಊರಾಯಿತು. ಹಿವರೆ ಬಾಜಾರ್ ಇದು ಆದರ್ಶ ಗ್ರಾಮಕ್ಕೆ ಒಂದು ಉತ್ತಮ ಉದಾಹರಯೆಯಾಗಿದೆ.ಈ ಕಾರ್ಯಕ್ಕೆ ಅಂದಿನ ಸರಪಂಚರಾದ ಶ್ರೀ ಪೋಪಟರಾವ ಪವಾರ ಅವರಿಗೆ 2020ರಲ್ಲಿ ಭಾರತ ಸರಕಾರದ 'ಪದ್ಮಶ್ರೀ' ಈ ಸರ್ವೋಚ್ಚ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

**ಚರ್ಚಿಸಿ:**

ಕೆಳಗಿನ ಚಿತ್ರವನ್ನು ನೋಡಿ ಮತ್ತು ತರಗತಿಯಲ್ಲಿ ತುಲನಾತ್ಮಕ ಚರ್ಚೆ ಮಾಡಿ

**ನಿಮಗೆ ಗೊತ್ತಿದೆಯೇ?**

ಸರ್ಕಾರದ ನಿರ್ಧಾರ ದಿನಾಂಕ 23 ಸೆಪ್ಟೆಂಬರ್ 2024 ರ ಪ್ರಕಾರ, 'ಗ್ರಾಮ ಸೇವಕ' ಎಂಬ ಹುದ್ದೆಯ ಹೆಸರನ್ನು ಬದಲಾಯಿಸಿ 'ಗ್ರಾಮ ಪಂಚಾಯತಿ ಅಧಿಕಾರಿ' ಎಂದು ಮಾಡಲಾಗಿದೆ..

**ಅಭಿವೃದ್ಧಿಯಾಗದ ಮತ್ತು ಅಭಿವೃದ್ಧಿ ಹೊಂದಿದ ಗ್ರಾಮಪಂಚಾಯತಿಗಳ ನಡುವಿನ ವ್ಯತ್ಯಾಸ**




**ಚರ್ಚಿಸಿ:**

- ಆದರ್ಶ ಗ್ರಾಮ ಎಂದರೆ ಏನು?
- ಮಹಾರಾಷ್ಟ್ರದ ಆದರ್ಶ ಗ್ರಾಮಗಳ ಹೆಸರುಗಳನ್ನು ಹುಡುಕಿ.

### 4.2.2 ಗ್ರಾಮ ಸೇವಕ/ಗ್ರಾಮ ಪಂಚಾಯಿತಿ ಅಧಿಕಾರಿ:

ಗ್ರಾಮ ಸೇವಕನು ಗ್ರಾಮ ಪಂಚಾಯಿತಿಯ ಆಡಳಿತ ಮುಖ್ಯಸ್ಥನಾಗಿರುತ್ತಾನೆ. ಗ್ರಾಮ ಪಂಚಾಯಿತಿಯ ಕಚೇರಿ ಕೆಲಸಗಳು ಮತ್ತು ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳಲು ಅವನನ್ನು ನೇಮಿಸಲಾಗುತ್ತದೆ. ಗ್ರಾಮ ಸೇವಕನು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯೂ ಆಗಿರುತ್ತಾನೆ.

### 4.2.3 ಗ್ರಾಮಸಭೆ

ಹಳ್ಳಿಯ ಎಲ್ಲಾ ಮತದಾರರನ್ನು ಒಳಗೊಂಡ ಸಭೆಯನ್ನು ಗ್ರಾಮಸಭೆ ಎನ್ನಲಾಗುತ್ತದೆ. ಗ್ರಾಮಸಭೆಯ ಅಧ್ಯಕ್ಷರು ಸರಪಂಚರಾಗಿರುತ್ತಾರೆ. ಸರಪಂಚರ ಅನುಪಸ್ಥಿತಿಯಲ್ಲಿ ಉಪ-ಸರಪಂಚರು ಗ್ರಾಮಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಗ್ರಾಮಸಭೆಯು ಗ್ರಾಮ ಪಂಚಾಯಿತಿಯ ಕಾರ್ಯನಿರ್ವಹಣೆಯ ಮೇಲೆ ದೃಷ್ಟಿ ಇಡುವ ಮತ್ತು ಹಳ್ಳಿಯ ಅಭಿವೃದ್ಧಿ ಕಾಮಗಾರಿಗಳಿಗೆ ಅಂತಿಮ ಅನುಮೋದನೆ ನೀಡುವ, 18 ವರ್ಷ ಮೇಲ್ಪಟ್ಟ ಎಲ್ಲಾ ಮತದಾರರ ಸಭೆಯಾಗಿದೆ.

ಗ್ರಾಮ ಪಂಚಾಯಿತಿಯ ಆಡಳಿತದಲ್ಲಿ ಗ್ರಾಮ ಸಭೆಯು ಬಹಳ ಮಹತ್ವದ್ದಾಗಿದೆ. ಮಹಾರಾಷ್ಟ್ರದಲ್ಲಿ, ಗ್ರಾಮಸಭೆಯು ವರ್ಷಕ್ಕೆ ಕನಿಷ್ಠ ನಾಲ್ಕು ಸಭೆಗಳನ್ನು ನಡೆಸಬೇಕು ಎಂಬ

ಕಾನೂನುಬದ್ಧ ಬಂಧನವಿದೆ. ಜನವರಿ 26, ಮೇ 1, ಆಗಸ್ಟ್ 15 ಮತ್ತು ಅಕ್ಟೋಬರ್ 2 ರಂದು ಗ್ರಾಮಸಭೆಯ ಸಭೆಗಳು ನಡೆಯುತ್ತವೆ. ಇದಲ್ಲದೆ, ವಿಶೇಷ ಸಭೆಯನ್ನು ಕರೆಯುವ ಅಧಿಕಾರ ಸರಪಂಚರಿಗೆ ಇರುತ್ತದೆ. ಸರಪಂಚರು ಗ್ರಾಮಸಭೆಯ ಸಭೆಗಳನ್ನು ಆಯೋಜಿಸುತ್ತಾರೆ. ಗ್ರಾಮಸಭೆಯ ಮೊದಲು ಮಹಿಳೆಯರ ಸಭೆಯನ್ನು ಆಯೋಜಿಸಲಾಗುತ್ತದೆ.

**ಮಾಡಿ ನೋಡಿ:**

- ಇತ್ತೀಚೆಗೆ ನಿಮ್ಮ ಗ್ರಾಮದಲ್ಲಿ ನಡೆದ ಗ್ರಾಮಸಭೆಯ ಬಗ್ಗೆ ಮಾಹಿತಿ ಪಡೆಯಿರಿ.
- ನಿಮ್ಮ ಗ್ರಾಮದ ಸರಪಂಚರ (ಅಧ್ಯಕ್ಷರ) ಸಂದರ್ಶನ ಮಾಡಿ. ಅದರ ಆಧಾರದ ಮೇಲೆ ಅವರು ಗ್ರಾಮದಲ್ಲಿ ಯಾವೆಲ್ಲಾ ಕೆಲಸಗಳನ್ನು ಮಾಡಿದ್ದಾರೆ ಎಂಬ ಪಟ್ಟಿಯನ್ನು ತಯಾರಿಸಿ.




### ಗ್ರಾಮಸಭೆಯ ಕೆಲಸಗಳು

ಗ್ರಾಮಪಂಚಾಯತಿಯ ಜಮಾ-ಖರ್ಚುಗಳನ್ನು ಪರಿಶೀಲಿಸುವುದು ಮತ್ತು ಅವುಗಳಿಗೆ ಅನುಮೋದನೆ ನೀಡುವುದು, ವಾರ್ಷಿಕ ಆಯವ್ಯಯ (ಬಜೆಟ್) ವನ್ನು ಮಂಜೂರು ಮಾಡುವುದು, ಕಳೆದ ಹಣಕಾಸು ವರ್ಷದ ವರದಿ ಮತ್ತು ಪ್ರಸಕ್ತ ಕಾರ್ಯಕ್ರಮಗಳ ರೂಪರೇಖೆಯನ್ನು ಸಿದ್ಧಪಡಿಸುವುದು. ಈ ರೀತಿಯ ಕೆಲಸಗಳ ಬಗ್ಗೆ ಗ್ರಾಮ ಸಭೆಯಲ್ಲಿ ಚರ್ಚೆ ನಡೆಸಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ. ಗ್ರಾಮಸಭೆಯ ಎಲ್ಲಾ ಕೆಲಸಕಾರ್ಯಗಳ ದಾಖಲೆಯನ್ನು ಗ್ರಾಮ ಪಂಚಾಯತಿಯ ಅಧಿಕಾರಿಯು ರಜಿಸ್ಟರನಲ್ಲಿ ಇಡುತ್ತಾರೆ. ಸ್ಥಳೀಯ ತೆರಿಗೆಗಳು (ಮನೆ ತೆರಿಗೆ, ನೀರಿನ ತೆರಿಗೆ) ಮತ್ತು ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ಜಿಲ್ಲಾ ಪರಿಷತ್ತಿನಿಂದ ಬರುವ ಅನುದಾನಗಳು ಗ್ರಾಮಪಂಚಾಯತಿಯ ಆದಾಯದ ಮುಖ್ಯ ಮೂಲಗಳಾಗಿವೆ. ಇದಲ್ಲದೆ ಮಾರುಕಟ್ಟೆ ತೆರಿಗೆ, ವೃತ್ತಿ ತೆರಿಗೆ ಮತ್ತು ಗ್ರಾಮ ಪಂಚಾಯತಿಯ ಆಸ್ತಿಯಿಂದ ಬರುವ ಬಾಡಿಗೆ ಮೂಲಕವೂ ನಿಧಿ ಸಂಗ್ರಹಿಸಲಾಗುತ್ತದೆ.

**ಕೃತಿ ಮಾಡಿ:**

ಶಾಲೆಯಲ್ಲಿ ಅಣಕು ಗ್ರಾಮಸಭೆಯನ್ನು ಆಯೋಜಿಸಿ.

**ಯೋಚಿಸಿ**

ನೀವು ಸರಪಂಚರಾದರೆ (ಗ್ರಾಮ ಪಂಚಾಯತ್ ಅಧ್ಯಕ್ಷರಾದರೆ), ನಿಮಗೆ ಯಾವ ಕೆಲಸಗಳನ್ನು ಮಾಡಲು ಇಷ್ಟವಾಗುತ್ತದೆ?

## 4.3 ಪಂಚಾಯತ್ ಸಮಿತಿ

ಒಂದು ತಾಲೂಕಿನ ಎಲ್ಲಾ ಹಳ್ಳಿಗಳ ಒಕ್ಕೂಟದ ಅಭಿವೃದ್ಧಿ ಗುಂಪು ಇದಾಗಿರುತ್ತದೆ. ಅಭಿವೃದ್ಧಿ ಗುಂಪಿನ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳುವ ಸಂಸ್ಥೆಯನ್ನು 'ಪಂಚಾಯತ್ ಸಮಿತಿ' ಎನ್ನಲಾಗುತ್ತದೆ. ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತಿನ ನಡುವಿನ ಕೊಂಡಿಯಾಗಿ ಪಂಚಾಯತ್ ಸಮಿತಿ ಕೆಲಸ ಮಾಡುತ್ತದೆ. ಪಂಚಾಯತ್ ಸಮಿತಿಯಲ್ಲಿ ಕನಿಷ್ಠ 15 ಮತ್ತು ಗರಿಷ್ಠ 45 ಸದಸ್ಯರಿರುತ್ತಾರೆ.

**ಪಂಚಾಯತ್ ಸಮಿತಿಯ ರಚನೆ**




### 4.3.1 ಪಂಚಾಯತ್ ಸಮಿತಿ ಸಭಾಪತಿ

ಪಂಚಾಯತ್ ಸಮಿತಿಯ ಚುನಾಯಿತ ಸದಸ್ಯರು ತಮ್ಮಲ್ಲೊಬ್ಬನನ್ನು ಸಭಾಪತಿಯನ್ನಾಗಿ ಮತ್ತು ಮತ್ತೊಬ್ಬನನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡುತ್ತಾರೆ. ಪಂಚಾಯತ್ ಸಮಿತಿಯ ಸಭಾಪತಿ ಮತ್ತು ಉಪಸಭಾಪತಿಗಳ ಅಧಿಕಾರಾವಧಿ ಎರಡುವರೆ ವರ್ಷಗಳು. ಪಂಚಾಯತ್ ಸಮಿತಿಯ ಸಭೆಗಳನ್ನು ಕರೆಯುವುದು, ಸಭೆಯ ಅಧ್ಯಕ್ಷತೆ ವಹಿಸುವುದು, ಸಭೆಯ ಮೇಲೆ ನಿಯಂತ್ರಣ ಹೊಂದುವುದು, ಜಿಲ್ಲಾ ಪರಿಷತ್ತಿನಿಂದ ಬಂದ ಆದೇಶಗಳನ್ನು ಜಾರಿಗೆ ತರುವುದು ಮತ್ತು ಪಂಚಾಯತ್ ಸಮಿತಿಯ ಕೆಲಸದ ಮೇಲೆ ನಿಯಂತ್ರಣ ಇಟ್ಟುಕೊಳ್ಳುವುದು ಇವರ ಮುಖ್ಯ ಕಾರ್ಯಗಳಾಗಿವೆ. ಸಭಾಪತಿಯ ಅನುಪಸ್ಥಿತಿಯಲ್ಲಿ ಉಪಸಭಾಪತಿಯು ಆ ಕೆಲಸಗಳನ್ನು ನೋಡಿಕೊಳ್ಳುತ್ತಾರೆ.

### 4.3.2 ಗಟವಿಕಾಸ ಅಧಿಕಾರಿ (ಬಿ.ಡಿ.ಓ)

ಗಟವಿಕಾಸ ಅಧಿಕಾರಿಯು ಪಂಚಾಯತ್ ಸಮಿತಿಯ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಮಹಾರಾಷ್ಟ್ರದ ಪ್ರತಿಯೊಂದು ಪಂಚಾಯತ್ ಸಮಿತಿಯಲ್ಲಿ ಒಬ್ಬ ಗಟವಿಕಾಸ ಅಧಿಕಾರಿಯನ್ನು ನೇಮಿಸಲಾಗುತ್ತದೆ. ಅವರ ಆಯ್ಕೆಯನ್ನು ಮಹಾರಾಷ್ಟ್ರ ಲೋಕಸೇವಾ ಆಯೋಗದ (MPSC) ಮೂಲಕ ನಡೆಸಲಾಗುವ ಪರೀಕ್ಷೆಗಳಿಂದ ಮಾಡಲಾಗುತ್ತದೆ. ನೇಮಕಾತಿಯನ್ನು ಮಹಾರಾಷ್ಟ್ರ ಸರ್ಕಾರ ಮಾಡುತ್ತದೆ. ತಾಲೂಕಿನ ಅಭಿವೃದ್ಧಿ ಯೋಜನೆಗಳನ್ನು ಮತ್ತು ನಿರ್ಣಯಗಳನ್ನು ಜಾರಿಗೆ ತರುವ ಕೆಲಸವನ್ನು ಇವರು ಮಾಡುತ್ತಾರೆ. ಇವರ ನಿಯಂತ್ರಣದಲ್ಲಿ ಪಂಚಾಯತ್ ಸಮಿತಿಯ ಯಂತ್ರಾಂಗವು ಕಾರ್ಯನಿರ್ವಹಿಸುತ್ತದೆ.

### 4.3.3 ಪಂಚಾಯತ್ ಸಮಿತಿಯ ಕಾರ್ಯಗಳು

- ಪಂಚಾಯತ್ ಸಮಿತಿ ವ್ಯಾಪ್ತಿಯಲ್ಲಿನ ಕೆಲಸಗಳ ಯೋಜನೆ ರೂಪಿಸುವುದು.
- ಜಿಲ್ಲಾ ಪರಿಷತ್ತಿನ ಪರವಾಗಿ ಕಾರ್ಯಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲಸಗಳ ಮೇಲೆ ಮೇಲ್ವಿಚಾರಣೆ ಮಾಡುವುದು.
- ಜಿಲ್ಲಾ ಪರಿಷತ್ತು ಮತ್ತು ಗ್ರಾಮ ಪಂಚಾಯತಿಗಳ ನಡುವೆ ಸಮನ್ವಯ ಸಾಧಿಸುವುದು.
- ತಾಲೂಕಿನ ವಿಕಾಸ ಯೋಜನೆಗಳನ್ನು ಅನುಷ್ಠಾನ ಗೊಳಿಸುವುದು.

ಇವು ಪಂಚಾಯತ್ ಸಮಿತಿಯ ಪ್ರಮುಖ ಕಾರ್ಯಗಳು. ಪಂಚಾಯತ್ ಸಮಿತಿಯಲ್ಲಿ ಸಾಮಾನ್ಯ ಆಡಳಿತ, ಸಾರ್ವಜನಿಕ ಕಾಮಗಾರಿ, ಹಣಕಾಸು, ಕೃಷಿ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಇತ್ಯಾದಿ ಇಲಾಖೆಗಳಿರುತ್ತವೆ. ಅವುಗಳ ಮೂಲಕ ಕಾರ್ಯಗಳ ಯೋಜನೆ ಮತ್ತು ಅನುಷ್ಠಾನವನ್ನು ಮಾಡಲಾಗುತ್ತದೆ. ಜಿಲ್ಲಾ ಪಂಚಾಯತ್ ಮತ್ತು ಸರ್ಕಾರದ ಆದೇಶದಂತೆ ಪಂಚಾಯತ್ ಸಮಿತಿಯು ಈ ಕೆಲಸಗಳನ್ನು ನಿರ್ವಹಿಸುತ್ತದೆ.

ಪಂಚಾಯತ್ ಸಮಿತಿಗೆ ಸ್ವಂತ ಆದಾಯದ ಮೂಲಗಳಿಲ್ಲ, ಪಂಚಾಯತ್ ಸಮಿತಿಯ ಆಯವ್ಯಯವನ್ನು (ಬಜೆಟ್) ಜಿಲ್ಲಾ ಪಂಚಾಯತ್‌ನ ಆಯವ್ಯಯದಲ್ಲಿ ಸೇರಿಸಲಾಗುತ್ತದೆ. ಪಂಚಾಯತ್ ಸಮಿತಿ ವ್ಯಾಪ್ತಿಯಲ್ಲಿನ ಯೋಜನೆಗಳ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯತ್ ಮತ್ತು ರಾಜ್ಯ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತದೆ.

**ಪಂಚಾಯತ್ ಸಮಿತಿಯ ಪ್ರಮುಖ ಕಾರ್ಯಗಳು:**





**ಹುಡುಕೋಣ:**

- ಪಂಚಾಯತ್ ಸಮಿತಿಯ ಸಭಾಪತಿಯನ್ನು ಯಾರು ಆಯ್ಕೆ ಮಾಡುತ್ತಾರೆ?
- ಪಂಚಾಯತ ಸಮೀತಿಯ ಆಡಳಿತದ ಮುಖ್ಯಸ್ಥರು ಯಾರು?

### 4.4 ಜಿಲ್ಲಾ ಪರಿಷತ್

ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸ್ಥಳೀಯ ಸ್ವಯಂ ಸರ್ಕಾರಿ ಸಂಸ್ಥೆಯೇ ಜಿಲ್ಲಾ ಪರಿಷತ್. ಮಹಾರಾಷ್ಟ್ರದಲ್ಲಿ ಪ್ರಸ್ತುತ 36 ಜಿಲ್ಲೆಗಳಿವೆ, ಆದರೆ ಜಿಲ್ಲಾ ಪರಿಷತ್‌ಗಳ ಸಂಖ್ಯೆ 34 ಮಾತ್ರ. ಇದಕ್ಕೆ ಕಾರಣವೇನೆಂದರೆ, ಮುಂಬಯಿ ನಗರ ಮತ್ತು ಮುಂಬಯಿ ಉಪನಗರ ಜಿಲ್ಲೆಗಳು ಸಂಪೂರ್ಣವಾಗಿ ನಗರೀಕೃತ ಜನಸಂಖ್ಯೆಯನ್ನು ಹೊಂದಿರುವುದರಿಂದ ಅಲ್ಲಿ ಜಿಲ್ಲಾ ಪರಿಷತ್ ಗಳು ಅಸ್ತಿತ್ವದಲ್ಲಿಲ್ಲ.

ಜಿಲ್ಲಾ ಪರಿಷತ್ತಿಗೆ ಪ್ರೌಢ ಮತದಾನ ಪದ್ಧತಿಯ ಮೂಲಕ ಚುನಾವಣೆ ನಡೆಯುತ್ತದೆ. ಜಿಲ್ಲಾ ಪರಿಷತ್ತಿನಲ್ಲಿ ಕನಿಷ್ಠ 50 ಮತ್ತು ಗರಿಷ್ಠ 75 ಸದಸ್ಯರಿರುತ್ತಾರೆ. ಜಿಲ್ಲೆಯ ಎಲ್ಲಾ ಪಂಚಾಯತ್ ಸಮಿತಿಗಳ ಸಭಾಪತಿಗಳು ಜಿಲ್ಲಾ ಪರಿಷತ್ತಿನ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

### 4.4.1 ಜಿಲ್ಲಾ ಪರಿಷತ್ ಅಧ್ಯಕ್ಷರು

ಜಿಲ್ಲಾ ಪರಿಷತ್ತಿಗೆ ಆಯ್ಕೆಯಾದ ಸದಸ್ಯರು ತಮ್ಮಲ್ಲೊಬ್ಬರನ್ನು ಅಧ್ಯಕ್ಷರನ್ನಾಗಿ ಮತ್ತು ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. ಇವರ ಅಧಿಕಾರಾವಧಿ ಎರಡುವರೆ ವರ್ಷಗಳು. ಜಿಲ್ಲಾ ಪರಿಷತ್ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅವರ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಸ್ಥಾಯಿ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.

### 4.4.2 ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಪ್ರತಿ ಜಿಲ್ಲಾ ಪರಿಷತ್ತಿಗೆ ಒಬ್ಬ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇರುತ್ತಾರೆ. ಇವರು ಜಿಲ್ಲಾ ಪರಿಷತ್ತಿನ ಆಡಳಿತಾತ್ಮಕ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ. ಇವರು ಭಾರತೀಯ ಆಡಳಿತ ಸೇವೆಗೆ (IAS) ಸೇರಿದ ಅಧಿಕಾರಿಯಾಗಿರುತ್ತಾರೆ. ಇವರನ್ನು ರಾಜ್ಯ ಸರ್ಕಾರ ನೇಮಕ ಮಾಡುತ್ತದೆ. ಜಿಲ್ಲಾ ಪರಿಷತ್ತಿನ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಜಿಲ್ಲಾ ಪರಿಷತ್ತು ಕೈಗೊಂಡ ನಿರ್ಧಾರಗಳನ್ನು ಜಾರಿಗೆ ತರುವುದು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಪ್ರಮುಖ ಕೆಲಸವಾಗಿದೆ.

### 4.4.3 ಜಿಲ್ಲಾ ಪರಿಷತ್ತಿನ ಕಾರ್ಯಗಳು

ಜಿಲ್ಲಾ ಪರಿಷತ್ತಿನಲ್ಲಿ ಸ್ಥಾಯಿ ಸಮಿತಿ, ಹಣಕಾಸು ಸಮಿತಿ, ನಿರ್ಮಾಣ ಸಮಿತಿ, ಕೃಷಿ ಸಮಿತಿ, ಸಮಾಜ ಕಲ್ಯಾಣ ಸಮಿತಿ, ಶಿಕ್ಷಣ ಸಮಿತಿ, ಆರೋಗ್ಯ ಸಮಿತಿ, ಪಶುಸಂಗೋಪನೆಜಿಲ್ಲಾ ಮತ್ತು ಹೈನುಗಾರಿಕೆ ಸಮಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಹಾಗೂ ಜಲಸಂಪನ್ಮೂಲ ಮತ್ತು ನೈರ್ಮಲ್ಯ ಸಮಿತಿ ಹೀಗೆ ಒಟ್ಟು 10 ಸಮಿತಿಗಳಿರುತ್ತವೆ. ಇವುಗಳಲ್ಲಿ ಸ್ಥಾಯಿ ಸಮಿತಿಯು ಅತ್ಯಂತ ಪ್ರಮುಖವಾದುದು. ಪ್ರತಿ ಸಮಿತಿಗೆ ಒಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ. ಜಿಲ್ಲೆಯ ಅಭಿವೃದ್ಧಿಗಾಗಿ ಜಿಲ್ಲಾ ಪರಿಷತ್ತು ಈ ಸಮಿತಿಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ನೀರು ಸರಬರಾಜು, ಪ್ರಯಾಣ ತೆರಿಗೆ, ಮಾರುಕಟ್ಟೆ ತೆರಿಗೆ, ಬಾಡಿಗೆ ಸಂಗ್ರಹ ಇವುಗಳು ಜಿಲ್ಲಾ ಪರಿಷತ್ತಿನ ಆದಾಯದ ಮೂಲಗಳಾಗಿವೆ. ಇದಲ್ಲದೆ, ರಾಜ್ಯ ಸರ್ಕಾರವು ಭೂಕಂದಾಯಕ್ಕೆ ಅನುಗುಣವಾಗಿ ಜಿಲ್ಲಾ ಪರಿಷತ್ತಿಗೆ ನಿರ್ದಿಷ್ಟ ಅನುದಾನವನ್ನು ನೀಡುತ್ತದೆ. ಜಿಲ್ಲೆಯ ವಿಕಾಸಕ್ಕಾಗಿ ಈ ಸಮೀತಿ ವತಿಹಿಂದ ಜಿಲ್ಲಾಪರಿಷತ್‌ಕಾರ್ಯಮಾಡುತ್ತದೆ. ಅದರಲ್ಲಿ ಪ್ರಮುಖವಾಗಿ ಕೆಳಗಿನ ಕೆಲಸಗಳ ಸಮಾಜೀಶವಿದೆ.

**ಪಂಚಾಯತ್ ಪರಿಷದ ವಿಭಾಗಗಳು ಮತ್ತು ಪ್ರಮುಖ ಕಾರ್ಯಗಳು**

| ಸಮಿತಿ | ಪ್ರಮುಖ ಕಾರ್ಯಗಳು |
|---|---|
| ಸ್ಥಾಯಿ ಸಮಿತಿ | 1. ಸಾಮಾನ್ಯ ಆಡಳಿತ, ಹಣಕಾಸು ಮತ್ತು ಸಮನ್ವಯ.<br>2. ಇತರ ಸಮಿತಿಗಳ ಮೇಲೆ ನಿಯಂತ್ರಣ |
| ಹಣಕಾಸು | 1. ಜಿಲ್ಲಾ ಪಂಚಾಯತ್ ವೆಚ್ಚಗಳ ಮೇಲೆ ವಿಶೇಷ ನಿಗಾ ಇಡುವುದು.<br>2. ಲೆಕ್ಕ ಪರಿಶೋಧನೆ ಮಾಡುವದು. |
| ಕೃಷಿ | 1. ಬಿತ್ತನೆ ಬೀಜಗಳು, ಗೊಬ್ಬರ ಮತ್ತು ಉಪಕರಣಗಳ ವಿತರಣೆ.<br>2. ಆಧುನಿಕ ಕೃಷಿ ತಂತ್ರಜ್ಞಾನದ ತರಬೇತಿ ನೀಡುವುದು |
| ಸಮಾಜ ಕಲ್ಯಾಣ | 1. ಹಿಂದುಳಿದ ವರ್ಗದವರಿಗೆ ಆರ್ಥಿಕ ಸಹಾಯ.<br>2. ವಿಕಲಚೇತನರು ಮತ್ತು ಅನಾಥರಿಗಾಗಿ ಯೋಜನೆಗಳು |
| ಶಿಕ್ಷಣ | 1. ಪ್ರಾಥಮಿಕ ಶಾಲೆಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ.<br>2. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಸಮವಸ್ತ್ರ ವಿತರಣೆ. |
| ಪಶುಸಂಗೋಪನೆ | 1. ಪಶುಸಂಗೋಪನೆ ವಿಕಾಸ ಯೋಜನೆ ಸಿದ್ಧಪಡಿಸುವುದು.<br>2. ಪಶುವೈದ್ಯಕೀಯ ಆಸ್ಪತ್ರೆಗಳ ನಿಯಂತ್ರಣ. |
| ಜಲಸಂರಕ್ಷಣೆ ಮತ್ತು ನೈರ್ಮಲ್ಯ | 1. ಕುಡಿಯುವ ನೀರಿನ ಮಾರ್ಗಗಳನ್ನು ಸ್ವಚ್ಛವಾಗಿಡುವುದು.<br>2. ಸ್ವಚ್ಛತಾ ಅಭಿಯಾನವನ್ನು ನಡೆಸುವುದು. |
| ಕಾಮಗಾರಿ | 1. ಗ್ರಾಮಗಳನ್ನು ಸಂಪರ್ಕಿಸುವ ರಸ್ತೆ ಮತ್ತು ಸಣ್ಣ ಸೇತುವೆಗಳನ್ನು ನಿರ್ಮಿಸುವುದು.<br>2. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. |
| ಆರೋಗ್ಯ | 1. ಪ್ರಾಥಮಿಕ ಆರೋಗ್ಯ, ಕೇಂದ್ರಗಳ (PHC) ಸೇತುವೆಗಳನು ನಿರ್ಮಿಸುವುದು.<br>2. ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ಲಸಿಕ ಕಾರ್ಯಕ್ರಮ |
| ಮಹಿಳಾ ಮತ್ತು ಮಕ್ಕಳ ಕಲಾಲ್ಯಣ | 1. ಮಹಿಳಾ ಸಂಘಗಳು, ಮತ್ತು ಅಂಗನವಾಡಿಗಳ ಮೇಲ್ವಿಚಾರಣೆ.<br>2. ಪೌಷ್ಟಿಕ ಆಹಾರ ಯೋಜನೆಗಳ ಅನುಷ್ಠಾನ. |



**ಮಾಡಿ ನೋಡಿ**

ನಿಮ್ಮ ಕ್ಷೇತ್ರದಲ್ಲಿನ ಜಿಲ್ಲಾ ಪರಿಷತ್ತಿನ ಅಂತರ್ಜಾಲದ ಸಹಾಯದಿಂದ ಸಂಕೇತ ಸ್ಥಳಕ್ಕೆ ಭೇಟಿ ನೀಡಿ ಮತ್ತು ಜಿಲ್ಲಾ ಪರಿಷತ್ತಿನ ಕಾರ್ಯಪದ್ಧತಿಯನ್ನು ತಿಳಿದುಕೊಳ್ಳಿರಿ.

## ಸ್ಥಾನಿಕ ಸ್ವರಾಜ್ಯ ಸಂಸ್ಥೆ : ತುಲನಾತ್ಮಕ ಪಟ್ಟಿ

| ವಿವರ | ಗ್ರಾಮ ಪಂಚಾಯತ್ | ಪಂಚಾಯತ್ ಸಮಿತಿ | ಜಿಲ್ಲಾ ಪರಿಷತ್ |
|---|---|---|---|
| ಮಟ್ಟ | ಗ್ರಾಮ ಮಟ್ಟ | ತಾಲ್ಲೂಕು ಮಟ್ಟ | ಜಿಲ್ಲಾ ಮಟ್ಟ |
| ಸದಸ್ಯರ ಸಂಖ್ಯೆ | 7 ರಿಂದ 17 | 15 ರಿಂದ 45 | 50 ರಿಂದ 75 |
| ಪದಾಧಿಕಾರಿಗಳು | ಸರಪಂಚ (ಅಧ್ಯಕ್ಷ), ಉಪ-ಸರಪಂಚ | ಸಭಾಪತಿ, ಉಪ-ಸಭಾಪತಿ | ಅಧ್ಯಕ್ಷ, ಉಪಾಧ್ಯಕ್ಷ |
| ಅಧಿಕಾರಾವಧಿ | 5 ವರ್ಷ →(ಅಧ್ಯಕ್ಷ), 5 ವರ್ಷ →(ಸದಸ್ಯ) | 2.5 ವರ್ಷ →(ಅಧ್ಯಕ್ಷ), 5 ವರ್ಷ →(ಸದಸ್ಯ) | 2.5 ವರ್ಷ →(ಅಧ್ಯಕ್ಷ), 5 ವರ್ಷ →(ಸದಸ್ಯ) |
| ಚುನಾವಣೆ | ಪ್ರತಿ 5 ವರ್ಷಕ್ಕೊಮ್ಮೆ | ಪ್ರತಿ 5 ವರ್ಷಕ್ಕೊಮ್ಮೆ | ಪ್ರತಿ 5 ವರ್ಷಕ್ಕೊಮ್ಮೆ |
| ರಾಜೀನಾಮೆ | ಸರ್ಪಂಚ್ →ಸಭಾಪತಿಗೆ, ಸದಸ್ಯ→ ಸರ್ಪಂಚ್‌ಗೆ | ಸಭಾಪತಿ →ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ, ಸದಸ್ಯ→ ಸಭಾಪತಿಗೆ | ಅಧ್ಯಕ್ಷ →ವಿಭಾಗೀಯ ಆಯುಕ್ತರಿಗೆ, ಸದಸ್ಯ → ಅಧ್ಯಕ್ಷರಿಗೆ |
| ಆಡಳಿತಾಧಿಕಾರಿ | ಗ್ರಾಮ ಸೇವಕ | ಗುಂಪು ಅಭಿವೃದ್ಧಿ ಅಧಿಕಾರಿ (DDO) | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO) |
| ಸಭೆಗಳು | ಮಾಸಿಕ ಸಭೆ, ಗ್ರಾಮ ಸಭೆ (ವರ್ಷಕ್ಕೆ 4 ಬಾರಿ) | ತಿಂಗಳಿಗೊಮ್ಮೆ | 3 ತಿಂಗಳಿಗೊಮ್ಮೆ |



## ಸ್ವಾಧ್ಯಾಯ

**ಪ್ರಶ್ನೆ 1: ಈ ಕೆಳಗಿನ ಸಮಸ್ಯೆಗಳು ಮತ್ತು ಅವುಗಳನ್ನು ಪರಿಹರಿಸುವ ಅಧಿಕಾರಿಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| ಅ) ತಾಲೂಕು ಅಭಿವೃದ್ಧಿ ಅಧಿಕಾರಿ (BDO) | 1) ಗ್ರಾಮದಲ್ಲಿ ಜನನ-ಮರಣಗಳನ್ನು ನೋಂದಾಯಿಸುವುದು. |
| ಬ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO) | 2) ತಾಲೂಕಿನ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆ ಮಾಡುವುದು. |
| ಕ ) ಗ್ರಾಮ ಪಂಚಾಯತ್ ಅಧಿಕಾರಿ | 3) ಜಿಲ್ಲಾ ಪಂಚಾಯತ್ ತೆಗೆದುಕೊಂಡ ನಿರ್ಧಾರಗಳನ್ನು ಜಾರಿಗೆ ತರುವುದು. |

**ಪ್ರಶ್ನೆ 2. ನಾನು ಯಾರೆಂದು ಗುರುತಿಸಿ?**

1. ಗ್ರಾಮದ 'ಪ್ರಥಮ ಪ್ರಜೆ':

-------------------------------------------

2. ಜಿಲ್ಲಾ ಪರಿಷದ ಆಡಳಿತ ಕೆಲಸಗಳನ್ನು ನೋಡಿಕೊಳ್ಳುವವರು:

-------------------------------------------

**ಪ್ರಶ್ನೆ 3. ನೀವು ಏನು ಮಾಡುವಿರಿ?**

**ಸಂದರ್ಭ 1: ನಿಮ್ಮ ಶಾಲೆಯ ರಸ್ತೆಯಲ್ಲಿ ತುಂಬಾ ಗುಂಡಿಗಳು ಬಿದ್ದಿವೆ ಮತ್ತು ಮಳೆಗಾಲದಲ್ಲಿ ಅಲ್ಲಿ ನೀರು ನಿಲ್ಲುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು ನೀವು ಯಾರಿಗೆ ಪತ್ರ ಬರೆಯುತ್ತೀರಿ?**

ಎ) ಪೊಲೀಸ್ ಸ್ಟೇಷನ್ (ಪೊಲೀಸ್ ಠಾಣೆ)
ಬಿ) ಗ್ರಾಮ ಪಂಚಾಯತ್/ನಗರಪಾಲಿಕೆ
ಸಿ) ಬ್ಯಾಂಕ್ ಮ್ಯಾನೇಜರ್ (ಬ್ಯಾಂಕ್ ವ್ಯವಸ್ಥಾಪಕ)
ಡ) ಇತರ

ನಿಮ್ಮ ಉತ್ತರ ಮತ್ತು ಕಾರಣ:

------------------------------------------------

------------------------------------------------

------------------------------------------------

------------------------------------------------

------------------------------------------------

**ಪ್ರಸಂಗ 2: 250 ಜನಸಂಖ್ಯೆ ಇರುವ ಒಂದು ವಾಡಿಯಲ್ಲಿ (ವಸತಿಯಲ್ಲಿ) 'ಗ್ರಾಮ ಪಂಚಾಯತ್' ಅನ್ನು ಸ್ಥಾಪಿಸಲು ಸಾಧ್ಯವೇ? ಇಲ್ಲದಿದ್ದರೆ, ಅಲ್ಲಿ ಯಾವ ಸರ್ಕಾರಿ ಸಂಸ್ಥೆಯು ಕೆಲಸ ಮಾಡುತ್ತದೆ?**

ನಿಮ್ಮ ಉತ್ತರ ಮತ್ತು ಕಾರಣ:

------------------------------------------------

------------------------------------------------

------------------------------------------------

------------------------------------------------

------------------------------------------------

**ಪ್ರಶ್ನೆ 4. ಈ ಕೆಳಗಿನ ಪರಿಕಲ್ಪನೆಯ ಚಿತ್ರವನ್ನು ಪೂರ್ಣಗೊಳಿಸಿ.**




**ಪ್ರಶ್ನೆ 5. ಈ ಕೆಳಗಿನ ಚಾರ್ಟ್ ಅನ್ನು ಪೂರ್ಣಗೊಳಿಸಿ.**
**(ಮಹಾರಾಷ್ಟ್ರದ ಗ್ರಾಮೀಣ ಸ್ಥಳೀಯ ಸಂಸ್ಥೆಗಳು- ಮೂರು ಹಂತದ ರಚನೆ)**

| ಹಂತ | ಜನಪ್ರತಿನಿಧಿ ಮುಖ್ಯಸ್ಥರು | ಆಡಳಿತಾತ್ಮಕ ಮುಖ್ಯಸ್ಥ |
|---|---|---|
| ಗ್ರಾಮ ಪಂಚಾಯತ್ | ------------- | ------------- |
| ಪಂಚಾಯತ್ ಸಮಿತಿ | ------------- | ------------- |
| ಜಿಲ್ಲಾ ಪರಿಷತ | ------------- | ------------- |

**ಉಪಕ್ರಮ**

1. ನಿಮ್ಮ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಅಭಿವೃದ್ಧಿ ಕೆಲಸಗಳ ಬಗ್ಗೆ ಮಾಹಿತಿ ಪಡೆದು ತರಗತಿಯಲ್ಲಿ ಚರ್ಚಿಸಿ.
2. ಪರಿಸರದ ಮೇಲಾಗುವ ಅಭಿವೃದ್ಧಿ ಕೆಲಸಗಳಿಂದ ಪರಿಸರದ ರಕ್ಷಣೆ ಆಯಿತೋ ಅಥವಾ ಹಾನಿ, ತರಗತಿಯಲ್ಲಿ ಎರಡು ಗುಂಪುಗಳ ನಡುವೆ ಚರ್ಚೆಯನ್ನು ಆಯೋಜಿಸಿ.
3. ಪ್ರಾಚೀನ ಭಾರತದಲ್ಲಿ ಆಧುನಿಕ ಕಾಲದ ಗ್ರಾಮಪಂಚಾಯತಿಯಂತೆ ಇನ್ನೂ ಯಾವ ರಚನೆಗಳಿದ್ದವು ಎಂಬುದನ್ನು ಶೋಧಿಸಿ ಮತ್ತು ಅದರ ಕುರಿತು ಚರ್ಚಿಸಿರಿ.

ಉದಾಹರಣೆ,

- ಜನಪದ
- ಮಹಾತ್ಮಾ ಬಸವೇಶ್ವರರ ಕಾಲದ 'ಅನುಭವ ಮಂಟಪ'
- ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ ಶಾಸನ ರಚನೆ

# 5 ನಗರ ಸ್ಥಾನಿಕ ಸ್ವರಾಜ್ಯ ಸಂಸ್ಥೆ



5.1 ನಗರ ಪಂಚಾಯತ್

5.2 ನಗರಪರಿಷತ್ (ನಗರ ಸಭೆ)

5.3 ಮಹಾನಗರ ಪಾಲಿಕೆ

5.4 ಕಟಕ ಮಂಡಳಿ

ಹಿಂದಿನ ಪಾಠದಲ್ಲಿ ನಾವು ಗ್ರಾಮೀಣ ಭಾಗದ ಸ್ಥಳೀಯ ಆಡಳಿತ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡಿದ್ದೇವೆ. ಈ ಪಾಠದಲ್ಲಿ ನಾವು ನಗರ ಮಟ್ಟದ ಆಡಳಿತ ರಚನೆ ಮತ್ತು ಕಾರ್ಯಗಳ ಬಗ್ಗೆ ತಿಳಿದುಕೊಳ್ಳಲಿದ್ದೇವೆ. ನಗರ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ನಗರ ಪಂಚಾಯತ್, ನಗರ ಪರಿಷತ್ (ಪುರಸಭೆ), ಮಹಾನಗರ ಪಾಲಿಕೆ ಮತ್ತು ಕಂಟೋನ್ಮೆಂಟ್ ಬೋರ್ಡಗಳು (ದಂಡು ಮಂಡಳಿ) ಸೇರಿವೆ.

ನಗರೀಕರಣದಿಂದಾಗಿ ನಮ್ಮ ದೇಶದಲ್ಲಿ ನಗರಗಳ ಸಂಖ್ಯೆ ಹೆಚ್ಚುತ್ತಿದೆ. ನಗರಗಳಲ್ಲಿನ ಆಡಳಿತ ವ್ಯವಸ್ಥೆ ಮತ್ತು ಆಡಳಿತದ ಬಗ್ಗೆ ಮಾಹಿತಿ ಪಡೆಯೋಣ.



**ಚರ್ಚೆ ಮಾಡಿ:**

ನಗರಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ.

## 5.1 ನಗರ ಪಂಚಾಯತ್

ಯಾವಾಗ ಒಂದು ಗ್ರಾಮೀಣ ಪ್ರದೇಶವು ನಗರೀಕರಣಗೊಳ್ಳಲು ಪ್ರಾರಂಭಿಸುತ್ತದೆಯೋ, ಆಗ ರಾಜ್ಯ ಸರ್ಕಾರವು ಆ ಪ್ರದೇಶಕ್ಕಾಗಿ ನಗರ ಪಂಚಾಯತ್ ಅನ್ನು ಸ್ಥಾಪಿಸುತ್ತದೆ. ನಗರ ಪಂಚಾಯತ್.ಒಂದು ನಗರ ಸ್ಥಳೀಯ ಆಡಳಿತ ಸಂಸ್ಥೆಯಾಗಿದೆ. ಸಾಮಾನ್ಯವಾಗಿ 11 ಸಾವಿರಕ್ಕಿಂತ ಹೆಚ್ಚು ಮತ್ತು 25 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳಲ್ಲಿ ನಗರ ಪಂಚಾಯತ್ ಅನ್ನು ಸ್ಥಾಪಿಸಲಾಗುತ್ತದೆ. ನಗರ ಪಂಚಾಯತ್ ಸ್ಥಾಪನೆಗೆ ಜನಸಂಖ್ಯೆಯೇ ಪ್ರಮುಖ ಮಾನದಂಡವಾಗಿದೆ.

**ನಗರ ಪಂಚಾಯತಿ ರಚನೆ**

- ಮಹಾನಗರ ಪಾಲಿಕೆ
  - ಮಹಾಪೌರ
  - ಉಪಮಹಪೌರ
  - ಆಯುಕ್ತ
- ಕಂಟೋನ್ಮೆಂಟ ಮಂಳಿ
  - ಅಧ್ಯಕ್ಷ
  - ಉಪಾಧ್ಯಕ್ಷ
  - ಕಾರ್ಯಕಾರಿ ಅಧಿಕಾರಿ
- ನಗರ ಪರಿಷತ್
  - ನಗರಾಧ್ಯಕ್ಷ
  - ಉಪ ನಗರಾಧ್ಯಕ್ಷ
  - ಮುಖ್ಯಾಧಿಕಾರಿ
- ನಗರ ಪಂಚಾಯತ್
  - ಅಧ್ಯಕ್ಷ
  - ಉಪಾಧ್ಯಕ್ಷ
  - ಕಾರ್ಯಕಾರಿ ಅಧಿಕಾರಿ

### 5.1.1 ನಗರ ಪಂಚಾಯತಿಯ ರಚನೆ

ನಗರ ಪಂಚಾಯತ್ ಸದಸ್ಯರ ಆಯ್ಕೆಯು ಪ್ರೌಢ ಮತ್ತು ಗುಪ್ತ ಮತದಾನದ ಪದ್ಧತಿಯ ಮೂಲಕ ನಡೆಯುತ್ತದೆ. ನಗರ ಪಂಚಾಯತ್ ಸದಸ್ಯರ ಚುನಾವಣೆಗಾಗಿ ವಾರ್ಡಗಳನ್ನು ಸಿದ್ಧಪಡಿಸಲಾಗುತ್ತದೆ. ಆ ವಾರ್ಡಗಳಿಂದ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಅಧ್ಯಕ್ಷರನ್ನು ನೇರವಾಗಿ ಜನರಿಂದ ಆಯ್ಕೆ ಮಾಡಲಾಗುತ್ತದೆ. ನಗರ ಪಂಚಾಯತನಲ್ಲಿ ಕನಿಷ್ಠ 17 ಮತ್ತು ಗರಿಷ್ಠ20 ಸದಸ್ಯರು ಇರುತ್ತಾರೆ. ಮಹಿಳೆಯರು ಮತ್ತು ಹಿಂದುಳಿದ ವರ್ಗದವರಿಗಾಗಿ ಕೆಲವು ಸ್ಥಾನಗಳನ್ನು ಮೀಸಲಿಡಲಾಗಿರುತ್ತದೆ.



**ನಿಮಗೆ ಗೊತ್ತಿದೆಯೇ?**

ಮಹಾರಾಷ್ಟ್ರದಲ್ಲಿ ಒಟ್ಟು 146 ನಗರ ಪಂಚಾಯತ್‌ಗಳಿವೆ. ಅತಿ ಹೆಚ್ಚು ನಗರ ಪಂಚಾಯತಗಳು ನಾಗಪೂರ ವಿಭಾಗದಲ್ಲಿವೆ.

ನಗರ ಪಂಚಾಯತಿಯ ಮುಖ್ಯಸ್ಥರನ್ನು 'ಅಧ್ಯಕ್ಷರು' ಎಂದು ಕರೆಯಲಾಗುತ್ತದೆ. ಅಧ್ಯಕ್ಷರು ನೇರವಾಗಿ ಜನರಿಂದ ಆಯ್ಕೆಯಾಗುತ್ತಾರೆ. ಅವರ ಅಧಿಕಾರಾವಧಿ ಐದು ವರ್ಷಗಳು. ನಗರ ಪಂಚಾಯತದ ಎಲ್ಲಾ ಕಾರ್ಯಗಳು ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತವೆ.

## ನಗರ ಪಂಚಾಯತಿ ರಚನೆ

### ನಗರ ಪಂಚಾಯತಿ

ಸಾಮಾನ್ಯವಾಗಿ 11,000 ದಿಂದ 25,000 ಜನಸಂಖ್ಯೆ ಇರುವ ನಗರಗಳಲ್ಲಿ ರಾಜ್ಯ ಸರ್ಕಾರವು ಇದನ್ನು ಸ್ಥಾಪಿಸುತ್ತದೇ

#### ಜನ ಪ್ರತಿನಿಧಿಗಳು

**ಅಧ್ಯಕ್ಷರು**
- ಜನರಿಂದ ನೇರ ಆಯ್ಕೆ
- 5 ವರ್ಷಗಳ ಅಧಿಕಾರ ಅವಧಿ
- ನಗರ ಪಂಚಾಯತಿ ಸಭೆಗಳ ಅಧ್ಯಕ್ಷತೆ

**ಉಪಾಧ್ಯಕ್ಷರು**
- ಚುನಾಯಿತ ಸದಸ್ಯರಿಂದ ಆಯ್ಕೆ
- 5 ವರ್ಷಗಳ ಅಧಿಕಾರ ಅವಧಿ
- ನಗರ ಪಂಚಾಯತ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಕಾರ್ಯನಿರ್ವಹಣೆ

**ನಗರಸೇವಕ**
- ವಾರ್ಡಗಳ ಪ್ರಕಾರ ಜನರಿಂದ ನೇರ ಚುಣಾವಣೆ
- ವಾರ್ಡಗಳ ಸಂಖ್ಯೆ ಜನಸಂಖ್ಯೆಯ ಆಧಾರದ ಮೇಲೆ ಇರುತ್ತದೆ
- 5 ವರ್ಷಗಳ ಅಧಿಕಾರ ಅವಧಿ

**ಸ್ವೀಕೃತ ಸದಸ್ಯ/ಸಹಸದಸ್ಯ**
- ವಿಶೇಷಜ್ಞಾನ ಅಥವಾ ಅನುಭವ ಹೊಂದಿರುವ ವ್ಯಕ್ತಿಗಳು
- ನಗರ ಸಭೆ ಅಧ್ಯಕ್ಷರಿಂದ ಆಯ್ಕೆ
- ಸೀಮಿತ ಸಂಖ್ಯೆ

#### ಆಡಳಿತ (ಸರ್ಕಾರಿ ವಿಭಾಗ)

**ಮುಖ್ಯ ಅಧಕಾರಿ**
- ರಾಜ್ಯಸರ್ಕಾರದಿಂದ ನೇಮಕ ಆಡಳಿತಾತ್ಮಕ ಮುಖ್ಯಸ್ಥರು
- ನಗರ ಪಂಚಾಯತಿಯ ನಿರ್ಧಾರಗಳನ್ನು ಜಾರಿಗೆ ತರುವುದು

**ಸಿಬ್ಬಂದಿ/ನೌಕರರು**
- ವಿವಿಧ ಇಲಾಖೆಗಳ ಸಿಬ್ಬಂದಿ (ಉದಾ- ಆರೋಗ್ಯ, ನೀರು ಪೂರೈಕೆ ಮತ್ತು ದೈನಂದಿನ ಕೆಲಸ ಕಾರ್ಯಗಳ ಉಸ್ತುವಾರಿ ಇತ್ಯಾದಿ)

**ಪ್ರಯತ್ನಿಸಿ ನೋಡಿ.**

**ಕೆಳಗಿನ ಚಿತ್ರದಲ್ಲಿ ನಗರ ನಗರಪರಿಷತ್ತ ಮತ್ತು ಪಂಚಾಯಿತಿಯ ಕಾರ್ಯಗಳನ್ನು ತೋರಿಸಲಾಗಿದೆ. ಅವುಗಳ ಹೆಸರುಗಳನ್ನು ಕೆಳಗೆ ಬರೆಯಿರಿ.**

### ನಗರಪರಿಷತ್ತ ಮತ್ತು ನಗರಪಂಚಾಯತಿಯ ಕಾರ್ಯಗಳು



ನಗರಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿ ವಿವಿಧ ತೆರಿಗೆಗಳನ್ನು ವಿಧಿಸುತ್ತದೆ. ನಗರಪಂಚಾಯತಿಯು ತನಗೆ ಬರುವ ತೆರಿಗೆಗಳ ಮೂಲಕ ಎಲ್ಲಾ ಕೆಲಸಗಳನ್ನು ಮಾಡುತ್ತದೆ. ಇದರ ಜೊತೆಗೆ ಅವರಿಗೆ ಕೆಲವು ಸರ್ಕಾರಿ ಅನುದಾನಗಳೂ ಸಿಗುತ್ತವೆ

### 5.2 ನಗರಪರಿಷತ್ತ

25 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳಲ್ಲಿ ನಗರಪರಿಷತ್ತನ್ನು ಸ್ಥಾಪಿಸಲಾಗುತ್ತದೆ. ಜನಸಂಖ್ಯೆಯ ಆಧಾರದ ಮೇಲೆ ನಗರಪರಿಷತ್ತುಗಳನ್ನು ಅ, ಬ ಮತ್ತು ಕ ಎಂದು ವರ್ಗೀಕರಿಸಲಾಗಿದೆ.




**ನಿಮಗೆ ಗೊತ್ತಿದೆಯೇ ?**

ಮಹಾರಾಷ್ಟ್ರದಲ್ಲಿ ಒಟ್ಟು 241 ನಗರಪರಿಷತ್ತುಗಳಿವೆ. ಇವುಗಳಲ್ಲಿ ಅತಿ ಹೆಚ್ಚು ಅಂದರೆ 50 ನಗರಪರಿಷತ್ತುಗಳು ಪುಣೆ ವಿಭಾಗದಲ್ಲಿ ಮತ್ತು 49 ನಗರಪರಿಷತ್ತುಗಳು ಛತ್ರಪತಿ ಸಂಭಾಜಿನಗರ ವಿಭಾಗದಲ್ಲಿವೆ. ಅಮರಾವತಿ ವಿಭಾಗದಲ್ಲಿ 41, ನಾಸಿಕ್‌ನಲ್ಲಿ 45, ನಾಗಪುರದಲ್ಲಿ 41 ಮತ್ತು ಕೊಂಕಣ ವಿಭಾಗದಲ್ಲಿ 22 ನಗರಪರಿಷತ್ತುಗಳಿವೆ.

ಮೂಲ: (https://mahadma.maharashtra.gov.in/)

### 5.2.1 ನಗರಪರಿಷತ್ತಿನ ರಚನೆ

ನಗರಪರಿಷತ್ತಿನ ಸದಸ್ಯರನ್ನು ಗುಪ್ತ ಮತ್ತು ಪ್ರೌಢ ಮತದಾನ ಪದ್ಧತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಅವರನ್ನು 'ನಗರಸೇವಕ' ಎಂದು ಕರೆಯಲಾಗುತ್ತದೆ. ನಗರಪರಿಷತ್ತಿನ ಅವಧಿಯು ಐದು ವರ್ಷಗಳಾಗಿರುತ್ತದೆ.

**ನಗರಪಂಚಯತ್ ಮತ್ತು ನಗರ ಪರಿಷತ್ತಿನ ಕಾರ್ಯಗಳು**

| ಮುಖ್ಯ ಪ್ರಕಾರ | ಕೆಲಸದ ಸ್ವರೂಪ | ವಿವರಗಳು | |
|---|---|---|---|
| 1. ಅಗತ್ಯ ಕಾರ್ಯಗಳು | ಆರೋಗ್ಯ | 1) ನಗರದ ಸ್ವಚ್ಛತೆಯನ್ನು ಕಾಪಾಡುವುದು ಮತ್ತು ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಒದಗಿಸುವುದು.<br>2) ಸಾರ್ವಜನಿಕ ಆಸ್ಪತ್ರೆಗಳನ್ನು ನಿರ್ಮಿಸಿ ಜನರಿಗೆ ಆರೋಗ್ಯ ಸೌಲಭ್ಯಗಳನ್ನು ನೀಡುವುದು.<br>3) ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು. | 4) ಸಾರ್ವಜನಿಕ ಸ್ಥಳಗಳ ಸ್ವಚ್ಛತೆಯನ್ನು ಕಾಪಾಡುವುದು ಮತ್ತು ತ್ಯಾಜ್ಯ ನಿರ್ವಹಣೆ ಮಾಡುವುದು.<br>5) ನಗರದ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸುವುದು ಮತ್ತು ಕುಡಿಯುವ ಶುದ್ಧ ನೀರನ್ನು ಪೂರೈಸುವುದು.<br>6) ನಗರದಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು. |
| | ಶಿಕ್ಷಣ | 1) ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಮಾಡುವುದು.<br>2) ಅಗತ್ಯಕ್ಕೆ ಅನುಗುಣವಾಗಿ ಹೊಸ ಶಾಲೆಗಳನ್ನು ತೆರೆಯುವುದು ಮತ್ತು ಅವುಗಳ ಮೇಲ್ವಿಚಾರಣೆ ಮಾಡುವುದು. | 3) ಶಾಲಾ ಶಿಕ್ಷಣದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ವೃತ್ತಿಪರ ಶಿಕ್ಷಣವನ್ನು ನೀಡುವುದು.<br>4) ಸಮಾಜದ ವಂಚಿತ ವರ್ಗಗಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ವಿವಿಧ ಉಪಕ್ರಮಗಳನ್ನು ಆಯೋಜಿಸುವುದು. |
| | ಇತರ | 1) ರಸ್ತೆಗಳು ಮತ್ತು ಬೀದಿ ದೀಪಗಳ ವ್ಯವಸ್ಥೆ ಮಾಡುವುದು.<br>2) ನಗರದ ನಾಗರಿಕರ ಜನನ, ಮರಣ ಮತ್ತು ವಿವಾಹಗಳ ದಾಖಲೆಯನ್ನು ಇಡುವುದು. | 3) ವಿವಿಧ ರೀತಿಯ ತೆರಿಗೆಗಳನ್ನು ಸಂಗ್ರಹಿಸುವುದು.<br>4) ನಗರದ ಸ್ಮಶಾನಗಳು ಮತ್ತು ದಫನ ಭೂಮಿಗಳ ನಿರ್ವಹಣೆ ಮಾಡುವುದು. |
| 2. ಐಚ್ಛಿಕ ಕಾರ್ಯಗಳು | | 1) ಸಾರ್ವಜನಿಕ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಅವುಗಳ ನಿರ್ವಹಣೆ ಮಾಡುವುದು.<br>2) ವ್ಯಾಯಾಮ ಶಾಲೆಗಳು, ಧರ್ಮಶಾಲೆಗಳನ್ನು ನಿರ್ಮಿಸುವುದು. | 3) ಕ್ರೀಡಾಂಗಣಗಳನ್ನು ಒದಗಿಸುವುದು.<br>4) ಬಡವರಿಗಾಗಿ ಮನೆಗಳನ್ನು ನಿರ್ಮಿಸುವುದು.<br>5) ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು |

### 5.2.2 ನಗರಾಧ್ಯಕ್ಷ

ನಗರಪರಿಷತ್ತಿನ ಮುಖ್ಯಸ್ಥರನ್ನು 'ನಗರಾಧ್ಯಕ್ಷ' ಎಂದು ಕರೆಯಲಾಗುತ್ತದೆ. ಅವರ ಆಯ್ಕೆಯು ನೇರವಾಗಿ ಜನರಿಂದ ನಡೆಯುತ್ತದೆ. ಅವರ ಅಧಿಕಾರಾವಧಿಯು ಐದು ವರ್ಷಗಳು. ನಗರಾಧ್ಯಕ್ಷರು ನಗರದ ಪ್ರಥಮ ನಾಗರಿಕರಾಗಿರುತ್ತಾರೆ. ನಗರಪರಿಷತ್ತಿನ ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ನಗರಾಧ್ಯಕ್ಷರು ವಹಿಸುತ್ತಾರೆ. ನಗರಪರಿಷತ್ತಿನ ಆರ್ಥಿಕ ಆಡಳಿತದ ಮೇಲೆ ನಗರಾಧ್ಯಕ್ಷರು ಗಮನ ಇಡುತ್ತಾರೆ. ಅವರ ಅನುಪಸ್ಥಿತಿಯಲ್ಲಿ ಉಪ-ನಗರಾಧ್ಯಕ್ಷರು ಕಾರ್ಯಭಾರವನ್ನು ನಿರ್ವಹಿಸುತ್ತಾರೆ. ನಗರಪರಿಷತ್ತಿಗೆ ಚುನಾಯಿತರಾದ ಸದಸ್ಯರಿಂದ ಉಪ-ನಗರಾಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ.

### 5.2.3 ಮುಖ್ಯಾಧಿಕಾರಿ

ನಗರಪರಿಷತ್ತಿನ ಆಡಳಿತಾತ್ಮಕ ಮುಖ್ಯಸ್ಥರು ಮುಖ್ಯಾಧಿಕಾರಿ ಆಗಿರುತ್ತಾರೆ. ಅವರು ರಾಜ್ಯ ಸರ್ಕಾರದ ಅಧಿಕಾರಿಯಾಗಿದ್ದಾರೆ. ಅವರ ಆಯ್ಕೆಯು ರಾಜ್ಯ ಲೋಕಸೇವಾ ಆಯೋಗವುನಡೆಸುವ ಪರೀಕ್ಷೆಗಳ ಮೂಲಕ ನಡೆಯುತ್ತದೆ. ನಗರಪರಿಷತ್ತಿನ ಆಡಳಿತಾತ್ಮಕ ಕೆಲಸಗಳ ಜವಾಬ್ದಾರಿ ಅವರ ಮೇಲಿರುತ್ತದೆ.

### 5.2.4 ನಗರಪರಿಷತ್ತಿನ ಆದಾಯದ ಮೂಲಗಳು

ನಗರಪರಿಷತ್ತು ಆದಾಯಕ್ಕಾಗಿ ಸ್ವತಂತ್ರ ಮೂಲಗಳನ್ನು ಹೊಂದಿದೆ. ನಗರಪರಿಷತ್ತು ತನ್ನ ವ್ಯಾಪ್ತಿಯಲ್ಲಿ ವಿವಿಧ ತೆರಿಗೆಗಳನ್ನು ವಿಧಿಸುತ್ತದೆ. ನಗರಪರಿಷತ್ತು ಭೂಮಿ ಮತ್ತು ಕಟ್ಟಡಗಳು, ಆಮದು ಸರಕುಗಳು, ವ್ಯವಹಾರ, ಮನೆ, ವ್ಯಾಪಾರ ಮತ್ತು ನೌಕರಿ, ಚಿತ್ರಮಂದಿರ ಮತ್ತು ನಾಟಕಮಂದಿರಗಳು, ನೀರು ಸರಬರಾಜು, ದೀಪದ ವ್ಯವಸ್ಥೆ ಇತ್ಯಾದಿಗಳ ಮೇಲೆ ತೆರಿಗೆಯನ್ನು ವಿಧಿಸುತ್ತದೆ. ನಗರಪರಿಷತ್ತಿನ ವೆಚ್ಚಗಳು ಪ್ರಮುಖವಾಗಿ ತೆರಿಗೆಯ ಮೂಲಕ ಬರುವ ಆದಾಯದಿಂದ ನಡೆಯುತ್ತವೆ. ಇದರ ಜೊತೆಗೆ, ನಗರಪರಿಷತ್ತಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ಸಹಾಯ ಮತ್ತು ಅನುದಾನವೂ ದೊರೆಯುತ್ತದೆ.

### 5.3 ಮಹಾನಗರ ಪಾಲಿಕೆ

ಮಹಾನಗರ ಪಾಲಿಕೆಯು ಒಂದು ಪ್ರಮುಖ ನಗರ ಸ್ಥಳೀಯ ಸಂಸ್ಥೆಯಾಗಿದೆ. ಯಾವ ನಗರದ ಜನಸಂಖ್ಯೆಯು ಮೂರು ಲಕ್ಷಕ್ಕಿಂತ ಹೆಚ್ಚಿರುತ್ತದೆಯೋ ಮತ್ತು ಆ ನಗರದ ವಾರ್ಷಿಕ ಆದಾಯವು ಕನಿಷ್ಠ 2 ಕೋಟಿಗಿಂತ ಹೆಚ್ಚಿರುತ್ತದೆಯೋ, ಅಂತಹ ನಗರಗಳಿಗೆ ಮಹಾನಗರ ಪಾಲಿಕೆಯನ್ನು ಸ್ಥಾಪಿಸಲಾಗುತ್ತದೆ. ಮಹಾನಗರ ಪಾಲಿಕೆಯನ್ನು ಸ್ಥಾಪಿಸುವ ಅಧಿಕಾರವು ಮಹಾರಾಷ್ಟ್ರ ರಾಜ್ಯ ಸರ್ಕಾರಕ್ಕಿದೆ. ಮುಂಬಯಿ ಮಹಾರಾಷ್ಟ್ರದ ಮೊದಲ ಮಹಾನಗರ ಪಾಲಿಕೆಯಾಗಿದೆ. ಪ್ರಸ್ತುತ ಮಹಾರಾಷ್ಟ್ರದಲ್ಲಿ ಒಟ್ಟು 29 ಮಹಾನಗರ ಪಾಲಿಕೆಗಳಿವೆ.



ಮುಂಬಯಿ ಮಹಾನಗರ ಪಾಲಿಕೆ

### 5.3.1 ಮಹಾನಗರ ಪಾಲಿಕೆಯ ರಚನೆ

ಮಹಾನಗರ ಪಾಲಿಕೆಯ ಸದಸ್ಯರ ಸಂಖ್ಯೆಯು ನಗರದ ಜನಸಂಖ್ಯೆಗೆ ಅನುಗುಣವಾಗಿರುತ್ತದೆ. ಪ್ರತಿ ಮಹಾನಗರ ಪಾಲಿಕೆಯ ಸದಸ್ಯರ ಸಂಖ್ಯೆಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ಧರಿಸುತ್ತದೆ. ಸದಸ್ಯರ ಸಂಖ್ಯೆಯನ್ನು ನಿರ್ಧರಿಸಿದ ನಂತರ, ಜನಸಂಖ್ಯೆಯ ಆಧಾರದ ಮೇಲೆ ನಗರವನ್ನು ವಿವಿಧ ವಾರ್ಡ್‌ಗಳನ್ನಾಗಿ (ವಿಭಾಗಗಳನ್ನಾಗಿ) ವಿಂಗಡಿಸಲಾಗುತ್ತದೆ. ಪ್ರಸ್ತುತ ಮಹಾರಾಷ್ಟ್ರದಲ್ಲಿ ನಾಲ್ಕು ಸದಸ್ಯರ ವಾರ್ಡ್ ವ್ಯವಸ್ಥೆ ಇದೆ. ಕೇವಲ ಮುಂಬೈ ಮಹಾನಗರ ಪಾಲಿಕೆಯಲ್ಲಿ ಮಾತ್ರ ಏಕ ಸದಸ್ಯ ವಾರ್ಡ್ ವ್ಯವಸ್ಥೆ ಇದೆ.

ಮಹಾನಗರ ಪಾಲಿಕೆಯ ಕನಿಷ್ಠ ಸದಸ್ಯರ ಸಂಖ್ಯೆ 65 ಆಗಿದೆ. ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಗರಿಷ್ಠ 227 ಸದಸ್ಯರಿದ್ದಾರೆ. ವಾರ್ಡಿನಿಂದ ಆಯ್ಕೆಯಾದ ಸದಸ್ಯನನ್ನು 'ನಗರಸೇವಕ' (ಕೌನ್ಸಿಲರ್) ಎಂದು ಕರೆಯಲಾಗುತ್ತದೆ. ನಗರಸೇವಕರ ಆಯ್ಕೆಯು ಪ್ರೌಢ ಮತ್ತು ಗುಪ್ತ ಮತದಾನದ ಮೂಲಕ ನಡೆಯುತ್ತದೆ. ನಗರಸೇವಕರ ಅಧಿಕಾರಾವಧಿಯು ಐದು ವರ್ಷಗಳು.

ಮಹಾನಗರ ಪಾಲಿಕೆಯ ಅಧಿಕಾರಾವಧಿಯು ಐದು ವರ್ಷಗಳು. ಅವಧಿ ಮುಗಿಯುವ ಮೊದಲು ರಾಜ್ಯ ಸರ್ಕಾರವು ಮಹಾನಗರ ಪಾಲಿಕೆಯನ್ನು ವಿಸರ್ಜಿಸಬಹುದು. ಮಹಾನಗರ ಪಾಲಿಕೆ ವಿಸರ್ಜನೆಯಾದರೆ ಅಥವಾ ಅವಧಿ ಮುಗಿದರೆ, ಮುಂದಿನ ಆರು ತಿಂಗಳೊಳಗೆ ಮಹಾನಗರ ಪಾಲಿಕೆಯ ಚುನಾವಣೆಯನ್ನು ನಡೆಸುವುದು ಕಡ್ಡಾಯವಾಗಿದೆ.

### ಮಹಾನಗರ ಪಾಲಿಕೆ ರಚನೆ




ಮಹಾನಗರ ಪಾಲಿಕೆಯ ಅಧ್ಯಕ್ಷರನ್ನು 'ಮಹಾಪೌರ' ಎಂದು ಮತ್ತು ಉಪಾಧ್ಯಕ್ಷರನ್ನು 'ಉಪ ಮಹಾಪೌರ' ಎಂದು ಕರೆಯಲಾಗುತ್ತದೆ. ಮೇಯರ್ ನಗರದ ಪ್ರಥಮ ಪ್ರಜೆಯಾಗಿರುತ್ತಾರೆ. ಮಹಾಪೌರ ಮತ್ತು 'ಉಪ ಮಹಾಪೌರಗಳ ಅಧಿಕಾರಾವಧಿಯು ಎರಡೂವರೆ ವರ್ಷಗಳಾಗಿರುತ್ತದೆ. ಅವರು ಅವಧಿಗೂ ಮುನ್ನ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬಹುದು.

### 5.3.2 ಮಹಾನಗರ ಪಾಲಿಕೆ ಆಯುಕ್ತರು

ಮಹಾನಗರ ಪಾಲಿಕೆಯ ಮುಖ್ಯ ಆಡಳಿತಾಧಿಕಾರಿಯೇ ಆಯುಕ್ತರು. ಇವರು ಮಹಾನಗರ ಪಾಲಿಕೆಯ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾರೆ. ಆಯುಕ್ತರನ್ನು ರಾಜ್ಯ ಸರ್ಕಾರವು ನೇಮಿಸುತ್ತದೆ ಮತ್ತು ಇವರು ಭಾರತೀಯ ಆಡಳಿತ ಸೇವೆಯ (I.A.S.) ಅಧಿಕಾರಿಯಾಗಿರುತ್ತಾರೆ. ನಗರದ ಆಡಳಿತದ ಮುಖ್ಯ ಜವಾಬ್ದಾರಿ ಆಯುಕ್ತರ ಮೇಲಿರುತ್ತದೆ.

### 5.3.3 ಮಹಾನಗರ ಪಾಲಿಕೆಯ ಕಾರ್ಯಗಳು

**ಮಹಾನಗರ ಪಾಲಿಕೆಯ ಕಾರ್ಯಗಳನ್ನು ಅಗತ್ಯ ಕಾರ್ಯಗಳು ಮತ್ತು ಐಚ್ಛಿಕ ಕಾರ್ಯಗಳು ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.**

| ಅಗತ್ಯ ಕಾರ್ಯಗಳು | ಐಚ್ಛಿಕ ಕಾರ್ಯಗಳು |
|---|---|
| ನಗರಕ್ಕೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮಾಡುವುದು. | ನಗರದಲ್ಲಿ ಉದ್ಯಾನವನಗಳನ್ನು ನಿರ್ಮಿಸುವುದು. |
| ವಿದ್ಯುತ್ ಪೂರೈಕೆ, ರಸ್ತೆ ನಿರ್ಮಾಣ ಮತ್ತು ದುರಸ್ತಿ, ನಗರದ ಸ್ವಚ್ಛತೆ ಹಾಗೂ ಆಸ್ಪತ್ರೆಗಳ ವ್ಯವಸ್ಥೆ ಮಾಡುವುದು. | ಗ್ರಂಥಾಲಯಗಳು, ಚಿತ್ರಮಂದಿರಗಳು, ಕ್ರೀಡಾಂಗಣಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ನಿರ್ಮಿಸುವುದು. |
| ಸ್ಮಶಾನ ಭೂಮಿಯ ವ್ಯವಸ್ಥೆ ಮತ್ತು ಜನನ-ಮರಣಗಳ ದಾಖಲಾತಿ ಮಾಡುವುದು. | ನಗರದಲ್ಲಿ ಮನರಂಜನಾ ಸೌಲಭ್ಯಗಳನ್ನು ಒದಗಿಸುವುದು. |

| | |
|---|---|
| ಆರೋಗ್ಯ ಮತ್ತು ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಮಾಡುವುದು. | ರಸ್ತೆಯ ಎರಡೂ ಬದಿಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಗಿಡಗಳನ್ನು ನೆಡುವುದು ಮತ್ತು ನಗರವನ್ನು ಸುಂದರಗೊಳಿಸುವುದು. |
| ಸಂಕ್ರಾಮಿಕ ರೋಗಗಳ ನಿಯಂತ್ರಣ. | ಸಾರ್ವಜನಿಕ ವಾಚನಾಲಯ ಮತ್ತು ಗ್ರಂಥಾಲಯಗಳ ಸ್ಥಾಪನೆ. |
| ನಗರದ ಸಾರಿಗೆ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡುವುದು. | ಜಾತ್ರೆಗಳು, ಪ್ರದರ್ಶನಗಳನ್ನು ಆಯೋಜಿಸುವುದು ಮತ್ತು ನಗರದಲ್ಲಿನ ಬೀಡಾಡಿ ಪ್ರಾಣಿಗಳನ್ನು ನಿಯಂತ್ರಿಸುವುದು. |
| ಶಿಥಿಲಗೊಂಡ ಅಪಾಯಕಾರಿ ಕಟ್ಟಡಗಳಿಂದ ಜನರನ್ನು ರಕ್ಷಿಸುವುದು. | ಇತರೆ ಕಾರ್ಯಗಳು. |

### 5.3.4 ಮಹಾನಗರ ಪಾಲಿಕೆಯ ವಿವಿಧ ಸಮಿತಿಗಳು

ಮಹಾನಗರ ಪಾಲಿಕೆಯು ವಿವಿಧ ಸಮಿತಿಗಳ ಮೂಲಕ ತನ್ನ ಕಾರ್ಯಗಳನ್ನು ನಿರ್ವಹಿಸುತ್ತದೆ.

- ಉದಾಹರಣೆಗೆ: ಸ್ಥಾಯಿ ಸಮಿತಿ, ಶಿಕ್ಷಣ ಸಮಿತಿ, ಸಾರಿಗೆ ಸಮಿತಿ, ಆರೋಗ್ಯ ಸಮಿತಿ, ಕಾನೂನು ಸಮಿತಿ, ಸಾರ್ವಜನಿಕ ಕಾಮಗಾರಿ ಸಮಿತಿ ಮತ್ತು ಮಾರುಕಟ್ಟೆ ಸಮಿತಿ ಇತ್ಯಾದಿ.

ಸ್ಥಾಯಿ ಸಮಿತಿಯು ಮಹಾನಗರ ಪಾಲಿಕೆಯ ಅತ್ಯಂತ ಪ್ರಮುಖ ಸಮಿತಿಯಾಗಿದೆ.

### 5.3.5 ಮಹಾನಗರ ಪಾಲಿಕೆಯ ಆದಾಯದ ಮೂಲಗಳು

**ಮಹಾನಗರ ಪಾಲಿಕೆಯ ಆದಾಯಕ್ಕೆ ಎರಡು ಪ್ರಮುಖ ಮೂಲಗಳಿವೆ:**

1. ಮಹಾನಗರ ಪಾಲಿಕೆಯು ನೇರ ತೆರಿಗೆಗಳನ್ನು ವಿಧಿಸುವ ಮೂಲಕ ಆದಾಯವನ್ನು ಪಡೆಯುತ್ತದೆ. ಈ ನೇರ ತೆರಿಗೆಗಳಲ್ಲಿ ಆಸ್ತಿ ತೆರಿಗೆ, ಸಾರಿಗೆ ತೆರಿಗೆ, ಚಲನಚಿತ್ರ ಮತ್ತು ಜಾಹೀರಾತುಗಳ ಮೇಲಿನ ತೆರಿಗೆ, ನೀರಿನ ಶುಲ್ಕ ಇತ್ಯಾದಿಗಳು ಸೇರಿವೆ.

2. ಪರೋಕ್ಷ ಆದಾಯವು ಶುಲ್ಕ ವಸೂಲಿ, ಸರ್ಕಾರಿ ಅನುದಾನ ಮತ್ತು ಆರ್ಥಿಕ ಸಹಾಯವನ್ನು ಒಳಗೊಂಡಿರುತ್ತದೆ. ಇದಲ್ಲದೆ, ಸಾರ್ವಜನಿಕ ಹಿತಾಸಕ್ತಿಯ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರದ ಅನುಮತಿಯೊಂದಿಗೆ ಸಾಲ ಪಡೆಯುವ ಅಧಿಕಾರವೂ ಮಹಾನಗರ ಪಾಲಿಕೆಗೆ ಇರುತ್ತದೆ.

## 5.4 ಕಂಟೋನ್ಮೆಂಟ ಮಂಡಳಿ

ಕಂಟೋನ್ಮೆಂಟ ಮಂಡಳಿ ನಗರ ಆಡಳಿತದ ಒಂದು ವಿಧವಾಗಿದೆ. ಇದನ್ನು 'ಛಾವಣಿ ಮಂಡಳಿ' ಎಂದೂ ಕರೆಯುತ್ತಾರೆ. 1924 ರಲ್ಲಿ ಕಂಟೋನ್ಮೆಂಟ್ ಬೋರ್ಡಗಳನ್ನು ಸ್ಥಾಪಿಸಲಾಯಿತು. ಮಿಲಿಟರಿ ನೆಲೆಗಳು ಇರುವ ಸ್ಥಳಗಳಲ್ಲಿ ನಾಗರಿಕರೂ ವಾಸಿಸುತ್ತಾರೆ. ಅಂತಹ ಮಿಲಿಟರಿ ಪ್ರದೇಶಗಳಲ್ಲಿನ ನಾಗರಿಕರಿಗೆ ಸೌಲಭ್ಯಗಳನ್ನು ಒದಗಿಸಲು ಮತ್ತು ಅವರ ನಾಗರಿಕ ಅಗತ್ಯಗಳನ್ನು ಪೂರೈಸಲು ಕಂಟೋನ್ಮೆಂಟ್ ಬೋರ್ಡಗಳನ್ನು ಸ್ಥಾಪಿಸಲಾಗಿದೆ.





### ನಿಮಗೆ ಗೊತ್ತಿದೆಯೇ?

ಭಾರತದಲ್ಲಿ ಒಟ್ಟು 62 ಕಂಟೋನ್ಮೆಂಟ್ ಮಂಡಳಿಗಳಿವೆ. ಅವುಗಳಲ್ಲಿ 7 ಮಂಡಳಿಗಳು ಮಹಾರಾಷ್ಟ್ರದಲ್ಲಿವೆ. ಅವುಗಳೆಂದರೆ: ಖಡ್ಕಿ, ಪುಣೆ ಕ್ಯಾಂಪ್, ದೆಹೂ ರೋಡ್ (ಪುಣೆ), ಭಿಂಗಾರ್ (ಅಹಮದ್‌ನಗರ), ದೇವಲಾಯಿ (ನಾಶಿಕ್), ಛತ್ರಪತಿ ಸಂಭಾಜಿನಗರ ಮತ್ತು ಕಾಮಟಿ (ನಾಗಪುರ).

ಭಾರತದ ಎಲ್ಲಾ ಕಂಟೋನ್ಮೆಂಟ್ ಮಂಡಳಿಗಳು ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಅಧೀನದಲ್ಲಿವೆ. ವಿವಿಧ ಕಂಟೋನ್ಮೆಂಟ್ ಮಂಡಳಿಗಳಲ್ಲಿ ಸದಸ್ಯರ ಸಂಖ್ಯೆ ವಿಭಿನ್ನವಾಗಿರುತ್ತದೆ. ಕೇಂದ್ರ ಸರ್ಕಾರವು ನೇಮಿಸಿದ ಕಾರ್ಯನಿರ್ವಾಹಕ ಅಧಿಕಾರಿ ಕಂಟೋನ್ಮೆಂಟ್ ಮಂಡಳಿಯ ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ಕಂಟೋನ್ಮೆಂಟ್ ಮಂಡಳಿಯ ಜನಸಂಖ್ಯೆಗೆ ಅನುಗುಣವಾಗಿ ವಾರ್ಡ್‌ಗಳನ್ನು (ಪ್ರಭಾಗ) ಮಾಡಲಾಗುತ್ತದೆ. ಈ ವಾರ್ಡಗಳಿಂದ ಜನರು ಆಯ್ಕೆ ಮಾಡಿದ ಪ್ರತಿನಿಧಿಗಳು ಕಟಕ ಮಂಡಳಿಯ ಸದಸ್ಯರಾಗಿರುತ್ತಾರೆ. ಅವರ ಅಧಿಕಾರಾವಧಿ ಐದು ವರ್ಷಗಳು. ಇದಲ್ಲದೆ, ಅಷ್ಟೇ ಸಂಖ್ಯೆಯ ಸರ್ಕಾರದಿಂದ ನೇಮಕಗೊಂಡ ಮಿಲಿಟರಿ ಅಧಿಕಾರಿಗಳೂ ಇರುತ್ತಾರೆ. ಇವರೆಲ್ಲರ ಮೂಲಕ ಕಂಟೋನ್ಮೆಂಟ್ ಮಂಡಳಿಯ ವ್ಯವಹಾರಗಳು ನಡೆಯುತ್ತವೆ.

ಕಂಟೋನ್ಮೆಂಟ್ ಮುಖ್ಯ ಸೇನಾ ಅಧಿಕಾರಿಯು ಕಂಟೋನ್ಮೆಂಟ್ ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಕಂಟೋನ್ಮೆಂಟ್ ಮಂಡಳಿಯ ಉಪಾಧ್ಯಕ್ಷರು ನಾಗರಿಕ ಪ್ರದೇಶದ ಸಾಮಾನ್ಯ ಜನರ ಪ್ರತಿನಿಧಿಯಾಗಿರುತ್ತಾರೆ.

### 5.4.1 ಕಂಟೋನ್ಮೆಂಟ್ ಮಂಡಳಿಗಳ ವೈಶಿಷ್ಟ್ಯಗಳು.

- ಭಾರತ ಸರ್ಕಾರದ ರಕ್ಷಣಾ ಸಚಿವಾಲಯವು ಕಂಟೋನ್ಮೆಂಟ್ ಮಂಡಳಿಗಳನ್ನು ಸ್ಥಾಪಿಸುತ್ತದೆ.
- ಕೇಂದ್ರದ ಅಧಿಪತ್ಯದಲ್ಲಿರುವ ಕಂಟೋನ್ಮೆಂಟ್ ಮಂಡಳಿಗಳು ಏಕೈಕ ಸ್ಥಳೀಯ ಸ್ವಯಂ ಸರ್ಕಾರಿ ಸಂಸ್ಥೆಗಳಾಗಿವೆ.
- ಕಂಟೋನ್ಮೆಂಟ್ ಮಂಡಳಿಗಳಿಗೆ ಅಗತ್ಯವಿರುವ ಆರ್ಥಿಕ ಸಹಾಯವನ್ನು ರಕ್ಷಣಾ ಸಚಿವಾಲಯವು ಒದಗಿಸುತ್ತದೆ.
- ಸೈನಿಕರಿಗೆ ಮತ್ತು ಅವರೊಂದಿಗೆ ಕಂಟೋನ್ಮೆಂಟ್ ಪ್ರದೇಶದಲ್ಲಿ ವಾಸಿಸುವ ಸಾಮಾನ್ಯ ನಾಗರಿಕರಿಗೆ ಅಗತ್ಯ ಸೇವೆಗಳನ್ನು ಒದಗಿಸುತ್ತದೆ.
- ಸೈನಿಕರ ನೆಲೆ ಇರುವ ಭಾಗಗಳಲ್ಲಿ ಆಡಳಿತಾತ್ಮಕ ಕೆಲಸಗಳನ್ನು ನೋಡಿಕೊಳ್ಳುತ್ತದೆ.

### 5.4.2 ಕಂಟೋನ್ಮೆಂಟ್ ಮಂಡಳಿಗಳ ಕಾರ್ಯಗಳು

- ಸೈನಿಕ ಮತ್ತು ನಾಗರಿಕ ವಸತಿ ಇರುವ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತವನ್ನು ನಿರ್ವಹಿಸುವುದು.ಕಂಟೋನ್ಮೆಂಟ್ ಪ್ರದೇಶದಲ್ಲಿ ಶಿಕ್ಷಣ, ಆರೋಗ್ಯ, ಮಾರುಕಟ್ಟೆ ವ್ಯವಸ್ಥೆ, ನೀರು ಪೂರೈಕೆ, ರಸ್ತೆ ಇತ್ಯಾದಿ ವ್ಯವಸ್ಥೆ ಮಾಡುವುದು.
- ಬೀದಿ ದೀಪ, ಉದ್ಯಾನವನಗಳು, ನೈರ್ಮಲ್ಯ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.ಮಕ್ಕಳಿಗೆ ಶಿಕ್ಷಣ ನೀಡಲು ಕಂಟೋನ್ಮೆಂಟ್ ಪ್ರದೇಶದಲ್ಲಿ ಶಾಲೆಗಳನ್ನು ನಡೆಸುವುದು ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸುವುದು.

### ಕಂಟೋನ್ಮೆಂಟ್ ಮಂಡಳಿ ರಚನೆ: ಶ್ರೇಣಿ ಮತ್ತು ಸದಸ್ಯರ ಸಂಖ್ಯೆ

| ಶ್ರೇಣಿ | ಜನಸಂಖ್ಯೆಯ ಮಾನದಂಡ | ಒಟ್ಟು ಸದಸ್ಯರು | ಸದಸ್ಯರ ರಚನೆ | | |
|---|---|---|---|---|---|
| | | | ಚುನಾಯಿತ | | ನಾಮನಿರ್ದೇಶಿತ/ ಪದನಿಮಿತ್ತ |
| ಪ್ರಥಮ ಶ್ರೇಣಿ (I) | 50,000 ಕ್ಕಿಂತ ಹೆಚ್ಚು | 15 | 7 ಚುನಾಯಿತ | + | 8 ನಾಮನಿರ್ದೇಶಿತ/ಪದನಿಮಿತ್ತ |
| ದ್ವಿತೀಯ ಶ್ರೇಣಿ (II) | 10,000 ದಿಂದ 50,000 | 15 | 7 ಚುನಾಯಿತ | + | 8 ನಾಮನಿರ್ದೇಶಿತ/ಪದನಿಮಿತ್ತ |
| ತೃತೀಯ ಶ್ರೇಣಿ (III) | 2,500 ರಿಂದ 10,000 | 9 | 4 ಚುನಾಯಿತ | + | 5 ನಾಮನಿರ್ದೇಶಿತ/ಪದನಿಮಿತ್ತ |
| ಚತುರ್ಥ ಶ್ರೇಣಿ (IV) | 2,500 ಕ್ಕಿಂತ ಕಡಿಮೆ | 3 | 1 ಚುನಾಯಿತ | + | 2 ನಾಮನಿರ್ದೇಶಿತ/ಪದನಿಮಿತ್ತ |

**ವಿಶೇಷ ಸೂಚನೆ:** ಕಂಟೋನ್ಮೆಂಟ್ ಮಂಡಳಿಯಲ್ಲಿ ಮಿಲಿಟರಿ ಆಡಳಿತದ ಪ್ರಾಬಲ್ಯವನ್ನು ಉಳಿಸಿಕೊಳ್ಳಲು, ನಾಮನಿರ್ದೇಶಿತ ಅಥವಾ ಪದನಿಮಿತ್ತ ಸದಸ್ಯರ ಸಂಖ್ಯೆಯು ಯಾವಾಗಲೂ ಚುನಾಯಿತ ಸದಸ್ಯರಿಗಿಂತ ಒಬ್ಬರು ಹೆಚ್ಚಿರುತ್ತದೆ.

- ಆಸ್ಪತ್ರೆಗಳು, ಲಸಿಕಾ ಅಭಿಯಾನಗಳು ಮುಂತಾದವುಗಳ ವ್ಯವಸ್ಥೆ ಮಾಡುವುದು.ರಸ್ತೆಯ ಎರಡೂ ಬದಿಗಳಲ್ಲಿ ಮರಗಳನ್ನು ನೆಡುವುದು ಮತ್ತು ಅವುಗಳ ನಿರ್ವಹಣೆ ಮಾಡುವುದು.
- ಸ್ಥಳೀಯ ತೆರಿಗೆಗಳನ್ನು ಸಂಗ್ರಹಿಸುವುದು ಮತ್ತು ಅದರ ಮೂಲಕ ನಾಗರಿಕರಿಗೆ ಸೌಲಭ್ಯಗಳನ್ನು ಒದಗಿಸುವುದು.

**ಕಂಟೋನ್ಮೆಂಟ ಮಂಡಳಿಯ ಆದಾಯದ ಮೂಲಗಳು:**

- ಕಂಟೋನ್ಮೆಂಟ್ ಪ್ರದೇಶದ ನೇರ ತೆರಿಗೆಗಳಿಂದ ಬರುವ ಆದಾಯ.
- ಕೇಂದ್ರ ಸರ್ಕಾರ ಮತ್ತು ಕೇಂದ್ರ ರಕ್ಷಣಾ ಇಲಾಖೆಯಿಂದ ಬರುವ ಆರ್ಥಿಕ ನೆರವು.



## ಸ್ವಾಧ್ಯಾಯ

**ಪ್ರ. 1. ಕೆಳಗಿನ ಚಿತ್ರಗಳನ್ನು ನೋಡಿ ನಿಮ್ಮ ಪರಿಸರದಲ್ಲಿ ಈ ಸೌಕರ್ಯಗಳನ್ನು ಯಾವ ಸ್ಥಾನಿಕ ಸಂಸ್ಥೆ ಪೂರೈಸುತ್ತದೆ ಎಂಬುದನ್ನು ಬರೆಯಿರಿ.**



ಈ ಸೌಕರ್ಯ ಪೂರೈಸುವ ಸಂಸ್ಥೆ

.........................................



ಈ ಸೌಕರ್ಯ ಪೂರೈಸುವ ಸಂಸ್ಥೆ

.........................................



ಈ ಸೌಕರ್ಯ ಪೂರೈಸುವ ಸಂಸ್ಥೆ

.........................................




ಈ ಸೌಕರ್ಯ ಪೂರೈಸುವ ಸಂಸ್ಥೆ

.........................................

**ಪ್ರ.2 ನಾನು ಯಾರು ಎಂದು ಗುರುತಿಸಿ?**

1. ಜನಸಂಖ್ಯೆ ಕಡಿಮೆ ಆದರೆ ನಗರೀಕರಣ ಪ್ರಾರಂಭವಾಗಿದೆ, ನಾನು ಯಾರು?

   ………………………………………………………….

2. ನನ್ನ ಹೊರತಾಗಿ ನಗರ ಸಭೆಯ ಆಯವ್ಯಯ ಮಂಜೂರು ಮಾಡಲು ಸಾಧ್ಯವಿಲ್ಲ, ನಾನು ಯಾರು?

   ………………………………………………………….

3. ನಾನು ದೊಡ್ಡ ನಗರದ 'ಆಡಳಿತಾತ್ಮಕ ಬೆನ್ನೆಲುಬು', ನನ್ನನ್ನು ರಾಜ್ಯ ಸರ್ಕಾರ ನೇಮಿಸುತ್ತದೆ, ನಾನು ಯಾರು?

   ………………………………………………………….

**ಪ್ರ.3 ಕೆಳಗಿನ ಪರಿಕಲ್ಪನೆಯ ಚಿತ್ರವನ್ನು (ಕೋಷ್ಟಕ) ಪೂರ್ಣಗೊಳಿಸಿ:**

| ಸ್ವರಾಜ್ಯ ಸಂಸ್ಥೆ | ಪ್ರಮುಖ ಪದಾಧಿಕಾರಿ | ಆಡಳಿತಾತ್ಮಕ ಅಧಿಕಾರಿ |
|---|---|---|
| ನಗರ ಪಂಚಾಯತ್ | ಅಧ್ಯಕ್ಷ | ………………… |
| ………………… | ………………… | ಮುಖ್ಯ ಅಧಿಕಾರಿ |
| ………………… | ಮಹಾಪೌರ | ………………… |

**ಪ್ರ. 4 ಒಂದು 'ಆದರ್ಶ ನಗರ'ದ ಪರಿಕಲ್ಪನೆಯ ಚಿತ್ರವನ್ನು ಬಿಡಿಸಿ, ಅದರಲ್ಲಿ ಸ್ಥಳೀಯ ಸಂಸ್ಥೆಯು ಒದಗಿಸಿದ ಕನಿಷ್ಠ 5 ಸೌಲಭ್ಯಗಳು ಸ್ಪಷ್ಟವಾಗಿ ಕಾಣಿಸಲಿ.**

(ಉದಾಹರಣೆಗೆ: ಸೈಕಲ್ ಟ್ರ್ಯಾಕ್, ಸೌರಶಕ್ತಿ ದೀಪಗಳು, ಕಸ ವಿಂಗಡಣಾ ಕೇಂದ್ರ, ಉದ್ಯಾನವನ, ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ.)

**ಪ್ರ.5 ನಿಮ್ಮ ನಗರವನ್ನು 'ಸ್ಮಾರ್ಟ್ ಮತ್ತು ಸ್ವಚ್ಛ ನಗರ'ವನ್ನಾಗಿ ಮಾಡಲು ಕನಿಷ್ಠ 5 ಘೋಷವಾಕ್ಯಗಳನ್ನು ತಯಾರಿಸಿ.**

**ಉದಾಹರಣೆ: ನಗರ ನಮ್ಮದು, ಸ್ವಚ್ಛವಾಗಿಡುವುದು ನಮ್ಮ ಕರ್ತವ್ಯ!**

**ನಿಮ್ಮ ಘೋಷವಾಕ್ಯಗಳು:**

1. …………………………………………

2. …………………………………………

3. …………………………………………

4. …………………………………………

**ಉಪಕ್ರಮ:**

1. ನಿಮ್ಮ ಪ್ರದೇಶದ ಸಾರ್ವಜನಿಕ ಉದ್ಯಾನವನಗಳ ಪ್ರಸ್ತುತ ಸ್ಥಿತಿಯನ್ನು ನೋಡಿ ಅಲ್ಲಿ ಯಾವ ಹೊಸ ಸೌಲಭ್ಯಗಳ ಅಗತ್ಯವಿದೆ ಎಂದು ಬರೆಯಿರಿ.
2. ನಗರದ ಸಾರ್ವಜನಿಕ ಗೋಡೆಗಳ ಮೇಲೆ ಸ್ಥಳೀಯ ಆಡಳಿತವು ಸ್ವಚ್ಛತೆಯ ಬಗ್ಗೆ ಸಂದೇಶ ನೀಡುವ ಚಿತ್ರಗಳನ್ನು ಬಿಡಿಸಿದ್ದಾರೆಯೇ ಎಂಬುದನ್ನು ಗಮನಿಸಿ ಮತ್ತು ಅವುಗಳಲ್ಲಿ ಯಾವ ಸಂದೇಶವನ್ನು ನೀಡಲಾಗಿದೆ ಎಂಬುದನ್ನು ನಿಮ್ಮ ಪುಸ್ತಕದಲ್ಲಿ ಬರೆಯಿರಿ

***

# 6 ಜಿಲ್ಲಾ ಆಡಳಿತ



6.1 ಜಿಲ್ಲಾ ಆಡಳಿತದ ಪರಿಚಯ
6.2 ಜಿಲ್ಲಾ ಕಂದಾಯ ಆಡಳಿತ: ರಚನೆ, ಕಾರ್ಯಗಳು, ಅಧಿಕಾರಗಳು
6.3 ಜಿಲ್ಲಾ ಪೊಲೀಸ್ ಆಡಳಿತ: ರಚನೆ, ಕಾರ್ಯಗಳು ಮತ್ತು ಅಧಿಕಾರಗಳು
6.4 ಜಿಲ್ಲಾ ನ್ಯಾಯಾಂಗ ಆಡಳಿತ: ರಚನೆ ಮತ್ತು ಕಾರ್ಯಗಳು



ಮಕ್ಕಳೇ, ನಾವು ಒಂದು ಬೃಹತ್ ಹಡಗಿನಲ್ಲಿದ್ದೇವೆ ಎಂದು ಕಲ್ಪಿಸಿಕೊಳ್ಳಿ. ಈ ಹಡಗಿನಲ್ಲಿ ಸಾವಿರಾರು ಜನರು ವಾಸಿಸುತ್ತಿದ್ದಾರೆ. ಯಾರಿಗೋ ಹಸಿವಾಗಿದೆ, ಯಾರಿಗೋ ಆಸ್ಪತ್ರೆಗೆ ಹೋಗಬೇಕಿದೆ, ಇನ್ನು ಯಾರಿಗೋ ಆಟವಾಡಲು ಸುರಕ್ಷಿತ ಸ್ಥಳ ಬೇಕಿದೆ. ಈಗ ನನಗೆ ಹೇಳಿ, ಇಷ್ಟು ದೊಡ್ಡ ಹಡಗಿನಲ್ಲಿ ಗೊಂದಲ ಉಂಟಾಗಬಾರದು ಎಂದರೆ ಯಾರಾದರೂ ಒಬ್ಬರ ಅಗತ್ಯವಿದೆಯಲ್ಲವೇ? ಅದಕ್ಕಾಗಿಯೇ ಹಡಗಿನಲ್ಲಿ 'ಕ್ಯಾಪ್ಟನ್' (ನಾಯಕ) ಇರುತ್ತಾರೆ. ಇವರು ಹಡಗಿನ ಮುಖ್ಯಸ್ಥರಾಗಿದ್ದು, ಯಾವುದೇ ಸಮಸ್ಯೆ ಉದ್ಭವಿಸಿದರೆ ತಮ್ಮ ಸಹೋದ್ಯೋಗಿಗಳ ಸಹಾಯದಿಂದ ಅದನ್ನು ಪರಿಹರಿಸುತ್ತಾರೆ. ಹಡಗು ಸುರಕ್ಷಿತವಾಗಿ ತಲುಪಬೇಕಾದ ಸ್ಥಳಕ್ಕೆ ತಲುಪಲು 'ಕ್ಯಾಪ್ಟನ್' ಪಾತ್ರವು ಬಹಳ ಮುಖ್ಯವಾಗಿರುತ್ತದೆ.

ನಮ್ಮ ಜಿಲ್ಲೆಯೇ ಈ 'ಹಡಗು' ಮತ್ತು ಜಿಲ್ಲಾಧಿಕಾರಿಗಳೇ ಅದರ 'ಕ್ಯಾಪ್ಟನ್' ಆಗಿದ್ದಾರೆ!



ಸಾಂಗಲಿ ಜಿಲ್ಹಾಧಿಕಾರಿ ಕಾರ್ಯಾಲಯ

## 6.1 ಜಿಲ್ಲಾ ಆಡಳಿತದ ಪರಿಚಯ

ವಿವಿಧ ಜಿಲ್ಲೆಗಳು ಸೇರಿ ಭಾರತದ ರಾಜ್ಯಗಳು ನಿರ್ಮಾಣವಾಗಿವೆ.

**ಜಿಲ್ಲಾ ಆಡಳಿತದ ರಚನೆ**




ಜಿಲ್ಲೆಯು ತನ್ನದೇ ಆದ ಸ್ವತಂತ್ರ ಆಡಳಿತ ವ್ಯವಸ್ಥೆಯನ್ನು ಹೊಂದಿದೆ, ಇದನ್ನು ಜಿಲ್ಲಾ ಆಡಳಿತ ಎಂದು ಕರೆಯಲಾಗುತ್ತದೆ. ಜಿಲ್ಲೆಯನ್ನು ಆಡಳಿತದ ಒಂದು ಪ್ರಮುಖ ಘಟಕವೆಂದು ಪರಿಗಣಿಸಲಾಗುತ್ತದೆ. ಜಿಲ್ಲಾ ಆಡಳಿತವು ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ನಡುವಿನ ಪ್ರಮುಖ ಕೊಂಡಿಯಾಗಿದೆ. ಕಂದಾಯ ಸಂಗ್ರಹಣೆ, ಕೃಷಿ ನೀರಾವರಿ, ಸಾರ್ವಜನಿಕ ಕಲ್ಯಾಣ ಕಾರ್ಯಗಳು, ತುರ್ತು ಕಾರ್ಯಗಳು, ಪಡಿತರ ವಿತರಣೆ, ಚುನಾವಣೆಗಳ ಆಯೋಜನೆ ಮತ್ತು ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮುಂತಾದವು ಜಿಲ್ಲಾ ಆಡಳಿತದ ಜವಾಬ್ದಾರಿಗಳಾಗಿವೆ. ಜಿಲ್ಲಾಧಿಕಾರಿಯು ಜಿಲ್ಲಾ ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾಧಿಕಾರಿಯನ್ನು ಆಡಳಿತ ವ್ಯವಸ್ಥೆಯ ಮುಖ್ಯ ಘಟಕವೆಂದು ಪರಿಗಣಿಸಲಾಗುತ್ತದೆ. ಇಂತಹ ಮೂಲಭೂತ ಆಡಳಿತ ವ್ಯವಸ್ಥೆಯ ಮೂಲಕ ನಡೆಯುವ ಎಲ್ಲಾ ಸಾರ್ವಜನಿಕ ವ್ಯವಹಾರಗಳ ನಿರ್ವಹಣೆಯೇ ಜಿಲ್ಲಾ ಆಡಳಿತ. ಜಿಲ್ಲಾ ಆಡಳಿತದ ವಿವಿಧ ಇಲಾಖೆಗಳ ಮಾಹಿತಿ ಈ ಕೆಳಗಿನಂತಿದೆ.

## 6.2 ಜಿಲ್ಲಾ ಕಂದಾಯ ಆಡಳಿತ: ರಚನೆ, ಕಾರ್ಯಗಳು, ಅಧಿಕಾರಗಳು

ಜಿಲ್ಲಾ ಕಂದಾಯ ವ್ಯವಸ್ಥೆಯು ಜಿಲ್ಲಾ ಆಡಳಿತದ ಒಂದು ಪ್ರಮುಖ ವಿಭಾಗವಾಗಿದ್ದು, ಇದರಲ್ಲಿ ಜಿಲ್ಲಾಧಿಕಾರಿಗಳ ಪಾತ್ರ ಮುಖ್ಯವಾಗಿದೆ. ಉಪ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ನಾಯಬ್ ತಹಶೀಲ್ದಾರ್, ಮಂಡಲ

ಅಧಿಕಾರಿ ಮತ್ತು ಗ್ರಾಮ ಕಂದಾಯ ಅಧಿಕಾರಿ (ತಲಾಟಿ) ಇವರುಗಳನ್ನು ಒಳಗೊಂಡಿರುತ್ತದೆ. ಈ ವ್ಯವಸ್ಥೆಯು ಭೂಮಿ, ಕಂದಾಯ ಆಡಳಿತ, ಕಾನೂನು ಮತ್ತು ಸುವ್ಯವಸ್ಥೆ, ನಾಗರಿಕರ ಕೆಲಸಗಳು, ನೈಸರ್ಗಿಕ ವಿಕೋಪ ನಿರ್ವಹಣೆ ಮತ್ತು ಪರಿಹಾರ ಕಾರ್ಯಗಳಂತಹ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ.

**ಜಿಲ್ಲಾ ಕಂದಾಯ ಆಡಳಿತ: ರಚನೆ**

| | |
|---|---|
| 1.ಜಿಲ್ಲಾಧಿಕಾರಿ | ಜಿಲ್ಲೆಯ ಮುಖ್ಯ ಕಂದಾಯ ಅಧಿಕಾರಿ. |
| 2.ಉಪ ಜಿಲ್ಲಾಧಿಕಾರಿ | ಜಿಲ್ಲಾಧಿಕಾರಿಗಳಿಗೆ ಸಹಾಯ ಮಾಡುತ್ತಾರೆ. |
| 3.ತಹಸೀಲದಾರ | ತಾಲೂಕಿನ ಮುಖ್ಯ ಕಂದಾಯ ಅಧಿಕಾರಿ. |
| 4.ನಾಯಬ್ ತಹಸೀಲದಾರ | ತಹಸೀಲ್ದಾರರಿಗೆ ಸಹಾಯ ಮಾಡುತ್ತಾರೆ |
| 5.ಮಂಡಲ ಅಧಿಕಾರಿ/ ಮಂಡಲ ನಿರೀಕ್ಷಕರು | ಹಳ್ಳಿಗಳ ಗುಂಪುಗಳ ಮೇಲೆ ಮೇಲ್ವಿಚಾರಣೆ ಮಾಡುತ್ತಾರೆ. |
| 6.ತಲಾಟಿ (ಗ್ರಾಮ ಲೆಕ್ಕಿಗ) | ಗ್ರಾಮದ ಕಂದಾಯ ಅಧಿಕಾರಿ. |
| 7.ಕೊತ್ವಾಲ್ | ತಲಾಟಿಗಳಿಗೆ ಸಹಾಯ ಮಾಡುತ್ತಾರೆ. |

### 6.2.1 ಜಿಲ್ಲಾಧಿಕಾರಿ

ಜಿಲ್ಲಾಧಿಕಾರಿಯು ಭಾರತೀಯ ಆಡಳಿತ ಸೇವೆಯ (IAS) ಅಧಿಕಾರಿಯಾಗಿರುತ್ತಾರೆ. ಅವರು ಜಿಲ್ಲಾ ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ಇವರ ಆಯ್ಕೆಯು ಕೇಂದ್ರ ಲೋಕಸೇವಾ ಆಯೋಗದಿಂದ (UPSC) ಆಗುತ್ತದೆ, ಆದರೆ ನೇಮಕಾತಿಯು ರಾಜ್ಯ ಸರ್ಕಾರದಿಂದ ಮಾಡಲ್ಪಡುತ್ತದೆ. ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಹಾಗೂ ಭೂಕಂದಾಯ ಸಂಗ್ರಹಣೆಯಂತಹ ಅತ್ಯಂತ ಪ್ರಮುಖ ಕಾರ್ಯಗಳನ್ನು ಅವರು ನಿರ್ವಹಿಸಬೇಕಾಗುತ್ತದೆ. ಅದೇ ರೀತಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿವಿಧ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅಧಿಕಾರವೂ ಜಿಲ್ಲಾಧಿಕಾರಿಗಳಿಗಿರುತ್ತದೆ.

**ತಹಸೀಲದಾರ**

ಜಿಲ್ಲೆಯು ವಿವಿಧ ಸಣ್ಣ ಉಪ-ವಿಭಾಗಗಳನ್ನು ಒಳಗೊಂಡಿರುತ್ತದೆ, ಇವುಗಳನ್ನು 'ತಾಲೂಕು' ಎಂದು ಕರೆಯಲಾಗುತ್ತದೆ. ತಹಶೀಲ್ದಾರರು ತಾಲೂಕು ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ತಾಲೂಕಿನ ವ್ಯಾಪ್ತಿಗೆ ಬರುವ ಎಲ್ಲಾ ಹಳ್ಳಿಗಳು ಮತ್ತು ಪಟ್ಟಣಗಳ ಆಡಳಿತಾತ್ಮಕ ಜವಾಬ್ದಾರಿಗಳನ್ನು ಅವರು ನಿರ್ವಹಿಸುತ್ತಾರೆ.



- ಭೂ ಜಮೀನಿನ ದಾಖಲೆಗಳ ನೋಂದಣಿ ಮತ್ತು ವಿಭಜನೆ ಮಾಡುವುದು.
- ಭೂ ಕಂದಾಯವನ್ನು ವಸೂಲಿ ಮಾಡುವುದು.
- ಜಮೀನಿನ ಮೇಲಿನ ಅತಿಕ್ರಮಣವನ್ನು ತೆರವುಗೊಳಿಸುವುದು.
- ವಿಪತ್ತು ನಿರ್ವಹಣೆ ಮತ್ತು ಪರಿಹಾರ ಕಾರ್ಯಗಳಲ್ಲಿ ಭಾಗವಹಿಸುವುದು.
- ನಾಗರಿಕ ಸೌಲಭ್ಯಗಳಿಗೆ ಸಂಬಂಧಿಸಿದ ಎಲ್ಲಾ ಪ್ರಮುಖ ಪ್ರಮಾಣಪತ್ರಗಳನ್ನು ನೀಡುವುದು.
- ಭೂಮಿಗೆ ಸಂಬಂಧಿಸಿದ ದಿವಾನಿ ಸ್ವರೂಪದ ಕೆಲವು ಪ್ರಕರಣಗಳಲ್ಲಿ ನ್ಯಾಯ ದಂಡಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

**ಮಾಡಿ ನೋಡಿ**

1. ಚಿತ್ರವನ್ನು ನೋಡಿ ಅದರಿಂದ ನಿಮಗೆ ಏನು ಅರ್ಥವಾಯಿತು ಎಂಬುದನ್ನು ತಿಳಿಸಿ. (ಚಿತ್ರದಲ್ಲಿ: ಬೇಟಿ ಬಚಾವೋ, ಬೇಟಿ ಪಢಾವೋ)

2. ಕೇಂದ್ರ ಸರ್ಕಾರವು ಹೆಣ್ಣು ಮಕ್ಕಳ ಅಭಿವೃದ್ಧಿ ಮತ್ತು ಶಿಕ್ಷಣಕ್ಕಾಗಿ ಆರಂಭಿಸಿರುವ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ತರಗತಿಯಲ್ಲಿ ಗುಂಪು ಚರ್ಚೆ ಮಾಡಿ

### ತಲಾಟಿ (ಗ್ರಾಮಲೆಕ್ಕಿಗ)

ತಲಾಟಿಯು ಗ್ರಾಮ ಮಟ್ಟದಲ್ಲಿ ಆದಾಯ ಖಾತೆಯ ಒಬ್ಬ ಉದ್ಯೋಗಿ. ಅವನಿಗೆ ನಾಗರಿಕ ಆಡಳಿತದಲ್ಲಿ ಕೆಳಗಿನ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ.

- ತೆರಿಗೆ ಸಂಗ್ರಹ, ಕೃಷಿ ಸಾಲಗಳು ಮತ್ತು ಅವುಗಳ ವಸೂಲಿ.
- ಬರ ಪರಿಹಾರ ಕಾಮಗಾರಿಕೆಗಳ ಪ್ರಕ್ರಿಯ ಕೈಗೊಳ್ಳುವುದು.
- ಚುನಾವಣೆಗೆ ಸಂಬಂಧಿಸಿದಂತೆ ವಹಿಸಿಕೊಟ್ಟ ಕೆಲಸಗಳನ್ನು ಮಾಡುವುದು.
- ಜಿಲ್ಲಾಧಿಕಾರಿಯು ಕಾಲಕಾಲಕ್ಕೆ ನಿಗದಿಪಡಿಸಿದ ನೊಂಧಣಿ ಪುಸ್ತಕ, ಇತರ ಪುಸ್ತಕಗಳು ಮತ್ತು ಲೆಕ್ಕ ಪತ್ರಗಳನ್ನು ಇಟ್ಟುಕೊಳ್ಳುವುದು.

ತಲಾಟಿಯ ಮೇಲಿನ ನೇರ ನಿಯಂತ್ರಣವು ಮಂಡಲ ಅಧಿಕಾರಿ ಮತ್ತು ನಂತರ ತಹಸಿಲದಾರ ಅವರ ಮೇಲಿರುತ್ತದೆ.

**ತಿಳಿದುಕೊಳ್ಳೋಣ**

**ತಿಳಿದುಕೊಳ್ಳೋಣ ಬನ್ನಿ ಮಹಾರಾಷ್ಟ್ರದ ಕೆಲವು ಐಎಎಸ್ (IAS) ಅಧಿಕಾರಿಗಳ ಗಮನಾರ್ಹ ಕಾರ್ಯಗಳು:**

**ಡಾ. ರಾಜೇಂದ್ರ ಭಾರೂಡ್ (ಐಎಎಸ್ ಅಧಿಕಾರಿ):**

ಕೋವಿಡ್-19 ಸಾಂಕ್ರಾಮಿಕ ರೋಗವನ್ನು ಎದುರಿಸಲು, ನಂದೂರ್ಬಾರ್‌ನ ಅಂದಿನ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಭಾರೂಡ್ ಅವರು ತಮ್ಮ ವೈದ್ಯಕೀಯ ಜ್ಞಾನವನ್ನು ಬಳಸಿಕೊಂಡು 'ಆಕ್ಸಿಜನ್ ಪ್ಲಾಂಟ್' ಅನ್ನು ಸಿದ್ಧಪಡಿಸಿದರು. ಪರಿಣಾಮವಾಗಿ, ನಂದೂರ್ಬಾರ್ ಜಿಲ್ಲೆಯು ಆಮ್ಲಜನಕದ ಲಭ್ಯತೆಯಲ್ಲಿ ಸ್ವಾವಲಂಬಿಯಾಯಿತು. ಕೊರೊನಾ ಪೀಡಿತ ಆದಿವಾಸಿಗಳ ಕ್ವಾರಂಟೈನ್‌ಗಾಗಿ ಅವರು ಶಾಲೆಗಳು, ಸಮುದಾಯ ಭವನಗಳು ಮತ್ತು ಹಾಸ್ಟೆಲ್‌ಗಳಲ್ಲಿ ಆಮ್ಲಜನಕದ ಸೌಲಭ್ಯವಿರುವ ಹಾಸಿಗೆಗಳನ್ನು ಸಿದ್ಧಪಡಿಸಿದರು.

**ಇ. ಜೆಡ್. ಖೋಬ್ರಾಗಡೆ (ಮಾಜಿ ಐಎಎಸ್ ಅಧಿಕಾರಿ):**

ಭಾರತೀಯ ಆಡಳಿತ ಸೇವೆಯಲ್ಲಿದ್ದಾಗ ಇ. ಜೆಡ್. ಖೋಬ್ರಾಗಡೆ ಅವರು ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ಶಾಲೆಯಲ್ಲಿ 'ಸಂವಿಧಾನದ ಪ್ರಸ್ತಾವನೆಯ ವಾಚನ' ಎಂಬ ಉಪಕ್ರಮವನ್ನು ಜಾರಿಗೆ ತಂದರು. ಮಹಾರಾಷ್ಟ್ರ ಸರ್ಕಾರವು ಈ ಉಪಕ್ರಮವನ್ನು ಗಮನಿಸಿ 2008 ರಿಂದ ಮಹಾರಾಷ್ಟ್ರದ ಪ್ರತಿ ಶಾಲೆಯಲ್ಲಿ ಪ್ರಸ್ತಾವನೆಯ ವಾಚನವನ್ನು ಕಡ್ಡಾಯಗೊಳಿಸಿದೆ.

### 6.2.2 ಜಿಲ್ಲಾ ಆಡಳಿತದ ಮೂಲಕ ಜಾರಿಗೆ ತರಲಾಗುವ ಪ್ರಮುಖ ಯೋಜನೆಗಳು

ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳನ್ನು ಜಾರಿಗೆ ತರುವ ಜವಾಬ್ದಾರಿ ಜಿಲ್ಲಾಧಿಕಾರಿಗಳ ಮೇಲಿರುತ್ತದೆ. ಜಿಲ್ಲಾಧಿಕಾರಿಗಳು ಅಭಿವೃದ್ಧಿ ಮತ್ತು ಕಲ್ಯಾಣಕಾರಿ ಸ್ವರೂಪದ ವಿವಿಧ ಯೋಜನೆಗಳನ್ನು ಜಾರಿಗೆ ತರುತ್ತಾರೆ. ಅವರ ಮಾಹಿತಿ ಈ ಕೆಳಗಿನಂತಿದೆ:

**1. ಸಾಮಾಜಿಕ ಮತ್ತು ಕಲ್ಯಾಣ ಯೋಜನೆಗಳು:** ಸಮಾಜದ ಮಹಿಳೆಯರು, ಸಣ್ಣ ಮಕ್ಕಳು, ಹಿಂದುಳಿದ ವರ್ಗಗಳು, ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದವರ ಕಲ್ಯಾಣಕ್ಕಾಗಿ ಯೋಜನೆಗಳು. ಉದಾ: ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆ, ಅಂತ್ಯೋದಯ ಯೋಜನೆ ಇತ್ಯಾದಿ.

**2. ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಯೋಜನೆಗಳು:** ಜೀವನೋಪಾಯ ಮತ್ತು ಗ್ರಾಮೀಣ ಭಾಗದ ಸಾರಿಗೆ ವ್ಯವಸ್ಥೆಗೆ ಸಂಬಂಧಿಸಿದ ಯೋಜನೆಗಳು. ಉದಾ: ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ ರಾಷ್ಟ್ರೀಯ ಮತ್ತು ಮಹಾರಾಷ್ಟ್ರ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ, ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ ಇತ್ಯಾದಿ.

**3. ಕೃಷಿ ಸಂಬಂಧಿತ ಯೋಜನೆಗಳು:** ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು, ನೀರಾವರಿ ಮತ್ತು ಸಂಗ್ರಹಣಾ ಸೌಲಭ್ಯಗಳನ್ನು ಸುಧಾರಿಸುವುದು, ಬೆಳೆಗಳಲ್ಲಿ ವೈವಿಧ್ಯತೆಯನ್ನು ತರುವುದು, ರೈತರಿಗೆ ಸಾಲ ಲಭ್ಯವಾಗುವಂತೆ ಮಾಡುವುದು ಇತ್ಯಾದಿ ಯೋಜನೆಗಳನ್ನು ಜಿಲ್ಲಾ ಆಡಳಿತದ ಮೂಲಕ ಜಾರಿಗೆ ತರಲಾಗುತ್ತದೆ. ಉದಾಹರಣೆಗೆ: ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಇತ್ಯಾದಿ.

**ಹೇಳಿ ನೋಡೋಣ!**

ನೀವು 'ಜಿಲ್ಲಾಧಿಕಾರಿ'ಯಾದರೆ ಏನು ಮಾಡುವಿರಿ

### 6.3 ಜಿಲ್ಲಾ ಪೊಲೀಸ್ ಆಡಳಿತ: ರಚನೆ, ಕಾರ್ಯಗಳು ಮತ್ತು ಅಧಿಕಾರಗಳು

ಜಿಲ್ಲಾ ಪೊಲೀಸ್ ವ್ಯವಸ್ಥೆಯ ಪ್ರಮುಖ ಕಾರ್ಯವೆಂದರೆ ಸಾರ್ವಜನಿಕ ಸುರಕ್ಷತೆ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಅಪರಾಧಗಳನ್ನು ತಡೆಗಟ್ಟುವುದು. ಪೊಲೀಸ್ ವ್ಯವಸ್ಥೆಯ ಜಾಗರೂಕತೆಯಿಂದಾಗಿ ಜನರಿಗೆ ಸುರಕ್ಷತೆ ದೊರೆಯುತ್ತದೆ, ನ್ಯಾಯ ಸಿಗುತ್ತದೆ ಮತ್ತು ನಾಗರಿಕರ ಜೀವ ಹಾಗೂ ಆಸ್ತಿಪಾಸ್ತಿಗಳ ರಕ್ಷಣೆಯಾಗುತ್ತದೆ. ಜಿಲ್ಲಾ ಮಟ್ಟದ ಪೊಲೀಸ್ ವ್ಯವಸ್ಥೆಯ ಮುಖ್ಯಸ್ಥರು ಪೊಲೀಸ್ ಅಧೀಕ್ಷಕರು ಆಗಿರುತ್ತಾರೆ ಮತ್ತು ಅವರು ಜಿಲ್ಲಾ ಪೊಲೀಸ್ ಪಡೆಯನ್ನು ಮುನ್ನಡೆಸುತ್ತಾರೆ. ಜಿಲ್ಲೆಯ ಎಲ್ಲಾ ಪೊಲೀಸ್ ವ್ಯವಸ್ಥೆಯು ಪೊಲೀಸ್ ಅಧೀಕ್ಷಕರ ನಿಯಂತ್ರಣದಲ್ಲಿ ಕೆಲಸ ಮಾಡುತ್ತದೆ. ಇವರ ಆಯ್ಕೆಯು ಕೇಂದ್ರ ಲೋಕಸೇವಾ ಆಯೋಗದ ಮೂಲಕ ನಡೆಯುತ್ತದೆ.

**ಶೋಧಿಸಿ ನೋಡಿ**

''ಸದ್ರಕ್ಷಣಾಯ ಖಲನಿಗ್ರಹಣಾಯ'' ಎಂಬುದು ಮಹಾರಾಷ್ಟ್ರ ಪೊಲೀಸ್ ಸೇವೆಯ ಧ್ಯೇಯವಾಕ್ಯವಾಗಿದೆ. ಈ ವಾಕ್ಯದ ಅರ್ಥವನ್ನು ಹುಡುಕಿ.

| ಜಿಲ್ಲಾ ಪೊಲೀಸ್ ಆಡಳಿತ ವ್ಯವಸ್ಥೆಯ ರಚನೆ |
|---|
| 1. ಪೊಲೀಸ್ ಅಧೀಕ್ಷಕ (S.P.) |
| 2. ಅಪರ ಪೊಲೀಸ್ ಅಧೀಕ್ಷಕ (Addl. S.P.) |
| 3. ಪೊಲೀಸ್ ಉಪಾಧೀಕ್ಷಕ (Dy.S.P.) |
| 4. ಪೊಲೀಸ್ ನಿರೀಕ್ಷಕ (P.I.) |
| 5. ಸಹಾಯಕ ಪೊಲೀಸ್ ನಿರೀಕ್ಷಕ (A.P.I.) |
| 6. ಉಪನಿರೀಕ್ಷಕ (P.S.I.) |
| 7. ಸಹಾಯಕ ಪೊಲೀಸ್ ಉಪನಿರೀಕ್ಷಕ (A.S.I.) |
| 8. ಪೊಲೀಸ್ ಹವಾಲ್ದಾರ್ (H.C.) |
| 9. ಪೊಲೀಸ್ ಸಿಪಾಯಿ (P.C.) |

#### 6.3.2 ಪೊಲೀಸ್ ಅಧೀಕ್ಷಕರ ಕಾರ್ಯಗಳು ಮತ್ತು ಅಧಿಕಾರಗಳು

- ಜಿಲ್ಲೆಯಲ್ಲಿ ಅಪರಾಧಗಳನ್ನು ತಡೆಗಟ್ಟುವುದು ಮತ್ತು ಅವುಗಳನ್ನು ನಿಯಂತ್ರಣಕ್ಕೆ ತರುವುದು.
- ಸಾಮಾನ್ಯ ಜನರಲ್ಲಿ ಸುರಕ್ಷತೆಯ ಭಾವನೆಯನ್ನು ಮೂಡಿಸುವುದು.
- ಸಂಚಾರ ನಿರ್ವಹಣೆ ಮಾಡುವುದು.
- ಪತ್ತು ನಿರ್ವಹಣೆ ಮತ್ತು ತುರ್ತು ಪರಿಸ್ಥಿತಿಯಲ್ಲಿ ಸಹಾಯ ಮಾಡುವ ಪಾತ್ರವನ್ನು ನಿರ್ವಹಿಸುವುದು,

ಅತಿ ಮಹತ್ವದ ವ್ಯಕ್ತಿಗಳ ಸುರಕ್ಷತೆಯ ಜವಾಬ್ದಾರಿ ಜಿಲ್ಲಾ ಪೊಲೀಸ್ ಆಡಳಿತದ ಮೇಲಿರುತ್ತದೆ.

**ನಿಮಗೆ ಗೊತ್ತಿದೆಯೇ?**

**ಸೈಬರ್ ಅಪರಾಧಗಳು:**

ಗಣಕಯಂತ್ರ ಮತ್ತು ಇಂಟರ್ನೆಟ್ ಮೂಲಕ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ಗಣಕಯಂತ್ರ ವ್ಯವಸ್ಥೆಯನ್ನು ಪ್ರವೇಶಿಸಿ ಅಲ್ಲಿನ ಮಾಹಿತಿಗಳನ್ನು ಕದಿಯುವುದು, ಅದರ ದುರುಪಯೋಗ ಮಾಡುವುದು, ವೈರಸ್ ಕಳುಹಿಸುವುದು, ಮೋಸಗೊಳಿಸುವುದು, ಬೆದರಿಕೆ ಹಾಕುವುದು ಮತ್ತು ಹಣಕ್ಕಾಗಿ ಪೀಡಿಸುವಂತಹ ಕೃತ್ಯಗಳನ್ನು 'ಸೈಬರ್ ಅಪರಾಧ' ಎನ್ನಲಾಗುತ್ತದೆ.

**ಸೈಬರ್ ಸಹಾಯವಾಣಿ ಫೋನ್ ಸಂಖ್ಯೆ: 1930**

## 6.4 ಜಿಲ್ಲಾ ನ್ಯಾಯಾಂಗ ಆಡಳಿತ: ರಚನೆ ಮತ್ತು ಕಾರ್ಯಗಳು

ಜಿಲ್ಲಾ ನ್ಯಾಯಾಧೀಶರು ಜಿಲ್ಲಾ ಮಟ್ಟದ ಪ್ರಮುಖ ನ್ಯಾಯಾಂಗ ಅಧಿಕಾರಿಯಾಗಿರುತ್ತಾರೆ. ಅವರು ದಿವಾನಿ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡುವಾಗ ಅವರನ್ನು 'ಜಿಲ್ಲಾ ನ್ಯಾಯಾಧೀಶರು' ಎಂದು ಕರೆಯಲಾಗುತ್ತದೆ ಮತ್ತು ಫೌಜದಾರಿ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡುವಾಗ ಅವರನ್ನು 'ಸತ್ರ ನ್ಯಾಯಾಧೀಶರು' ಎಂದು ಕರೆಯಲಾಗುತ್ತದೆ.

### 6.4.1 ಜಿಲ್ಲಾ ನ್ಯಾಯಾಲಯ

ನ್ಯಾಯಾಂಗ ಅಥವಾ ನ್ಯಾಯಾಂಗ ವ್ಯವಸ್ಥೆಯನ್ನು ಸಂವಿಧಾನದ ರಕ್ಷಕ ಎಂದು ಗುರುತಿಸಲಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ನಿಯಂತ್ರಣದಲ್ಲಿ ಉಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನಿಯಂತ್ರಣದಲ್ಲಿ ಜಿಲ್ಲಾ ನ್ಯಾಯಾಲಯವು ಕಾರ್ಯನಿರ್ವಹಿಸುತ್ತದೆ ಉಚ್ಚ ನ್ಯಾಯಾಲಯದ ಸಲಹೆಯಂತೆ ರಾಜ್ಯದ. ರಾಜ್ಯಪಾಲರು ಜಿಲ್ಲಾ ನ್ಯಾಯಾಧೀಶರನ್ನು ನೇಮಿಸುತ್ತಾರೆ. ಜಿಲ್ಲೆಯ ಕಾನೂನು ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ವಿವಾದಗಳನ್ನು ಪರಿಹರಿಸುವ ಅಧಿಕಾರ ಜಿಲ್ಲಾ ನ್ಯಾಯಾಲಯಕ್ಕೆ ಇರುತ್ತದೆ.



ಜಿಲ್ಲಾ ನ್ಯಾಯಾಲಯ

ಪ್ರತಿ ಜಿಲ್ಲೆಯ ಜಿಲ್ಲಾ ನ್ಯಾಯಾಲಯದಲ್ಲಿ ಒಬ್ಬರು ಪ್ರಧಾನ ನ್ಯಾಯಾಧೀಶರಿರುತ್ತಾರೆ ಅವರನ್ನು ಜಿಲ್ಲಾ ನ್ಯಾಯಾಧೀಶರು ಎಂದು ಕರೆಯಲಾಗುತ್ತದೆ. ಜಿಲ್ಲಾ ನ್ಯಾಯಾಧೀಶರಿಗೆ ಅವರ ಕೆಲಸದಲ್ಲಿ ಸಹಾಯ ಮಾಡಲು ಇತರ ಕೆಲವು ಕಿರಿಯ ನ್ಯಾಯಾಧೀಶರಿರುತ್ತಾರೆ. ಜಿಲ್ಲಾ ನ್ಯಾಯಾಲಯದಲ್ಲಿ ಸಿವಿಲ್ (ದಿವಾಣಿ) ಮತ್ತು ಕ್ರಿಮಿನಲ್ (ಫೌಜದಾರಿ) ಎಂಬ ಎರಡೂ ರೀತಿಯ ಪ್ರಕರಣಗಳನ್ನು ವಿಚಾರಣೆ ಮಾಡಲಾಗುತ್ತದೆ.

**ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಮಾದರಿ ಪಟ್ಟಿ:**

- ದಿವಾಣಿ ಮೊಕದ್ದಮೆಗಳು
  - ಜಿಲ್ಲಾ ನ್ಯಾಯಾಧೀಶರು
  - ಹೆಚ್ಚುವರಿ ಜಿಲ್ಲಾ ನ್ಯಾಯಾದೀಶ
  - ದಿವಾಣಿ ನ್ಯಾಯಾಧೀಶರು ಹಿರಿಯ ಶ್ರೇಣಿ
  - ದಿವಾಣಿ ನ್ಯಾಯಾಧೀಶರು ಕಿರಿಯ ಶ್ರೇಣಿ
- ಫೌಜದಾರಿ ಮೊಕದ್ದಮೆಗಳು
  - ಸತ್ರ ನ್ಯಾಯಾಧೀಶರು
  - ಹೆಚ್ಚುವರಿ ಸತ್ರ ನ್ಯಾಯಾದೀಶ
  - ಮುಖ್ಯ ನ್ಯಾಯಾಂಗ ದಂಡಾಧಿಕಾರಿ ನ್ಯಾಯಾಲಯ
  - ದಂಡಾಧಿಕಾರಿ ನ್ಯಾಯಾಂಗ ಪ್ರಥಮ ವರ್ಗ

### 6.4.2 ಜಿಲ್ಲಾ ನ್ಯಾಯಾಲಯದ ಕಾರ್ಯಗಳು

**1. ನ್ಯಾಯಿಕ ಅಧಿಕಾರ:** ಜಿಲ್ಲಾ ನ್ಯಾಯಾಲಯಗಳು ಜಿಲ್ಲಾ ಮಟ್ಟದಲ್ಲಿ ಸಿವಿಲ್ (ದಿವಾಣಿ) ಮತ್ತು ಕ್ರಿಮಿನಲ್ (ಫೌಜದಾರಿ) ಮೊಕದ್ದಮೆಗಳ ವಿಚಾರಣೆ ನಡೆಸುತ್ತವೆ.

- **ದಿವಾಣಿ ಮೊಕದ್ದಮೆಗಳು:** ಅ) ಜಮೀನು ಮತ್ತು ಇತರ ಆಸ್ತಿಗೆ ಸಂಬಂಧಿಸಿದ ಮಾಲೀಕತ್ವದ ಹಕ್ಕು, ಸ್ವಾಧೀನ, ಅತಿಕ್ರಮಣ ಮುಂತಾದ ವಿವಾದಗಳು. ಬ) ಕುಟುಂಬದ ಆಸ್ತಿ ಹಂಚಿಕೆ, ಉತ್ತರಾಧಿಕಾರ ಹಕ್ಕು ಮುಂತಾದವುಗಳಿಗೆ ಸಂಬಂಧಿಸಿದ ವಿವಾದಗಳು.

- **ಫೌಜದಾರಿ ಮೊಕದ್ದಮೆಗಳು:** 3 ವರ್ಷಕ್ಕಿಂತ ಹೆಚ್ಚಿನ ಶಿಕ್ಷೆಯ ಅವಕಾಶವಿರುವ ಎಲ್ಲಾ ಅಪರಾಧಗಳ ಮೊಕದ್ದಮೆಗಳನ್ನು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಸಲಾಗುತ್ತದೆ. ಉದಾಹರಣೆಗೆ: ದರೋಡೆ, ಕೊಲೆ ಇತ್ಯಾದಿ ಗಂಭೀರ ಅಪರಾಧಗಳು.

**2. ಮೇಲ್ಮನವಿ ವಿಚಾರಣೆ:** ಜಿಲ್ಲಾ ನ್ಯಾಯಾಲಯವು ಜಿಲ್ಲೆಯ ಪ್ರಮುಖ ಮೇಲ್ಮನವಿ ನ್ಯಾಯಾಲಯವಾಗಿದೆ. ಕೆಳಹಂತದ ನ್ಯಾಯಾಲಯಗಳು ನೀಡಿದ ತೀರ್ಪುಗಳ ವಿರುದ್ಧ ಸಲ್ಲಿಸಲಾದ ಮೇಲ್ಮನವಿಗಳನ್ನು ಇಲ್ಲಿ ವಿಚಾರಣೆ ನಡೆಸಲಾಗುತ್ತದೆ. ಸಿವಿಲ್ ನ್ಯಾಯಾಧೀಶರು (ಹಿರಿಯ ಶ್ರೇಣಿ) ಮತ್ತು ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಅವರ ತೀರ್ಪುಗಳ ವಿರುದ್ಧ ಸಲ್ಲಿಸಲಾದ ಮೇಲ್ಮನವಿಗಳನ್ನು ನಡೆಸುವ ಅಧಿಕಾರ ಜಿಲ್ಲಾ ನ್ಯಾಯಾಲಯಕ್ಕೆ ಇರುತ್ತದೆ.

**3. ಆಡಳಿತಾತ್ಮಕ ಅಧಿಕಾರ:** ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳ ಅಡಿಯಲ್ಲಿ ಬರುವ ನ್ಯಾಯಾಲಯಗಳಿಗೆ ಸಂಬಂಧಿಸಿದ ಸಿಬ್ಬಂದಿಗಳ ನೇಮಕಾತಿ, ಬಡ್ತಿ, ವರ್ಗಾವಣೆ ಮತ್ತು ಶಿಸ್ತು ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಜಿಲ್ಲಾ ನ್ಯಾಯಾಲಯಕ್ಕಿದೆ.

**ಜಿಲ್ಲಾ ಮಟ್ಟದ ನ್ಯಾಯಾಲಯಗಳು**

- ಕೌಟುಂಬಿಕ ನ್ಯಾಯಾಲಯ
- ಗ್ರಾಹಕ ದೂರುಗಳ ಪರಿಹಾರ ವೇದಿಕೆ
- ಕಾರ್ಮಿಕ/ಕೈಗಾರಿಕಾ ನ್ಯಾಯಾಲಯ
- ಬಾಲ ನ್ಯಾಯ ಮಂಡಳಿ



**ತಿಳಿದುಕೊಳ್ಳೋಣ**

**ಕಾನೂನು ಸೇವಾ ಪ್ರಾಧಿಕಾರ ಎಂದರೇನು?**

ಸಮಾಜದ ದುರ್ಬಲ ವರ್ಗದವರಿಗೆ ಉಚಿತ ಕಾನೂನು ನೆರವು ನೀಡುವ ಉದ್ದೇಶದಿಂದ ಭಾರತದಲ್ಲಿ 1987 ರಲ್ಲಿ ಕಾನೂನು ಸೇವಾ ಪ್ರಾಧಿಕಾರವನ್ನು ಸ್ಥಾಪಿಸಲಾಯಿತು ಸಮಾಜದ ದುರ್ಬಲ ವರ್ಗದವರಿಗೆ ನ್ಯಾಯಾಂಗ ಅಥವಾ ಕಾನೂನು ಸಂಬಂಧಿತ ಉಚಿತ ಸೇವೆ ಮತ್ತು ಸಹಾಯವನ್ನು ಒದಗಿಸುವುದು ಈ ಪ್ರಾಧಿಕಾರದ ಮುಖ್ಯ ಗುರಿಯಾಗಿದೆ. ಆರ್ಥಿಕ ಅಥವಾ ಇತರ ಅಸಮರ್ಥತೆಗಳ ಕಾರಣದಿಂದ ಯಾವುದೇ ನಾಗರಿಕರಿಗೆ ನ್ಯಾಯವನ್ನು ನಿರಾಕರಿಸಬಾರದು ಎಂಬುದು ಈ ಕಾನೂನು ಸೇವಾ ಪ್ರಾಧಿಕಾರದ ಪ್ರಮುಖ ಉದ್ದೇಶವಾಗಿದೆ.



## ಸ್ವಾಧ್ಯಾಯ

**ಪ್ರ. 1 'ನಾನು ಯಾರು?' ಎಂದು ಗುರುತಿಸಿ:**

1. ನಾನು ಜಿಲ್ಲೆಯ ಪ್ರಥಮ ಆಡಳಿತಾಧಿಕಾರಿಯಾಗಿದ್ದು, ಆಪತ್ತು ನಿರ್ವಹಣಾ ಸಮಿತಿಯ ಅಧ್ಯಕ್ಷನಾಗಿದ್ದೇನೆ
   ...........................................
2. ನಾನು ಗ್ರಾಮ ಮಟ್ಟದಲ್ಲಿ ಶಾಂತಿ ಕಾಪಾಡಲು ಪೊಲೀಸರಿಗೆ ಸಹಾಯ ಮಾಡುತ್ತೇನೆ:
   ...........................................
3. ನಾನು ತಾಲೂಕು ಮಟ್ಟದಲ್ಲಿ ಕಂದಾಯ ಸಂಗ್ರಹಿಸುತ್ತೇನೆ ಮತ್ತು ತಾಲ್ಲೂಕು ದಂಡಾಧಿಕಾರಿ ಎಂದೂ ಕರೆಯಲ್ಪಡುತ್ತೇನೆ:
   ...........................................
4. ನಾನು ಜಿಲ್ಲೆಯಲ್ಲಿ ಅಪರಾಧ ತಡೆಗಟ್ಟಲು ಪೊಲೀಸ್ ಪಡೆಯ ನೇತೃತ್ವ ವಹಿಸುತ್ತೇನೆ:
   ...........................................

**ಪ್ರ. 2 ಈ ಕೆಳಗಿನ ಸಂದರ್ಭಗಳಲ್ಲಿ ನೀವು ಯಾವ ಅಧಿಕಾರಿಯ ಬಳಿ ಹೋಗುತ್ತೀರಿ?**

1. ನಿಮ್ಮ ಜಮೀನಿನ ಸಾತ್ಬಾರಾ (ಉತಾರ/ಪಹಣಿ) ಬೇಕಿದ್ದರೆ:
   ...........................................
2. ನಿಮ್ಮ ಪರಿಸರದಲ್ಲಿ ಕಳ್ಳತನವಾಗಿದ್ದು, ದೂರು ದಾಖಲಿಸಬೇಕಿದ್ದರೆ:
   ...........................................
3. ಇಬ್ಬರು ವ್ಯಕ್ತಿಗಳ ನಡುವಿನ ಜಮೀನು ವಿವಾದವನ್ನು ನ್ಯಾಯಾಲಯದಲ್ಲಿ ಬಗೆಹರಿಸಬೇಕಿದ್ದರೆ:
   ...........................................
4. ನೈಸರ್ಗಿಕ ವಿಕೋಪದಿಂದಾಗಿ (ಉದಾ. ಆಲಿಕಲ್ಲು ಮಳೆ) ಬೆಳೆ ಹಾನಿಯ ಪಂಚನಾಮೆ ಮಾಡಿಸಲು:
   ...........................................

**ಪ್ರ.3 ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ:**

| ಅಧಿಕಾರಿ | ಕಾರ್ಯಗಳು |
|---|---|
| ಜಿಲ್ಲಾಧಿಕಾರಿ | ಜಿಲ್ಲೆಯ ಕಂದಾಯ ಸಂಗ್ರಹಿಸುವುದು ಮತ್ತು ಕಾನೂನು-ಸುವ್ಯವಸ್ಥೆ ಕಾಪಾಡುವುದು |
| ಜಿಲ್ಲಾ ಪೊಲೀಸ್ ಅಧೀಕ್ಷಕರು | ....................................... |
| ತಹಸೀಲದಾರ | ....................................... |
| ಜಿಲ್ಲಾ ನ್ಯಾಯಾಧೀಶರು | ....................................... |
| ತಲಾಠಿ | ....................................... |

**ಪ್ರ 4. ಪರಿಕಲ್ಪನೆಯನ್ನು ಸ್ಪಷ್ಟಪಡಿಸಿ**

1. ಜಿಲ್ಲಾಧಿಕಾರಿ

2. ತಹಸೀಲದಾರ

**ಪ್ರ. 5. ಕಲ್ಪನೆ ಮಾಡಿ ಬರೆಯಿರಿ: 'ನಾನೇ ಜಿಲ್ಲಾಧಿಕಾರಿಯಾಗಿದ್ದರೆ ..........................'**

ನಿಮ್ಮ ಜಿಲ್ಲೆಯಲ್ಲಿ ಅತಿಯಾದ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಇಂತಹ ಸಮಯದಲ್ಲಿ ಜಿಲ್ಲಾಧಿಕಾರಿಯಾಗಿ ನೀವು ಯಾವ ಮೂರು ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತೀರಿ ಮತ್ತು ಏಕೆ?

**ಉಪಕ್ರಮ**

1. ಜಿಲ್ಲಾಡಳಿತವು ಜಾರಿಗೆ ತಂದಿರುವ 'ವಿಪತ್ತು ನಿರ್ವಹಣಾ' ವ್ಯವಸ್ಥೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ಮತ್ತು ತುರ್ತು ಸಂಪರ್ಕ ಸಂಖ್ಯೆಗಳ ಪಟ್ಟಿಯನ್ನು ತಯಾರಿಸಿ.
2. ''ಜಿಲ್ಲಾಧಿಕಾರಿಗಳು ಮತ್ತು ಇತರ ಇಲಾಖೆಗಳ ಮುಖ್ಯಸ್ಥರು (ಉದಾಹರಣೆಗೆ ಶಿಕ್ಷಣ, ಆರೋಗ್ಯ) ಒಟ್ಟಾಗಿ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಚರ್ಚಿಸುತ್ತಿದ್ದಾರೆ'' ಎಂಬ ವಿಷಯದ ಮೇಲೆ ಒಂದು ಕಿರು ನಾಟಕವನ್ನು ಪ್ರದರ್ಶಿಸಿ.
3. ನಿಮ್ಮ ಪರಿಸರದ ಯಾವುದೇ ಒಬ್ಬ ಆಡಳಿತಾಧಿಕಾರಿಯ ಸಂದರ್ಶನ ಪಡೆಯಿರಿ.
4. ಜಿಲ್ಲಾಧಿಕಾರಿ ಅಥವಾ ತಹಶೀಲ್ದಾರ್ ಆಗಲು ಯಾವ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂಬ ಮಾಹಿತಿಯನ್ನು ಪಡೆದು ತರಗತಿಯಲ್ಲಿ ಚರ್ಚಿಸಿ.

***

## ವಿದ್ಯಾರ್ಥಿಗಳೇ, ಹೆಚ್ಚಿನ ಮಾಹಿತಿಗಾಗಿ ಇವುಗಳನ್ನೂ ಓದಿರಿ.












ಪ್ರಿಯ ಮಕ್ಕಳೇ!

ಯಾರಾದರೂ ನಿಮ್ಮೊಂದಿಗೆ ಅಸಭ್ಯವಾಗಿ ಸ್ಪರ್ಶಿಸುತ್ತಿದ್ದಾರೆ ಎಂಬ ಅನುಭವವಾಗಿದ್ದರೆ, ನೀವೆಂದಿಗೂ ಮೌನವಾಗಿರಬಾರದು. ನೀವು ಈ ಕೆಳಗಿನ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

1. ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ.
2. ನೀವು ನಂಬಿದ ವ್ಯಕ್ತಿಗೆ ತಕ್ಷಣ ಹೇಳಿ.
3. ನೀವು POCSO e-box ಮೂಲಕ ಮಕ್ಕಳ ಹಕ್ಕು ರಕ್ಷಣಾ ರಾಷ್ಟ್ರೀಯ ಆಯೋಗ (NCPCR) ಕ್ಕೆ ಮಾಹಿತಿಯನ್ನು ತಿಳಿಸಬಹುದು.

**ನಿಮ್ಮನ್ನು ಅಸುರಕ್ಷಿತವಾಗಿ ಸ್ಪರ್ಶಿಸಿದಾಗ ನೀವು ಖಿನ್ನತೆ, ಗೊಂದಲ ಮತ್ತು ಸಹಾಯವಿಲ್ಲದಂತೆ ಎಂದು ಭಾವಿಸಬಾರದು. ಆದರೆ ಇದರಲ್ಲಿ ನಿಮ್ಮದೇನು ತಪ್ಪು ಇರುವದಿಲ್ಲ.**




**ಈ ಬಟನನ್ನುಒತ್ತಿರಿ**

POCSO e-box ಅನ್ನು NCPCR@gov.in ನಲ್ಲಿ ಸಂಪರ್ಕಿಸಬಹುದು.

**ನೀವು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೆ ಮತ್ತು ನೀವು ತಪ್ಪು ಗ್ರಹಿಕೆಗಳನ್ನು ಮಾಡಿಕೊಳ್ಳುವವರಾಗಿದ್ದರೆ ಅಥವಾ ತೊಂದರೆ ಅನುಭವಿಸುತ್ತಿದ್ದರೆ ಅಥವಾ ಯಾರಾದರೂ ತೊಂದರೆಯಲ್ಲಿ ಇದ್ದಾರೆಂದು ತಿಳಿದರೆ ತಕ್ಷಣ 1098 ಕ್ಕೆ ಕರೆಮಾಡಿ.... ಏಕೆಂದರೆ ಕೆಲವೊಂದು ಕರೆಗಳು ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಜೀವನವನ್ನೇ ಬದಲಾಯಿಬಹುದು.**

CHILD LINE 1098 NIGHT & DAY

**ಚೈಲ್ಡ್‌ಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲಫ್ರೀ ರಾಷ್ಟ್ರೀಯ ಅಪತ್ಕಾಲದ ಫೋನ್ ಸೇವೆಯಾಗಿದೆ. ಇಂಡಿಯಾ ಫೌಂಡೇಶನ್‌ನ ಒಂದು ಉಪಕ್ರಮವಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬೆಂಬಲಿತವಾಗಿದೆ.**

नए समाज की ओर
Towards a new dawn

**''ವಿದ್ಯಾರ್ಥಿಗಳಿಗೆ ಯೊಗ್ಯಸ್ಪರ್ಶ - ಅಯೊಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ''**




ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

इतिहास व नागरिकशास्त्र इयत्ता सहावी (कन्नड माध्यम)

₹ 89.00